UNIVERSAL LIBRARY
OU_200375
UNIVERSAL LIBRARY

NARASIMHARAJA WADIYAR SERIES

# ವಂಗವಿಜೇತ

KARNATAK BOOK-DEPOT
[illegible]
GOWLIGUDA HYDERABAD-DN

ಬಿ. ವೆಂಕಟಾಚಾರ್ಯ

ಬೆಂಗಳೂರು ಸಿಟಿ:
ಬೆಂಗಳೂರು ಪ್ರಿಂಟಿಂಗ್ ಆಂಡ್ ಪಬ್ಲಿಷಿಂಗ್ ಕಂಪೆನಿ
1930

*All rights reserved* ]

[ಬೆಲೆ: ರೂ. ೧–೮–೦

ಬೆಂಗಳೂರು ಸಿಟಿ:
ಬೆಂಗಳೂರು ಪ್ರೆಸ್, ಮೈಸೂರು ರೋಡ್

To

HIS HIGHNESS THE YUVARAJA

SIR SRI KANTIRAVA NARASIMHARAJA WODAYAR BAHADUR

K.C I E

THIS WORK

is respectfully de-
dicated as a loyal and
humble tribute in comme-
moration of the unique great
event in the reigning Royal Family of
Mysore, that is to say, the happy
and safe return of His
Highness into Capital
after a long and
successful
tour in
Europe

BY

THE AUTHOR.

# ವಿಜ್ಞಾಪನೆ

ಈ ಗ್ರಂಥಕರ್ತರ ಗ್ರಂಥ ಬಾಹುಳ್ಯದಲ್ಲಿ ಬೊಂಬಾಯಿ ಯೂನಿವರ್ಸಿಟಿಯವರು ಈ ಗ್ರಂಥವನ್ನು ಚುನಾಯಿಸಿ 1920-21ನೆಯ ಮೆಟ್ರಿಕ್ಯುಲೇಶನ್ ಪರೀಕ್ಷೆಯ ಪಠ್ಯಪುಸ್ತಕವನ್ನಾಗಿ ಮಾಡಿ ಆ ಮೂಲಕ ಗ್ರಂಥಕರ್ತರ ಪುಸ್ತಕಗಳಿಗೆ ಪ್ರೋತ್ಸಾಹವನ್ನುಂಟುಮಾಡಿದುದಕ್ಕಾಗಿ ಅವರಿಗೆ ಚಿರಋಣಿಯಾಗಿರುವೆನು. ಅಲ್ಲದೆ ಮುಂದೆಯೂ ಇದರಂತೆಯೇ ಪ್ರೋತ್ಸಾಹ ದೊರೆಯುತ್ತಿರುವುದೆಂದು ಸಂಪೂರ್ಣ ನಂಬಿರುವೆನು.

ಮೊದಲನೆಯ ಸಂಸ್ಕರಣದ ಪ್ರತಿಗಳು ಮುಗಿದುಹೋಗಿದ್ದುದರಿಂದ ಪ್ರಥಮ ಮುದ್ರಣದಲ್ಲಿನ ಅಶುದ್ಧಗಳನ್ನು ಸರಿಪಡಿಸಿ ಪುನಃ ಮುದ್ರಿಸಿರುವೆನು.

ಪಾಠಕ ಮಹಾಶಯರ ಉದಾರಾಶ್ರಯವನ್ನು ಕೋರುವ,

ಮೈಸೂರು,
30-10-1921.

**ಬಿ. ವಿ. ನರಸಿಂಹಯ್ಯಂಗಾರ್.**

---

# ವಿಜ್ಞಾಪನೆ

ಚಿರಸ್ಮರಣೀಯವಾದ ನಾಮೋಲ್ಲೇಖಮಾತ್ರದಿಂದಾರು ಸಕಲ ವಿದ್ಯಾವಿಶಾರದರೆಂತಲೂ ಅನೇಕ ಗೌರವಪದಸ್ಥರಾಗಿದ್ದವರೆಂತಲೂ ದೇಶವಿದೇಶಗಳಲ್ಲಿ ಸಮ್ಮಾನಿತರಾಗಿ ಖ್ಯಾತಿಗೊಂಡಿದ್ದವರೆಂತಲೂ ತಿಳಿಯುವೆವೋ ಮಹಾ ಪಂಡಿತ ಶ್ರೇಷ್ಠರಾಗಿದ್ದಾ ಶ್ರೀ ರಮೇಶಚಂದ್ರದತ್ತ ಮಹಾಶಯರ ಮೂಲಗ್ರಂಥವನವಲಂಬಿಸಿ ಈ ಗ್ರಂಥವು ಕನ್ನಡಿಸಲ್ಪಟ್ಟಿದೆ. ರಮೇಶ ಬಾಬುಗಳು ಬರೋಡೆ ಸಂಸ್ಥಾನದಲ್ಲಿ ದಿವಾನರಾಗಿದ್ದರು. ಅವರು ಲಂಡನ ನಗರದಲ್ಲಿಯ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ (Professor) ಪದವಿಯಲ್ಲಿದ್ದಾಗ ತಮ್ಮೆಲ್ಲಾ ಗ್ರಂಥಗಳನ್ನೂ ಕನ್ನಡಿಸಿ ಪ್ರಚಾರಗೊಳಿಸಲೆನಗೆ ಸರ್ವಸ್ವಾತಂತ್ರ್ಯವನ್ನು ವಹಿಸಿದರು. ಅವರು ಋಗ್ವೇದಸಂಹಿತೆ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳು, ಶ್ರೌತ ಗೃಹ್ಯ ಧರ್ಮ ಸೂತ್ರಗಳು, ಧರ್ಮಸಂಹಿತೆ, ಷಡ್ದರ್ಶನ, ರಾಮಾಯಣ, ಮಹಾಭಾರತ, ಅಷ್ಟಾದಶಪುರಾಣಗಳು—ಇವೇ ಮುಂತಾದುವನ್ನು ಸಂಕಲನ ಮಾಡಿ ಬಂಗಾಳಿಯಲ್ಲಿ ಅನುವಾದ ಸಹಿತವಾಗಿ ಪ್ರಕಾಶಪಡಿಸಿರುವರಲ್ಲದೆ ಅನೇಕ ನಾವೆಲಗಳನ್ನು ರಚಿಸಿರುವರು; ಇಂಗ್ಲೀಷು ಭಾಷೆಯಲ್ಲಿಯೂ ಅನೇಕ ಮೌಲಿಕ ಗ್ರಂಥಗಳನ್ನು ರಚಿಸಿದ್ದಾರೆ; ಅವು ಇಂಗ್ಲಾಂಡಿನಲ್ಲಿ ಮುದ್ರಣವಾಗಿ ಪ್ರಚಾರಗೊಂಡಿವೆ. ಅವರು ಇಂಡಿಯನ್ ಸಿವಿಲ್ ಸರ್ವೀಸಿಗೆ ಸೇರಿ ಅನೇಕ ಮಹೋನ್ನತ ಪದವಿಗಳನ್ನಲಂಕರಿಸಿದ್ದರು; ಇಂಡಿಯಾ ಸರಕಾರದವರು ಅವರಿಗೆ (ಸಿ.ಐ.ಇ.) ಎಂಬ ಬಿರುದನ್ನು

ಕೊಟ್ಟರು. ಅಷ್ಟೊಂದು ರಾಜಕೀಯ ಕಾರ್ಯಗಳಲ್ಲಿ ವ್ಯಾಪೃತರಾಗಿದ್ದವರ ಅಷ್ಟೊಂದು ಗ್ರಂಥಗಳನ್ನು ರಚಿಸಲವಕಾಶವುಳ್ಳವರಾಗಿದ್ದರು! ಅದವರ ಅಸದೃಶ ಆದರ್ಶಾರ್ಹವಾದ ಅಸಾಮಾನ್ಯ ಅಧ್ಯವಸಾಯವೆಂದು ಹೇಳಬೇಕಾಗಿದೆ. ಅವರು ಅತ್ಯಂತ ದೇಶಹಿತೈಷಿಗಳಾಗಿ ದೇಶಭಾಷೋನ್ನತಿಯ ವಿಚಾರದಲ್ಲಿ ವಿಶೇಷ ಶ್ರದ್ಧೆಯುಳ್ಳವರಾಗಿ ತತ್ಪರರಾಗಿದ್ದರು. ಅವರು ಮೈಸೂರು ಸೀಮೆಯಲ್ಲಿ ಪ್ರವಾಸವಾಗಿ ಬಂದಿದ್ದಾಗ ನನಗವರು ಮೊದಲು ಕೊಟ್ಟಿದ್ದ ಅನುಮತಿಯನ್ನು ನೆನಪಿಗೆ ತಂದುಕೊಂಡು ತಮ್ಮ ಗ್ರಂಥಗಳು ಕನ್ನಡಿಸಲ್ಪಟ್ಟವೆ? ಎಂದು ವಿಚಾರ ಮಾಡಿದರು. ಗ್ರಂಥಗಳು ಮುದ್ರಣಕ್ಕೆ ಸಿದ್ಧವಾಗಿದ್ದರೂ ಗ್ರಂಥಪ್ರಚಾರಕರ ಸಾಮಾನ್ಯ ರಿಕ್ತದಶೆಯಿಂದವು ಹಿಂದುಳಿದಿವೆಯೆಂದು ತಿಳಿದು, ಗ್ರಂಥಕರ್ತರು ಸಾಮಾನ್ಯವಾಗಿ ರಿಕ್ತರೆಂತಲೂ ಭಾರತೀಯರು ಮೊದಲಿಂದಾ ದಶೆಗೆ ವಿಶೇಷ ರಿಕ್ತಗಳೆಂತಲೂ ಹೇಳಿ, ಆದರೂ ಬಂಗಾಳಾ ದೇಶದ ಜಗದ್ವಿಖ್ಯಾತರಾದ ಮಹಾ ಪಂಡಿತರ ಗ್ರಂಥಗಳನ್ನೆಲ್ಲಾ ದಕ್ಷಿಣದೇಶದಲ್ಲಿ ಪ್ರಚಾರಪಡಿಸಿದುದಕ್ಕೆ ಸಲುವಾಗಿ ತಾವೆಲ್ಲರೂ ನನಗೆ ಚಿರಋಣಿಗಳಾಗಿರುವುದಾಗಿಯೂ ಕನ್ನಡ ಸಾಹಿತ್ಯದಲ್ಲಿ ಆ ಗ್ರಂಥಗಳೆಲ್ಲವೂ ಸ್ಥಾಯಿಗ್ರಂಥಗಳಾಗಿ ಪರಿಣಮಿಸುವುವೆಂತಲೂ ಹೇಳಿ ನನ್ನ ಶ್ರಮವು ಸಾರ್ಥಕವಾಗುವುದೆಂತಲೂ ತಿಳಿಸಿ ಬಹು ವಿಧವಾಗಿ ಪ್ರೋತ್ಸಾಹಗೊಳಿಸಿದರು. ಮೂವತ್ತೈದು ವರ್ಷಗಳೆನ್ನ ಶ್ರಮವು ಅಂದಿಗೆ ಸಾರ್ಥಕವಾಯಿತೆಂದು ಭಾವಿಸಿ ನಾನವರ ಶುಭಾಶೀರ್ವಾದಗಳಿಗೆ ಸಲುವಾಗಿಯೂ ಅವರ ಪ್ರೋತ್ಸಾಹ ವಾಕ್ಯಗಳಿಗೆ ಸಲುವಾಗಿಯೂ ಅವರನ್ನು ವಂದಿಸಿದೆನು. ಕನ್ನಡದಲ್ಲಿ ಇದಾ ಮಹನೀಯರ ಎರಡನೆಯ ಗ್ರಂಥವಾದುದರಿಂದ ಅದಕ್ಕೆ ವಿಜ್ಞಾಪನಾಡಂಬರವು ಆವಶ್ಯಕವಿರದು.

ಜನಾನುರಾಗವುಳ್ಳ ಪ್ರಜಾವತ್ಸಲರಾದ ನಮ್ಮ ಸರ್ ಶ್ರೀಮಾನ್ ಯುವರಾಜ ನರಸಿಂಹರಾಜ ಒಡೆಯರ್ ಬಹದುರ, ಕೆ.ಸಿ.ಐ.ಇ. ಮಹೋದಯ ಮಹಾಸ್ವಾಮಿಗಳು ಇಂಗ್ಲಾಂಡಿಗೆ ಪ್ರವಾಸವಾಗಿ ದಯಮಾಡಿಸಿದ್ದು ಅಲ್ಲಿ ಸಕಲ ಮನೋರಥಸಿದ್ಧರಾಗಿ ಮರಳಿ ಶ್ರೀ ಭಗವಂತನ ಅನುಗ್ರಹದಿಂದ ಸುಖವಾಗಿ ಬಜಯಂಗೈದು ರಾಜಧಾನಿಯಲ್ಲಿ ಪ್ರತ್ಯಾಶಾಪನ್ನರಾಗಿದ್ದ ಪ್ರಜೆಗಳಿಂದ ಅಭಿವಂದಿತರಾದ ಆನಂದೋತ್ಸವೋಪಲಕ್ಷ್ಯವಾಗಿ ಈ ಗ್ರಂಥವು ಪ್ರಚಾರಿಸಲ್ಪಟ್ಟಿತು.

ಮುದ್ರಣದಲ್ಲಿ ಅಕ್ಷರಸ್ಖಾಲಿತ್ಯವೇ ಮುಂತಾದ ಅನಿವಾರ್ಯ ದೋಷಗಳೆಣಿಸದೆ ಗುಣಗ್ರಾಹಿಗಳಾದ ವಾಚಕ ಮಹಾಶಯರು ಸ್ವಲ್ಪವಾದರೂ ಪರಿತುಷ್ಟರಾಗಿ ಪ್ರೋತ್ಸಾಹಗೊಳಿಸಿದರೆ, ನನ್ನ ಶ್ರಮವು ಸಾರ್ಥಕವೆಂದು ತಿಳಿಯುವೆನು, ಇತಿ—

ಮೈಸೂರು,<br>ಅಕ್ಟೋಬರು 1913.

**ಬಿ. ವೆಂಕಟಾಚಾರ್ಯ.**

ಶ್ರೀಃ

ಶ್ರಿಯೈನಮಃ

# ವಂಗವಿಜೇತ

## ಮೊದಲನೆಯ ಪರಿಚ್ಛೇದ

While the ploughman near at hand,
Whistles o'er the furrowed land,
And the milk-maid singeth blithe,
And the mower whets his scythe,
And every shepherd tells his tale,
Under the hawthorn in the dale. *Milton.*

ಒಂದು ಸಾವಿರದ ಇನ್ನೂರುನಾಲ್ಕನೆಯ ಕ್ರಿಸ್ತಾಬ್ದದಲ್ಲಿ ವಂಗ ಬಿಹಾರ ದೇಶಗಳಲ್ಲಿ ಹಿಂದೂ ರಾಜ್ಯವು ವಿಲುಪ್ತವಾಗಿ ಹೋಯಿತು. ಅದು ಮೊದಲ್ಗೊಂಡು ಒಂದುಸಾವಿರದ್ವೈನೂರೆಪ್ಪತ್ತುನಾಲ್ಕನೆಯ ಕ್ರಿಸ್ತಾಬ್ದದ ಪರ್ಯಂತ, ಎಂದರೆ, ಮುನ್ನೂರೆಪ್ಪತ್ತು ವರ್ಷಗಳಕಾಲ, ಅಫಘಾನರು ಅಥವಾ ಪಠಾನರು ಆ ದೇಶಗಳಲ್ಲಿ ರಾಜತ್ವವನ್ನು ಮಾಡುತಿದ್ದರು. ಅವರು ಒಂದೊಂದು ಕಾಲದಲ್ಲಿ ದಿಲ್ಲಿಯ ಸಮ್ರಾಜನಿಗೆ ಅಧೀನತೆಯನ್ನೊಪ್ಪಿಕೊಳ್ಳುವರು ; ಸಮಯ ವೊದಹಿದಾಗ ಸ್ವಾಧೀನಭಾವವನ್ನವಲಂಬಿಸುವರು. ಅವರ ರಾಜ್ಯತಂತ್ರವು ಅನೇಕಾಂಶಗಳಲ್ಲಿ ಯುರೋಪು ದೇಶದ ಫ್ಯೂಡಲ್ (Fuedal) ರಾಜ್ಯತಂತ್ರದ ಹಾಗಿದ್ದಿತು. ದೇಶದ ಸಿಂಹಾಸನವು ಶೂನ್ಯವಾದರೆ ಒಂದೊಂದು ಸಮಯದಲ್ಲಿ ರಜಪೂತರು ರಾಜರಾಗುವರು ; ಒಂದೊಂದು ಕಾಲದಲ್ಲಿ ಸೇನಾಪತಿಯಾಗಿದ್ದವರು ತಮ್ಮ ತಮ್ಮ ಬಾಹುಬಲದಿಂದ ರಾಜರಾಗಿ ಸಿಂಹಾಸನಾರೂಢರಾಗುತಿದ್ದರು. ದೇಶಕ್ಕೆ ಅಧಿಪತಿಯಾದವನು ಉತ್ಕೃಷ್ಟವಾದೊಂದು ಜಿಲ್ಲೆಯನ್ನು ಸ್ವಾಧೀನದಲ್ಲಿಟ್ಟುಕೊಳ್ಳುವನು ; ಉಳಿದ ಜಿಲ್ಲೆಗಳನ್ನು ಪ್ರಧಾನ ಸೇನಾಪತಿಗಳು ತಮ್ಮ ತಮ್ಮ ಅಧಿಕಾರದಲ್ಲಿಟ್ಟುಕೊಳ್ಳುತಿದ್ದರು; ಮತ್ತು ಸೇನಾಪತಿಗಳು ಭೂಮಿಗಳನ್ನು ತಮಗೆ ಅಧೀನರಾದ ಕರ್ಮಚಾರಿಗಳಲ್ಲಿ ವಿಭಾಗಮಾಡಿ ಕೊಟ್ಟುಬಿಡುವರು. ಸೇನಾಪತಿಗಳು ವಂಗಾಧಿಪನಿಗೆ ಅಧೀನರಾಗಿರುವರಲ್ಲದೆ, ಸಮಯವು ಸಿಕ್ಕರೆ ತಮ್ಮ ತಮ್ಮ ಜಿಲ್ಲೆಗಳಲ್ಲಿ ಸ್ವತಂತ್ರಭಾವವನ್ನು ವಹಿಸುತಿದ್ದರು.

ಪಠಾನರ ರಾಜತ್ವದ ಕಾಲದಲ್ಲಿ ಹಿಂದೂ ಜಮೀನುದಾರರಿಗೆ ವಿಶೇಷ ಅಧಿಕಾರವೂ ಪ್ರಭುತ್ವವೂ ಇದ್ದುವು. ಪಠಾನರ ರಾಜರಲ್ಲೊಬ್ಬ ಹಿಂದೂ ರಾಜನೂ ಇದ್ದನು. ಒಂದುಸಾವಿರದ ಮುನ್ನೂರೆಂಭತ್ತೈದನೆಯ ಕ್ರಿಸ್ತಾಬ್ದದಲ್ಲಿ ಗಣೇಶರಾಜನೆಂಬವನು ವಂಗದೇಶದಲ್ಲಿ ಏಳುವರ್ಷಗಳ ಕಾಲ ಅಧಿಪತಿಯಾಗಿದ್ದು ನಿರಾಪದವಾಗಿ ರಾಜತ್ವವನ್ನು ಮಾಡಿದನು. ಅವನು ಮೊದಲು ಜಮೀನುದಾರನಾಗಿದ್ದವನು ತನ್ನ ಬಾಹುಬಲದಿಂದ ಸಿಂಹಾಸನಾರೂಢನಾದನು. ಅವನ ಮಗನು ಮುಸಲ್ಮಾನರ ಧರ್ಮವನ್ನವಲಂಬಿಸಿ ಅವನೂ ಅವನ ವಂಶದವರೂ ಒಟ್ಟು ನಾಲ್ವತ್ತು ವರ್ಷಗಳಕಾಲ ವಂಗದೇಶವನ್ನಾಳಿದರು.

ಮೊಗಲರು ವಂಗದೇಶವನ್ನು ಜಯಿಸಿದಾಗ ಜಮೀನುದಾರರಿಗೆ ಸೇರಿದ ಸೈನ್ಯವು ಸ್ವಲ್ಪವಾಗಿರಲಿಲ್ಲ. ಎಂಟುಲಕ್ಷ ಕಾಲಾಳು ಬಲವೂ, ಇಪ್ಪತ್ತುಮೂರು ಸಾವಿರ ಕುದುರೆ ಬಲವೂ, ನಾಲ್ಕುಸಾವಿರ ರಣತರಿಗಳೂ (Warships) ಇದ್ದುವು. ಜಮೀನುದಾರರಲ್ಲಿ ಬಹುಭಾಗದವರು ಜಾತಿಯಲ್ಲಿ ಕಾಯಸ್ಥರಾಗಿದ್ದರು. ಅವರೇ ದೇಶಕ್ಕೆ ರಾಜರಾಗಿದ್ದರೆಂದು ಹೇಳಬಹುದು. ದೇಶದ ಕೃಷಿಕರೂ ಪ್ರಜೆಗಳೂ ಸಂಪೂರ್ಣವಾಗಿ ಅವರ ಅಧೀನದಲ್ಲಿರುತಿದ್ದರು. ಪ್ರಜೆಗಳಲ್ಲಿ ಪರಸ್ಪರ ವ್ಯಾಜ್ಯ ವ್ಯವಹಾರಾದಿಗಳುಂಟಾದರೆ ಅವುಗಳನ್ನು ಜಮೀನುದಾರರಾಗಲಿ ಅಥವಾ ಅವರ ಕರ್ಮಚಾರಿಗಳಾಗಲಿ ವ್ಯವಸ್ಥೆ ಮಾಡುವರು. ಕಳ್ಳರು ಮುಂತಾದ ದುರ್ನಡತೆಯುಳ್ಳವರನ್ನು ಅವರೇ ಶಿಕ್ಷಿಸುತಿದ್ದರು. ಅವರೇ ಗ್ರಾಮ ಗ್ರಾಮಗಳಲ್ಲಿಯೂ ಶಾಂತಿಯನ್ನು ಕಾಪಾಡುತಿದ್ದರು. ಪ್ರಜೆಗಳಿಗೆ ಅವರೇ ತಾಯಿತಂದೆಗಳಾಗಿದ್ದರು. ಫಲತಃ, ಜಮೀನುದಾರರೇ ಪ್ರಜೆಗಳಿಗೆ ಪಾಲನ ಕರ್ತರಾಗಿಯೂ ವಿಚಾರಪತಿಗಳಾಗಿಯೂ ಇದ್ದರು. ಅವರೇ ಪ್ರಜೆಗಳಿಗೆ ರಕ್ಷಕರಾಗಿಯೂ ರಾಜರಾಗಿಯೂ ಇದ್ದರು. ಈ ಪ್ರಕಾರ ಪಠಾನರ ಅಧೀನದಲ್ಲಿ ದೇಶದಲ್ಲೆಲ್ಲಾ ಹಿಂದೂಗಳ ಆಳಿಕೆಯೇ ಪ್ರಬಲವಾಗಿದ್ದಿತು.

ಒಂದುಸಾವಿರದೈನೂರೆಪ್ಪತ್ತುಮೂರನೆಯ ಕ್ರಿಸ್ತಾಬ್ದದಲ್ಲಿ ಪಠಾನ ರಾಜನಾದ ದಾಯೂದಖಾನನು ವಂಗದೇಶದ ಸಿಂಹಾಸನವನ್ನೇರಿದನು. ಅದಕ್ಕೆ ಮಾರನೆಯ ವರ್ಷವೇ ಅಕಬರಷಹನಾ ದೇಶವನ್ನು ಜಯಿಸಲಿಚ್ಛೈಸಿ, ತಾನೇ ಬಂದು ಪಾಟ್ನಾ ನಗರವನ್ನು ತೆಗೆದುಕೊಂಡು, ಮನಾಯಿಮಖಾನನನ್ನು ಅಲ್ಲಿಗೆ ಸೇನಾಪತಿಯನ್ನಾಗಿ ನಿಯಮಿಸಿಟ್ಟು, ಡಿಲ್ಲಿಗೆ ಹೊರಟುಹೋದನು. ಮನಾಯಿಮಖಾನನು ನಾಮಮಾತ್ರ ಸೇನಾಪತಿಯಾಗಿದ್ದನು. ಕ್ಷತ್ರಿಯಚೂಡಾಮಣಿಯಾಗಿದ್ದ ರಾಜಾ ಟೋಡರಮಲ್ಲನೇ ದಾಯೂದಖಾನನನ್ನು ಬಾರಿಬಾರಿಗೂ ಸೋಲಿಸಿ ಕಟ್ಟಕಡೆಗೆ ಕಟಕದಲ್ಲಿ ನಡೆದ ಮಹಾ ಯುದ್ಧದಲ್ಲಿ ಜಯಲಾಭವನ್ನು ಹೊಂದಿದನು. ಅದರಿಂದ ದಾಯೂದನು ಭೀತಿಗೊಂಡು ಒಂದುಸಾವಿರದೈನೂರೆಪ್ಪತ್ತುನಾಲ್ಕನೆಯ ಕ್ರಿಸ್ತಾಬ್ದದಲ್ಲಿ ವಂಗ, ಬಹಾರು ದೇಶಗಳನ್ನು ಮೊಗಲರಿಗೆ

ಬಿಟ್ಟುಕೊಟ್ಟು ಒರಿಸ್ಸಾ ಪ್ರದೇಶವನ್ನು ಮಾತ್ರ ಸ್ವಂತಕ್ಕೆ ಇಟ್ಟುಕೊಂಡನು. ಈ ಪ್ರಕಾರ ಸಂಧಿಯಾದ ಬಳಿಕ ಟೋಡರಮಲ್ಲನು ಡಿಲ್ಲಿಗೆ ಹೊರಟುಹೋದನು. ತರುವಾಯ, ದಾಯೂದನು ಸಮಯವೊದಗಿತೆಂದು ಸಂಧಿಯಾದುದನ್ನು ಮರೆತು ವಂಗದೇಶವನ್ನು ಪುನಃ ಸ್ವಾಧೀನಪಡಿಸಿಕೊಂಡನು. ೧೫೭೬ನೆಯ ಕ್ರಿಸ್ತಾಬ್ದದಲ್ಲಿ ಅಕಬರಷಹನು ಹುಸೇನಕುಲೀಖಾನನನ್ನು ಸೇನಾಪತಿಯನ್ನಾಗಿ ನಿಯಮಿಸಿದನು. ಅವನು ಹೆಸರಿಗೆ ಸೇನಾಪತಿಯಾಗಿದ್ದನು. ಟೋಡರಮಲ್ಲನು ಎಲ್ಲಾ ಸ್ವಾತಂತ್ರ್ಯದಿಂದ ಎರಡನೆಯ ತಡವೆ ವಂಗದೇಶಕ್ಕೆ ಒಂದು ರಾಜಮಹಲಲ್ಲಿ ನಡೆದ ಮಹಾಯುದ್ಧದಲ್ಲಿ ದಾಯೂದನನ್ನು ಸೋಲಿಸಿದನು. ಆ ಯುದ್ಧದಲ್ಲಿ ದಾಯೂದನು ಹತನಾದನು. ಡಿಲ್ಲೀಶನಾದ ಅಕ್ಬರನು ಹುಸೇನಕುಲೀಯನ್ನು ವಂಗ ಬಿಹಾರ ಉರಿಸ್ಸಾ ದೇಶಗಳಿಗೆ ಶಾಸನಕರ್ತನನ್ನಾಗಿ ನಿಯಮಿಸಿದನು. ಟೋಡರಮಲ್ಲನು ಡಿಲ್ಲಿಗೆ ಹೊರಟುಹೋದನು. ೧೫೮೦ನೆಯ ಕ್ರಿಸ್ತಾಬ್ದದಲ್ಲಿ ಪುನಃ ವಿದ್ರೋಹಾನಲದ ಉರಿಯೆದ್ದಿತು. ಈ ತಡವೆ ಹೊಸದಾಗಿ ಬಂದಿದ್ದ ಸೇನಾಪತಿಯೂ ಜಮೀನುದಾರರೂ ವಿದ್ರೋಹಿಗಳಾಗಿ ದಂಗೆ ಕೂಡಿ ತಿರುಗಿ ಬಿದ್ದಿದ್ದರು. ಅಕಬರಷಹನು ಅತಿಶಯ ಬುದ್ಧಿಮಂತನಾದ ಸಮ್ರಾಜನಾಗಿದ್ದನು. ಮೊದಲು ಎರಡು ತಡವೆ ಪಠಾಣ ಶತ್ರುಗಳನ್ನು ಜಯಿಸಿದವನು ಹಿಂದೂ ಸೇನಾಪತಿಯಾಗಿದ್ದುದರಿಂದ ಹಿಂದೂ ಸೇನಾಪತಿಗಳನ್ನು ಬಿಟ್ಟು ಕೆಲಸವನ್ನು ಮಾಡಿದರೆ ಬೇರೆ ಜಾತಿಯವರು ದೇಶೀಯ ಹಿಂದೂಗಳ ಸಹಾಯವನ್ನು ತೆಗೆದುಕೊಂಡು ಮೊಗಲರಿಗೆ ವಿದ್ರೋಹಿಗಳಾಗಿರುವವರನ್ನು ಅಡಗಿಸಲಾರರೆಂದು ತಿಳಿದವನಾಗಿ, ೧೫೮೦ನೆಯ ಕ್ರಿಸ್ತಾಬ್ದದಲ್ಲಿ ಟೋಡರಮಲ್ಲನನ್ನು ಸೇನಾಪತಿಯನ್ನಾಗಿಯೂ ಶಾಸನಕರ್ತನನ್ನಾಗಿಯೂ ನಿಯಮಿಸಿ ವಂಗದೇಶಕ್ಕೆ ಕಳುಹಿದನು. ಸಿರ್ಫೀಕನಾಮಾ ವೀರಪುರುಷನು ಮೂರನೆಯ ತಡವ ಒಂದು ವಂಗದೇಶವನ್ನು ಜಯಿಸಿ, ವಂಗ, ಬಿಹಾರು, ಉರಿಸ್ಸಾ ದೇಶಗಳನ್ನಾಳಿದ ಎರಡು ವರ್ಷಗಳಕಾಲದಲ್ಲಿ ನಡೆದ ಘಟನಾವಳಿಗಳನ್ನವಲಂಬಿಸಿ ಈ ಆಖ್ಯಾಯಿಕೆಯನ್ನು ಬರೆಯುವೆವು. ಆದುದರಿಂದ ಆ ಸಮಯದಲ್ಲಿ ಹಿಂದೂಗಳಿಗೂ, ಮುಸಲ್ಮಾನರಿಗೂ, ಜಮೀನುದಾರರಿಗೂ, ಪ್ರಜೆಗಳಿಗೂ, ಪಠಾಣರಿಗೂ, ಮೊಗಲರಿಗೂ ಇದ್ದ ಪರಸ್ಪರ ಸಂಬಂಧವನ್ನು ಕುರಿತು ಪ್ರಥಮದಲ್ಲಿ ಸಂಕ್ಷೇಪವಾಗಿ ತಿಳಿಯಹೇಳಬೇಕಾದ ಅವಶ್ಯಕವುಂಟಾಯಿತು.

ಒಂದಾನೊಂದು ದಿನ ಪ್ರಾತಃಕಾಲದಲ್ಲೊಬ್ಬ ಬ್ರಹ್ಮಚಾರಿಯು ನದಿಯಾ ಜಿಲ್ಲೆಯಲ್ಲಿ ಹರಿಯುತಿದ್ದ ಇಚ್ಛಾಮತಿ ನದಿಯ ತೀರದಲ್ಲಿರುವ ರುದ್ರಪುರವೆಂಬೊಂದು ಚಿಕ್ಕದಾದ ಗ್ರಾಮಾಭಿಮುಖವಾಗಿ ಹೋಗುತ್ತಿದ್ದನು. ನಾಲ್ಕೂ ಕಡೆಗಳಲ್ಲಿ ವಿಸ್ತಾರವಾದ ಪಚ್ಚೆಪೈರುಳ್ಳ ಹೊಲಗಳೂ ಗದ್ದೆಗಳೂ ದೃಷ್ಟಿಗೋಚರವಾಗುವುವು; ಪ್ರಭಾತದ ತಂಗಾಳಿಯು ನಿಂತು ನಿಂತು ಬೀಸುತ ಪೈರುಗಳಮೇಲೆ

ಆಡುತಿತ್ತು; ಪೈರುಗಳು ಅದರೊಂದಿಗೆ ಆನಂದದಿಂದ ಕುಣಿದಾಡುವಂತಿರುವುವು. ಬಹಳ ದೂರದಲ್ಲಿ, ಹೊಲಗಳ ಮೇರೆಗಳಿಗೆ ಮೇಲತ್ತ, ಒಂದೆರಡು ಹಳ್ಳಿಗಳು ಕಾಣುವುವು.—ಮನೆಗಳು ಕಾಣುತಿರಲಿಲ್ಲ; ಅಲ್ಲಲ್ಲಿ ದಟ್ಟವಾಗಿದ್ದ ಹಸರಬಣ್ಣದ ಮರಗಳ ಗುಂಪುಗಳು ಕಾಣುತಿದ್ದುವು; ಆಕಾಶವು ನೀಲಿಯ ಬಣ್ಣ; ಹಕ್ಕಿಗಳು ಹಾಡುತಿದ್ದುವು ; ರೈತಜನರೂ ಹಳ್ಳಿಯಿಂದ ಹೊರಟಿದ್ದವರು ಹಾದಿಯಲ್ಲಿ ಉಲ್ಲಾಸದಿಂದ ಹಾಡುತಿದ್ದರು. ಬ್ರಹ್ಮಚಾರಿಯು ಹಾದಿಯಲ್ಲಿ ಹೋಗುತಿದ್ದವನು ಮತ್ತೊಬ್ಬ ಹಾದಿವಾಕನನ್ನು ಕಂಡು, "ರುದ್ರಪುರವು ಮತ್ತೆಷ್ಟು ದೂರ?" ಎಂದು ಕೇಳಿದನು. ಹಾದಿವಾಕನು, "ಬಹಳ ದೂರವಿಲ್ಲ; ಅರ್ಧ ಹರದಾರಿಯಾಗಬಹುದು, ಎದುರೇರಿಹೋಗಿ ಕಾಣುವ ದಿಣ್ಣೆ ಮೊಗಚಿ ಬಿದ್ದರೆ, ಅಲ್ಲಿ ಊರಿರುವುದು" ಎಂದು ಹೇಳಿದನು.

ಹಾದಿವಾಕನಿಗೆ ನಾಲ್ವತ್ತು ವರ್ಷವಿರಬಹುದು; ಅವನು ಕೈವರ್ತಜಾತಿಯವನು; ಆದರೆ ಅವನ ಉಡುಗೆಯು ಸಂಭಾವಿತನಿಗೆ ತಕ್ಕುದಾಗಿದ್ದಿತು; ಅವನು ಬ್ರಹ್ಮಚಾರಿಗೆ ವಂದಿಸಿ, "ಸ್ವಾಮಿ! ರುದ್ರಪುರಕ್ಕೆ ಹೋಗುವಿರಾ? ನಾನೂ ಅಲ್ಲಿಯವನು, ತಮ್ಮ ಸಂಗಡ ಬರುವೆನು; ತಮ್ಮ ಹೆಸರೇನು? ಇರುವುದೆಲ್ಲಿ?" ಎಂದು ಹೇಳಿ ವಿಚಾರ ಮಾಡಿದನು.

ಬ್ರಾಹ್ಮಣ—ನನ್ನ ಹೆಸರು ಶಿಖಂಡಿವಾಹನ. ಇಚ್ಛಾಮತಿ ನದಿಯ ತೀರದಲ್ಲಿರುವ ಮಹೇಶ್ವರ ಮಂದಿರದಿಂದ ಬಂದೆನು. ನಿನ್ನ ಹೆಸರೇನು?

ಹಾದಿವಾಕ—ನನ್ನ ಹೆಸರು ನವೀನದಾಸ. ಇಲ್ಲಿ ನನಗೆ ಸ್ವಲ್ಪ ಭೂಮಿಯಿದೆ—ಅದನ್ನು ನೋಡಲು ಹೋಗುತ್ತೇನೆ.

ಶಿಖಂಡಿ—ಈ ವರ್ಷ ಪೈರುಪಚ್ಚೆ ಹೇಗಾಗಿದೆ?

ನವೀನ—ಸ್ವಾಮಿ! ಈಗ ನನಗೆ ನಾಲ್ವತ್ತು ವರ್ಷ, ಈ ವರ್ಷದ ಪೈರಿನಂತೆ ದಂಡಿಬೆಳೆಯನ್ನು ನಾನಾವಾಗಲೂ ನೋಡಿರಲಿಲ್ಲ. ಈ ವರ್ಷ ದೇವರ ದಯೆಗೆ ಪಾರವಿಲ್ಲ.

ನವೀನದಾಸನು ಸ್ವಲ್ಪಹೊತ್ತು ಸುಮ್ಮನಿದ್ದು, ಪುನಃ, "ಸ್ವಾಮಿ! ನಮ್ಮ ಜಮೀನುದಾರನ ಮಗನಿಗೇನಾಗಿದೆ? ಕೇಳಿದಿರಾ?" ಎಂದನು.

ಶಿಖಂಡಿ—ಇಲ್ಲ; ಏನಾಗಿದೆ?

ನವೀನ—ಅವನು ಒಂದು ಮಾದರಿ ಹುಚ್ಚನಾಗಿದ್ದಾನೆ. ಕಾರಣವನ್ಯಾರೂ ಅರಿಯರು; ಅವನ ಆರೋಗ್ಯಕ್ಕ ಸಲುವಾಗಿ ಅವನ ತಂದೆಯು ಬಹಳ ಶ್ರಮ ಪಡುತ್ತಾನೆ; ಆದರಿಂದೇನೂ ಫಲವಾಗಲಿಲ್ಲ; ತಾವು ಓದುಬರಹವನ್ನು ಬಲ್ಲವರು; ತಾವು ನೋಡಿ ಏನಾದರೂ ಮಾಡಬಲ್ಲಿರಾ?

ಶಿಖಂಡಿ—ಶಾಸ್ತ್ರದಲ್ಲಿ ಹುಚ್ಚುರೋಗಕ್ಕೆ ಅನೇಕ ಕಾರಣಗಳು ಉಕ್ತವಾಗಿವೆ; ಬಂಧುವಿಯೋಗ, ರಮಣಿಯ ಪ್ರೇಮ.

ನವೀನ—ಅಂತಹುದುದಲ್ಲ—ಜವಿಾನುದಾರನ ಮಗನು ಏನೇನೋ ಪರಸ್ಪರ ಸಂಬಂಧವಿಲ್ಲದ ಮಾತುಗಳನ್ನು ಹೇಳುತ್ತಿರುವನು; ಅದೊಂದೂ ಗೊತ್ತು ಗುರಿಯಿಲ್ಲವಾಗಿದೆ; ಹೆಚ್ಚು ಓದಿ ಹುಚ್ಚು ಹತ್ತಿರುವಂತಿದೆ.

ಶಿಖಂಡಿ—ಅವನಾವ ಮಾತುಗಳನ್ನು ಹೇಳುತ್ತಿರುವನು, ಹೇಳಲಾಗುವುದೆ?

ನವೀನ—ನಾನು ಕೇಳಿರುವುದರಲ್ಲಿ, ಅವನು ಒತ್ತಡವೆ—ವೈರಿಸಿಯಾ ತನವೇ ಪರಮಸುಖವಾದುದೆಂದೂ, ಒತ್ತಡವೆ—ಸ್ತ್ರೀರತ್ನವೇ ಶ್ರೇಷ್ಠರತ್ನವೆಂದೂ, ಒತ್ತಡವೆ—ಬಂಧುಹತ್ಯವು ಮಹಾಪಾತಕವೆಂದೂ, ಒತ್ತಡವೆ—ಪ್ರಜೆಗಳ ಕಷ್ಟವನ್ನು ನೋಡುವುದಕ್ಕಿಂತ ಸಾಯುವುದು ಮೇಲೆಂದೂ ಹೇಳುತಿರುವನಂತೆ.

ಶಿಖಂಡಿ—(ಬಹಳ ಹೊತ್ತು ಯೋಚಿಸಿ) ಅವನು ಏನೋ ಒಂದು ಭಯಂಕರವಾದ ಪಾತಕವನ್ನು ಮಾಡಿರುವಂತೆ ತೋರುತ್ತದೆ. ಮಹಾ ಪಾಪಕೃತ್ಯವನ್ನು ಮಾಡಿದರೆ ಮನಸ್ಸಿಗೆ ವೈಕಲ್ಯವುಂಟಾಗಿ ಹುಚ್ಚಾಗುವುದುಂಟು.

ನವೀನ—ಅವನಾವ ಪಾಪಕೃತ್ಯವನ್ನಾದರೂ ಮಾಡಿರುವನೆಂದು ನಾನು ನಂಬಲಾರೆನು.

ಹೀಗೆಂದು ಹೇಳಿ ನವೀನದಾಸನು ಒಂದು ಪೂರ್ವವೃತ್ತಾಂತವನ್ನು ಜ್ಞಾಪಿಸಿಕೊಳ್ಳುವನಂತೆ ಸ್ವಲ್ಪಹೊತ್ತು ಸುಮ್ಮನಿದ್ದು, ಒಳಿಕ ಪುನಃ ಹೇಳತೊಡಗಿದನು: "ಅವನ ಅಂತಃಕರಣವು ಅತ್ಯಂತ ದಯಾರ್ದ್ರವಾದುದು; ಅಂತಹ ದಯಾಪರವಶನಾದವನಾವ ಪಾಪವನ್ನೂ ಮಾಡನು. ಈಗ್ಗೆ ಹನ್ನೆರಡು ವರ್ಷದಲ್ಲಿ ನಾನೊಂದು ಸಲ ಇಚ್ಛಾಪುರಕ್ಕೆ ಹೋಗಿದ್ದೆನು; ಆಗ ನಾಲ್ಕಾರುಮಂದಿ ಬಡರೈತರು ಕಂದಾಯದ ಹಣವನ್ನು ಕೊಡಲಾರದೆ ಸೆರೆಯಲ್ಲಿಡಲ್ಪಟ್ಟಿದ್ದರು; ನಮ್ಮ ಜವಿಾನುದಾರನ ಮಗನಿಗೆ ಆಗ ಎಂಟು ವರ್ಷ ವಯಸ್ಸಾಗಿರಬಹುದು; ಅವನು ಆರೂ ಕಾಣದಹಾಗೆ ಸೆರೆಮನೆಯ ಬಾಗಿಲ ತೆಗೆದು ಒಳಗೆ ಹೋಗಿ ಪ್ರತಿಯೊಬ್ಬ ರೈತನಿಗೂ ಎರಡೆರಡು ರೂಪಾಯಿಗಳನ್ನು ಕೊಟ್ಟನು; ರೈತರು ಕಂದಾಯವನ್ನು ಸಂದಾಯಮಾಡಿ ಸೆರೆಮನೆಯಿಂದ ಬಿಡುಗಡೆಯಾಗಿ ಆನಂದದಿಂದ ಹೊರಟು ಹೋದರು.

ಶಿಖಂಡಿ—ಬಳಿಕ?

ನವೀನ—ಬಳಿಕ ಎಲ್ಲರಿಗೂ ಆಶ್ಚರ್ಯವುಂಟಾಯಿತು; ರೈತರಿಗೆ ಹಣವೆಲ್ಲಿಂದ ಬಂದಿತು? ಕೊಟ್ಟವರಾರು? ಎಂಬೀ ಸಂಗತಿಗಳಾರಿಗೂ ಗೊತ್ತಾಗಲಿಲ್ಲ. ಕಡೆಗೆ ರೈತರೆಲ್ಲರೂ ಅವರವರ ಮನೆಗೆ ಸೇರಿದ ಬಳಿಕ ಹುಡುಗನು ಹೋಗಿ ಭಯದಿಂದ ತಂದೆಯನ್ನು ಕಂಡು, ತಾನು ಮಾಡಿದ ಕೆಲಸವನ್ನು ಅವನಿಗೆ ತಿಳಿಸಿದನು. ತಂದೆಯಾದ ನಗೇಂದ್ರನಾಥನು ಕೇಳಿ ಮಗನನ್ನೆತ್ತಿ ತೊಡೆಯಮೇಲೆ ಕುಳ್ಳಿರಿಸಿಕೊಂಡು ಮುದ್ದಿಟ್ಟುಕೊಂಡನು. ನಾನು ಬಾಗಿಲಲ್ಲಿ ನಿಂತಿದ್ದವನು ಅದನ್ನು ಕಂಡು ಕಣ್ಣೀರು ತುಂಬಿದವನಾದೆನು.

ಈ ಪ್ರಕಾರ ಮಾತನಾಡುತ ಅವರಿಬ್ಬರೂ ರುದ್ರಪುರ ಗ್ರಾಮಕ್ಕೆ ಬಂದು ಸೇರಿದರು. ಗ್ರಾಮಕ್ಕೆ ಸುತ್ತಲು ನಾನಾತರದ ದೊಡ್ಡದೊಡ್ಡ ಮರಗಳು ನಿಂತು ಹೊರಗಿನವರಿಗೆ ಗ್ರಾಮವಿರುವುದು ಕಾಣುತಿರಲಿಲ್ಲ. ಗ್ರಾಮವು ಮರೆಯಾಗಿದ್ದಿತು. ಮರದೆಲೆಗಳ ಸಂದುಗಳಿಂದ ಸೂರ್ಯನ ರಶ್ಮಿಯು ಬಂದು ಒಣಗಿ ಬಿದ್ದಿದ್ದ ತರಗೆಲೆಗಳ ಮೇಲೂ, ಗ್ರಾಮಕ್ಕೆ ಹೋಗುವ ಹಾದಿಯಮೇಲೂ ಬೀಳುವುದು. ಮರದ ಕೊಂಬೆಗಳಮೇಲೆ ವಿಧವಿಧವಾದ ಸುಂದರ ಪಕ್ಷಿಗಳು ಗಾನಮಾಡುತ್ತ ತಮ್ಮ ತಮ್ಮ ಮನಸ್ಸಿನ ಉಲ್ಲಾಸವನ್ನು ತೋರುವುವು. ಅಲ್ಲಲ್ಲಿ ಗ್ರಾಮದ ಸರೋವರಗಳಲ್ಲಿ ಪದ್ಮ ಮುಂತಾದ ಹೂವುಗಳು ಅರಳಿ ಸರೋವರಗಳ ಸೌಂದರ್ಯವನ್ನು ಹೆಚ್ಚು ಮಾಡುತಿದ್ದುವು. ಅಲ್ಲಲ್ಲಿ ಮರಗಳ ತಲದಲ್ಲಿ ಒಂದೆರಡು ಗುಡಿಸಲುಗಳು ಕಾಣುವುವು. ಅಲ್ಲಲ್ಲಿ ಒಬ್ಬಿಬ್ಬರು ಕೃಷಿಕರು ನಿರಾತಂಕವಾಗಿ ಹಾಡುತ ಹಾದಿಹಿಡಿದು ಹೊಲಗಳ ಕಡೆಗೆ ಹೋಗುತಿರುವರು. ಕೃಷಿಕ ಮಹಿಷಿಯರು ನೀರು ತುಂಬಿದ ಮಣ್ಣಿನ ಕೊಡಗಳನ್ನು ಕೊಂಕುಳಲ್ಲಿರಿಸಿಕೊಂಡು, ಗ್ರಾಮ್ಯ ವೃತ್ತಾಂತಗಳನ್ನು ಕುರಿತು ಸಮಾಲೋಚನೆಯಂ ಮಾಡುತ ನಾವಕಾಶವಾಗಿ ಮನೆಯ ಕಡೆಗೆ ಬರುತಿದ್ದರು.

ಶಿಖಂಡಿ—"ಮಹಾಶ್ವೇತೆ" ಎಂಬ ಗಂಡಸಿಲ್ಲದ ಹೆಂಗಸೊಬ್ಬಳು ಈ ಗ್ರಾಮದಲ್ಲಿರುವುದೆಲ್ಲಿ?

ನವೀನ—ಮುಂದೆ ನಡೆಯೋಣಾಗಲಿ ನಾನವರ ಮನೆಯನ್ನು ತೋರುವೆನು.

ಇಬ್ಬರೂ ಸ್ವಲ್ಪದೂರ ಹೋದ ಬಳಿಕ ನವೀನದಾಸನು ಮಹಾಶ್ವೇತೆಯ ಮನೆಯನ್ನು ತೋರಿದನು.

ಶಿಖಂಡಿವಾಹನನು ಮಹಾಶ್ವೇತೆಯ ಮನೆಯಲ್ಲಿ ಅತಿಥಿಯಾಗಿ ನಿಂತನು. ನವೀನದಾಸನು ಬ್ರಹ್ಮಚಾರಿಗೆರಗಿ ಅವನ ಪಾದಧೂಳಿಯನ್ನು ಶಿರದಲ್ಲಿ ಧರಿಸಿ ಬೀಳ್ಕೊಂಡು ಹೊರಟುಹೋದನು.

---

## ಎರಡನೆಯ ಪರಿಚ್ಛೇದ

She stole along, she nothing spoke,
The sighs she heaved were soft and low,
And naught was green upon the oak,
But moss and rarest mistletoe:
She kneels beneath the huge oak tree,
And in silence prayeth she *Coleridge.*

ರಾತ್ರಿ ಸುಮಾರಾಗಿ ಎರಡೂವರೆ ತಾಸಾಗಿರಬಹುದು. ಶುಕ್ಲಪಕ್ಷದ ಚತುರ್ದಶಿ. ಆದರೆ ಮೇಘವು ಮುಸುಕಿಟ್ಟು ಆಕಾಶವನ್ನೆಲ್ಲಾ ಮುಚ್ಚಿಕೊಂಡಿದ್ದಿತು. ಗ್ರಾಮ, ಭೂಮಿ, ಅಡವಿ ಮುಂತಾದುದೆಲ್ಲಾ ಅಂಧಕಾರದಲ್ಲಿ ಮುಳುಗಿಹೋಗಿ

ದ್ದಿತು. ಮಿಂಚಿನ ಹುಳುಗಳ ಮಾಲೆಗಳು ವೃಕ್ಷಲತಾದಿಗಳಲ್ಲಿದ್ದ ನಿಬಿಡವಾದ ಅಂಧಕಾರವನ್ನು ರಂಜಿತವಾಡುತಿದ್ದುವು. ಇಚ್ಛಾಮತಿ ನದಿಯು ತುಂಬಿ ತೆರೆತೆರೆಯುಳ್ಳುದಾಗಿ ತುಳುಕುತ್ತ ಹರಿಯುತಿದ್ದಿತು. ನಿಶಾವಾಯುವಿನ ವೇಗ ದಿಂದಾ ತೆರೆಗಳ ಹಾರಗಳು ಕಡೆದೇಳ್ದು ಬದ್ದು ಹೋಗುತಿದ್ದುವು. ದಟ್ಟವಾಗಿ ಬೆಳೆದಿದ್ದ ಅಡವಿಯ ಹೊದರುಗಳಿಂದ ಗಾಳಿಯು " ಸೊಯಿ ಸೊಯಿ " ಎಂದು ಬೀಸುತಿದ್ದಿತು. ಗಾಳಿಯ ಶಬ್ದವೂ ತೆರೆಗಳ ಶಬ್ದವೂ ಹೊರತು ಬೇರೆ ಶಬ್ದ ವಾವುದೂ ಕೇಳುತಿರಲಿಲ್ಲ. ಜಗತ್ತೆಲ್ಲಾ ನಿದ್ದೆಗೈಯುತಿದ್ದಿತು.

ಅಂತಹ ಗಭೀರವಾದ ಅಂಧಕಾರದಲ್ಲಿ ಅಂತಹ ಛಳಿಯಾದ ಗಾಳಿಯಲ್ಲಿ ಶುಭ್ರವಾದ ಬಟ್ಟೆಯನ್ನುಟ್ಟಿದ್ದ ಹೆಂಗಸೊಬ್ಬಳು ಒಬ್ಬೊಂಟಿಗಳಾಗಿ ನದಿಯಲ್ಲಿ ಸ್ನಾನವನ್ನು ಮಾಡುತಿದ್ದಳು. ಅವಳೊಂದು ವ್ರತವನ್ನಾಚರಿಸುವವಳಾಗಿದ್ದಳು. ಕತ್ತಲೆಯಲ್ಲಿ ಅವಳ ಬಿಳುಪಾದ ಬಟ್ಟೆಯು ಹೊರತು ಮತ್ತಾವುದೂ ಕಾಣುತಿರ ಲಿಲ್ಲ. ಸ್ನಾನವನ್ನು ಮಾಡಿದ ಬಳಿಕ ವನದಲ್ಲಿದ್ದ ಹೂವುಗಳನೆತ್ತಿಕೊಂಡು ಬಂದು ಸಮೀಪದಲ್ಲಿದ್ದೊಂದು ಪುರಾತನ ವಟವೃಕ್ಷದ ತಳಗಿದ್ದ ಶಿವಮಂದಿರದೊಳಗೆ ಹೋಗಿ ಬಾಗಿಲನ್ನು ಹಾಕಿಕೊಂಡಳು.

ಮಂದಿರದೊಳಗೆ ಬಿಳಿವಣ್ಣದ ಶಿಲೆಯಿಂದ ನಿರ್ಮಿತವಾಗಿದ್ದ ಚಿಕ್ಕದಾ ದೊಂದು ಶಿವಲಿಂಗಮೂರ್ತಿಯಿದ್ದಿತು. ಅದರ ಪಾರ್ಶ್ವದಲ್ಲೊಂದು ಪ್ರದೀಪ ವುರಿಯುತಿದ್ದಿತು. ಅದರ ಬೆಳಕು ಹೆಂಗಸಿನ ಮೈಮೇಲೂ ಅವಳ ಬಟ್ಟೆಯ ಮೇಲೂ ಬಿದ್ದಿತು. ಹೆಂಗಸಿಗೆ ಯೌವನಾವಸ್ಥೆಯು ಕಳೆದು ಬಹಳ ಕಾಲವಾ ಗಿದ್ದಿತು. ಅವಳಿಗೆ ನಾಲ್ವತ್ತುವರ್ಷದಮೇಲೆ ವಯಸ್ಸಾಗಿರಬಹುದು; ಕಳೆ ಗುಂದಿ ಬಾಡಿಹೋಗಿದ್ದವಳ ದೇಹವನ್ನೂ ತಲೆಯಲ್ಲೊಂದೆರಡು ನರೆಕೂದಲನ್ನೂ ನೋಡಿದರೆ ಅವಳಿಗೆ ಐವತ್ತು ವರ್ಷಕ್ಕೆ ಮೇಲಾಗಿದ್ದರೂ ಇರಬಹುದೆಂದು ತೋರುವುದು. ಶರೀರವು ಕಳೆಗುಂದಿಹೋಗಿದ್ದರೂ ಎತ್ತರವಾಗಿಯೂ ಕೋಮಲ ವಾಗಿಯೂ ಇದ್ದಿತು. ಲಲಾಟವು ಎತ್ತರವಾಗಿ ಪ್ರಶಸ್ತವಾಗಿದ್ದರೂ ಚಿಂತಾ ರೇಖೆಗಳಿಂದ ಗಭೀರವಾಗಿ ಅಂಕಿತವಾಗಿದ್ದಿತು. ತಲೆಯ ಕೂದಲರಾಶಿಯು ಕಪೋಲದಮೇಲೂ ಗಂಡಸ್ಥಳದಮೇಲೂ ಹೃದಯದಮೇಲೂ ಗುಚ್ಛಗುಚ್ಛವಾಗಿ ಬಿದ್ದಿದ್ದಿತು; ಅವಳ ಕಣ್ಣುಗಳ ಕಾಂತಿಯು ತರುಣಿಯರ ಕಣ್ಣುಗಳಲ್ಲಿಯೂ ಇರದು; ಆದರೆ ಅದು ತರುಣಿಯರ ಕಣ್ಣಿನ ಕಾಂತಿಯಂತಿರಲಿಲ್ಲ. ಹೃದಯದ ಚಿಂತಾಗ್ನಿಯ ಕಿಡಿಗಳು ಕಣ್ಣುಗಳಿಂದ ಸುರಿಯುತ್ತಿದ್ದಂತಿರುವುದು; ತುಟಿಗಳು ಚಿಕ್ಕಣವಾಗಿ ದ್ದರೂ ದೃಢಪ್ರತಿಜ್ಞೆಯನ್ನು ಸೂಚಿಸುವುವಾಗಿದ್ದುವು; ಸಮಸ್ತ ಶರೀರವೂ ಗಂಭೀರವಾಗಿಯೂ ಉನ್ನತವಾಗಿಯೂ ಇದ್ದು ಏತಂತುವಿನುಡಿಗೆಯಿಂದಾವೃತ ವಾಗಿ ಅಧಿಕ ಗಾಂಭೀರ್ಯವನ್ನು ತಾಳಿದ್ದಿತು; ಹೆಂಗಸು ತಂದಿದ್ದ ಹೂವುಗಳ ನ್ನೆಲ್ಲಾ ದೇವರ ಮುಂದಿಟ್ಟು ದಂಡಾಕಾರವಾಗಿ ಪ್ರಣಾಮವನ್ನು ಮಾಡಿದಳು.

ಬಹಳ ಹೊತ್ತು ಪೂಜೆಯನ್ನು ಮಾಡುತಿದ್ದಳು. ಗಾಳಿಯು ಕ್ರಮವಾಗಿ ಪ್ರಬಲವಾಗುತ್ತ ಬಂದಿತು. ಬಾಗಿಲು ಆಗಿಂದಾಗ 'ಝುನ್ ಝುನ್' ಶಬ್ದವಾಗುತಿದ್ದಿತು. ದೀಪವು ನೊಂದಿಹೋಗುತ್ತ ಬಂದಿತು, ಆದರೆ ಹೆಂಗಸಿನ ಮುಖಭಾವದಲ್ಲಿ ಸ್ವಲ್ಪವೂ ವೈಲಕ್ಷಣ್ಯವುಂಟಾಗಲಿಲ್ಲ. ಕಣ್ಣು ಮುಚ್ಚಿದವಳಾಗಿ ಮೈಯನ್ನಳ್ಳಾಡಿಸದೆ ಸ್ಥಿರಭಾವದಿಂದೊಂದು ಪ್ರಹರಕಾಲ ದೇವರ ಆರಾಧನೆಯನ್ನು ಮಾಡುತಿದ್ದಳು. ಅವಳ ಪ್ರಾರ್ಥನೆ ಯಾವುದೋ, ಅವಳಾವ ವಿಷಯವಾಗಿ ಆರಾಧನೆಯನ್ನು ಮಾಡುತಿದ್ದಳೋ ಅದಾವುದನ್ನೂ ನಾವು ಅರಿಯೆವು; ತಿಳಿದುಕೊಳ್ಳಲೂ ಸಾಹಸವುಳ್ಳವರಾಗಲಿಲ್ಲ.

ಪೂಜೆಯು ಮುಗಿದ ಬಳಿಕ ಹೆಂಗಸು ಹೊರಗೆ ಬರಲು, ದೀಪವನ್ನು ಕೈಯಲ್ಲಿ ಹಿಡಿದುಕೊಂಡು ಬಂದು ಬಾಗಿಲನ್ನು ತೆರೆದಳು. ತೆರೆದ ಕೂಡಲೆ ಗಾಳಿಯು ನುಗ್ಗಿ ದೀಪವು ನೊಂದಿಹೋಯಿತು. ಮಸೀಮಯವಾಗಿದ್ದ ನಡುರಾತ್ರಿಯ ಸಮಯದಲ್ಲಿ ಕ್ಷೀಣಾಂಗಿಯಾಗಿದ್ದ ಹೆಂಗಸು ಸ್ವಲ್ಪವೂ ಎದೆಗುಂದದೆ ಮೆಲ್ಲಮೆಲ್ಲನೆ ರುದ್ರಪುರದ ಗ್ರಾಮದ ಮಾರ್ಗವಾಗಿ ಬಂದು ಕುಟೀರಾಭಿಮುಖವಾಗಿ ಹೊರಟಳು. ಹಾದಿಯು ಅತಿ ಇಕ್ಕಟ್ಟು; ಎರಡು ಪಾರ್ಶ್ವಗಳಲ್ಲಿಯೂ ಅಡವಿ; ದೊಡ್ಡ ದೊಡ್ಡ ಮರಗಳೆಲೆಯಿಂದ ಕತ್ತಲು ಇಮ್ಮಡಿಯಾಗುತ್ತ ಕಾಣುವುದು. ಆ ಮರಗಳ ತಲದಲ್ಲೊಂದೊಂದು ಗುಡಿಸಲು ಕಾಣುವುದು; ಗುಡಿಸಲಲ್ಲಿದ್ದವರೆಲ್ಲರೂ ಮಲಗಿದ್ದರು. ಜೀವಜಂತುಗಳ ಶಬ್ದವಿಲ್ಲ. ಹೀಗಿದ್ದ ಹಾದಿಗೊಂದು ಮಹಾಶ್ವೇತೆಯು ಸ್ವಲ್ಪ ದೂರ ಹೋಗಿ ಕಡೆಗೊಂದು ಕುಟೀರದೆದುರಿಗೆ ಒಂದು ನಿಂತು ಬಾಗಿಲನ್ನು ತಟ್ಟಿದಳು. ಬಾಗಿಲು ತೆರೆಯಲ್ಪಟ್ಟಿತು. ಹೆಂಗಸು ಒಳಗೆ ಹೋಗುತಲೆ ಕೈಯಲ್ಲಿ ದೀಪವನ್ನು ಹಿಡಿದಿದ್ದ ಹುಡುಗಿಯೊಬ್ಬಳು ಪುನಃ ಬಾಗಿಲನ್ನು ಹಾಕಿದಳು.

ಮಹಾಶ್ವೇತೆಯು ಚಿಂತಿಸುತ್ತ ಬರುತಿದ್ದವಳು ಹುಡುಗಿಯ ಮುಖವನ್ನು ನೋಡುತಲೆ ಅವಳ ಚಿಂತೆಯೆಲ್ಲಾ ದೂರವಾಗಿ ಪವಿತ್ರವಾದ ಸ್ನೇಹಭಾವವು ಮುಖಮಂಡಲದಲ್ಲಿ ವಿಕಾಸವಾಗುತ್ತ ಬಂದು, ಅವಳು, "ಸರಳೆ! ಇಷ್ಟು ರಾತ್ರಿಯಾದರೂ ಮಲಗದೆ ಎಚ್ಚರವಾಗಿರುವುದೇನು ? ಹೋಗಿ ಮಲಗು, ತಾಯಿ!" ಎಂದು ಹೇಳಿ, ಅವಳನ್ನು ಮುದ್ದಿಟ್ಟುಕೊಂಡಳು. ಸರಳೆಯು, "ಅಮ್ಮ! ರಾತ್ರಿಹೊತ್ತಾಯಿತೆಂದೆನಗೆ ಗೊತ್ತಾಗಲಿಲ್ಲ; ಬ್ರಹ್ಮಚಾರಿಗಳು ಮಹಾಭಾರತದ ಕಥೆಯನ್ನು ಹೇಳುತಿದ್ದರು; ಅದನ್ನು ಕೇಳುತ ಕುಳಿತಿದ್ದೆನು; ಮಹಾಭಾರತದ ಕಥೆಯನ್ನು ಕೇಳುತಿದ್ದರೆ ರಾತ್ರಿಯೆಲ್ಲಾ ಜಾಗರಣೆ ಮಾಡುತಿರುವೆನು" ಎಂದಳು.

ಸರಳೆಯು ದೀಪವನ್ನು ತೆಗೆದುಕೊಂಡು ಮಲಗುವ ಮನೆಯಕಡೆ ಹೋಗುತಿದ್ದಳು. ತಾಯಿಯು ಅವಳಕಡೆ ಬಹಳ ಹೊತ್ತು ಎವೆ ಇಕ್ಕದೆ ನೋಡುತ

ತನ್ನೊಳುತಾನೇ ಅಸ್ಫುಟ ಸ್ವರದಿಂದ, "ನನಗೆ ಸರ್ವಸ್ವವೂ ನೀನೊಬ್ಬಳು ; ಬ್ರಹ್ಮನು ಈ ಅಡವಿಯನ್ನು ಬೆಳಕುಮಾಡುವುದಕ್ಕೆ ಸಲವಾಗಿ ಇಂತಹ ಅಮೌಲ್ಯವಾದ ರತ್ನವನ್ನು—ಇಂತಹ ಅಸದೃಶವಾದ ಪುಷ್ಪವನ್ನು—ಸೃಷ್ಟಿ ಮಾಡಿರುವನೆ?" ಎಂದು ಹೇಳಿಕೊಳ್ಳುತ್ತ, ಬ್ರಹ್ಮಚಾರಿಯು ಉಳಿದಿದ್ದ ಚಿಕ್ಕ ಮನೆಗೆ ಹೋದಳು.

ಸರಳೆಯು ಮಲಗುವ ಮನೆಗೆ ಹೋಗಿ ದೀಪವನ್ನು ನೆಲೆಯಲ್ಲಿಟ್ಟವಳು, ತಾಯಿಯು ಮಲಗುವುದಕ್ಕೆ ಬರುವಳೆಂದು ಬಾಗಿಲನ್ನು ಹಾಕಿಕೊಳ್ಳಲಿಲ್ಲ. ದೀಪವನ್ನು ನೊಂದಿಸಲಿಲ್ಲ. ಅವಳಿಗೆ ಹದಿಮೂರು ವರ್ಷವಾಗಬಹುದು. ಯೌವನವು ಚೆನ್ನಾಗಿ ತಲೆದೋರಿರಲಿಲ್ಲ. ಮುಖವನ್ನು ನೋಡಿದರೆ ಹುಡುಗಿ ಯೆಂದು ಬೋಧೆಯಾಗುವುದು. ಅವಯವಗಳಲ್ಲಾಗಲೀ ಮುಖದಲ್ಲಾಗಲೀ ವಿಶೇಷ ರೂಪದ ಕಳೆಯೂ ಲಾವಣ್ಯದ ಸ್ಫೂರ್ತಿಯೂ ಉಂಟಾಗಿರಲಿಲ್ಲ. ಕವಿಗಳು ಬಣ್ಣಿಸಲು ಬಯಸುವ ಸೆಳನಡುವುಳ್ಳ ನಡಕಿನ ಚಲುವಿಯರ ಚಲುವು ನಮ್ಮಾ ಸರಳೆಗೆ ಬಂದಿರಲಿಲ್ಲ. ಶರೀರವು ಕೋಮಲತೆಯಿಂದ ಪೂರ್ಣವಾಗಿ ಮುಖಮಂಡಲದಲ್ಲಿ ಸ್ವರ್ಗೀಯವಾದ ಮಾಧುರ್ಯವೂ ಸರಳತೆಯೂ ಕಣ್ಗೊಳಿಸುತಿದ್ದುವು. ನೋಡಿದ ಮಾತ್ರದಿಂದ ಅವಳ ಹೃದಯವು ಕೇವಲ ಸುಶೀಲತೆಯಿಂದಲೂ, ಸರಳತೆಯಿಂದಲೂ ಮನುಷ್ಯಸಾಧಾರಣದಲ್ಲಿರುವ ಪವಿತ್ರವಾದ ಪ್ರೇಮದಿಂದಲೂ, ಸ್ನೇಹರಾಶಿಯಿಂದಲೂ ತುಂಬಿದ್ದಿತೆಂದು ತೋರುವುದು, ಅವಳಿಗಿದ್ದ ವಿಶೇಷ ಸೌಂದರ್ಯದಲ್ಲಿ ಕಣ್ಣುಗಳೆರಡೂ ತಾಯಿಯ ಕಣ್ಣುಗಳಂತೆ ಉಜ್ವಲವಾಗಿದ್ದುವು. ಉಜ್ವಲವೇನೋ ಅಹುದು, ಆದರೆ ಶಾಂತವಾಗಿಯೂ ಸರಳವಾಗಿಯೂ ಕೋಮಲತೆಯಿಂದ ಪೂರ್ಣವಾಗಿಯೂ ಇದ್ದುವು; ತುಟಿಗಳು ಹೆಚ್ಚು ಚಿಕ್ಕಣವಾಗಿರಲಿಲ್ಲ; ಆದರೆ, ಅವುಗಳನ್ನು ನೋಡಿದರೆ, ಇನಿದಾದ ನವಿಗೆ ಆಧಾರವಾಗಿ ಸೊಗಸಾದ ನಸುನಗೆಯಿಂದ ವಿಕಸಿತವಾಗಿದ್ದಂತಿದ್ದುವು; ಕಪ್ಪಾದ ಕೂದಲು ಗುಚ್ಛಗುಚ್ಛವಾಗಿ ಅವಳಾ ಸರಳವಾದ ಕಿಶೋರಭಾವವನ್ನು ವೃದ್ಧಿಗೊಳಿಸುತಿದ್ದಿತು; ಸರ್ವಾಂಗವೂ ಕೋಮಲವಾಗಿಯೂ ಸ್ನಿಗ್ಧವಾಗಿಯೂ ಇದ್ದಿತು. ಹಗಲೆಲ್ಲಾ ಶ್ರಮಪಟ್ಟಿದ್ದುದರಿಂದ ಹಾಸಿಗೆಯಮೇಲೆ ಮಲಗಿದ ಕೂಡಲೆ ನಿದ್ರೆಯು ಹತ್ತಿ ಅರಳಿದ್ದ ಪದ್ಮವು ಪುನಃ ಮುಕುಲಿತವಾಗಿ ಸೊಗ್ಗಿಯ ಭಾವವನ್ನು ತಾಳಿದಂತಿಹುದು.

ತಾಯಿಯೂ ಮಗಳೂ ವಾಸವಾಗಿದ್ದ ಕುಟೀರವು ಅತಿಸಾಮಾನ್ಯವಾದುದಾಗಿದ್ದಿತು. ಚಿಕ್ಕದಾದೊಂದು ಅಡಿಗೆಯ ಮನೆ, ಒಂದು ದನವಿನ ಕೊಟ್ಟಿಗೆ, ಮತ್ತೆರಡು ದೊಡ್ಡ ಕೊಠಡಿಗಳು. ಒಂದು ಕೊಠಡಿಯಲ್ಲಿ ತಾಯಿಯೂ ಮಗಳೂ ಒಬ್ಬ ದಾಸಿಯೂ ಮಲಗುತಿದ್ದರು. ಮತ್ತೊಂದರಲ್ಲಿ ಹಗಲುಹೊತ್ತು ಕೆಲಸ ಕಾರ್ಯಗಳನ್ನು ಮಾಡುವರು; ಮತ್ತು ಅತಿಥಿಗಳಾಗಿ ಬಂದವರು ಮಲಗುವರು.

ದನವಿನ ಕೊಟ್ಟಿಗೆಯಲ್ಲಿ ಮೂರು ನಾಲ್ಕು ಗೋವುಗಳಿರುವುವು. ಅಂಗಳದಲ್ಲೊಂದು ಗೆರಸೆ, ಅದರಲ್ಲಿ ಸ್ವಲ್ಪ ಧಾನ್ಯವಿತ್ತು. ಮನೆಗೆ ಪಕ್ಕದಲ್ಲಿ ಚಿಕ್ಕದೊಂದು ತೋಟ, ಅದರಲ್ಲಿ ಕೆಲವು ಫಲವೃಕ್ಷಗಳಿದ್ದುವು. ಸರಳೆಯು ಕೆಲವು ಹೂವಿನ ಗಿಡಗಳನ್ನು ಹಾಕಿದ್ದಳು. ಕುಟೀರವು ಸಾಮಾನ್ಯವಾದುದಾಗಿದ್ದರೂ ಹೊರಗಿನಿಂದ ಬಂದು ನೋಡುವವರಿಗೆ ಕುಟೀರವಾಸಿಗಳು ಕೇವಲ ಸಾಮಾನ್ಯರೆಂದು ಬೋಧೆಯಾಗುತ್ತಿರಲಿಲ್ಲ ; ಮನೆಯಲ್ಲಿ ಎಲ್ಲವೂ ಪರಿಷ್ಕಾರವಾಗಿದ್ದುವು. ಬಟ್ಟೆಗಳು ಸಾಮಾನ್ಯವಾದುವಾಗಿದ್ದರೂ ಶುಭ್ರವಾಗಿ ಶುಚಿಯಾಗಿದ್ದುವು. ಮನೆಯೂ ಶುಚಿಯಾಗಿದ್ದಿತು. ಅಂಗಳದಲ್ಲೊಂದು ಹುಲ್ಲುಕಡ್ಡಿಯೂ ಇರದು. ಕುಟೀರವಾಸಿಗಳಾಗಿದ್ದಾ ಕಾಯಸ್ಥಜಾತಿಯ ಹೆಂಗಸರ ಆಚಾರವ್ಯವಹಾರಗಳನ್ನು ನೋಡಿ ಗ್ರಾಮವಾಸಿಗಳು ಮೊದಲು ಮೊದಲು ಅವರ ವಿಚಾರದಲ್ಲಿ ಏನೇನೋ ತಿಳಿದುಕೊಂಡಿದ್ದರು. ಬಳಿಕ ಆರೇಳು ವರ್ಷಗಳ ಕಾಲ ಅವರು ಅದೇ ಗ್ರಾಮದಲ್ಲಿರುತಿದ್ದುದನ್ನು ಕಂಡು ಬೇರೇ ವಿಧವಾದ ಅಭಿಪ್ರಾಯವುಳ್ಳವರಾದರು. ಮಹಾಶ್ವೇತೆಯು, ಗತಿಸಿಹೋದೊಬ್ಬ ಜಮೀನುದಾರನ ಹೆಂಡತಿಯಾಗಿರಬಹುದೆಂದೂ, ಆಸ್ತಿಯೆಲ್ಲಾ ಹೋಗಿ ಸ್ವಂತ ಅರಮನೆಯನ್ನು ಬಿಟ್ಟು ಮಗಳನ್ನು ಕರೆದುಕೊಂಡು ಬಂದು ಆ ಗ್ರಾಮದಲ್ಲಿ ವಾಸವಾಗಿದ್ದಳೆಂದೂ ತಿಳಿದುಕೊಂಡರು.

ಇತ್ತಲಾಗಿ ಮಹಾಶ್ವೇತೆಯು ಶಿಖಂಡಿವಾಹನ ಬ್ರಹ್ಮಚಾರಿಯನ್ನು ನೋಡಿ ಬಹಳ ಸಮ್ಮಾನದಿಂದ ಅವನಿಗೆ ಭೋಜನವನ್ನು ಮಾಡಿಸಿ ಬಳಿಕ ತಾನೂ ಸ್ವಲ್ಪ ಫಲಾಹಾರವನ್ನು ಮಾಡಿದಳು. ತರುವಾಯ ಬ್ರಹ್ಮಚಾರಿಗೆ ಮಣೆಯನ್ನು ಕೊಟ್ಟು ಕುಳ್ಳಿರಿಸಿ ತಾನು ನೆಲದಮೇಲೆ ಕುಳಿತು ಅವನೊಡನೆ ಮಾತನಾಡುತಿದ್ದಳು. ಅವರಿಬ್ಬರೂ ರಾತ್ರಿಯೆಲ್ಲಾ ಮಾತನಾಡಿದರು. ಅವರು ಮಾತನಾಡಿದುದರಲ್ಲಿ ಕೆಲವು ಸಂಗತಿಗಳನ್ನು ಮಾತ್ರ ಪಾಠಕಮಹಾಶಯರಿಗೆ ತಿಳಿಸುವೆವು.

ಶಿಖಂಡಿವಾಹನ—ತಂಗಿ! ನಾನೀಗ ತಂದೆ ಚಂದ್ರಶೇಖರನ ಬಳಿಯಿಂದ ಬಂದೆನು. ಅವನು ತೀರ್ಥಯಾತ್ರೆಯೆಲ್ಲಾ ಮಾಡಿಕೊಂಡು ಹಿಂದಿರುಗಿ ಬಂದಿದ್ದಾನೆ. ತಂದೆಯು ತೀರ್ಥಯಾತ್ರೆಗೆ ಹೋಗಿ ಏಳು ವರ್ಷಗಳಾದುವು. ಆ ಏಳು ವರ್ಷಗಳ ಕಾಲದಲ್ಲಿ ತಂದೆಯು ಹಿಮಾಲಯದಿಂದ ಕಾವೇರಿಯ ಪರ್ಯಂತ ಇರುವ ಎಲ್ಲಾ ತೀರ್ಥಗಳಿಗೂ ಹೋಗಿ ಯಾತ್ರೆಮಾಡಿಕೊಂಡು ಬಂದಿದ್ದಾನೆ.

ಮಹಾಶ್ವೇತೆ—ತಂದೆಯ ಜೀವನವು ಸಾರ್ಥಕ.

ಶಿಖಂಡಿ—ಕಡೆಗೆ ವಂಗದೇಶಕ್ಕೆ ಬಂದು, ಪಠಾಣರ ರಾಜ್ಯವು ವಿಲುಪ್ತವಾಗಿಹೋಯಿತೆಂದೂ ಡಿಲ್ಲೀಶ್ವರನ ಹಿಂದೂ ಸೇನಾಪತಿ ಟೋಡರಮಲ್ಲನು ಈ ದೇಶವನ್ನು ಜಯಿಸಿದನೆಂದೂ ಸುದ್ದಿಯನ್ನು ಕೇಳಿದನಲ್ಲದೆ, ಈ ದೇಶದ ಜಮೀನುದಾರರಿಗೆ ಕುಲತಿಲಕನಾಗಿದ್ದ ಸಮರಸಿಂಹನು ಕಾಲವಾದ ಸಮಾಚಾರ

ವನ್ನೂ ಕೇಳಿದನು. ಬಳಿಕ ನನ್ನಿಂದ ನೀನು ಅವಲಂಬಿಸಿರುವ ವ್ರತದ ಸಂಗತಿ ಯನ್ನು ಕೇಳಿ ಆಶ್ಚರ್ಯಪಟ್ಟನು. ನಿನ್ನ ವ್ರತದ ವಿಚಾರವನ್ನು ಕೇಳಿ ಅವನಾವ ಅಭಿಪ್ರಾಯವನ್ನೂ ಹೊರಪಡಿಸಿ ಹೇಳಲಿಲ್ಲ. ಆದರೆ ನನಗೊಂದು ಭಯವೇ ನೆಂದರೆ, ಈ ವ್ರತದಿಂದಾವದಾದರೂ ಒಂದು ಅನಿಷ್ಟವುಂಟಾಗುವುದೆಂದು ತೋರು ತ್ತದೆ. ತಂಗಿ! ನೀನಾ ವ್ರತವನ್ನು ಇಲ್ಲಿಗೆ ನಿಲ್ಲಿಸಿಬಿಡು. ಮುಂದೆ ಮಾಡಬೇಡ.

ಮಹಾಶ್ವೇತೆ—ಅಣ್ಣಾ! ಕ್ಷಮಿಸು. ನೀನಾ ಮಾತೆತ್ತಬೇಡ. ಆ ವ್ರತವು ನನ್ನ ಜೀವನಕ್ಕೆ ಬಂದುದು. ಅದರಿಂದೆನ್ನ ಜೀವನವಾಗಿದೆ. ಇಷ್ಟು ವ್ಯಸನ ವನ್ನೂ, ಇಷ್ಟು ಮನಸ್ಸಿನ ಕ್ಷೋಭೆಯನ್ನೂ ಸಹಿಸಿಕೊಂಡು ಭಯಂಕರವಾದೆನ್ನ ಅವಸ್ಥೆಯಲ್ಲಿ ನಾನು ಪ್ರಾಣದಿಂದಿರುವುದು ಆ ವ್ರತದ ಬಲದಿಂದಲ್ಲವೆ? ಆ ವ್ರತ ವನ್ನು ಕೈಬಿಟ್ಟ ದಿನವೇ ನಾನು ಪ್ರಾಣವನ್ನು ಬಿಡಬೇಕಾಗುವುದು

ಮಹಾಶ್ವೇತೆಯ ಪ್ರತ್ಯುತ್ತರವನ್ನು ಕೇಳಿ ಶಿಖಂಡಿವಾಹನನು ವ್ರತದ ಮಾತೆತ್ತದೆ ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ, "ವೈರ ನಿರ್ಯಾತನಕ್ಕೆ ಸಲ ವಾಗಿ ಒಂದಾವದಾದರೂ ವಿಶೇಷ ಉಪಾಯವನ್ನು ಅವಲಂಬಿಸಿರುವಿಯಾ?" ಎಂದು ವಿಚಾರ ಮಾಡಿದನು.

ಮಹಾಶ್ವೇತೆ—ನಾನೊಬ್ಬ ಸಿದ್ಧಪುರುಷನಲ್ಲೊಂದು ಭೀಷಣ ಮಂತ್ರೋಪ ದೇಶವನ್ನು ತೆಗೆದುಕೊಂಡಿದ್ದೇನೆ. ಆ ಮಂತ್ರಸಾಧನೆಗೆ ಸಲವಾಗಿ ಮಾಡ ಬೇಕಾದ ಅನುಷ್ಠಾನವೂ ಭೀಷಣವಾದುದು. ಆ ಅನುಷ್ಠಾನದಲ್ಲಿ ಸ್ಥಿರಪ್ರತಿಜ್ಞೆ ಯುಳ್ಳವಳಾಗಿದ್ದೇನೆ. ಪ್ರತ್ಯಹವೂ ಸಂಧ್ಯಾಕಾಲದಲ್ಲಿ ಸ್ನಾನಮಾಡಿ ರಾತ್ರಿ ಎರಡು ಪ್ರಹರದವರೆಗೂ ದೇವದೇವ ಮಹಾದೇವನನ್ನು ಆ ಮಂತ್ರಪುನಶ್ಚರಣೆ ಯಿಂದ ಆರಾಧನೆ ಮಾಡುವೆನು. ಮಹಾದೇವನು ಶತ್ರುನಿಪಾತವಂ ಮಾಡುವ ವರೆಗೂ ಮಗಳು ಅವಿವಾಹಿತೆಯಾಗಿರುವಳು. ಏಳು ವರ್ಷಗಳೊಳಗೆ ಶತ್ರು ನಿಪಾತವಾಗದಿದ್ದರೆ ಕುಮಾರಿಯಾಗಿರುವ ಕನ್ಯೆಯನ್ನು ಮಹಾದೇವನಿಗೆ ಬಲಿ ದಾನಮಾಡಿ ನಾನು ಚಿತಾರೋಹಣೆಯಂ ಮಾಡುವೆನು.

ಬಹಳ ಹೊತ್ತು ಇಬ್ಬರೂ ಮೌನವಾಗಿದ್ದರು. ಬಳಿಕ ಬ್ರಹ್ಮಚಾರಿಯು, "ನಿನ್ನ ವ್ರತದ ವಿಚಾರವನ್ನೆಲ್ಲಾ ನಾನು ಬಲ್ಲೆನು. 'ವೈರ ನಿರ್ಯಾತನೆಗೆ ಸಲ ವಾಗಿ ಆ ವ್ರತಧಾರಣೆಯಲ್ಲದೆ ಮತ್ತಾವುದಾದರೂ ಬೇರೆ ಉಪಾಯವನ್ನು ನೋಡಿಕೊಂಡಿರುವಿಯಾ?' ಎಂದು ವಿಚಾರ ಮಾಡಿದೆನು" ಎಂದು ಹೇಳಿದನು.

ಮಹಾಶ್ವೇತೆ—(ಗಂಭೀರ ಭಾವವನ್ನು ತಾಳಿ) ಈ ವಿಪುಲ ಸಂಸಾರವನ್ನು ಹುಟ್ಟಿಸಿರುವ ಸರ್ವಶಕ್ತನ ಸಹಾಯವು ಹೊರತು ಹೆಂಗಸರು ಮತ್ತಾವ ಉಪಾಯವನ್ನವಲಂಬಿಸಬಲ್ಲರು?

ಸರಳಸ್ವಭಾವವುಳ್ಳ ಬ್ರಹ್ಮಚಾರಿಯು, ವ್ರತದಿಂದ ಅವಳ ಮನಸ್ಸನ್ನು ತಿರುಗಿಸುವ ಪ್ರಯತ್ನವನ್ನು ಮಾಡಿದನು. ಮಹಾಶ್ವೇತೆಯು ಅದನ್ನು ತಿಳಿದವ

ಳಾಗಿ "ನೀನು ಹಿಂದಿನ ವೃತ್ತಾಂತವನ್ನೆಲ್ಲಾ ಅರಿತಿದ್ದರೆ ಹೀಗೆ ಹೇಳುತಿರಲಿಲ್ಲ. ಎಲ್ಲವನ್ನೂ ಹೇಳುವೆನು ಕೇಳು. ಮಹಾತ್ಮನಾದ ನಮ್ಮ ಚಂದ್ರಶೇಖರನಿಗೂ ತಿಳಿಯಹೇಳು" ಎಂದಳು.

ಪೂರ್ವ ವೃತ್ತಾಂತವು ನೆನಪಿಗೆ ಬಂದಹಾಗೆಲ್ಲಾ ಮಹಾಶ್ವೇತೆಯ ಮೈಯೆಲ್ಲಾ ನಡುಗುವುದಕ್ಕಾರಂಭಿಸಿ, ಮುಖಮಂಡಲವು ವಿಕೃತಭಾವವನ್ನು ತಾಳಿ, ಉಜ್ವಲವಾದವಳ ಕಣ್ಣುಗಳು ದಗದಗ ಉರಿಯುವುದಕ್ಕೆ ಪ್ರಾರಂಭಿಸಿದುವು. ಪ್ರದೀಪವು ಮಸುಕು ಮಸುಕಾಗಿ ಮಿನುಗುತಿದ್ದಿತು. ನಾಲ್ಕೂ ಕಡೆಗಳಲ್ಲಿ ನಿಬಿಡವಾದ ಅಂಧಕಾರದಲ್ಲಿ ಗಾಳಿಯು ಪ್ರಬಲವೇಗವಾಗಿ ಬೀಸುತ್ತ ಮಹಾಶ್ವೇತೆಯ ಕುಟೀರವನ್ನು ವೇಗವಾಗಿ ಹೊಡಿಯುತಿತ್ತು. ಪೂರ್ವ ವೃತ್ತಾಂತದ ಸ್ಮರಣೆಯಿಂದ ಹುಟ್ಟಿದ ಚಿಂತಾವಾಯುವಾದರೋ, ಅದಕ್ಕಿಂತ ನೂರುಪಾಲು ಹೆಚ್ಚಿನ ವೇಗದಿಂದ ಮಹಾಶ್ವೇತೆಯ ಹೃದಯ ಕಂದರವನ್ನು ಹೊಡಿಯುತಿತ್ತು. ಅವಳು ಬಹಳಹೊತ್ತು ಸುಮ್ಮನಿದ್ದು, ಬಳಿಕ, "ನಾನು ಪಾಪಿಯಸಿಯೇ ಅಹುದು. ಪರರಿಗೆ ಅಮಂಗಳವಾಗಲೆಂದು ಏಳು ವರ್ಷಗಳ ಕಾಲ ವ್ರತಧಾರಣೆಯಂ ಮಾಡುವವಳು ಪಾಪಿಯಾಗದಿರುವಳೆ? ಆದರೆ ಸಾಧಾರಣ ಅತ್ಯಾಚಾರವಾಗಿದ್ದರೆ ನಾನು ಅಂತಹ ಕಠೋರವಾದ ಪಾಪವ್ರತವನ್ನು ಅವಲಂಬಿಸುತ್ತಿರಲಿಲ್ಲ. ಮನವಿಟ್ಟು ಕೇಳು ಹೇಳುವೆನು" ಎಂದು ಹೇಳಿದಳು. ಸರಳಾಂತಃಕರಣವುಳ್ಳ ಶಿಖಂಡಿವಾಹನನು ಕೇಳುವುದಕ್ಕೆ ಅನುವಾಗಿ ಕುಳಿತುಕೊಂಡನು.

---

## ಮೂರನೆಯ ಪರಿಚ್ಛೇದ

But o'er her warrior's bloody bier  
The lady dropped nor flower nor tear.  
Vengeance deep brooding on the slain  
Had locked the source of softer woe,  
And burning pride and high disdain,  
Forbade the rising tear to flow. *Scott*

ಮಹಾಶ್ವೇತೆಯು ಹೇಳತೊಡಗಿದಳು :—

ನನ್ನ ಸ್ವಾಮಿಯಾದ ಸಮರಸಿಂಹನು ಕಾಯಸ್ಥಕುಲಕ್ಕೆ ಅಲಂಕಾರಸ್ವರೂಪನಾಗಿಯೂ, ಕಾಯಸ್ಥ ಜಮೀನುದಾರರಿಗೆ ಶಿರೋರತ್ನಸ್ವರೂಪನಾಗಿಯೂ ಇದ್ದನು. ಪಠಾಣಾಧಿಪನಾದ ದಾಯೂದಖಾನನಿಗೂ ಮೊಗಲರಿಗೂ ಯುದ್ಧಕ್ಕೆ ಪ್ರಾರಂಭವಾಗಿ ಸಮ್ರಾಜ ಅಕಬರನು ಸ್ವಂತವಾಗಿ ಬಂದು ಪಾಟ್ನಾ ನಗರಕ್ಕೆ ಮುತ್ತಿಗೆ ಹಾಕಿ ಗಂಗಾನದಿಗೆ ಅತ್ತಕಡೆಯ ತೀರದಲ್ಲಿದ್ದ ಹಾಜೀಪುರ ನಗರವನ್ನು ವಶಮಾಡಿಕೊಳ್ಳಬೇಕೆಂದು ಆಲಂಖಾನನನ್ನು ಅಲ್ಲಿಗೆ ಕಳುಹಿದಾಗ ನನ್ನ

ಸ್ವಾಮಿಯು ಒಂದು ಸಾವಿರ ಕುದುರೆ ಬಲವನ್ನು ತೆಗೆದುಕೊಂಡು ಹೋಗಿ ಮಹಾ ಶೌರ್ಯವನ್ನು ತೋರಿ ಆ ನಗರವನ್ನು ಕೈವಶಮಾಡಿಕೊಳ್ಳುವುದಕ್ಕೆ ಮುಖ್ಯ ಕಾರಣನಾದನು. ಆತನ ಪರಾಕ್ರಮವನ್ನು ಕೇಳಿ ದಿಲ್ಲೀಶ್ವರನು ಅತ್ಯಂತ ಸಂತುಷ್ಟನಾಗಿ ಸ್ವಲ್ಪಕಾಲದಲ್ಲೇ ಪಾಟ್ನಾ ನಗರವು ಕೈವಶವಾದ ಬಳಿಕ ಅಲ್ಲಿ ನಡೆದ ದರಬಾರಿನಲ್ಲಿ ಸಮಸ್ತ ಹಿಂದೂ ಜಮೀನುದಾರರಲ್ಲಿ ನನ್ನ ಸ್ವಾಮಿಗೆ ಪ್ರಥಮಸ್ಥಾನವನ್ನು ಕೊಟ್ಟು ಹಲವು ವಿಧವಾಗಿ ಹೊಗಳಿದನು. ಆ ತರುವಾಯ ಸ್ವಲ್ಪಕಾಲದಲ್ಲೇ ಮೊಗಲರ ಸೈನ್ಯವು ವಂಗದೇಶಕ್ಕೆ ಸಾಗರದ ತರಂಗಗಳಂತೆ ಹೊರಳಿ ಹೊರಳಿ ಬಂತು. ಮಹಾಯೋದ್ಧನಾದ ಟೋಡರಮಲ್ಲನು ಸೈನ್ಯದಿಂದೊಡಗೂಡಿ, ಓಡಿಹೋಗುತಿದ್ದ ದಾಯೂದಖಾನನ ಬೆನ್ನಟ್ಟಿಹೋದನು. ರಾಜಾ ಸಮರಸಿಂಹನು ಆನಂದದಿಂದ ಟೋಡರಮಲ್ಲನ ಸಂಗಡ ಶತ್ರುಪರಿಪೂರ್ಣವಾಗಿದ್ದ ವಂಗದೇಶದಲ್ಲಿ ಯುದ್ಧವಂ ಮಾಡಲು ಹೊರಟನು. ತಾಂಡಾ ನಗರದಿಂದ ವೀರಭೂಮಿಗೂ, ವೀರಭೂಮಿಯಿಂದ ಮೇದಿನೀಪುರಕ್ಕೂ, ಮೇದಿನೀಪುರದಿಂದ ಕಟಕಿಗೂ, ಟೋಡರಮಲ್ಲನು ಎಲ್ಲೆಲ್ಲಿದ್ದನೋ ಅಲ್ಲಲ್ಲೆಲ್ಲಾ ನನ್ನ ಸ್ವಾಮಿಯು ಬಲದ ರಟ್ಟೆಯಾಗಿ ಅವನ ಜತೆಯಲ್ಲಿರುತಿದ್ದನು. ಟೋಡರಮಲ್ಲನು ಜಯವನ್ನು ಹೊಂದಿದ ಸ್ಥಳಗಳಲ್ಲೆಲ್ಲಾ ರಾಜಾ ಸಮರಸಿಂಹನು ಅವನಿಗೆ ಸ್ವಭಾವಸಿದ್ಧವಾದ ಶೌರ್ಯವನ್ನೂ ಸಾಹಸವನ್ನೂ ತೋರಿರುವನು. ಆ ಶೌರ್ಯಕ್ಕೂ ಆ ಸಾಹಸಕ್ಕೂ ಪುರಸ್ಕಾರವು ಇದಲ್ಲವೆ?

ಕಟಕದ ಸಮೀಪ ನಡೆದ ಮಹಾ ಯುದ್ಧದಲ್ಲಿ ಮೊಗಲರ ಸೇನಾಪತಿಯಾದ ಮೆನಾಯಿಮಖಾನನು ಸ್ವಂತವಾಗಿ ಬಂದಿದ್ದನು. ಮೊಗಲರು ಸೋತುಹೋಗುವುದರಲ್ಲಿದ್ದರು. ಮೆನಾಯಿಮಖಾನನು ಯುದ್ಧರಂಗದಿಂದ ಓಡಿಹೋದನು. ಆಲಮಖಾನನು ಹತನಾಗಿ ಹೋದನು. ರಾಜಾ ಟೋಡರಮಲ್ಲನಾಗಲೀ ರಾಜಾ ಸಮರಸಿಂಹನಾಗಲೀ ಭಯವೆಂಬ ಪದಾರ್ಥವನ್ನು ಅರಿತಿರಲಿಲ್ಲ. ರಾಜಾ ಟೋಡರಮಲ್ಲನು, "ಆಲಮಖಾನನು ಸತ್ತುಹೋದ ಮಾತ್ರಕ್ಕೆ ನಷ್ಟವಾದುದೇನು? ಮೆನಾಯಿಮಖಾನನು ಓಡಿಹೋದುದರಿಂದ ಬಂದ ಭಯವೇನು? ಸಾಮ್ರಾಜ್ಯವು ಈಗೆಮ್ಮ ಕೈಯಲ್ಲಿರುವುದು. ಮುಂದೂ ನಮ್ಮ ಕೈಯಲ್ಲಿರುವುದು" ಎಂದು ಹೇಳಿದ ಕೂಡಲೇ ನನ್ನ ಸ್ವಾಮಿಯು ಸಿಂಹದಂತೆ ಎದ್ದು ಹಾರಿಹೋಗಿ ಶತ್ರುವ್ಯೂಹದೊಳಗೆ ಪ್ರವೇಶಿಸಿದನು. ಮೊಗಲರ ಸೈನ್ಯವು ವಂಗದೇಶದ ಜಮೀನುದಾರನ ಸಾಹಸವನ್ನು ನೋಡಿ ಪುನಃ ಯುದ್ಧಾರಂಭಮಾಡಿದುದರ ಮೇಲೆ ದಾಯೂದಖಾನನು ಪರಾಸ್ತನಾದನು. ಅದಾದ ಬಳಿಕ ಪಠಾನರು ವಂಗದೇಶವನ್ನು ಬಿಟ್ಟು ಮೊಗಲರ ಸಂಗಡ ಸಂಧಿಯನ್ನು ಮಾಡಿಕೊಂಡರು. ಆ ಸಂಧಿಯನ್ನು ಮಾಡಿಕೊಳ್ಳುವ ಸಮಯದಲ್ಲಿ ಮೆನಾಯಿಮಖಾನನು ದಾಯೂದಖಾನನನ್ನು ಕುರಿತು, "ಪಠಾನಾಧಿಪರೆ! ಈಗ ಒಂದು ವರ್ಷದಿಂದ ತಾವು ನಮ್ಮ

ಸಂಗಡ ಯುದ್ಧವನ್ನು ಮಾಡುತ್ತಿರುವಿರಿ. ಆ ಒಂದು ವರ್ಷಕಾಲ ಯುದ್ಧದಲ್ಲಿ ಡಿಲ್ಲೀಶ್ವರನ ಸೇನಾಪತಿಗಳಲ್ಲಾರು ಹೆಚ್ಚು ಸಾಹಸವನ್ನು ತೋರಿರುವರೆಂಬುದನ್ನು ತಾವು ಚೆನ್ನಾಗಿ ಬಲ್ಲವರಾದುದರಿಂದ ಅದನ್ನು ಹೇಳಬೇಕು'' ಎಂದು ಕೇಳಿದನು. ಪರಾನಾಧಿಪನು, ''ಮೊಗಲರ ಸೇನಾಪತಿಗಳಲ್ಲಿ ಹೆಚ್ಚು ಸಾಹಸವುಳ್ಳವರಲ್ಲಿ ಮೊದಲು, ಕ್ಷತ್ರಿಯಚೂಡಾಮಣಿಯಾದ ರಾಜಾ ಟೋಡರಮಲ್ಲನು ; ಆತಗೆ ಎರಡನೆಯವನು, ವಂಗದೇಶದ ಜಮೀನುದಾರ ರಾಜಾ ಸಮರಸಿಂಹನಾಗಿದ್ದಾನೆ'' ಎಂದು ಹೇಳುತ್ತಿದ್ದಹಾಗೆ ದರಬಾರಿನಲ್ಲಿ ಜಯಧ್ವನಿಯೂ ಕೋಲಾಹಲವೂ ಎದ್ದು ಯುದ್ಧದಲ್ಲಿ ನನ್ನ ಸ್ವಾಮಿಗೆ ವಿಪತ್ತೇನಾದರೂ ಉಂಟಾದೀತೆಂಬ ಭಯದಿಂದ ಕಾದು ನೋಡುತ್ತಿದ್ದವಳು ಚತುರ್ವೇಷ್ಟಿತ ಭೀಮಕಾಂತ ದುರ್ಗದೊಳಗೆ ಪ್ರವೇಶಿಸಿ ನೋಡಿದೆನು. ನನ್ನ ಶರೀರವು ಕಂಟಕಿತವಾಯಿತು ! ಈಗ ಕಣ್ಣೆದುರಿಗೆ ನೋಡಿದಂತಿದೆ—ಅಂತಹ ಶೂರನಾದ ಸಮರಸಿಂಹನನ್ನು ರಾಜವಿದ್ರೋಹಿಯೆಂದಂದುಕೊಳ್ಳುತ ಅವನ ಶಿರಚ್ಛೇದನವನ್ನು ಮಾಡಿಬಿಟ್ಟರು ! ದೇವಾದಿದೇವ, ಮಹೇಶ್ವರ ! ಇಹಕಾಲದಲ್ಲಿ ಅದಕ್ಕೆ ಪ್ರತಿಹಿಂಸಾರೂಪವಾದ ಪ್ರತೀಕಾರವಿಲ್ಲವೆ? ಪರಕಾಲದಲ್ಲಿ ವಿಚಾರವಿಲ್ಲವೆ ?

ಇದ್ದಕ್ಕಿದ್ದ ಹಾಗೆ, ತಂತಿಯು ಹರಿದುಹೋದ ವೀಣೆಯಂತೆ ಮಹಾಶ್ವೇತೆಯ ಗಂಭೀರ ಸ್ವರವು ನಿಂತುಹೋಯಿತು. ಶಿಖಂಡಿವಾಹನನು, ''ತಂಗಿ ! ಪೂರ್ವವೃತ್ತಾಂತದ ಸ್ಮರಣೆಯಿಂದ ಅಷ್ಟು ಕಷ್ಟಬೋಧೆಯಾಗುವುದಾದರೆ ಮುಂದೆ ಹೇಳಬೇಕಾದ ಆವಶ್ಯಕವೇನು ? ವಿಶೇಷವಾಗಿ, ರಾಜಾ ಸಮರಸಿಂಹನ ಯಶೋವಾರ್ತೆಯನ್ನು ವಂಗದೇಶದಲ್ಲಿ ತಿಳಿಯದಿರುವವರಾರು ? ಸಮರಸಿಂಹನ ಧರ್ಮಪತ್ನಿಯು ಅದನ್ನೆಲ್ಲಾ ವಿವರಿಸಿ ಹೇಳಿ ವ್ಯಥೆಯನ್ನು ಹೊಂದಲೇಕೆ'' ಎಂದು ಹೇಳಿದನು.

ಮಹಾಶ್ವೇತೆ—ಸಮರಸಿಂಹನ ಪತ್ನಿಯಲ್ಲ. ಒಂದುಕಾಲದಲ್ಲಿ ಸಮರಸಿಂಹನ ರಾಜಮಹಿಷಿಯಾಗಿದ್ದೆನು. ಈಗಲಾದರೋ ನಿರಾಶ್ರಯೆಯಾದ ವಿತಂತುವಾಗಿದ್ದೇನೆ. ನಾನು ಹೇಳಬೇಕಾದುದು ಹೆಚ್ಚು ಉಳಿದಿಲ್ಲ. ಕೇಳು, ಹೇಳಿ ಮುಗಿಸುವೆನು :—

ಪರಾನರ ಪಕ್ಷದಲ್ಲಿ ಸತೀಶಚಂದ್ರನೆಂದೊಬ್ಬ ಕರ್ಮಚಾರಿಯಿದ್ದನು. ಪರಾನರ ಗೌರವವು ಅಸ್ತಪ್ರಾಯವಾಗುತಿದ್ದುದನ್ನು ಕಂಡು ಅವನು ಪರಾನರ ಪಕ್ಷವನ್ನು ಬಿಟ್ಟು ರಾಜಾ ಟೋಡರಮಲ್ಲನಲ್ಲಿ ಆಶ್ರಯವನ್ನು ಹೊಂದಿದನು. ನನ್ನ ಸ್ವಾಮಿಯೂ ವಿನೀತನಾಗಿದ್ದಾ ಬ್ರಾಹ್ಮಣನಿಗೆ ಅಭಯವನ್ನು ಕೊಟ್ಟು ಟೋಡರಮಲ್ಲನಲ್ಲಿ ಹೇಳಿ ಹೆಚ್ಚು ಸಹಾಯವನ್ನು ಮಾಡಿದನು.

ಬ್ರಾಹ್ಮಣನು ಚತುರನಾಗಿಯೂ ಕಾರ್ಯದಲ್ಲಿ ದಕ್ಷನಾಗಿಯೂ ಇದ್ದನು. ಸೈನ್ಯಗಳಿಗೆ ಆಹಾರವನ್ನೊದಗಿಸುವುದರಲ್ಲಿಯೂ ಶತ್ರುಗಳ ಅಭಿಸಂಧಿಗಳ ಸುಳಿ

ವನ್ನು ತಿಳಿದು ಕುಟಿಲವಾದ ಸುಳುಹುಗಳಿಂದ ಅವರಲ್ಲಿ ಸ್ವಯೂಥ ಕಲಹಗಳನ್ನು ಹೆಚ್ಚಿಸಿ ಗೃಹವಿಚ್ಛೇದಮಾಡುವುದರಲ್ಲಿಯೂ ಸಮರ್ಥನಾಗಿದ್ದನು. ರಾಜಾ ಟೋಡರಮಲ್ಲನು ಅವನಲ್ಲಿ ಪ್ರೀತಿಯುಳ್ಳವನಾದನು. ಸತೀಶಚಂದ್ರನು ರಾಜ ಪ್ರಾಸಾದದಲ್ಲಿ ಖ್ಯಾತಿಗೊಂಡು ಕ್ರಮೇಣ ಧನವನ್ನೂ ಸಂಪತ್ತನ್ನೂ ಹೊಂದಿದವ ನಾದನು.

ಉನ್ನತಿಯೊಂದಿಗೆ ಸತೀಶಚಂದ್ರನಿಗೆ ಭಯಂಕರವಾದ ಹೆಚ್ಚಿನ ಆಶೆಯೂ ಉಂಟಾಯಿತು. ವಂಗದೇಶದ ಹಿಂದೂಗಳಲ್ಲಿ ಮುಖ್ಯನಾಗಬೇಕೆಂಬ ಆಶೆಯು ಹುಟ್ಟಿತು. ನನ್ನ ಸ್ವಾಮಿಯ ಮೇಲೆ ವಿಜಾತೀಯವಾದ ವೈರವು ಹುಟ್ಟಿತು. ಜನರಿಗೆ ಉಪಕಾರವಂ ಮಾಡಿದರೆ ಅವರು ಕೃತಜ್ಞರಾಗುವರೆಂದು ನೀವೆಲ್ಲರೂ ಧರ್ಮಗಳನ್ನು ಹೇಳುತ್ತಿರುವಿರಿ. ನನ್ನ ಸ್ವಾಮಿಯು ದರಿದ್ರನಾಗಿದ್ದಾಗ ಸತೀಶ ಚಂದ್ರನಿಗೆ ಉಪಕಾರವನ್ನು ಮಾಡಿ ಮನೆಯಲ್ಲಿ ಕಾಳಸರ್ಪಕ್ಕೆ ಹಾಲನ್ನು ಹೊಯ್ದಂತಾಯಿತು.

ರಾಜಾ ಟೋಡರಮಲ್ಲನು ವಂಗದೇಶದಿಂದ ಹೊರಟುಹೋದುದು ಸತೀಶ ಚಂದ್ರನಿಗೆ ಸಮಯವು ಸಿಕ್ಕಿದಂತಾಯಿತು. ರಾಜಾ ಸಮರಸಿಂಹನು ಪಠಾಣರಿಗೆ ರಾಜನಾದ ದಾಯೂದಖಾನನ ಸಂಗಡ ಗೋಪ್ಯವಾಗಿ ಸಂಧಿಮಾಡಿಕೊಂಡಿದ್ದ ನೆಂದೊಂದು ಸುಳ್ಳು ಪ್ರಮಾಣಪತ್ರಿಕೆಯನ್ನು ಸೃಷ್ಟಿಸಿಮಾಡಿದನು! ವಂಗದೇಶದ ಮುಸಲಮಾನ ಸುಬೇದಾರನು ಅಡುಂಬಿತವಾದಾ ಮಾತನ್ನು ನಂಬಿದನು. ರಾಜಾ ಸಮರಸಿಂಹನು ರಾಜವಿದ್ರೋಹಿಯೆಂದು ಅವನಿಗೆ ಪ್ರಾಣದಂಡನೆಯು ವಿಧಿಸ ಲ್ಪಟ್ಟಿತು. ಪಾಮರನಾದಾ ಸತೀಶಚಂದ್ರನು ನಮ್ಮ ವಿಸ್ತಾರವಾದ ಜಮೀನು ದಾರಿಯನ್ನು ಪುರಸ್ಕಾರವಾಗಿ ಹೊಂದಿ ಈಗ ವಂಗದೇಶಕ್ಕೆ ದಿವಾನನಾಗಿದ್ದಾನೆ!

ಅಣ್ಣಾ! ನಾನು ಹೇಳಬೇಕಾದುದು ಪೂರೈಸಿತು. ಆ ಶೋಕದಿಂದ ನಾನು ಹುಚ್ಚಿಯಾಗಿಹೋಗಿದ್ದೇನೆ. ನರಹತ್ಯೆಗೆ ಪ್ರತಿಹಿಂಸೆಗೆ ಸಲವಾಗಿ ನಾನು ವ್ರತ ವನ್ನು ತಾಳಿದ್ದೇನೆ.

ಇಬ್ಬರೂ ಬಹಳ ಹೊತ್ತು ಸುಮ್ಮನಿದ್ದರು. ಶಿಖಂಡಿವಾಹನನು ಮಹಾ ಶ್ವೇತೆಯು ವ್ರತಭಂಗ ಮಾಡಯತ್ನಿಸುವುದು ವ್ಯರ್ಥವೆಂದು ತಿಳಿದನು. ಅಗ್ನಿರಾಶಿ ಯಲ್ಲೊಂದು ತೊಟಕು ನೀರನ್ನು ತೊಟಕಿಸಿದಂತಾಗುವುದೆಂದು ತಿಳಿದನು ಬಳಿಕ, "ಹಾಗಾದರೆ, ತಂದೆಗೆ ಈ ವೃತ್ತಾಂತವನ್ನೆಲ್ಲಾ ತಿಳಿಸಲೆ?" ಎಂದನು.

ಮಹಾಶ್ವೇತೆ—ಹೇಳು, ಮತ್ತೂ ಪ್ರಾಯಶ್ಚಿತ್ತವು ಸಮಾಪಿಸಿರುವು ದಾಗಿಯೂ ನರಾಘಾತಕನ ದಂಡನೆಯು ಸಮಾಪಿಸಿರುವುದಾಗಿಯೂ ಮೂರ ನೆಯ ತಡವೆ ವಂಗದೇಶಕ್ಕೆ ಬಂದಿರುವ ಟೋಡರಮಲ್ಲನ ಯುದ್ಧಕಾರ್ಯವು ಪೂರೈಸಿದ ಕೂಡಲೇ ಸಮರಸಿಂಹನ ಹೆಂಡತಿಯು ಸಮರಸಿಂಹನ ವಧೆಗೆ ಉಂಟಾದ ಕಾರಣವನ್ನು ಕುರಿತು ವಿಚಾರಿಸಬೇಕೆಂದು ಕೇಳಿಕೊಳ್ಳುವವಳಾಗಿದ್ದಾಳೆಂದೂ

ತಿಳಿಸು. ಹಕ್ಕಿಯ ಮರಿಯು ಬೇಡನಿಂದ ಹತವಾದರೆ ಹಕ್ಕಿಯು ತನ್ನ ಯಾತನೆಯನ್ನು ಸಹಿಸಲಾರದೆ ಅತ್ತು ಪ್ರಾಣವನ್ನು ಬಿಡುವುದೆಂದೂ, ಮಾನಿನಿಯಾದಾ ಫಣಿನಿಯಾದರೋ (ಸರ್ಪವಾದರೋ) ಕಾಲಿನಿಂದ ತುಳಿಯಲ್ಪಟ್ಟರೆ ಆ ಘಾತುಕನನ್ನು ಹಿಂದಿರುಗಿ ಕಚ್ಚಿ ಹರ್ಷದಿಂದ ಕಷ್ಟವಿಲ್ಲದೆ ಪ್ರಾಣವನ್ನು ಬಿಡುವುದೆಂದೂ ಹೇಳು.

ಹೀಗೆಂದು ಹೇಳುತ್ತ ಮಹಾಶ್ವೇತೆಯು ಕುಳಿತಿದ್ದವಳು ಒಮ್ಮಿಂದೊಮ್ಮೆ ಎದ್ದು ನಿಂತಳು. ಅವಳ ಶರೀರವು ತಲೆಯಿಂದ ಕಾಲಿನವರೆಗೂ ನಡುಗಿ ಕಂಟಕಿತವಾಯಿತು! ಹೊರಗೆ ಹೋಗಿ ಮನೆಯ ಬಾಗಿಲನ್ನು ತೆರೆದಳು. ಪ್ರಭಾತದ ಬೆಳಕು ಸುರುಗಿದ್ದ ಅವಳ ಲಲಾಟದಮೇಲೆ ಬಿದ್ದು ಚಮಕಿತೆಯಾದಳು. ಮರಗಳ ಮೇಲುಭಾಗವು ತರುಣ ಅರುಣ ಕಿರಣದಿಂದ ಸುವರ್ಣ ವರ್ಣವನ್ನು ತಾಳಿತ್ತು. ಕೊಂಬೆ ಕೊಂಬೆಯಲ್ಲಿಯೂ ಹಕ್ಕಿಗಳು ಕಾಕಲಿ ಶಬ್ದದಿಂದ ಗಾನಮಾಡುತಿದ್ದುವು.

---

## ನಾಲ್ಕನೆಯ ಪರಿಚ್ಛೇದ

We Hermia, like two artificial gods,
Have with our needles created both one flower,
Both on one sampler, sitting on one cushion,
Both warbling of one song, both in one key,
As if our hands, our sides, voices and minds,
Had been incorporate. So we grew together,
Like to a double cherry seeming parted,
And yet a union in partition,
Two lovely berries moulded on one stem. *Shakespeare.*

ಹಕ್ಕಿಗಳು ಗೂಡುಗಳನ್ನು ಬಿಟ್ಟು ಬಂದು ಮರಗಳ ಕೊಂಬೆಗಳಮೇಲೆ ಕುಳಿತು ಕೂಗುವುದಕ್ಕೆ ಬಹಳ ಹೊತ್ತಿಗೆ ಮೊದಲು ಸರಳೆಯು ಎದ್ದು ಮನೆಯ ಕೆಲಸವನ್ನು ಮಾಡತೊಡಗಿದಳು. ಮನೆಯ ಬಾಗಿಲು, ಅಂಗಳ ಮುಂತಾದುದನ್ನೆಲ್ಲಾ ಗುಡಿಸಿ ಸಾರಿಸಿ ಪರಿಷ್ಕಾರಮಾಡಿ ರಂಗವಲ್ಲಿಯಿಂದಲಂಕರಿಸಿದಳು. ಸರಳೆಯು ರಾಜಕುಮಾರಿಯಾಗಿದ್ದುಕೊಂಡು ಅಂತಹ ಕೆಲಸಗಳನ್ನೆಲ್ಲಾ ಮಾಡಬಲ್ಲಳೆ? ಎಂದು ಪಾಠಕರು ಚರ್ಚೆಮಾಡುವರು. ಸರಳೆಯು ತಾನು ರಾಜಕುಮಾರಿಯೆಂದು ಅರಿಯಳು. ತಂದೆಯು ಕಾಲವಾದಾಗ ಚಿಕ್ಕ ಹುಡುಗಿಯಾಗಿದ್ದುದರಿಂದ ಆಗಿನ ಸಮಾಚಾರವನ್ನೆಲ್ಲಾ ಮರೆತಿದ್ದಳು ಅವಳ ತಾಯಿಯೂ ಆ ಸಮಾಚಾರವನ್ನೆಲ್ಲಾ ಅವಳಿಗಾವಾಗಲೂ ಹೇಳಿರಲಿಲ್ಲ. ಆ ಬಾಲೆಯ ಹೃದಯದಲ್ಲಿ ಅಹಂಕಾರ ಅಥವಾ ಅಭಿಮಾನವೆಂಬುದು ಲೇಶಮಾತ್ರವೂ ಇರಲಿಲ್ಲ. ಚಿರಕಾಲವೂ ಕುಟೀರದಲ್ಲಿ ವಾಸವಾಗಿದ್ದುಕೊಂಡಿದ್ದವಳಾದುದರಿಂದ ತಾಯಿಯನ್ನು ಪ್ರೀತಿಸುತ್ತಿರಬೇಕೆಂದೂ ನೆರೆಯವರಾದ ಕೃಷಿಕ ಪತ್ನಿಯರ ಸಹವಾಸದಲ್ಲಿದ್ದು

ಅವರೊಡನೆ ಸುಖಸಂಭಾಷಣಮಾಡುತ್ತಿರಬೇಕೆಂದೂ ಆಶೆಯುಳ್ಳವಳಾಗಿದ್ದಳು. ಅವಳದಕ್ಕಿಂತ ಹೆಚ್ಚು ಆಶೆಯುಳ್ಳವಳಾಗಿರಲಿಲ್ಲ. ಅವಳ ಅಂತಃಕರಣದಲ್ಲಿ ಅಂತಹ ಆಶೆಯು ಹುಟ್ಟಿರಲಿಲ್ಲ.

ಮನೆಯ ಕೆಲಸವನ್ನು ಮುಗಿಯಿಸಿಕೊಂಡು ಮಣ್ಣಿನ ಕೊಡವನ್ನು ತೆಗೆದುಕೊಂಡು ಸ್ನಾನಕ್ಕೆ ನದಿಗೆ ಹೊರಟಳು. ಪ್ರತಿದಿನವೂ ಸೂರ್ಯೋದಯಕ್ಕೆ ಮೊದಲು ಸ್ನಾನವನ್ನು ಮಾಡುವಳು. ನದಿಗೆ ಹೋಗುತ್ತ ಹಾದಿಯಲ್ಲಿ ಒಂದು ಕುಟೀರದೆದುರಿಗೆ ನಿಂತು, ಮೃದುಸ್ವರದಿಂದ, "ಅಮಲೆ!" ಎಂದು ಕೂಗಿದಳು. ಆರೂ ಪ್ರತ್ಯುತ್ತರವನ್ನು ಕೊಡಲಿಲ್ಲ. ಪುನಃ "ಅಮಲೆ" ಎಂದು ಕೂಗಿದುದಕ್ಕೆ ಒಳಗಿನಿಂದ "ಬಂದೆ" ಎಂದುತ್ತರವು ಹೊರಟು, ಕೂಡಲೇ ಪ್ರಖರವಾದ ನಯನಗಳುಳ್ಳ ಚಂಚಲಹೃದಯೆಯಾದ ಹೆಂಗಸೊಬ್ಬಳು ಹೊರಗೆ ಬಂದಳು. ಅವಳು ಪೇಟಿ ಅಂಚಿನ ಬಣ್ಣದ ಸೀರೆಯನ್ನುಟ್ಟಿದ್ದಳು; ಕೊಂಕುಳಲ್ಲಿ ಕೊಡ, ಕೈಯಲ್ಲಿ ಬಳೆ, ಕಾಲಲ್ಲಿ ಟೊಳ್ಳು ಬಾದಾಮಿ ಗೊಲಸು; ಬಂದವಳು ನಗುತ್ತ ಸರಳೆಯ ಕೂದಲನ್ನು ಹಿಡಿದೆಳೆದು, "ನಿನಗೆ ಬುದ್ಧಿಯಿಲ್ಲ; ನಾನು ಎರಡನೆಯ ಸಂಬಂಧಕ್ಕೆ ಮದುವೆಯಾಗಿದ್ದೇನೆ; ಯಜಮಾನನು ಹುಡುಗನಲ್ಲ, ದೊಡ್ಡವನು, ಇಷ್ಟು ಮುಂಜಾನೆ ಹೊತ್ತಿಗೆ ಏಳುವುದಕ್ಕೆ ಬಿಡುವನೆ? ನಿನಗೇನು, ಹೇಳು. ನೀನದನ್ನೆಲ್ಲಾ ತಿಳಿಯಲಾರೆ, ನಿಮ್ಮ ತಾಯಿಯು ನಿನಗಿನ್ನೂ ಮದುವೆ ಮಾಡಿಲ್ಲ; ನಿನಗೆ ರಾತ್ರಿಯೆಲ್ಲಾ ಯೋಚನೆಯಿಂದ ನಿದ್ದೆಹತ್ತದೆ, ಬೆಳಖರಿಯುವುದೇ ತಡ, ಹೊರಗೆ ಹೊರಟು ಬರುವುದಕ್ಕೆ ಮತ್ತಾವ ಆತಂಕವೂ ಇಲ್ಲ" ಎಂದು ಹೇಳುತ್ತ ನಕ್ಕು ಪುನಃ ಭುಜವನ್ನು ಸ್ವಲ್ಪ ಜಿಗಟಿದಳು.

ಸರಳೆ—ಅಮಲೆ! ನೀನು ಬರಬೇಕೆಂದು ಹೇಳಿದುದರಿಂದ ಬಂದು ಕರೆದೆನು.

ಅಮಲೆ—ನಾನು ಹೇಳದಿದ್ದರೆ ಬರುತ್ತಿರಲಿಲ್ಲವೆ?

ಸರಳೆ—ಬರುತ್ತಿದ್ದೆನು.

ಅಮಲೆ—ಅದೇಕೆ ಬರುತ್ತಿದ್ದೆ?

ಸರಳೆ—ಅದೇಕೋ ನಾನದನ್ನರಿಯೆನು. ಬೆಳಗ್ಗೆ ಎದ್ದಕೂಡಲೇ ನಿನ್ನ ನೆನವು ಬರುತ್ತದೆ. ನಿನ್ನನ್ನು ಒಂದುದಿನ ನೋಡದಿದ್ದರೆ ನನಗೆ ಕೆಲಸಕಾರ್ಯಕ್ಕೆ ಮನಸ್ಸೇ ಹೋಗುವುದಿಲ್ಲ.

ಅಮಲೆಯು ಪ್ರೇಮಪೂರ್ಣವಾದ ಕಣ್ಣುಗಳಿಂದ ಸರಳೆಯ ಮುಖವನ್ನು ನೋಡಿದಳು. ಹುಡುಗಿಯ ಮುಖದಲ್ಲಿಯೂ ಪ್ರೇಮರಸವು ತುಳುಕುತಿದ್ದಿತು. ಸ್ವಲ್ಪ ಹೊತ್ತಾದ ಬಳಿಕ ಅಮಲೆಯು "ಪ್ರಿಯೆ! ಜಮೀನುದಾರರ ಕಚೇರಿಯಲ್ಲೊಂದು ಹೊಸ ಸುದ್ದಿಯಿದ್ದಿದೆ, ಕೇಳಿದಿಯಾ?" ಎಂದಳು.

ಸರಳೆ—ಇಲ್ಲ. ಸಮಾಚಾರವೇನು?

ಅಮಲೆ—ನಮ್ಮ ಜಮೀನುದಾರನು ತನ್ನ ಮಗನಿಗಾರೋ ಒಬ್ಬ ಐಶ್ವರ್ಯ

ವಂತನ ಮಗಳನ್ನು ತಂದು ಮದುವೆಮಾಡಬೇಕೆಂದು ಗೊತ್ತುಮಾಡಿಕೊಂಡಿದ್ದನು. ಹುಡುಗಿಯು ಚಲುವಿಯಾಗಿದ್ದಾಳೆ—ರೂಪವು ಮಿಂಚಿನಹಾಗೆ—ಕಣ್ಣುಗಳು ಎರಡು—ಅದೇನೆನ್ನುತ್ತಾರೆ—ಎರಡು ಕಾಳಕಪ್ಪಾದ ದುಂಬಿಗಳ ಹಾಗೆ. ಅಂಥವಳೆಂದು ಹೇಳಿದರು.

ಸರಳೆ—ಬಳಿಕ ?

ಅಮಲೆ—ಮದುವೆಯು ನಿಶ್ಚಯವಾದ ಬಳಿಕ ಜಮೀನುದಾರನ ಮಗನು ಆ ಹುಡುಗಿಯನ್ನು ಮದುವೆಮಾಡಿಕೊಳ್ಳುವುದಿಲ್ಲವೆಂದು ಹೇಳಿದನಂತೆ.

ಸರಳೆ—ಅದೇಕೆ ?

ಅಮಲೆ—ಅದೇನೋ ನಾನರಿಯೆನು—ಅವರು ಹೇಳಿಕೊಂಡದುದರಲ್ಲಿ ಜಮೀನುದಾರನ ಮಗನೊಂದು ಹಳ್ಳಿಯ ಹುಡುಗಿಯನ್ನು ನೋಡಿ ಮೋಹಗೊಂಡಿದ್ದಾನಂತೆ. ಆ ಹುಡುಗಿಯನ್ನು ಮದುವೆಮಾಡಿಕೊಳ್ಳುವುದಕ್ಕೆ ಸಲವಾಗಿ ತಂದೆಯ ಮನೆಯನ್ನು ಬಿಟ್ಟು ಹೋಗಿದ್ದಾನಂತೆ—ನನ್ನ ಗೆಳತಿಯನ್ನು ನೋಡಿ ಹಾಗಾಗಿರಬಹುದಲ್ಲವೆ ?

ಸರಳೆ—ಹುಡುಗಾಟ ಮಾಡಲೇಕೆ, ಅಮಲೆ ? ತಂದೆಯು ಹೇಳಿದ ಹುಡುಗಿಯನ್ನು ಮದುವೆ ಮಾಡಿಕೊಳ್ಳದೆ ಹೋಗಿ ಮಗನು ಬೇರೆ ಮದುವೆಯನ್ನು ಮಾಡಿಕೊಳ್ಳಲಾಗುವುದೆ? ಮನಸ್ಸು ಬರುವುದೆ?

ಅಮಲೆ—ಇಷ್ಟಬಂದವರನ್ನು ಮದುವೆಮಾಡಿಕೊಳ್ಳುತ್ತಾರೆ. ತಂದೆಯು ಗೊತ್ತುಮಾಡಿದ ಹುಡುಗಿಯು ಮನಸ್ಸಿಗೆ ಸರಿಹೋಗದಿದ್ದರೆ ?

ಸರಳೆ—ಸರಿಹೋಗದಿರುವುದೇಕೆ ?

ಅಮಲೆ—ನೀನು ಮಂಕುಹುಡುಗಿ—ನಿನಗೆ ಎಷ್ಟು ಹೇಳಿದರೂ ಗೊತ್ತಾಗದು. ಮನೆಗೆ ಹೋಗಿ ನಿನಗೆ ಬೇಗ ಮದುವೆಮಾಡೆಂದು ನಿಮ್ಮ ತಾಯಿಗೆ ಹೇಳು. ಬಳಿಕ ಎಲ್ಲಾ ಗೊತ್ತಾಗುವುದು.

ಹೀಗೆಂದು ಹೇಳಿ ನಗುತ್ತ ಪುನಃ ಸರಳೆಯ ಭುಜವನ್ನು ಸ್ವಲ್ಪ ಜಿಗಟಿದ ಹಾಗೆ ಮಾಡಿದಳು.

ಈ ಪ್ರಕಾರ ಮಾತಾಡುತ್ತ ಅವರಿಬ್ಬರೂ ನದಿಯ ಘಾಟಿಯನ್ನು ಮುಟ್ಟಿದರು. ನದಿಗೆ ಹೋಗಿ ಅಲ್ಲೊಂದು ವಿಶೇಷವನ್ನು ನೋಡಿದರು. ಹರಕು ಬಟ್ಟೆಯನ್ನುಟ್ಟು ಕಪ್ಪಾದ ಮೈಯುಳ್ಳ ಎತ್ತರವಾದ ಹೆಂಗಸೊಬ್ಬಳು ನದಿಯ ತೀರದಲ್ಲಿ ನಿಂತಿದ್ದಳು. ಅವಳ ಕುತ್ತಿಗೆಯಲ್ಲಿ ರುದ್ರಾಕ್ಷಿಯ ಸರ, ಕೈಯಲ್ಲಿ ದಂಡ, ಮೈಗೆಲ್ಲಾ ಭಸ್ಮ, ಕಣ್ಣುಗಳು ರಕ್ತವರ್ಣ, ನೋಡಿ ಇಬ್ಬರೂ ಆಶ್ಚರ್ಯಪಟ್ಟರು. ಅಮಲೆಯು, "ನೀನಾರು ?" ಎಂದು ಕೇಳಿದಳು.

ಉತ್ತರ—ನನ್ನ ಹೆಸರು ಹುಚ್ಚಿ ವಿಶ್ವೇಶ್ವರಿ.

ಅಮಲೆ— ಅಹುದು, ಅಹುದು, ಅಹುದು ! ಹುಚ್ಚಿ ವಿಶ್ವೇಶ್ವರಿಯ

ಹೆಸರನ್ನು ಕೇಳಿದ್ದೇನೆ. ನೀನು ಮೊದಲೊತ್ತಡವೆ ಈ ಗ್ರಾಮಕ್ಕೆ ಬಂದಿರ ಲಿಲ್ಲವೆ?

ವಿಶ್ವೇಶ್ವರಿ—ಬಂದಿದ್ದೆನು.

ಅಮಲೆ—ನಿನಗೆ ಕೈಯನ್ನು ನೋಡಿ ಹೇಳುವುದಕ್ಕೆ ಬರುವುದಲ್ಲವೆ?

ವಿಶ್ವೇಶ್ವರಿ—ನೋಡಿ ಹೇಳಬಲ್ಲೆನು.

ಅಮಲೆ—ಒಳ್ಳೆಯದು, ನನ್ನ ಕೈಯನ್ನು ನೋಡಿ ಹೇಳು.

ಹುಚ್ಚಿಯು ಕೈಯನ್ನು ನೋಡಿ ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ, "ನೀನು ದಿವಾನನ ಹೆಂಡತಿಯಾಗುವೆ" ಎಂದಳು.

ಅಮಲೆ—ದೂರಹೋಗು, ಹುಚ್ಚಿನವಳೆ! ನನಗೆ ಗಂಡನಿದ್ದಾನೆ; ದಿವಾನನ ಹೆಂಡತಿಯಾಗುವುದು ಬಹಳ ನಿಜ! ನನಗೆ ದಿವಾನನಿಂದ ಕೆಲಸವಿಲ್ಲ; ನನ್ನ ವೃದ್ಧ ನಾದ ಸ್ವಾಮಿಯು ದೀರ್ಘಜೀವಿಯಾಗಿರಲಿ; ಈಗ ಹೇಳು, ನನ್ನ ಗೆಳತಿಗಾವಾಗ ಮದುವೆಯಾಗುವುದು? ಮದುವೆಯ ಯೋಚನೆಯಿಂದ ಹುಡುಗಿಗೆ ರಾತ್ರಿ ಯೆಲ್ಲಾ ನಿದ್ದೆಯಿಲ್ಲವಾಗಿದೆ.

ಹುಚ್ಚಿಯು ಸರಳೆಯ ಕೈಯನ್ನು ಹಿಡಿದುಕೊಂಡು ಬಹಳ ಹೊತ್ತು ನೋಡಿದಳು. ಮಧ್ಯೆ ಮಧ್ಯೆ ಅವಳ ಮುಖವನ್ನು ನೋಡಿ ಪುನಃ ಕೈಯನ್ನು ನೋಡುವಳು. ಹೀಗೆ ಬಹಳ ಹೊತ್ತು ನೋಡಿದ ಬಳಿಕ, "ನಿನ್ನ ಭವಿಷ್ಯ ದಾಕಾಶದಲ್ಲಿ ಮುಗಿಲು ಮುಸುಕಿ ಬಂದು ಕವಿತುಕೊಂಡಿದೆ; ಕಾರ್ಮುಗಿಲ ರಾಶಿಯೂ ಕಾಳಕತ್ತಲೆಯೂ ಹೊರತು ಮತ್ತಾವುದೂ ಕಾಣುವುದಿಲ್ಲ; ಈಗ ತುಮುಲ ಪ್ರಳಯವು ಉಬ್ಬರಿಸಿಕೊಂಡಿದೆ; ಪ್ರಳಯದಾಚೆ ಇರುವುದು ಕಾಣುವು ದಿಲ್ಲ; ಮೂರು ದಿನಗಳಲ್ಲಿ ತುಫಾನುಂಟಾಗುವುದು: ಆದುಕಾರಣ ಇಂದಿನವೇ ಈ ಗ್ರಾಮದಿಂದ ಓಡಿಹೋಗು, ಓಡಿಹೋಗು, ಇಲ್ಲಿರಬೇಡ!" ಎಂದು ಹೇಳಿದಳು.

ಕೇಳಿ ಸರಳೆಯು ಭೀತಿಗೊಂಡಳು. ಅವಳ ಅವಸ್ಥೆಯನ್ನು ಕಂಡು ಅಮ ಲೆಯು ಹುಚ್ಚಿಯನ್ನುದ್ದೇಶಿಸಿ, "ಅಕ್ಕಿಮಾಡೆಂದರೆ ಶಿವನ ಗೀತಕ್ಕೆ ತೊಡಗಿ ದಳು. ಹುಡುಗಿಗಾವಾಗ ಮದುವೆಯೆಂದು ಕೇಳಿದರೆ, ಮುಗಿಲೆಂತೆ, ಕತ್ತಲೆ ಯೆಂತೆ, ಪ್ರಳಯವೆಂತೆ, ಏನೇನೋ ಹೇಳಿಕೊಂಡು ಕುಳಿತಳು; ನಿಂತಿರುವಹಾಗೆ ನಡುವು ಮುರಿಯಬೇಕೆನ್ನುವಹಾಗಾಗುತ್ತದೆ" ಎಂದಳು.

ಹೀಗೆಂದು ಹೇಳುತ್ತ ಅಮಲೆಯು ಹುಚ್ಚಿಯ ಮೈಮೇಲೆ ನೀರೆರಚು ವುದಕ್ಕೆ ತೊಡಗಿದಳು, ಹುಚ್ಚಿಯು ಎದ್ದು ಮೆಲ್ಲಮೆಲ್ಲನೆ ದೂರ ಹೊರಟು ಹೋದಳು; ದೂರ ಹೋಗಿ ಸರಳೆಯನ್ನು ನೋಡುತ್ತ, "ಓಡಿಹೋಗು, ಓಡಿಹೋಗು" ಎಂದು ಕೂಗಿ ಹೇಳಿದಳು.

ಇತ್ತಲಾಗಿ, ಇತರ ಹೆಂಗಸರು ನದಿಗೆ ಬಂದರು—ರಾಮಿ, ಶ್ಯಾಮಿ, ವಾಮಿ,

ತಿಮ್ಮಕ್ಕನ ಮಗಳು, ರಾಮಕ್ಕನ ಸೊಸೆ, ಹನುಮಕ್ಕನ ನಾದಿನಿ, ಗಿರಿಜೆ, ತುಳಜೆ, ಸರೋಜೆ, ರುಕ್ಮಿಣಿ, ಭಾಮಿನಿ, ನಳಿನಿ, ಕನಕಾಂಗಿ, ಲಲಿತಾಂಗಿ, ತಪ್ಪಂಗಿ ಮುಂತಾದ ಗ್ರಾಮ್ಯ ಸುಂದರಿಯರು ಸೋಪಾನಾವಳಿಯನ್ನು ಬೆಳಗುತ್ತ ನಾನಾ ಪ್ರಕಾರ ಮಾತುಕಥೆಗಳನ್ನು ಹೇಳುತ್ತ ಹಾಸ್ಯಪರಿಹಾಸ್ಯಗಳನ್ನು ಮಾಡುತಿದ್ದರು. ಇಚ್ಛಾಮತಿ ನದಿಯು ಅಪರಿಸೌಂದರ್ಯದ ರಾಶಿಯನ್ನು ನೋಡಿ ಆನಂದದಿಂದುಬ್ಬಿ ಕಲಕಲ ಶಬ್ದಮಾಡುತ್ತ ಹರಿದುಹೋಗುತಿದ್ದಿತು. ಗ್ರಾಮ್ಯ ಸುಂದರಿಯರೂ ಕಲಕಲ ಶಬ್ದದಿಂದ ಎಡೆಬಿಡದೆ ಮಾತಾಡುತಿದ್ದರು. ಮಾತಾಡುವುದರಲ್ಲಿ ಅಲ್ಪವಯಸ್ಕರಾದವರು ತಂತಮ್ಮ ಗಂಡಂದಿರ ಪ್ರಸ್ತಾವವನ್ನೂ ವೃದ್ಧರಾದವರು ಪರರನ್ನು ನಿಂದಿಸುವ ಪ್ರಸ್ತಾವವನ್ನೂ ಹೇಳುವರು.—ಸರಳೆಯೂ ಅಮಲೆಯೂ ಕೊಡಗಳಲ್ಲಿ ನೀರು ತುಂಬಿಕೊಂಡು ಮನೆಯ ಕಡೆಗೆ ಹೊರಟರು.

ನಮ್ಮ ವಾಚಕರು ಅಮಲೆಯ ಗಂಡನನ್ನು ಮೊದಲೇ ಬಲ್ಲವರಾಗಿದ್ದಾರೆ. ನವೀನದಾಸನು ಕೈವರ್ತ ಜಾತಿಯವನು. ಆ ಗ್ರಾಮದಲ್ಲಿ ಲೇವಾದೇವಿಯನ್ನು ಮಾಡತಕ್ಕವನು; ಅದಲ್ಲದೆ ಇತರ ವಿಧವಾಗಿಯೂ ವ್ಯಾಸಂಗವುಳ್ಳವನಾಗಿದ್ದನು, ಅವನ ಸ್ವಭಾವವು ಶಾಂತವಾದುದು—ಸರಳಹೃದಯನಾಗಿದ್ದನು, ಅವನಿಗೆ ಸ್ವಲ್ಪ ಮಟ್ಟಿಗೆ ಆಸ್ತಿಯುಂಟು; ಐವತ್ತು ಎಕರೆ ಭೂಮಿ. ಇಪ್ಪತ್ತು ಮೂವತ್ತು ದನಗಳು, ಎರಡಾರು ಎರುಗಳು; ಮನೆಯಲ್ಲಿ ಎಳಂಟು ಗೆರಸೆ ಧಾನ್ಯ ಮುಂತಾದುವು ಇದ್ದುವು. ಸ್ವಲ್ಪಮಟ್ಟಿಗೆ ನಗದು ಹಣವನ್ನು ಭೂಮಿಯಲ್ಲಿ ಹುಗಿದಿಟ್ಟುಕೊಂಡಿದ್ದನೆಂದೂ ಜನರು ಹೇಳುತಿದ್ದರು. ಅದಲ್ಲದೆ ಹೆಂಡತಿಯ ಮೈಮೇಲೆ ಕೆಲವು ಒಡವೆಗಳಿದ್ದುವು. ಪ್ರಥಮ ಸಂಬಂಧವು ಹೋದಬಳಿಕ ಅವನು ನಾಲ್ವತ್ತೆನೆಯ ವರ್ಷದಲ್ಲಿ ಹನ್ನೆರಡು ವರ್ಷದ ಅಮಲೆಯನ್ನು ಪುನಃ ಮದುವೆಮಾಡಿಕೊಂಡನು. ಅವನಿಗನ್ನೂ ನಡುವಯಸ್ಸು—ಆದರೂ ಅಮಲೆಯು ಗಂಡನನ್ನು "ವೃದ್ಧಸ್ವಾಮಿ" ಅಥವಾ "ಮುದಿಗಂಡ" ಎಂದು ಹೇಳುತ್ತ ಅಪಹಾಸ್ಯ ಮಾಡುವಳು. ಅಮಲೆಯು ಪ್ರೇಮವುಳ್ಳ ಹೆಂಡತಿ. ಆದರೆ ಬಹಳ ರಸಿಕೆಯಾಗಿದ್ದಳು. ಮುದಿಗಂಡನ ಸೇವೆ ಶುಶ್ರೂಷೆಯನ್ನು ಮಾಡುವುದರಲ್ಲಿ ಸ್ವಲ್ಪವೂ ಪಾಲುಮಾರದೆ ಆವಾಗಲೂ ಪತಿಗತಪ್ರಾಣವುಳ್ಳವಳಾಗಿ ಮಹಾಪತಿವ್ರತೆಯೆಂದು ಖ್ಯಾತಿಗೊಂಡಿದ್ದರೂ ಸಮಯವೊದಗಿದಾಗ ಅಪಹಾಸ್ಯವನ್ನೂ ಮಾಡುವಳು. ಅಂತಹ ಹೆಂಡತಿಯನ್ನು ಪಡೆದಿದ್ದುದರಿಂದ ವೃದ್ಧನಾದ ಸ್ವಾಮಿಯ ಪ್ರೀತಿಗೂ ಸುಖಕ್ಕೂ ಪಾರವೇ ಇರಲಿಲ್ಲ.

ಸರಳೆಯು ರುದ್ರಪುರಕ್ಕೆ ಬಂದ ಮೊದಲ್ಗೊಂಡು ಅಮಲೆಯು ಅವಳನ್ನು ತನ್ನ ಸೋದರಿಗಿಂತ ಹೆಚ್ಚಾಗಿ ಪ್ರೀತಿಸುತಿದ್ದಳು—ಅವಳನ್ನು ತನ್ನ ಪ್ರಾಣಸಖಿಯಾಗಿ ನೋಡುವಳು. ದುಃಖದ ಸಮಯದಲ್ಲಿ ಸರಳೆಯು—ನಿರ್ಮಲವಾದಾ ಬಾಲೆಯ—ಮುಖವನ್ನು ನೋಡಿ ದುಃಖವನ್ನು ದೂರಮಾಡಿಕೊಳ್ಳುವಳು;

ಸುಖದ ಸಮಯದಲ್ಲಿ ಸರಳೆಯ ಪ್ರೇಮಪೂರ್ಣವಾದಾ ಕಣ್ಣುಗಳನ್ನು ನೋಡಿದರೆ ಸುಖವು ಇಮ್ಮಡಿಯಾಗಿ ತೋರುವುದು. ಆರು ವರ್ಷಗಳಕಾಲ ಇಬ್ಬರೂ ಒಟ್ಟಿಗೆ ಇದ್ದುಕೊಂಡಿದ್ದು ಅವರವರ ಸ್ನೇಹವು ಹೆಚ್ಚಾಗಿ ಪರಸ್ಪರ ಪ್ರೀತಿಗೆ ಪಾರವೇ ಇರಲಿಲ್ಲ. ಅವಕಾಶವು ಸಿಕ್ಕಿದಾಗ ಸರಳೆಯು ಅಮಲೆಯ ಬಳಿಗೆ ಹೋಗುವಳು. ಅಮಲೆಗೆ ಅವಕಾಶವಾದಾಗ ಸರಳೆಯ ಬಳಿಗೆ ಬರುವಳು. ಅನೇಕ ವೇಳೆಯಲ್ಲಿ ಮಧ್ಯಾಹ್ನದ ಹೊತ್ತು ಇಬ್ಬರೂ ಮರದ ನೆರಳಲ್ಲಿ ಕುಳಿತು ಆವದಾದರೂ ಕೆಲಸ ವನ್ನು ಮಾಡುತ್ತಿರುವರು. ಅನೇಕ ತಡವೆ ಇಬ್ಬರೂ ರಾತ್ರಿ ಎರಡು ತಾಸಿನ ವರೆಗೂ ಒಟ್ಟಿಗೆ ಕುಳಿತು ಮಾತನಾಡುತ್ತಿರುವರು. ಪರಸ್ಪರ ಅಗಲಿರುವುದಕ್ಕೆ ಅವರಿಗಿಷ್ಟವಿಲ್ಲ. ಅವರವರ ಮಾತಿಗೆ ತುದಿಮೊದಲಿಲ್ಲ. ಮುಖ್ಯವಾಗಿ ಅವರ ಶರೀರವು ಭಿನ್ನವಾಗಿದ್ದು ಮನಸ್ಸು ಒಂದಾಗಿದ್ದಿತು. ಒಂದೇ ಪ್ರಾಣ—ಒಂದೇ ಹೃದಯ.

ಸರಳೆಯು ಮನೆಗೆ ಬಂದಳು. ತಾಯಿಯೂ ಬ್ರಹ್ಮಚಾರಿಯೂ ಹೊರಗೆ ಬಂದರು. ಸರಳೆಯು, "ಅಮ್ಮಾ! ರಾತ್ರಿಯೆಲ್ಲಾ ನಿದ್ದೆಹೋಗಲಿಲ್ಲವೆ?" ಎಂದು ಕೇಳಿದಳು.

ಮಹಾಶ್ವೇತೆ—ಇಲ್ಲ. ಮಗು, ಬ್ರಹ್ಮಚಾರಿಯ ಸಂಗಡ ಮಾತನಾಡುತಿದ್ದ ಹಾಗ ಬೆಳಗಾಯಿತು. ನೀನು ನದಿಯಿಂದ ಬರುವುದು ಸಾವಕಾಶವಾಯಿತು. ಆಗಲೇ ಸೂರ್ಯೋದಯವಾಯಿತು.

ಸರಳೆ—ಅಹುದು, ತಾಯಿ! ಇಂದು ಹುಚ್ಚಿ ಏಶ್ವೇಶ್ವರಿಯೆಂಬುವಳು ನದಿಗೆ ಬಂದಿದ್ದಳು.

ಹೀಗೆಂದು ಹೇಳಿ ಹುಚ್ಚಿಯು ಹೇಳಿದ ವೃತ್ತಾಂತವನ್ನೆಲ್ಲಾ ವಿವರವಾಗಿ ಹೇಳಿದಳು. ಕೇಳಿ ತಾಯಿಯು ನಡುಗಿದಳು. ಅವಳು ಹುಚ್ಚಿಗೆ ಸಲುವಾಗಿ ಬಹಳವಾಗಿ ಹುಡುಕಿದಳು; ಹುಚ್ಚಿಯನ್ನು ಕಾಣಲಿಲ್ಲ.

ಸೂರ್ಯಾಸ್ತವಾಯಿತು. ಮಹಾಶ್ವೇತೆಯು ನಿತ್ಯಗಟ್ಟಿಯ ಮೇರೆಗೆ ಸ್ನಾನಕ್ಕೆ ಹೋದಳು. ಕುಟೀರದಲ್ಲಿ ಸರಳೆಯೊಬ್ಬಳೇ ಕೆಲಸವನ್ನು ಮಾಡು ತಿದ್ದಳು. ಹಗಲೆಲ್ಲಾ ಶ್ರಮಪಟ್ಟಿದ್ದ ಆಯಾಸದಿಂದಲೋ ಅಥವಾ ಬಹಳಹೊತ್ತು ಒಬ್ಬೊಂಟಿಗಿತ್ತಿಯಾಗಿದ್ದುದರಿಂದಲೋ ಅವಳ ಮುಖವು ಸ್ವಲ್ಪ ಬಾಡಿದಹಾಗಾ ಯಿತು. ಸಂಜೆಯ ಕತ್ತಲೆಯೊಂದಿಗೆ ಸರಳೆಯ ಹೃದಯದ ಛಾಯೆಯೂ ಘನೀ ಭೂತವಾಗುತ್ತ ಬಂದಿತು. ಅವಳಿಗೆ ಚಿಂತೆಯಾವುದೂ ಇಲ್ಲ; ದುಃಖದ ಲೇಶವೂ ಇಲ್ಲ; ಆದರೂ ಅವಳ ಹೃದಯಾಕಾಶವು ಮೇಘಾವೃತವಾಗುತ ಬಂದಿತು; ಭವಿಷ್ಯದ ಭಯವೇನೂ ಇಲ್ಲ; ಮನದಲ್ಲಿ ಪರಿತಾಪವಾವುದೂ ಇಲ್ಲ; ಆದರೂ ಹೃದಯವು ಭಾರವಾಗುತ ಬಂದಿತು. ಬೀಸುವ ಕಲ್ಲಲ್ಲಿ ಅಕ್ಕಿಯನ್ನೊಡೆಯು ತಿದ್ದಳು; ಮುಖದಲ್ಲಿ ಬೆವರಿನ ಬೊಟ್ಟುಗಳು ಕಾಣುತಿದ್ದುವು. ಒಬ್ಬಳೇ ಬೀಸು

ಮನೆಯಲ್ಲಿರಕೂಡದೇಕೆ? ನಾನು ತಾಯಿಗೆ ಹೇಳಿದರೆ ಅವಳೊಪ್ಪುವಳು. ನಮಗಿರುವ ಸಾಮಾನ್ಯವಾದ ವರಮಾನದಿಂದ ಸಂಸಾರವು ನಡೆಯುವುದು. ನಿನಗಾವ ಕಷ್ಟವೂ ಉಂಟಾಗದು; ಸುಖವಾಗಿರಬಹುದು.

ಇಂದ್ರನಾಥ—ಸರಳೆ! ನೀನು ದಯೆಯೇ ಮೂರ್ತಿಸ್ವರೂಪವಾಗಿ ಹುಟ್ಟಿರುವಂತೆ ತೋರುತ್ತದೆ. ದಯೆಯೇ ನಿನ್ನ ಶರೀರವಾಗಿದೆ. ನಿನ್ನ ಸ್ನೇಹಕ್ಕೆ ಪಾರವಿಲ್ಲ. ನನಗೆ ಊಟಕ್ಕೆ ಕಷ್ಟವಿಲ್ಲ, ನಾನು ನವೀನದಾಸನ ಮನೆಯಲ್ಲಿ ಅತಿಥಿಯಾಗಿದ್ದೇನೆ; ನಿನ್ನ ಗೆಳತಿಯು ನನ್ನನ್ನು ಬಹಳ ಆದರಿಸುತ್ತಿರುವುದನ್ನು ನೀನು ಬಲ್ಲೆ. ಅಲ್ಲಿರುವುದಕ್ಕೆ ಅನುಕೂಲವಾದರೂ ಬೇರೆ ಇರುವುದಕ್ಕೆ ನನಗೆ ಸ್ಥಳವುಂಟು. ನಾನು ಬೇರೆ ಕಾರಣದಿಂದ ಗ್ರಾಮವನ್ನು ಬಿಡಬೇಕಾಗಿದೆ.

ಸರಳೆ—ಶುದ್ಧವಾಗಿ ಗ್ರಾಮವನ್ನು ಬಿಡಬೇಕೆ?

ಇಂದ್ರ—ಸರಳೆ! ನಾನು ಹೊರಟುಹೋದರೆ ನಿನ್ನ ಮನಸ್ಸಿಗೆ ವ್ಯಥೆಯಾಗುವುದೆ?

ಸರಳೆ—ವ್ಯಥೆಯಿಲ್ಲದೆ ಉಂಟೆ? ನೀನು ಹೊರಟುಹೋದರೆ ನಮ್ಮವರಾಗಿರುವವರು ಮತ್ತಾರು?

ಇಂದ್ರ—ಸರಳೆ! ನಿನ್ನ ವ್ಯಥೆಯನ್ನು ನೋಡಿ ನನ್ನ ಹೃದಯವು ವಿದೀರ್ಣವಾಗುತ್ತದೆ. ಆದರೆ ಏನನ್ನು ಮಾಡಿದರೂ ನಾನೀ ಗ್ರಾಮದಲ್ಲಿರಲಾರೆನು. ನನಗೆ ಅಪ್ಪಣೆಯಂ ಕೊಡು. ಕಾರ್ಯಸಿದ್ಧಿಯಾಗಿ ನಾನು ಪ್ರಾಣದಿಂದ ಬದುಕಿದ್ದರೆ ಪುನಃ ಬಂದು ನಿನ್ನನ್ನು ನೋಡುವೆನು. ಇಲ್ಲವಾದರೆ ಇದೇ ಕಡೆಯೆಂದು ತಿಳಿದಿರು.

ಇಂದ್ರನಾಥನ ಬಾಯಿಂದ ಮುಂದೆ ಮಾತು ಹೊರಡಲಿಲ್ಲ. ಸರಳೆಯ ನೀಲೋತ್ಪಲ ಸದೃಶವಾದ ಕಣ್ಣುಗಳಲ್ಲಿ ನೀರು ತುಂಬಿತು. ಸರಳೆಯು ಇಂದ್ರನಾಥನನ್ನು ಸಹೋದರನಂತೆ ಪ್ರೀತಿಸುತಿದ್ದಳು. ಅಂತಹ ಪ್ರೀತಿಯು ಹೊರತು ಮತ್ತಾವ ಭಾವವೂ ಅವಳ ಹೃದಯಕೋರಕದಲ್ಲಿ ಹೊಕ್ಕಿರಲಿಲ್ಲ. ಬೀಳ್ಕೊಡುವುದಕ್ಕೆ ಮನಸ್ಸಿಗೆ ವ್ಯಥೆಯುಂಟಾಗುವುದೆಂದು ಅವಳು ತಿಳಿದಿರಲಿಲ್ಲ.

ಪೂರ್ಣಿಮಾ ರಾತ್ರಿ ನಿಭೃತವಾದಾ ಉದ್ಯಾನದಲ್ಲಿ ಅವರಿಬ್ಬರೂ ಬಹಳ ಹೊತ್ತು ಪರಸ್ಪರ ಕೈಹಿಡಿದುಕೊಂಡು ಪರಸ್ಪರ ಮುಖವನ್ನು ನೋಡುತಿದ್ದರು. ಪರಸ್ಪರ ದರ್ಶನಸುಧೆಯನ್ನು ಸತೃಷ್ಣ ನಯನಗಳಿಂದ ಪಾನಮಾಡುತಿದ್ದರು. ಪರಸ್ಪರ ಮುಖವನ್ನು ನೋಡುತ್ತ ಅವರ ಹೃದಯದ ಯಾತನೆಯು ಸ್ವಲ್ಪಮಟ್ಟಿಗೆ ಕಡಿಮೆಯಾಯಿತು.

ಬಹಳ ಹೊತ್ತಾದ ಬಳಿಕ ಇಂದ್ರನಾಥನು ಸ್ನೇಹಭರಿತನಾಗಿ ಸರಳೆಯ ಕಣ್ಣೀರನ್ನೊರಸಿ ಸಮಾಧಾನಪಡಿಸಿ, "ಸರಳೆ! ನಾನು ಧರ್ಮದ ಗೌರವಕ್ಕೆ ಸಲುವಾಗಿಯೂ ಪಾಪಕ್ಕೆ ಶಿಕ್ಷಿಸುವುದಕ್ಕೆ ಸಲುವಾಗಿಯೂ ಹೋಗುತ್ತೇನೆ.

ಭಗವಂತನು ನನಗೆ ಅವಶ್ಯಕವಾಗಿ ಸಹಾಯವನ್ನು ಮಾಡುವನು. ಅವನ ಸಹಾಯವಿದ್ದರೆ ಮತ್ತಾವ ಭಯವೂ ಇರದು. ಅವಶ್ಯವಾಗಿ ಕೃತಕಾರ್ಯನಾಗಿ ಪುನಃ ನಿನ್ನ ಬಳಿಗೆ ಬರುವೆನು'' ಎಂದನು.

ಸರಳೆಯು ಸ್ವಲ್ಪ ಶಾಂತೆಯಾಗಿ, ''ಹಾಗೆ ಬರುವುದಾದರೆ ನೀನಾವಾಗ ಬರುವೆ?'' ಎಂದಳು.

ಇಂದ್ರನಾಥ—ಆರುತಿಂಗಳೊಳಗೆ ಬರುವೆನು. ಇಂದು ಪೂರ್ಣಿಮಾ. ಇಂದಿನಿಂದ ಏಳನೆಯ ಪೂರ್ಣಿಮಾ ತಿಥಿಗೆ ಸರಿಯಾಗಿ ಬಂದು ನಿನ್ನನ್ನು ನೋಡುವೆನು. ಹಾಗೆ ಬಾರದಿದ್ದರೆ ಇಂದ್ರನಾಥನೀ ಪ್ರಪಂಚದಲ್ಲಿಲ್ಲವೆಂದು ತಿಳಿ.

ಹೀಗೆಂದು ಹೇಳುತ್ತಿರುವ ಹಾಗೆ ಬಾಗಿಲಲ್ಲಿ ಶಬ್ದವಾಯಿತು. ದಾಸಿಯು ಬಂದಳೆಂದು ಸರಳೆಯು ತಿಳಿದು, ಬಾಗಿಲ ತೆರೆಯುವುದಕ್ಕೆ ಹೋದಳು. ಇಂದ್ರನಾಥನು ಅವಳನ್ನು ಎವೆ ಇಕ್ಕದೆ ನೋಡುತ್ತ, ಮನಸ್ಸಿನಲ್ಲಿ ''ದೇವರೆ! ಈ ರಮಣೀರತ್ನವನ್ನು ಹೊಂದಲು ಸಹಾಯವನ್ನು ಮಾಡು. ಅವಳನ್ನು ಹೊಂದಲಾರದವನಾದರೆ ನನ್ನೀ ಹೃದಯವು ಶುಷ್ಕವಾಗಿ ಜೀವನವು ಮರುಭೂಮಿಯಾಗಿ ಹೋಗುವುದು!'' ಎಂದಂದುಕೊಂಡನು.

---

## ಐದನೆಯ ಪರಿಚ್ಛೇದ

And there were sudden partings, such as press
The life from out young hearts, and choking sighs,
That ne'er might be repeated Who could guess,
If e'er again should meet those mutual eyes,
Since upon a night so sweet such awful morn could rise.

*Byron.*

ರಾಜಾ ಸಮರಸಿಂಹರಾಯನು ವಂಗದೇಶದಲ್ಲಿದ್ದ ಹಿಂದೂ ಜಮೀನುದಾರರಿಗೆ ಅವರ ಸಂಪತ್ಕಾಲದಲ್ಲಿ ಪರಮಬಂಧುವಾಗಿಯೂ, ವಿಪತ್ಕಾಲದಲ್ಲಿ ಅವಲಂಬನ ಮತ್ತು ಆಶ್ರಯಸ್ವರೂಪನಾಗಿಯೂ ಇದ್ದನು. ಅವನು ಸ್ವಂತ ಸಾಹಸದಿಂದಲೂ ಬಾಹುಬಲದಿಂದಲೂ ಹೊಂದಿದ್ದ ಖ್ಯಾತಿಯಿಂದ ಸ್ವಧರ್ಮಾವಲಂಬಿಗಳಾಗಿದ್ದ ಜಮೀನುದಾರರ ಗೌರವವನ್ನು ವೃದ್ಧಿಗೊಳಿಸಲು ಪ್ರಯತ್ನಪಡುತಿದ್ದನು. ಫಲತಃ, ವಿಪತ್ಕಾಲದಲ್ಲಿ ಅವನಿಂದ ಉಪಕಾರವನ್ನು ಪಡೆಯದವನಾರೂ ಇರಲಿಲ್ಲ. ಇಚ್ಛಾಪುರದ ಪ್ರಜೆಗಳಿಗೆ ಪ್ರೀತಿಪಾತ್ರನಾದ ಜಮೀನುದಾರ ನಗೇಂದ್ರನಾಥ ಚೌಧುರಿಯು ರಾಜಾ ಸಮರಸಿಂಹನ ವಿಶೇಷ ಪ್ರೀತಿಗೆ ಪಾತ್ರನಾಗಿದ್ದನು. ನಗೇಂದ್ರನಾಥನು ರಾಜಾ ಸಮರಸಿಂಹನನ್ನು ತನ್ನ ಅಣ್ಣನಂತೆ ನೋಡುತಿದ್ದನು. ಅವನ ಅಪ್ಪಣೆಯಿಲ್ಲದೆ ಅವನಾವ ಕೆಲಸವನ್ನೂ ಮಾಡುತ್ತಿರಲಿಲ್ಲ.

ರಾಜಾ ಸಮರಸಿಂಹನು ಕಾಲವಾದ ಬಳಿಕ ನಗೇಂದ್ರನಾಥನು ಅವನ ಹೆಂಡತಿಯನ್ನೂ ರಾಜಕುಮಾರಿಯನ್ನೂ ಬಹಳ ಹುಡುಕಿಸಿ ನೋಡಿದನು. ಅವರಿಬ್ಬರೂ ವೇಷವನ್ನು ಮಾರ್ಪಡಿಸಿಕೊಂಡು ಚತುರ್ವೇಷ್ಟಿತ ದುರ್ಗದಿಂದ ಹೊರಟುಹೋಗಿದ್ದುದರಿಂದ ಅವರಿದ್ದ ಸ್ಥಳವು ಗೊತ್ತಾಗಲಿಲ್ಲ. ಅದಲ್ಲದೆ ಸಮರಸಿಂಹನ ಹೆಂಡತಿಗೆ ಸಲುವಾಗಿಯೂ ಮಗಳಿಗೆ ಸಲುವಾಗಿಯೂ ಹೆಚ್ಚು ವಿಶ್ವಾಸವನ್ನು ತೋರಿದರೆ ಹೊಸದಾಗಿ ದಿವಾನನಾಗಿ ಬಂದಿದ್ದ ಸತೀಶಚಂದ್ರನ ಕೋಪಕ್ಕೆ ಪಾತ್ರನಾಗುವ ಭೀತಿಯಿಂದ ನಗೇಂದ್ರನು ಅವರ ವಿಚಾರದಲ್ಲಿ ತನಗಿದ್ದ ಆಂತರಿಕ ವಿಶ್ವಾಸವನ್ನು ವಿಶೇಷ ಹೊರಪಡಿಸದೆ ಇದ್ದನು. ಮಾನವ ಹೃದಯ ದಲ್ಲಿ ಸ್ನೇಹರಜ್ಜುವೆಂಬುದು ಅತಿ ಸೂಕ್ಷ್ಮವಾದುದು; ಮತ್ತು ಕ್ಷಣಸ್ಥಾಯಿ ಯಾದುದು ; ಸ್ವಾರ್ಥಪರತೆಯು ಅತ್ಯಂತ ಪ್ರಬಲವಾದುದು. ದಿನೇ ದಿನೇ ತಿಂಗಳು ತಿಂಗಳು ನಗೇಂದ್ರನು ಅಭಿವೃದ್ಧಿಯನ್ನು ಹೊಂದುತಿದ್ದನು. ದಿವಾನನ ಪ್ರೀತಿಗೆ ಪಾತ್ರನಾಗಿ ಧನದಲ್ಲಿಯೂ ಮಾನದಲ್ಲಿಯೂ ಅಧಿಕಾರದಲ್ಲಿಯೂ ವೃದ್ಧಿಯನ್ನು ಹೊಂದುವುದಕ್ಕೆ ಬೇಕಾದ ಪ್ರಯತ್ನಗಳನ್ನು ಜರುಗಿಸುತಿದ್ದನು. ದಿನಗಳೂ ತಿಂಗಳುಗಳೂ ಕಳೆದುಹೋದ ಹಾಗೆಲ್ಲಾ ನಿರ್ಭಾಗ್ಯೆಯಾದ ಸಮರಸಿಂಹನ ಹೆಂಡತಿಯನ್ನೂ ಅವಳ ಮಗಳನ್ನೂ ಮರೆಯುತ್ತ ಬಂದನು. ಒಂದು ವರ್ಷ ದೊಳಗೆ ಅವರ ದುಃಖವನ್ನು ಸಂಪೂರ್ಣವಾಗಿ ಮರೆತುಬಿಟ್ಟನು. ಅವರು ಈ ಪ್ರಪಂಚದಲ್ಲಿದ್ದಾರೆಂಬುದೇ ಮರೆತುಹೋಯಿತು.

ಪಾಠಕಮಹಾಶಯರೆ! ನಗೇಂದ್ರನಾಥನನ್ನು ಕೃತಘ್ನನೆಂದು ತಿಳಿಯ ಕೂಡದು. ಈ ಅಖಿಲ ಭೂಮಂಡಲವನ್ನು ನೋಡೋಣಾಗಲಿ. ಅದರೊಳಗೆ ಎಷ್ಟು ಮಂದಿ ಉಪಕೃತರಾದವರು ತಾವು ಹೊಂದಿದ ಉಪಕಾರಕ್ಕೆ ಪ್ರತ್ಯುಪ ಕಾರವನ್ನು ಮಾಡುವುದಕ್ಕೆ ಸಲುವಾಗಿ ತಮ್ಮ ಸ್ವಂತ ಮಾರ್ಗಕ್ಕೆ ಮುಳ್ಳನ್ನು ಹಾಕಿಕೊಳ್ಳುವರು? ಎಷ್ಟು ಮಂದಿ ಪೂರ್ವಕೃತ ಉಪಕಾರವನ್ನು ಸ್ಮರಣೆಯಲ್ಲಿ ಟ್ಟುಕೊಂಡು ತಮ್ಮ ಸ್ವಾರ್ಥಸಾಧನೆಯಿಂದ ವಿರತರಾಗುವರು? ಸ್ನೇಹವೂ ದಯೆಯೂ ಮಮತೆಯೂ ಸ್ವರ್ಗೀಯ ಪದಾರ್ಥಗಳು. ಆ ಪದಾರ್ಥಗಳಿಗೆ ಸ್ವಾರ್ಥಪರತೆಯು ಪ್ರತಿದ್ವಂದಿಯಾದರೆ ಸ್ನೇಹವು ಎಷ್ಟುದಿನ ನಿಂತಿರಲಾಪವು? ವಿಶ್ವಾಸಕ್ಕೆ ಪಾತ್ರವಾದುದು ಕಣ್ಣಿಗೆ ಮರೆಯಾದರೆ ವಿಶ್ವಾಸವು ಎಷ್ಟು ದಿನವಿರ ಲಾಪದು? ನಾವು ನಗೇಂದ್ರನಾಥನಮೇಲೆ ಕೋಪ ಮಾಡುವುದಾದರೆ, ನಾವು ಮೊದಲು, ಅವನು ಮಾಡಿದ ತಪ್ಪನ್ನು ಮಾಡದಿರುವುದಕ್ಕೆ ಪ್ರಯತ್ನಪಡಬೇಕು. ಅನೇಕ ದರಿದ್ರ ಕುಟುಂಬದವರು ಆಶ್ರಯವನ್ನು ಕೊಡಬೇಕೆಂದು ನಮ್ಮ ಬಳಿಗೆ ಬರುತ್ತಾರಲ್ಲವೆ? ಅನೇಕ ಅನಾಥರಾದ ವಿಧವೆಯರು ನಮ್ಮಿಂದ ಸಹಾಯ್ಯ ವಾಗಬಹುದೆಂದು ನಮ್ಮ ಬಳಿಗೆ ಬರುವುದಿಲ್ಲವೆ? ದುಃಖಪೂರ್ಣವಾದೀ ಪ್ರಪಂಚ ದಲ್ಲಿ ಎಲ್ಲೆಲ್ಲಿ ನೋಡಿದರೂ ದುಃಖರಾಶಿಯನ್ನೇ ನೋಡುವೆವು. ಅದನ್ನೆಲ್ಲಾ

ನಿವಾರಣೆಮಾಡುವುದು ಮನುಷ್ಯನಿಗೆ ಅಸಾಧ್ಯ. ಆದರೆ ಕ್ಷುಧಾರ್ತನಾದವನೊಬ್ಬನಿಗಾದರೂ ಅನ್ನವನ್ನು ಕೊಡುವೆವಾದರೆ, ಒಬ್ಬ ಅನಾಥಿನಿಯ ನಯನ ಜಲವನ್ನು ನಿಲ್ಲಿಸುವೆವಾದರೆ, ನಾವೀ ಕಾರ್ಯಕ್ಷೇತ್ರದಲ್ಲಿ ಜನ್ಮವನೆತ್ತಿದುದು ವ್ಯರ್ಥವಾಗದಿರುವುದು.

ನಗೇಂದ್ರನಾಥನ ಮಗನಾದ ಸುರೇಂದ್ರನಾಥನು ಈ ಪ್ರಪಂಚದಲ್ಲಿ ಜನ್ಮವನೆತ್ತಿದುದು ವ್ಯರ್ಥವಲ್ಲ. ಧನವಂತನಾದ ಜಮೀನುದಾರನಿಗೆ ಮಗನಾಗಿದ್ದರೂ ಧನದಲ್ಲಿ ಅವನಿಗೆ ಆದರವಿರಲಿಲ್ಲ. ದೊಡ್ಡ ವಂಶದಲ್ಲಿ ಹುಟ್ಟಿದವನಾಗಿದ್ದರೂ ಒಕ್ಕಲತನವನ್ನು ಮಾಡುವ ಒಕ್ಕಲಿಗನ ಸಂಗಡ ಮಾತನಾಡುವುದಕ್ಕೆ ಆಶೆಯುಳ್ಳವನಾಗಿದ್ದನು; ಒಂದೊಂದು ತಡವೆ ಅವರೊಂದಿಗೆ ವಾಸಮಾಡುವನು. ಸರ್ವದಾ ಒಕ್ಕಲಿಗರಿಗೆ ಪರಮ ಬಂಧುವಾಗಿರುವನು. ಅವನು ಅನೇಕ ತಡವೆ ವೇಷವನ್ನು ಬದಲಾಯಿಸಿಕೊಂಡು ಹೋಗಿ ಕೃಷಿಕರ ಗ್ರಾಮಗಳಲ್ಲಿ ತಿರುಗಾಡಿಕೊಂಡು ಬರುವನು. ಸಾಯಂಕಾಲದಲ್ಲಿ ಒಕ್ಕಲತನದವರ ಮನೆಯಲ್ಲಿ ದನಗಳೆಲ್ಲಾ ಬಂದು ಕೊಟ್ಟಿಗೆಯಲ್ಲಿ ಕಟ್ಟಿದ ಬಳಿಕ ದೀಪವನ್ನುಹಚ್ಚಿದಾಗ ಅವರ ಕುಟೀರಗಳ ಪಾರ್ಶ್ವದಲ್ಲಿ ತಿರುಗಾಡುತ್ತ ಅವರ ದಾರಿದ್ರ್ಯದ ದಶೆಯನ್ನು ಕಂಡು ಮರುಗಿ ಅವರ ಮೌಢ್ಯದಲ್ಲಿ ದೋಷರಾಹಿತ್ಯವನ್ನೂ, ದುಃಖದಲ್ಲಿಯೂ ಕಷ್ಟದಲ್ಲಿಯೂ ತಪಸ್ವಿಗಳಂತೆ ಅವರ ಧೈರ್ಯವನ್ನೂ, ಸಹಿಷ್ಣುತೆಯನ್ನೂ ಆಲೋಚಿಸುತ್ತ ಯುಗ ಯುಗಾಂತರದಿಂದಲೂ ಬದಲಾಯಿಸದೆ ಒಂದೇ ಸ್ಥಿತಿಯಲ್ಲಿರುತಿದ್ದ ಅವರ ಅವಸ್ಥೆಯನ್ನು ಕುರಿತು ಚಿಂತಿಸುತ್ತಿರುವನು; ಅನೇಕ ತಡವೆ ಅವರು ಸಾಮಾನ್ಯ ವಿಷಯಗಳನ್ನು ಕುರಿತು ಹೇಳುವ ಮಾತುಗಳನ್ನು ಕೇಳುವನು—ನೆರೆ ಗ್ರಾಮದಲ್ಲೊಂದು ಕೊಳವನ್ನು ತೋಡುತ್ತಾರಂತೆ, ಮತ್ತೊಂದು ಗ್ರಾಮದಲ್ಲಿ ಒಂದು ಕಾಳು ಜೋಳವೂ ಸಿಗುವುದಿಲ್ಲವಂತೆ, ಈ ಗ್ರಾಮದ ಸಾಹುಕಾರನು ಇದ್ದಮಟ್ಟಿಗೆ ಧರ್ಮದಮೇಲೆ ದೃಷ್ಟಿಯಿಟ್ಟು ನೂರಕ್ಕೆ ಮೂರುವರೇ ರೂಪಾಯಿನಂತೆ ಬಡ್ಡಿಯನ್ನು ತೆಗೆದುಕೊಳ್ಳುತ್ತಾನೆ! ಆ ಗ್ರಾಮದಲ್ಲಿ ಶ್ವಾನುಭೋಗನ ಹಾವಳಿಯನ್ನು ತಡೆಯುವುದು ಕಷ್ಟ, ಎಂಬಿವೇ ಮುಂತಾದ ಗ್ರಾಮ್ಯವಾರ್ತೆಗಳನ್ನೆಲ್ಲಾ ಬೇಸರವಿಲ್ಲದೆ ಕೇಳುವನು. ಆ ಕಾಲದಲ್ಲಿ ತಾನು ಐಶ್ವರ್ಯವಂತನೆಂಬ ಗರ್ವವನ್ನು ಮರೆತಿರುವನಲ್ಲದೆ ತಾನು ದೊಡ್ಡ ಕುಲದಲ್ಲಿ ಹುಟ್ಟಿದವನೆಂದು ತೋರಿಕೊಳ್ಳುತ್ತಿರಲಿಲ್ಲ. ಕುಟೀರವಾಸಿಗಳಾದ ಒಕ್ಕಲುತನದವರೆಲ್ಲಾ ತನಗೆ ಸೋದರರೆಂದು ಭಾವಿಸಿ ಸೋದರನಂತೆ ಅವರಿಗೆ ಸಹಾಯವನ್ನು ಮಾಡುವನು.

ಮಹಾಶ್ವೇತೆಯು ಮಗಳನ್ನು ಕರೆದುಕೊಂಡು ಚತುರ್ವೇಷ್ಟಿತ ದುರ್ಗವನ್ನು ಬಿಟ್ಟು ಓಡಿಹೋದಾಗ ಸುರೇಂದ್ರನಾಥನೂ ತನ್ನ ತಂದೆಯ ಮನೆಯನ್ನು ಬಿಟ್ಟು ಅವರನ್ನು ಹುಡುಕಲು ಹೊರಟನು. ಅನೇಕ ದಿನಗಳು ಹುಡುಕಿ ಅವರಿದ್ದ

ಸ್ಥಳವನ್ನು ಕಂಡುಹಿಡಿದನು. ಅವನು ಅವರನ್ನು ಕಂಡುಹಿಡಿದಾಗ ಮಹಾ ಶ್ವೇತೆಯು, ಇಚ್ಛಾಮತಿ ನದಿಯ ತೀರದಲ್ಲಿದ್ದ ಮಹಂತ ಚಂದ್ರಶೇಖರನೆಂಬುವನ ಬಳಿ ಮಹೇಶ್ವರ ಮಂದಿರದಲ್ಲಿರುತಿದ್ದಳು. ಸುರೇಂದ್ರನಾಥನು ಅಲ್ಲಿಗೆ ಹೋಗಿ ಅವಳನ್ನು ನೋಡಿ ತಾನು ಅವಳಿಗೆ ಆಶ್ರಯವನ್ನು ಕೊಡುವುದಾಗಿ ಹೇಳಿದನು. ಅಭಿಮಾನಿನಿಯಾದ ಮಹಾಶ್ವೇತೆಯು ಆ ದರಿದ್ರಾವಸ್ಥೆಯಲ್ಲಿಯೂ ಗರ್ವಿತೆ ಯಾಗಿದ್ದವಳು ಅವನ ಸಹಾಯವನ್ನು ತೆಗೆದುಕೊಳ್ಳಲು ಸಮ್ಮತಿಸಲಿಲ್ಲ. ಅವನು ಬಹಳವಾಗಿ ಕೇಳಿಕೊಂಡರೂ ಒಪ್ಪದೆ, '' ರಾಜಾ ಸಮರಸಿಂಹನ ವಂಶದವರು ದರಿದ್ರಾವಸ್ಥೆಯಲ್ಲಿಯೂ ಮಾನಿನೀಯರಾಗಿರುವರೇ ಹೊರತು ಪರರ ಸಹಾಯ ವನ್ನು ಹೊಂದಲೊಪ್ಪಲಾರರು '' ಎಂದು ಹೇಳಿದಳು. ಸುರೇಂದ್ರನು ಯತ್ನ ವಿಲ್ಲದೆ ಸುಮ್ಮನಾಗಿ, ಕಡೆಗೆ, '' ತಮ್ಮ ಯಜಮಾನರಿಂದ ನಾವು ಬಹಳವಾಗಿ ಉಪಕೃತರಾಗಿದ್ದೇವೆ; ಅನೇಕ ವಿಷಯಗಳಲ್ಲಿ ಅವರಿಗೆ ಬಾಧ್ಯಪಟ್ಟಿದ್ದೇವೆ. ಇಂತಹ ಕಷ್ಟದಲ್ಲಿ ನಾವೇನೂ ಪ್ರತ್ಯುಪಕಾರವನ್ನು ಮಾಡಲಾರದೆ ಹೋದರೆ ನಮ್ಮ ಜನ್ಮವು ವ್ಯರ್ಥವಾಗುವುದು. ನಮ್ಮ ಮನೆಯಲ್ಲಿ ಬಂದಿರುವುದಕ್ಕೊಪ್ಪದಿದ್ದರೆ ಮತ್ತಾವ ಪ್ರಕಾರ ತಮಗೆ ಸಹಾಯವನ್ನು ಮಾಡಬಲ್ಲೆವು ?'' ಎಂದು ಹೇಳಿದನು.

ಮಹಾಶ್ವೇತೆ—ಹಾಗಾದರೆ ನಿಮ್ಮ ಜಮೀನುದಾರಿಯಲ್ಲಿರುವುದಕ್ಕೆ ನನಗೊಂದು ಸ್ಥಳವನ್ನು ಕೊಡು. ನಾನು ಆ ಭೂಮಿಗೆ ಇತರರಂತೆ ಕಂದಾಯ ವನ್ನು ಕೊಡುವೆನು. ಮತ್ತು ನದಿಯ ತೀರದಲ್ಲೊಂದು ದೇವಮಂದಿರವನ್ನು ಕಟ್ಟಿಸಿಕೊಟ್ಟರೆ ನಾನು ಪ್ರತಿದಿನ ರಾತ್ರಿ ಹೋಗಿ ದೇವರಿಗೆ ಪೂಜೆಯನ್ನು ಮಾಡುತ್ತಿರುವೆನು. ಇಷ್ಟು ಹೊರತು ನನಗೆ ಮತ್ತಾವುದೂ ಬೇಕಾಗಿಲ್ಲ.

ಸುರೇಂದ್ರನಾಥನು ರುದ್ರಪುರವೆಂಬ ಗ್ರಾಮದಲ್ಲೊಂದು ಮಂದಿರವನ್ನು ಕಟ್ಟಿಸಿಕೊಟ್ಟನು. ಅದು ಮೊದಲ್ಗೊಂಡು ಮಹಾಶ್ವೇತೆಯು ಮಗಳೊಂದಿಗೆ ಅಲ್ಲಿ ಇರುತಿದ್ದಳು.

ಸುರೇಂದ್ರನಾಥನು ಚಂದ್ರಶೇಖರನ ಬಳಿಗೆ ಹೋಗಿದ್ದಾಗ ತನ್ನ ಸ್ವಂತ ಹೆಸರನ್ನು ಹೇಳಿಕೊಳ್ಳದೆ ಬೇರೆ ವೇಷವನ್ನು ತಾಳಿ ತನ್ನ ಹೆಸರು ಇಂದ್ರನಾಥ ನೆಂದು ಹೇಳಿಕೊಂಡಿದ್ದನು. ಆ ವೇಷದಲ್ಲಿ ಅವನು ದೇಶದೇಶವನ್ನು ತಿರುಗಿ ಮಹಾಶ್ವೇತೆಯನ್ನು ಕಂಡುಹಿಡಿದನು. ಆ ವೇಷದಲ್ಲಿಯೇ ಅವನು ಸರಳೆಯನ್ನು ಮೊದಲು ನೋಡಿದ್ದನು. ಇಚ್ಛಾಮತಿ ನದಿಯ ತೀರದಲ್ಲಿದ್ದಾಗ ಅವನು ಅನೇಕ ತಡವೆ ಮಗುವಾಗಿದ್ದ ಸರಳೆಯನ್ನು ಆಡಿಸುತ್ತಲೂ ಎತ್ತಿಕೊಂಡು ಮುದ್ದಿಟ್ಟುಕೊಳ್ಳುತ್ತಲೂ ಇದ್ದನಾದ ಕಾರಣ ಆ ಆರುವರ್ಷಗಳ ಪರಿಚಯದಿಂದ ಅವರವರಿಗೆ ಸೋದರ ಸೋದರಿಯ ಭಾವವು ಹುಟ್ಟಿ ಪರಸ್ಪರ ಬಹಳ ಪ್ರೀತಿಸು ತಿದ್ದರು. ಆ ಸೋದರ ಸೋದರಿಯ ಭಾವವು ಹೊರತು ಆ ಪೂರ್ಣಿಮಾ ತಿಥಿಗೆ ಮೊದಲು ಅವರವರಿಗೆ ಮತ್ತಾವ ಭಾವವೂ ಹುಟ್ಟಿರಲಿಲ್ಲ.

ರಾತ್ರಿ ಎರಡನೆಯ ಪ್ರಹರದಲ್ಲಿ ಮಹಾಶ್ವೇತೆಯು ಪೂಜೆಯನ್ನು ಪೂರೈಸಿಕೊಂಡು ಮನೆಗೆ ಬಂದಳು. ಇಂದ್ರನಾಥನು ಅವಳ ಅಪ್ಪಣೆಯನ್ನು ಪಡೆದು ಹೋಗಲು ಕಾದಿದ್ದನು. ಮಹಾಶ್ವೇತೆಯನ್ನು ಕಂಡು, "ತಾವು ಅವಲಂಬಿಸಿರುವ ದೃಢವ್ರತದಿಂದ ಸತೀಶಚಂದ್ರನ ಮರಣವನ್ನುಂಟುಮಾಡಿದ ಹೊರತು ನಾನು ತಮ್ಮ ಮಗಳ ಪಾಣಿಗ್ರಹಣವಂ ಮಾಡಲಾರೆನೆಂದು ತೋರುತ್ತದೆ" ಎಂದನು.

ಮಹಾಶ್ವೇತೆ—ಅಹುದು, ಮಾಡಲಾರೆ.

ಇಂದ್ರನಾಥ—ಆಶೀರ್ವಾದವಂ ಮಾಡೋಣಾಗಲಿ. ನಾನದೇ ಅಭಿಪ್ರಾಯದಿಂದ ಇಂದು ಹೊರಡುವವನಾಗಿದ್ದೇನೆ; ತಮ್ಮ ಆಶೀರ್ವಾದದಿಂದ ತಮ್ಮ ಮನೋರಥವು ಸಿದ್ಧಿಯಾಗುವುದು.

ಮಹಾಶ್ವೇತೆ—ಆಶೀರ್ವಾದವನ್ನು ಮಾಡುತ್ತೇನೆ. ದೇವದೇವ ಮಹಾದೇವನ ಕೃಪೆಯಿಂದ ನಿನ್ನ ಪ್ರಯತ್ನವು ಸಫಲವಾಗಲಿ! ಆದರೆ ನೀನು ಹುಡುಗ. ಬುದ್ಧಿಕುಶಲವುಳ್ಳ ಚತುರನಾದ ದಿವಾನನನ್ನು ಹೇಗೆ ಸೋಲಿಸಬಲ್ಲೆಯೋ ಅದೆನ್ನ ಬುದ್ಧಿಗೆ ಗೋಚರವಾಗುವುದಿಲ್ಲ.

ಇಂದ್ರನಾಥ—ಈಗೆನಗೂ ಅದು ಬುದ್ಧಿಗೆ ಗೋಚರವಾಗುವುದಿಲ್ಲ. ಮುಂದೆ ಹೇಗಾಗುವುದೋ ನೋಡಬೇಕು.

ಮಹಾಶ್ವೇತೆ—ಅವಶ್ಯವಾಗಿ ನೀನು ಜಯವನ್ನು ಹೊಂದುವೆ—ಧರ್ಮಕ್ಕೆ ಜಯವಾಗದಿದ್ದರೆ, ಇಹಸಂಸಾರವೆಲ್ಲಾ ಹಾಳಾಗಿ ಹೋಗುವುದು. ಬಳಿಕ ಭಗವಂತನ ಆರಾಧನೆಯಂ ಮಾಡುವವರಾರು?

ಇಂದ್ರನಾಥ—(ಸ್ವಲ್ಪ ಯೋಚಿಸಿ, ಬಳಿಕ) ಸರ್ವದಾ ಧರ್ಮವೇ ಜಯವನ್ನು ಹೊಂದುವುದಾಗಿದ್ದರೆ ತಮ್ಮ ಸ್ವಾಮಿಯು ಕೊಲ್ಲಲ್ಪಡುತ್ತಿರಲಿಲ್ಲ; ಸತೀಶಚಂದ್ರನು ವಂಗದೇಶಕ್ಕೆ ದಿವಾನನಾಗುತ್ತಿರಲಿಲ್ಲ; ಮಾನವ ಜಾತಿ ಯಾವಾಗಲೂ ಧರ್ಮಮಾರ್ಗವನ್ನು ಬಿಟ್ಟುಹೋಗುತ್ತಿರಲಿಲ್ಲ; ಎಲ್ಲಿ ನೋಡಿದರೂ ಪಾಪಕ್ಕೆ ಗೌರವವು ಹೆಚ್ಚುತ್ತಿದೆ; ಅತ್ಯಾಚಾರಿಗಳೂ ಕಪಟಾಚಾರಿಗಳೂ ಧನ ಮಾನ ಐಶ್ವರ್ಯಗಳನ್ನು ಹೊಂದುತ್ತಿದ್ದಾರೆ; ಪರಮ ಧಾರ್ಮಿಕರೂ, ಪವಿತ್ರ ಚೇತರೂ ಪರೋಪಕಾರಿಗಳೂ ಪೀಡಿತರಾಗಿ ಪದದಳಿತರಾಗಿದ್ದಾರೆ; ಪ್ರಪಂಚವು ಹಾಳಾಗುವುದಕ್ಕೆ ಹೆಚ್ಚು ಉಳಿದಿರುವುದೇನು? ಧರ್ಮವೇ ಜಯವನ್ನು ಹೊಂದುವುದಾಗಿದ್ದರೆ ಪಾತಕಗಳೂ ಕಪಟಾಚರಣೆಗಳೂ ಪ್ರಪಂಚದಿಂದ ಲೋಪವಾಗಿರಬೇಕಾಗಿದ್ದಿತು; ಆದರೂ ಅಧರ್ಮಕ್ಕೆ ಜಯವಾಗುತ್ತಿರುವುದಕ್ಕೆ ಕಾರಣವೇನೋ ಹೇಳಲಾರೆಂದ ಸಾಧ್ಯ? ಭಗವಂತನ ಲೀಲೆಯನ್ನು ಬಲ್ಲವರಾರು?

ಅನಂತರ ಮಹಾಶ್ವೇತೆಯು ಹುಚ್ಚಿ ವಿಶ್ವೇಶ್ವರಿಯು ಹೇಳಿದ ಮಾತುಗಳನ್ನು ಇಂದ್ರನಾಥನಿಗೆ ತಿಳಿಯಹೇಳಿದಳು. ಇಂದ್ರನಾಥನು ಆಶ್ಚರ್ಯಗೊಂಡು, "ಆ ಹುಚ್ಚಿಯು ಮಾನುಷಿಯೋ, ಯೋಗಿನಿಯೋ, ಅಥವಾ ಪ್ರೇತಕನ್ಯೆಯೋ ಹೇಳು

ವುದಕ್ಕಾಗುವುದಿಲ್ಲ. ಆದರೆ ಅವಳು ಹೇಳುವುದಾವಾಗಲೂ ಸುಳ್ಳಾಗುವುದಿಲ್ಲ'' ವೆಂದನು.

ಮಹಾಶ್ವೇತೆ—ಅದಾವಾಗಲೂ ಸುಳ್ಳಾಗಿಲ್ಲ. ನಮ್ಮ ಸ್ವಾಮಿಯ ಮರಣಕ್ಕೆ ಮೊದಲು ನನ್ನ ಭವಿಷ್ಯವನ್ನು ಗಣಿಸಿ ಹೇಳಿದಳು. ನಾನು ನನ್ನ ಸ್ವಾಮಿಗೆ ಅವಳು ಹೇಳಿದುದನ್ನೆಲ್ಲಾ ಹೇಳಿ ಸಪರಿವಾರವಾಗಿ ನಾವೆಲ್ಲಾದರೂ ಹೊರಟು ಹೋಗಬೇಕೆಂದು ತಿಳಿಸಿದೆನು. ಅದಕ್ಕಾ ವೀರನು ಹೇಳಿದ ಉತ್ತರವು ಈಗಲೂ ನೆನಪಿನಲ್ಲಿದೆ—ಆತನು, "ಘೋರವಾದ ಯುದ್ಧದಲ್ಲಿ ಹಿಂದೂವಾಗಲೀ, ಮೊಗಲ ನಾಗಲೀ, ಪಠಾನನಾಗಲೀ ಸಮರಸಿಂಹನು ರಣರಂಗವನ್ನು ಬಿಟ್ಟು ಹಿಮ್ಮೆಟ್ಟಿ ದುದನ್ನಾರೂ ನೋಡಿಲ್ಲ; ಪಾಮರನಾದಾ ಸತೀಶಚಂದ್ರನಿಗೆ ಅಂಜಿ ಓಡಿ ಹೋಗುವುದೆ? ಸಾಯಬೇಕಾಗಿದ್ದರೆ ಸಾಯುವೆನು; ಯೋದ್ಧನಿಗೆ ಭಯವೇನು?'' ಎಂದು ಹೇಳಿದನು.

ಇಂದ್ರನಾಥ—ಆ ಹುಚ್ಚಿಯು ಬೇರೆ ಎರಡು ಮೂರು ತಡವೆ ಹೇಳಿದ್ದ ಮಾತುಗಳು ನಿಜವಾದುವು. ತಾವು ಗ್ರಾಮವನ್ನು ಬಿಟ್ಟು ಹೊರಟುಹೋಗು ವುದು ಹೊರತು ಬೇರೆ ಉಪಾಯವಾವುದೂ ತೋರುವುದಿಲ್ಲ.

ಮಹಾಶ್ವೇತೆಯು ಮನಸ್ಸಿನಲ್ಲಿ, ಹುಚ್ಚಿಯು ಹಿಂದೆ ಇದ್ದಕ್ಕಿದ್ದಹಾಗೆ ಎರಡು ಮೂರು ತಡವೆ ಬಂದು ಕಾಣಿಸಿಕೊಂಡು ಮುಂದೆ ನಡೆಯುವುದನ್ನೆಲ್ಲಾ ಹೇಳಿದುದು ಸುಳ್ಳಾಗಲಿಲ್ಲ. ಈ ತಡವೆಯೂ ಪಾಮರನಾದಾ ಸತೀಶಚಂದ್ರನು ಸಮರಸಿಂಹನ ಹೆಂಡತಿಗೆ ಮತ್ತಷ್ಟು ಕೆಡಕುಮಾಡಲುದ್ಯುಕ್ತನಾಗಿರುವುದನ್ನು ಹೇಗೋ ತಿಳಿದು ಮುಂತಿಳುಹಿಸುವುದಕ್ಕೆ ಬಂದಿರಬಹುದೆಂದು ಯೋಚಿಸಿ ಕೊಂಡು, ಬಳಿಕ, "ಇಂದಿನವೇ ಈ ಗ್ರಾಮವನ್ನು ಬಿಟ್ಟು ಹೋಗುವುದು ಶ್ರೇಯಸ್ಕರ'' ಎಂದು ಹೇಳಿದಳು.

ಇಂದ್ರನಾಥ—ತಾವೆಲ್ಲಿಗೆ ಹೋಗಬೇಕಾಗುತ್ತದೆ? ನಮ್ಮ ಮನೆಗೆ ಬರ ಬೇಕೆಂದು ತಮ್ಮನ್ನು ಬೇಡಿಕೊಳ್ಳಲಾಪೆನೆ?

ಮಹಾಶ್ವೇತೆ—ಮಹೇಶ್ವರ ಮಂದಿರದ ಮಹಂತ ಚಂದ್ರಶೇಖರನ ಬಳಿಗೆ ಪುನಃ ಹೋಗುವೆನು.

ಇಂದ್ರನಾಥನು ಸ್ವಲ್ಪ ಖಿನ್ನನಾಗಿ ಆವುದೊಂದುತ್ತರವನ್ನೂ ಕೊಡಲಿಲ್ಲ. ಕೂಡಲೇ ಗ್ರಾಮವನ್ನು ಬಿಡಲುದ್ಯಮವು ಜರುಗಿಸುವುದಕ್ಕಾರಂಭವಾಯಿತು.

ಮಹಾಶ್ವೇತೆಯು ಸರಳೆಯನೆಬ್ಬಿಸಿ ವೃತ್ತಾಂತವನ್ನೆಲ್ಲಾ ಅವಳಿಗೆ ತಿಳುಹಿ ದಳು. ಅವಳ ಬಾಲಿಕಾ ಮುಖಮಂಡಲವು ಗಂಭೀರವಾಯಿತು. ರುದ್ರಪುರ ಗ್ರಾಮದಲ್ಲಿ ಆರುವರ್ಷಗಳ ಕಾಲವಿದ್ದು ಅಲ್ಲಿದ್ದುದರಮೇಲೆ ಅವಳಿಗೆ ಮಮತೆಯು ಹೆಚ್ಚಾಗಿದ್ದಿತು. ಪರಿಷ್ಕಾರವಾಗಿದ್ದಾ ಕುಟೀರ, ಆ ಉದ್ಯಾನ, ಅಲ್ಲಿ ಹಾಕಿದ್ದ ನಾನಾವಿಧವಾದಾ ಹೂವಿನ ಗಿಡಗಳು—ಇವೆಲ್ಲಾ ಅವಳಿಗೆ ಪ್ರಾಣವಾಗಿದ್ದುವು;

ಅವುಗಳನ್ನೆಲ್ಲಾ ಬಿಟ್ಟುಹೋಗಬೇಕಾಯಿತು; ಬೆಳಗಾದರೆ ರುದ್ರಪುರ ಗ್ರಾಮದ ಹಕ್ಕಿಗಳ ಸುಲಲಿತವಾದ ಗಾನವನ್ನು ಕೇಳುವುದಕ್ಕಿಲ್ಲ; ಹಗಲು ಎರಡನೆಯ ಜಾಮದಲ್ಲಿ ನಿಸ್ತಬ್ಧವಾದಾ ಮಾವಿನ ತೋಪಿನ ನೆರಳಲ್ಲಿ ಕುಳಿತು ಕೆಲಸವನ್ನು ಮಾಡುವುದು ತಪ್ಪಿಹೋಗುವುದು; ಸಾಯಂಕಾಲದಲ್ಲಿ ಅಮಲೆಯ ಮಧುರ ಹಾಸ್ಯದಿಂದ ವಿಕಸಿತವಾದವಳ ಮುಖವನ್ನು ನೋಡುತ್ತಿರುವುದು ತಪ್ಪಿಹೋಗುವುದು; ಅಮಲೆಯ ಹೆಸರು ನೆನಪಿಗೆ ಬರುತಲೇ ಅವಳು ಕಣ್ಣುಗಳಲ್ಲಿ ನೀರು ತುಂಬಿದವಳಾಗಿ, "ಅಮ್ಮ! ನಾನು ಹೋಗಿ ಅಮಲೆಯಲ್ಲಿ ಬೀಳ್ಕೊಂಡು ಬರುವೆನು" ಎಂದಳು. ಮಹಾಶ್ವೇತೆಯು, "ಹೋಗಿ ಬೇಗನೆ ಹಿಂದಿರುಗಿ ಬರಬೇಕು" ಎಂದಳು. ಸರಳೆಯು ಹೋದಳು.

ಅಮಲೆಯ ಮನೆಗೆ ಹೋಗಿ, "ಅಮಲೆ!" ಎಂದು ಕೂಗಿದಳು. ಪ್ರಫುಲ್ಲ ವದನೆಯಾದ ಅಮಲೆಯು ಹೊರಗೆ ಬಂದು ಸರಳೆಯ ಸಂಗಡ ಹುಡುಗಾಟವಂ ಮಾಡಬೇಕೆಂದು ನಗುತಿದ್ದವಳು, ಅವಳ ಗಂಭೀರಭಾವವನ್ನು ಕಂಡು ಅವಳ ನಗುಮುಖವೂ ಗಂಭೀರಭಾವವನ್ನು ತಾಳಿ ಅವಳ ಅಧರದಲ್ಲಿ ಕಾಣುತಿದ್ದ ಮುಗುಳುನಗೆಯು ಆರಿಹೋಯಿತು. ಸರಳೆಯ ಕಣ್ಣುಗಳಲ್ಲಿ ನೀರು ತುಂಬಿ ಗಂಡಸ್ಥಳದಮೇಲೆ ಹರಿದುಹೋಗುತಿದ್ದಿತು. ಅಮಲೆಯು ಹತ್ತಿರ ಬಂದು ಸ್ನೇಹ ಭರಿತೆಯಾಗಿ, "ಏನಾಯಿತೆ?" ಎಂದು ವಿಚಾರಿಸಿದಳು.

ಸರಳೆ—"ನಮ್ಮ ಅಮ್ಮನು ಈಗಲೇ ರುದ್ರಪುರವನ್ನು ಬಿಟ್ಟು ಹೊರಡು ವುದರಿಂದ ನಾನು ನಿನ್ನನ್ನು ನೋಡುವುದು ಇದೇ ಕಡೆಯಾಗಿರುವುದು" ಹೀಗೆಂದು ಹೇಳಿ ಅವಳು ಅಮಲೆಯ ವಕ್ಷಸ್ಥಳದಲ್ಲಿ ಮುಖವನ್ನಿಟ್ಟುಕೊಂಡು ದರವಿಗಳಿತ ಧಾರೆಯಾಗಿ ಕಣ್ಣೀರನ್ನು ಸುರಿಸುತ್ತ ಅಳುವುದಕ್ಕೆ ತೊಡಗಿದಳು. ರಾತ್ರಿ ಎರಡನೆಯ ಜಾಮದಲ್ಲಿ ಇದ್ದಕ್ಕಿದ್ದಹಾಗೆ ಆ ಸಮಾಚಾರವನ್ನು ಕೇಳಿ ಅಮಲೆಯ ತಲೆಯಮೇಲೆ ಸಿಡಿಲುಬಿದ್ದಂತಾಯಿತು. ಅವಳು ಮೊದಲು ಆ ಸಮಾಚಾರವನ್ನು ನಂಬಲಿಲ್ಲ. ಆದರೆ ಸರಳೆಯ ಅವಸ್ಥೆಯನ್ನು ನೋಡಿದ ಬಳಿಕ ಅವಳ ಸಂದೇಹಕ್ಕೆ ಅವಕಾಶವಿರಲಿಲ್ಲ. ಆಗವಳು ಅಶ್ರುವೇಗವನ್ನು ತಡೆಯ ಲಾರದೆ ಕಣ್ಣೀರಿನಿಂದ ಸರಳೆಯ ಕೂದಲನ್ನು ತೋಯಿಸಿದಳು.

ಬಹಳ ಹೊತ್ತಾದ ಬಳಿಕ ಅಮಲೆಯು ಕಷ್ಟದಿಂದ ಚಿತ್ತವನ್ನು ವಶಮಾಡಿ ಕೊಂಡು, "ಅದೇಕೆ? ಸರಳೆ! ನನ್ನನ್ನು ನೋಡುವುದು ಇದೇ ಕಡೆಯಾಗಬೇಕೆ? ನೀನೆಲ್ಲಿದ್ದರೂ ನಾನು ಅಲ್ಲಿಗೆ ಬಂದು ನಿನ್ನನ್ನು ನೋಡುವೆನು. ನೀವೀಗ ಈ ಗ್ರಾಮವನ್ನು ಬಿಟ್ಟು ಹೊರಟುಹೋಗಲು ಕಾರಣವೇನು?" ಎಂದಳು.

ಸರಳೆ—(ಸ್ವಲ್ಪ ಸಮಾಧಾನಗೊಂಡು) ಅದನ್ನು ನಾನರಿಯೆನು; ತಾಯಿಯು ಅದನ್ನು ಹೇಳಲಿಲ್ಲ. ನಾವು ಇಚ್ಛಾಮತಿ ನದಿಯ ತೀರದಲ್ಲಿರುವ ಮಹೇಶ್ವರ ಮಂದಿರಕ್ಕೆ ಹೋಗುವೆವು.

ಅಮಲೆ—ಮಹೇಶ್ವರ ಮಂದಿರವೂ ಈ ಗ್ರಾಮವೂ ನೆರೆಹೊರೆ ಗ್ರಾಮಗಳು. ನಾನು ನಿತ್ಯವೂ ಬಂದು ನಿನ್ನನ್ನು ನೋಡುತ್ತಿರುವೆನು. ಅದಕ್ಕೆ ಯೋಚನೆ ಪಡಲೇಕೆ?

ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ ಅಮಲೆಯು, "ಸ್ವಲ್ಪ ತಡೆದು ನಿಂತಿರು. ಕೂಡಲೇ ಬರುವೆನು" ಎಂದು ಹೇಳಿ ಮನೆಯೊಳಗೆ ಹೋಗಿ ಜಾಗ್ರತೆಯಾಗಿ ಹಿಂದಿರುಗಿ ಬಂದು ಸರಳೆಯ ಸೆರಗಿನಲ್ಲೊಂದು ಪದಾರ್ಥವನ್ನಿಟ್ಟು ಕಟ್ಟಿ ಗಂಟುಹಾಕಿದಳು. ಸರಳೆಯು ಅದೇನೆಂದು ಕೇಳಿದಳು. ಅದಕ್ಕವಳು, "ಅದೇನೂ ಅಲ್ಲ—ಹಾದಿಯಲ್ಲಿ ನಿನಗೆ ಹಸಿವಾದರೆ ತಿನ್ನುವುದಕ್ಕಿರಲೆಂದು ಸ್ವಲ್ಪ ಅವಲಕ್ಕಿ ಬೆಲ್ಲವನ್ನು ಕಟ್ಟಿದ್ದೇನೆ. ನನ್ನಾಣೆ! ಅದನ್ನು ಚೆಲ್ಲಬೇಡ" ಹೀಗೆಂದು ಹೇಳಿ ಹತ್ತು ರೂಪಾಯಿಗಳನ್ನು ಅವಳ ಸೆರಗಿನಲ್ಲಿ ಕಟ್ಟಿ ಗಂಟುಹಾಕಿದಳು.

ಹೊರಟುಹೋಗುವಾಗ ಅಮಲೆಯು ಗೆಳತಿಯ ಕೈಯನ್ನು ಹಿಡಿದುಕೊಂಡು, "ಸರಳೆ! ಯೋಚಿಸಬೇಡ; ಮಹೇಶ್ವರ ಮಂದಿರಕ್ಕೆ ಬೇಗನೆ ಬಂದು ನಿನ್ನನ್ನು ನೋಡುವೆನು. ಇಷ್ಟರೊಳಗೆ ನೀನು ನನ್ನನ್ನು ಮರೆಯದಿರಲು ನಿನ್ನಲ್ಲಿ ನನ್ನದೊಂದು ಕುರುಹು ಇರಲಿ" ಎಂದು ಹೇಳಿ ತನ್ನ ಕೊರಳಲ್ಲಿದ್ದೊಂದು ಗುಂಡಿನ ಸರವನ್ನು ತೆಗೆದು ಸರಳೆಯ ಕುತ್ತಿಗೆಗೆ ಹಾಕಿದಳು. ಸರಳೆಯು ಬೇಡವೆಂದು ಅಡ್ಡಿಮಾಡತೊಡಗಿದಳು. ಅಮಲೆಯು, "ನೀನದನ್ನು ಬೇಡವೆಂದರೆ ನನ್ನನ್ನು ಮರೆತಿರುವೆಯೆಂದು ತಿಳಿಯುವೆನು" ಎಂದು ಹೇಳಿದಳು. ಸರಳೆಯು ಸುಮ್ಮನಾದಳು. ಅಮಲೆಯು ಹಾರವನ್ನು ಗೆಳತಿಯ ಕೊರಳಿಗೆ ತೊಡಿಸಿ, ಕಣ್ಣೀರು ತುಂಬಿದವಳಾಗಿ ಸರಳೆಗೆ ಬೀಳ್ಕೊಟ್ಟು ಕಳುಹಿದಳು.

ಇತ್ತಲಾಗಿ ಇಂದ್ರನಾಥನು ದೋಣಿಯನ್ನು ಸಿದ್ಧಪಡಿಸಿದನು. ಮಹಾಶ್ವೇತೆಯೂ ಸರಳೆಯೂ ದೋಣಿಯಲ್ಲೇರಿ ಇಂದ್ರನಾಥನೊಡನೆ ಪಯಣಮಾಡಿದರು. ದೋಣಿಯು ಇಚ್ಛಾಮತಿ ನದಿಯಲ್ಲಿ ಮೆಲ್ಲ ಮೆಲ್ಲನೆ ಸಾಗಿತು. ಅಲ್ಲಲ್ಲಿ ನದಿಯು ಬಹಳ ಅಗಲವಾಗಿ ಅವೆರಡು ಪಾರ್ಶ್ವಗಳಲ್ಲಿದ್ದ ಪ್ರಾಂತರಗಳಿಂದಲೂ ಅಡವಿಯಿಂದಲೂ ಗ್ರಾಮಗಳ ಮರಗಳಿಂದಲೂ ಬೆಳದಿಂಗಳಲ್ಲಿ ಅನುಪಮ ಕಾಂತಿಯನ್ನು ತಾಳಿದ್ದಿತು; ಒಂದೊಂದು ಸ್ಥಳದಲ್ಲಿ ನದಿಯು ಇಕ್ಕಟ್ಟಾಗಿ ಎರಡು ತೀರಗಳಲ್ಲಿ ಬೆಳೆದಿದ್ದ ಬಿದುರು ಬೊಂಬುಗಳ ಉದ್ದವಾದ ನೀಬುಗಳು ಮೇಲುಭಾಗದಲ್ಲಿ ಸೇರಿ ಹೆಣೆದುಕೊಂಡಿದ್ದುವು; ನಿಬಿಡವಾಗಿದ್ದ ಅದರ ಎಲೆಗಳ ರಾಶಿಯ ಮಧ್ಯದಿಂದ ಚಂದ್ರಕಿರಣವು ಪ್ರವೇಶಿಸಿ ಬಂದು ಬಿದ್ದು ಇಚ್ಛಾಮತಿ ನದಿಯ ಸ್ವಚ್ಛವಾದ ನೀರನ್ನು ಉಜ್ವಲಮಾಡುತಿದ್ದಿತು; ಇಚ್ಛಾಮತಿ ನದಿಯ ನೀಲಜಲವು ಕಲಕಲ ರವವನ್ನು ಮಾಡುತಿದ್ದಿತು; ಅದರಮೇಲೆ ಆ ಚಿಕ್ಕದೋಣಿಯು ತರತರ ತೇಲಿಹೋಗುತಿದ್ದಿತು; ಸರಳೆಯು ಆ ಶೋಭಾರಾಶಿಯನ್ನು ನೋಡುತ್ತ ಶ್ರುತಿಮಧುರವಾದಾ ಶಬ್ದವನ್ನು ಕೇಳುತ್ತ ನಿದ್ರೆಯಂಗೈದಳು. ಇಂದ್ರನಾಥನು

ಅವಳಿ ಬಳಿ ಕುಳಿತು ರಾತ್ರಿಯೆಲ್ಲಾ ಎಚ್ಚರವಾಗಿದ್ದು ನಿರ್ಮಲವಾದಾ ಬೆಳದಿಂಗಳಲ್ಲಿ ಬೆಳಗುತಿದ್ದಾ ಮುಖಮಂಡಲವನ್ನು ನೋಡುತಿದ್ದನು. ಬೆಳಗಾಗುವುದರಲ್ಲಿ ದೋಣಿಯು ಇಚ್ಛಾಮತಿ ನದಿಯ ತೀರದಲ್ಲಿದ್ದೊಂದು ಚಿಕ್ಕ ಗ್ರಾಮಕ್ಕೆ ಸಮೀಪದಡವನ್ನು ಮುಟ್ಟಿತು. ಆ ಗ್ರಾಮವು ಪ್ರಸಿದ್ಧವಾಗಿದ್ದ ಮಹೇಶ್ವರ ಮಂದಿರಕ್ಕೆ ಅರ್ಧ ಹರದಾರಿ. ನಾಲ್ಕು ಕಡೆಗಳಲ್ಲಿ ಅಡವಿಯು ಬೆಳೆದು ಮುಚ್ಚಿಹೋಗಿದ್ದುದರಿಂದ ಅದಕ್ಕೆ ವನಗ್ರಾಮವೆಂದು ಹೆಸರು. ಮಂದಿರದ ಮಹಂತ ಚಂದ್ರಶೇಖರನೂ ಇತರ ಅರ್ಚಕ ಮುಂತಾದವರೂ ಪದೇ ಪದೇ ಬಂದು ಆ ಗ್ರಾಮದಲ್ಲಿರುತಿದ್ದರು. ದೋಣಿಯಲ್ಲಿ ಬಂದವರು ಅಲ್ಲಿಳಿದು, ಕಾಲುಹಾದಿಗೊಂಡು ನಡೆದುಕೊಂಡು ಹೋಗಿ ಚಂದ್ರಶೇಖರನ ಆಶ್ರಯವನ್ನು ಸೇರಿದರು.

---

## ಆರನೆಯ ಪರಿಚ್ಛೇದ

Now naught was heard beneath the skies,
The sounds of busy life were still,
Save an unhappy lady's sighs,
That issued from the lonely pile. *Mickle.*

ಸಂಧ್ಯಾಕಾಲ. ವಿಸ್ತಾರವಾದ ಪ್ರಾಂತದ ಮೇಲುಭಾಗದಲ್ಲಿ ಭೀಮಕಾಂತ ಚತುರ್ವೇಷ್ಟಿತ ದುರ್ಗವೂ ಕಾಣುತಿದ್ದಿತು; ಯಮುನಾನದಿಯು ದುರ್ಗಕ್ಕೆ ನಾಲ್ಕು ಕಡೆ ಸುತ್ತಿಕೊಂಡು ಕಲಕಲ ಶಬ್ದದಿಂದ ಪ್ರವಹಿಸುತಿದ್ದಿತು; ದುರ್ಗದ ಸುತ್ತ ನೋಟವು ಅತಿರಮಣೀಯವಾಗಿದ್ದಿತು; ಕಣ್ಣಿಗೆ ಕಾಣುವ ಪರ್ಯಂತವೂ ಮನೋಹರವಾದ ಹಸರು ಬಣ್ಣದ ಪ್ರಾಂತರವು ಥಳಥಳಿಸುತ್ತಿದ್ದಿತು; ಸೂರ್ಯದೇವನು ಅಸ್ತನಾಗಿದ್ದರೂ ಪಶ್ಚಿಮ ದಿಕ್ಕಿನಲ್ಲಿ ಮೇಘವು ರಕ್ತವರ್ಣವನ್ನು ತಾಳಿದ್ದಿತು; ದುರ್ಗದ ಪಾದಚಾರಿಣಿಯಾಗಿ ಶಾಂತಪ್ರವಾಹಿನಿಯಾಗಿದ್ದ ನದಿಯ ನಿರ್ಮಲವಕ್ಷದಲ್ಲಿ ರಕ್ತವರ್ಣದ ಮೇಘವು ಪ್ರತಿಫಲಿತವಾಗುತಿದ್ದಿತು; ಸಂಧ್ಯೆಯ ಛಾಯೆಯು ಮೆಲ್ಲ ಮೆಲ್ಲನೆ ನಿಸ್ತಬ್ಧವಾಗಿದ್ದಾ ಪ್ರಾಂತರದಲ್ಲಿಳಿಯುತ ಬಂದಿತು. ಇಳಿದುಬಂದು ಸಾಯಂಕಾಲದಾ ನಿಸ್ತಬ್ಧತೆಯನ್ನು ಮತ್ತಷ್ಟು ಮನೋಹರವಾಗಿ ಮಾಡಿತು. ಪ್ರಾಂತರದಲ್ಲಿ ಶಬ್ದ ಮಾತ್ರವಿಲ್ಲ. ಮಧ್ಯೆ ಮಧ್ಯೆ ದೂರದಿಂದ ಗಾಳಿಯ ಹಿಲ್ಲೋಲದಲ್ಲಿ ಬರುತ ಬರುತ ಕ್ರಮವಾಗಿ ಮಂದೀಭೂತವಾಗಿದ್ದ ಹಳ್ಳಿಗಳ ಗದ್ದಲವು ಕೇಳುತಿದ್ದತಲ್ಲದೆ, ಹೊಲಗಳಿಂದ ಮನೆಗಳಿಗೆ ದಣಿದು ಬರುತಿದ್ದ ವ್ಯವಸಾಯಗಾರರು ಹಾಡುತಿದ್ದ ದಣಿವಾರಿಸುವ ಗೀತದ ಧ್ವನಿಯು ಕೇಳುವುದು.

ದುರ್ಗದ ಹಿಂಭಾಗದಲ್ಲಿ ಹಾಗಿರಲಿಲ್ಲ. ಅಲ್ಲೊಂದು ದೊಡ್ಡ ಮಾವಿನ ತೋಪು; ದುರ್ಗದ ಮೇಲಿಂದ ನೋಡಿದರೆ ಮಾವಿನ ಮರಗಳು ಹೊರ್ತ

ಮತ್ತಾವದೂ ದೃಷ್ಟಿಗೆ ಬೀಳುತ್ತಿರಲಿಲ್ಲ; ಕತ್ತಲೆಯು ಹೆಚ್ಚಾದಹಾಗೆಲ್ಲಾ ಮಾವಿನ ಮರಗಳಲ್ಲಿ ಮಿಂಚಿನ ಹುಳುಗಳ ಮಾಲೆಗಳು ಸಾಲು ಸಾಲಾಗಿ ಕಾಣುತಿದ್ದುವು; ಆ ಹುಳುಗಳ ಮಾಲೆಗಳು ಮೇಲಕ್ಕೂ ಕೆಳಕ್ಕೂ ಹತ್ತಿರದಲ್ಲೂ ದೂರದಲ್ಲೂ ಕುಣಿದಾಡುತಿದ್ದುವು; ಉದ್ಯಾನದೊಳಗೊಂದು ಸುಂದರವಾದ ಸರೋವರ; ಸರೋವರದ ಸ್ವಚ್ಛವಾದ ನೀರಿನಲ್ಲಿ ಅದರ ಪಾರ್ಶ್ವದಲ್ಲಿದ್ದ ಮರಗಳ ಛಾಯೆಯು ಬಿದ್ದಿತ್ತು; ಸರೋವರದ ಸುತ್ತ ನಾನಾ ಜಾತಿಯ ಕೀಟಪತಂಗಗಳು ತಂತಮ್ಮ ಶಬ್ದದಿಂದ ಸಾಯಂಕಾಲದ ಕೀರ್ತನೆಗೆ ತೊಡಗಿದ್ದುವು.

ಹೊರಗಿನಿಂದ ನೋಡಿದರೆ ದುರ್ಗದಲ್ಲಿದ್ದ ಪ್ರಾಸಾದವು ಸಂಪೂರ್ಣ ಅಂಧಕಾರದಿಂದಾವೃತವಾಗಿದ್ದಂತೆ ಕಾಣುವುದು. ಒಂದು ಕೊಠಡಿಯ ಗವಾಕ್ಷದಿಂದ ಬೆಳಕು ಹೊರಡುತಿದ್ದಿತು. ಆ ಗವಾಕ್ಷದ ಪಾರ್ಶ್ವದಲ್ಲಿ ಅಲ್ಪ ವಯಸ್ಸಿನ ಹೆಂಗಸೊಬ್ಬಳು ಕುಳಿತಿದ್ದವಳು, ಕೈಯಲ್ಲಿ ಕಪೋಲವನ್ನಿಟ್ಟುಕೊಂಡು ಚಿಂತಿಸುತ್ತಿದ್ದಳು.

ಹೆಂಗಸು ಗಗನದಲ್ಲಿ ತಲೆದೋರಿ ಕಾಣುತಿದ್ದೊಂದೇ ಒಂದು ನಕ್ಷತ್ರದಲ್ಲಿ ದೃಷ್ಟಿಯುಳ್ಳವಳಾಗಿದ್ದಳು. ಸುಂದರವಾಗಿದ್ದವಳ ಸೀಮಂತದಲ್ಲೊಂದು ವಜ್ರವು ಆ ನಕ್ಷತ್ರದಂತೆ ಜಳಕಿಸುತಿದ್ದಿತು.

ಹೆಂಗಸಿಗೆ ಹದಿನೇಳು ವರ್ಷವಿರಬಹುದು; ಯೌವನದಿಂದವಳ ಸರ್ವಾಂಗವೂ ಅಸಾಧಾರಣ ಸೌಂದರ್ಯದಿಂದ ವಿಕಸಿತವಾಗಿದ್ದಿತು, ಆದರೆ ಅದು ಸಾಧಾರಣ ನಾರೀ ಜಾತಿಯ ಸೌಂದರ್ಯವಾಗಿರಲಿಲ್ಲ; ಆ ರೂಪಿರಾಶಿಯೆದುರಿಗೆ ನಿಂತು ನೋಡಿದರೆ ಮನದಲ್ಲಿ ಪ್ರೇಮವು ಹುಟ್ಟದೆ, ಸಮ್ಮಾನವೂ ಶ್ರದ್ಧೆಯೂ ಹುಟ್ಟುವುವು; ಶರೀರವು ತೆಳುವಾಗಿಯೂ ಉನ್ನತವಾಗಿ ದೀರ್ಘಾಯತವಾಗಿಯೂ ಇದ್ದಿತಲ್ಲದೆ, ಕೋಮಲತೆಯಿಂದ ಪರಿಪೂರ್ಣವಾಗಿದ್ದಿತು; ಲಲಾಟವು ಸುಂದರವಾಗಿಯೂ ಉಚ್ಚವಾಗಿಯೂ ಪ್ರಶಸ್ತವಾಗಿಯೂ ಇದ್ದಿತು; ಅಂತಹ ಪ್ರಶಸ್ತವಾದ ಲಲಾಟವು ಅಪೂರ್ವವಾಗಿ ಒಬ್ಬಿಬ್ಬರು ಪುರುಷರಿಗಿರಬಹುದು; ಹೆಂಗಸರಿಗೆ ಅಂತಹ ಪ್ರಶಸ್ತ ಲಲಾಟವಿರುವುದು ಸಂಭವವಿಲ್ಲ; ಕಣ್ಣುಗಳ ಸ್ಥಿರವಾದ ಉಜ್ವಲತೆಯೂ ತುಟಿಗಳ ಚಿಕ್ಕಣತೆಯೂ ಉನ್ನತವಾದ ವದನದ ಗಂಭೀರಭಾವವೂ ಅವಳ ಹೃದಯದ ಮಹತ್ವವನ್ನು ಪ್ರಕಾಶಗೊಳಿಸುತ್ತಿದ್ದುವು; ಸಮಸ್ತ ಅವಯವಗಳ ಭಾವಭಂಗಿಗಳನ್ನು ನೋಡಿದರೆ ತೀಕ್ಷ್ಣಜ್ಯೋತಿರ್ಮಯವಾದಾತನ್ವಂಗಿಯು ಮಾನುಷಿಯಲ್ಲವೆಂದೂ ಯೋಗಪರಾಯಣೆಯಾಗಿ ಸ್ವರ್ಗವಾಸಿಯಾದವಳು ಮಾನವ ಜಾತಿಯ ಉನ್ನತಿ ಸಾಧನಕ್ಕೆ ಸಲುವಾಗಿ ಮರ್ತ್ಯಲೋಕಕ್ಕಿಳಿದು ಬಂದಿರುವಳೆಂದೂ ಬೋಧೆಯಾಗುವುದು.

ನಿಸ್ತಬ್ಧವಾಗಿದ್ದಾ ಸಾಯಂಕಾಲದಲ್ಲಿ ಗವಾಕ್ಷದ ಪಾರ್ಶ್ವದಲ್ಲಿ ರಮಣಿಯು ಕುಳಿತುಕೊಂಡು ಸುಂದರವಾದ ನಿರ್ಮಲಾಕಾಶವನ್ನು ನೋಡುತ್ತಿದ್ದಳು.

ರಮಣಿಯ ವದನಮಂಡಲವು ಅಪೂರ್ವ ಸೌಂದರ್ಯದಿಂದ ಸುಂದರವಾಗಿಯೂ ನಿರ್ಮಲವಾಗಿಯೂ ಇದ್ದಿತು. ರಾತ್ರಿಯು ಹೆಚ್ಚು ಗಭೀರವಾಗುತ ಬಂದಿತು—ಆಕಾಶದ ವಿಸ್ತೀರ್ಣವು ಕ್ರಮವಾಗಿ ಘೋರತರವಾದ ಅಂಧಕಾರದಿಂದಾವೃತವಾಗುತ ಬಂದಿತು. ರಮಣಿಯ ಹೃದಯದಲ್ಲಿಯೂ ಚಿಂತೆಯೆಂಬ ರಜನಿಯು ಗಭೀರವಾಗುತ ಬಂದಿತು. ಅವಳಾ ಪ್ರಶಸ್ತವಾದ ಲಲಾಟವು ಕ್ರಮವಾಗಿ ಘೋರತರ ಅಂಧಕಾರದಿಂದಾವೃತವಾಗುವುದಕ್ಕಾರಂಭವಾಯಿತು.—ಧನುರಾಕೃತಿಯುಳ್ಳ ಹುಬ್ಬುಗಳು ಅಧಿಕತರ ಕುಂಚಿತವಾಯಿತು. ಕಣ್ಣುಗಳಿಂದ ಉಜ್ವಲತರ ತೀಕ್ಷ್ಣಜ್ಯೋತಿಯು ಹೊರಡಲಾರಂಭವಾಯಿತು.

ಆ ಸಮಯದಲ್ಲಿ ಪುರುಷನೊಬ್ಬನು ಕೊಠಡಿಯೊಳಗೆ ಪ್ರವೇಶಿಸಿ, "ವಿಮಲೆ!" ಎಂದು ಕರೆದನು. ವಿಮಲೆಯು ದೃಷ್ಟಿಸಿ ನೋಡಿದಳು; ಅವನವಳ ತಂದೆ ಸತೀಶಚಂದ್ರನಾಗಿದ್ದನು.

ಸತೀಶಚಂದ್ರನಿಗೆ ಐವತ್ತು ವರ್ಷ ತುಂಬಿರಲಿಲ್ಲ. ಆದರೆ ನೋಡುವುದಕ್ಕೆ ಅರವತ್ತು ವರ್ಷದ ಮುದುಕನಂತೆ ಕಾಣುವನು; ತಲೆಯಲ್ಲಾ ನರೆತಿದ್ದಿತು; ಲಲಾಟವು ಚಿಂತೆಯ ರೇಖೆಗಳಿಂದ ಅಂಕಿತವಾಗಿದ್ದಿತು; ಮೈ ಚರ್ಮವು ನಿರಿಗೊಂಡಿದ್ದಿತು; ಸರ್ವಾಂಗವೂ ಕ್ಷೀಣವಾಗಿದ್ದಿತು; ಆದರೂ ಕಣ್ಣುಗಳೆರಡೂ ಕಾಂತಿಮಯವಾಗಿ ಮುಖಮಂಡಲದಲ್ಲಿ ಚಿಂತಾ ದೇವಿಯು ಸಂತತವಾಗಿ ನಿಂತಿರುವಳು; ಸ್ಥಿಧಾಸವಾದ ಆಚರಣೆ, ಜಾಗರೂಕತೆಯಿಂದ ಗಮನಾಗಮನ, ಚಾತುರ್ಯದಿಂದ ಚುರುಕಾದ ಬುದ್ಧಿ ಸಂಚಾಲನೆ. ಅವನ ಜೀವನವೂ ಅವನ ಅಂತಃಕರಣವೂ ಬಹುದೂರ ವ್ಯಾಪಿಯಾದ ದೂರದೃಷ್ಟಿಯುಳ್ಳ ನಾನಾ ಪ್ರಕಾರವಾದವನ ಕಲ್ಪನಾದಿ ಆಲೋಚನೆಗಳಿಂದ ಪರಿಪೂರಿತವಾಗಿದ್ದುವು. ಕೊಠಡಿಯೊಳಗೆ ಪ್ರವೇಶಮಾಡಿ ಮಗಳು ಚಿಂತೆಯಲ್ಲಿ ಮುಳುಗಿದ್ದುದನ್ನು ಕಂಡು ಸ್ವಲ್ಪ ಸ್ತಬ್ಧನಾಗಿ, "ವಿಮಲೆ!" ಎಂದು ಕರೆದನು.

ವಿಮಲೆಯೂ ತಂದೆಯನ್ನು ನೋಡಿ ತನ್ನ ಗಭೀರವಾದ ಚಿಂತೆಯನ್ನು ಸ್ವಲ್ಪ ಮರೆತಳು. ಅವಳ ಮುಖದಲ್ಲಿ ಕಾಣಿಸಿಕೊಳ್ಳುತ್ತಿದ್ದ ಗಂಭೀರಭಾವವು ಕ್ರಮವಾಗಿ ಅಳಿಸಿಹೋಗುತ್ತ ಬಂದು, ಪವಿತ್ರವಾದ ಪಿತೃಸ್ನೇಹವು ಪ್ರಕಟವಾಯಿತು. ತಂದೆಯು ಬಂದು ನಿಂತಕೂಡಲೆ ನೋಡದೆ ಅಜಾಗರೂಕತೆಯಿಂದಿದ್ದುದಕ್ಕೋಸ್ಕರ ಸ್ವಲ್ಪ ಲಜ್ಜಿತೆಯಾದಳು. ಸತೀಶಚಂದ್ರನು, "ವಿಮಲೆ! ಇಷ್ಟು ಹೊತ್ತಿನಲ್ಲಿ ಹೀಗೆ ಮೌನವಾಗಿ ಕುಳಿತಿರುವುದಕ್ಕೆ ಉಂಟಾಗಿರುವ ವ್ಯಸನವೇನು?" ಎಂದು ಕೇಳಿದನು.

ವಿಮಲೆ—ನೀನು ದುರ್ಗವನ್ನು ಬಿಟ್ಟು ನಾಳಿನ ದಿನ ಹೊರಟುಹೋಗುವೆ. ಪುನಃ ಬರುವುದೆಷ್ಟು ದಿನವಾಗುವುದೋ, ಮತ್ತಾವಾಗ ನಿನ್ನನ್ನು ನೋಡುವೆನೋ, ಪ್ರಕಾಂಡವಾದೀ ದುರ್ಗವು ಎಷ್ಟು ದಿನಗಳತನಕ ಶೂನ್ಯವಾಗಿರ

ಬೇಕೋ, ಎಂಬವೇ ಮುಂತಾದ ಕೊರತೆಯಿಂದ ನನ್ನ ಮನಸ್ಸು ಅಸ್ಥಿರವಾಗಿದೆ. ಎಷ್ಟು ಪ್ರಯತ್ನಪಟ್ಟರೂ ಸಮಾಧಾನಕ್ಕೆ ಬರುವುದಿಲ್ಲ.

ತಂದೆ—ವಿಮಲೆ! ಸುಳ್ಳು ಭಯವನ್ನು ಹಚ್ಚಿಕೊಳ್ಳಬೇಕೆ? ನಾನು ಜಾಗ್ರತೆಯಾಗಿ ಹಿಂದಿರುಗಿ ಬರುವೆನು; ನಿನ್ನನ್ನಗಲಿ ಹೆಚ್ಚು ದಿನಗಳಿರಬಲ್ಲೆನೆ?

ವಿಮಲೆ—ಅಪ್ಪಾ! ನೀನು ನನ್ನನ್ನು ಅತಿಶಯವಾಗಿ ಪ್ರೀತಿಸುತ್ತೀಯೆಂದು ಚೆನ್ನಾಗಿ ಬಲ್ಲೆನು. ತಂದೆಯಾದವನು ಮಗಳನ್ನು ಅದಕ್ಕಿಂತ ಹೆಚ್ಚು ಪ್ರೀತಿಸನು.

ಸತೀಶ—ಹಾಗಾದರೆ ಯೋಚನೆಪಡಬೇಕೆ? ನಾನು ಪ್ರತಿವರ್ಷವೂ ಒಂದು ತಡವೆ ರಾಜಧಾನಿಗೆ ಹೋಗಬೇಕು. ಈ ತಡವೆ ನಿನಗೇಕೆ ಅಷ್ಟೊಂದು ಯೋಚನೆ?

ವಿಮಲೆ—ಪ್ರತಿವರ್ಷವೂ ನನಗೆ ಇಂತಹ ಚಿಂತೆಯು ಹುಟ್ಟುತ್ತಿರಲಿಲ್ಲ; ಈ ವರ್ಷ ಒಮ್ಮಿಂದೊಮ್ಮೆ ಮನಸ್ಸಿಗೆ ಭಯವುಂಟಾಗಿದೆ, ಅದಕ್ಕೆ ಕಾರಣ ವೇನೋ ಅರಿಯೆನು; ನೀನು ಮನೆಯಲ್ಲಿರು; ಎಲ್ಲಿಗೂ ಹೋಗಬೇಡ.

ಕಡೆಯ ಮಾತುಗಳನ್ನು ಮೃದುವಾಗಿ ಅಸ್ಫುಟವಾಗಿ ಹೇಳಿದಳು. ಕೇಳಿ ಸತೀಶಚಂದ್ರನು ಎದೆಕದಲಿ ಭೀತಿಗೊಂಡನು. ಅವನು ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ, "ವಿಮಲೆ! ಕಾರಣವಿಲ್ಲದೆ ವ್ಯರ್ಥವಾಗಿ ಭಯಪಡಬೇಕೆ? ನಾನು ಹೋಗಬೇಕು. ಹೋಗುವಾಗ ರೋದನಮಾಡಬೇಡ!" ಎಂದು ಹೇಳಿದನು.

ವಿಮಲೆ—ಅಪ್ಪಾ! ಸುಳ್ಳು ಹೆದರಿಕೆಯಲ್ಲ; ನಿನ್ನಿನ ರಾತ್ರಿ ನಾನೊಂದು ಕನಸನ್ನು ಕಂಡೆನು. ಸ್ವರ್ಗಸ್ಥೆಯಾಗಿರುವ ತಾಯಿಯು ಬಂದು ಕಣ್ಣೀರು ತುಂಬಿದವಳಾಗಿ ಮೃದುಸ್ವರದಿಂದ, 'ಮಗು! ಜಾಗರೂಕತೆಯಿಂದಿರು; ಘೋರವಾದ ವಿಪತ್ತು ಕಾದಿರುವುದು" ಎಂದು ಹೇಳಿದಂತೆ ಕನಸುಬಿದ್ದಿತು. ಅವಳು ಬಾಡಿದ ಮುಖವುಳ್ಳವಳಾಗಿ ಕಣ್ಣೀರನ್ನು ಸುರಿಸುತ್ತ ಹೇಳಿದಾ ಮಾತುಗಳು ಈಗಲೂ ಕೇಳುವಂತಿವೆ. ನಾನಾವ ಪಾಪವನ್ನು ಮಾಡಿದ್ದೆನೋ ಅದನ್ನು ಹೇಳಲಾರೆನು. ನನ್ನಾವ ಪಾಪಶೇಷದಿಂದ ಸ್ನೇಹಮಯಿಯಾದ ಹಡೆದ ತಾಯಿಯನ್ನು ಕಳೆದುಕೊಂಡೆನೋ! ಎಂತಹ ಘೋರವಾದ ವಿಪತ್ತು ಕಾದಿರುವುದೋ, ದೇವರು ಬಲ್ಲ!—ಅಪ್ಪಾ! ಕ್ಷಮಿಸು; ನನಗೆ ಭಯವಾಗುತ್ತದೆ; ನೀನೀಗ ಹೊರಟುಹೋದರೆ ಪುನಃ ಇಲ್ಲಿಗೆ ಬರಲಾರೆಯೆಂದು ತೋರುತ್ತದೆ.

ಹೀಗೆಂದು ಹೇಳಿ ವಿಮಲೆಯು ಹೋಗಿ ತನ್ನ ಮುಖಮಂಡಲವನ್ನು ತಂದೆಯ ಹೃದಯದಲ್ಲಿಟ್ಟುಕೊಂಡಳು. ಅವಳು ಸ್ಥಿರಭಾವದಿಂದಿದ್ದರೆ ತಂದೆಯು ಮುಖವೂ ಒಮ್ಮಿಂದೊಮ್ಮೆ ವಿಕೃತಿಭಾವವನ್ನು ತಾಳಿದ್ದಿತೆಂದು ನೋಡುತ್ತಿದ್ದಳು. ಸ್ವಪ್ನದ ಸಮಾಚಾರವನ್ನು ಕೇಳಿ ಸತೀಶಚಂದ್ರನು ನಡುಗಿದನು. ಇದ್ದಹಾಗೆ ಅವನ ಹೃದಯದಲ್ಲಿದ್ದಾವದೋ ಭಯಾವಹವಾಗಿದ್ದೊಂದು ಪೂರ್ವಘಟನೆಯು ಜಾಗರಿತವಾಯಿತು; ಅವನಾವದೋ ಗೂಢವಾದೊಂದು ಪಾಪ

ಕೃತ್ಯಕ್ಕೆ ಪ್ರಾಯಶ್ಚಿತ್ತವು ಆಗಲೇ ಪ್ರಾರಂಭವಾಯಿತೆಂದು ಅನುಭವಮಾಡಿದನು. ವಿಮಲೆಯು ಅವನ ವಕ್ಷದಲ್ಲಿ ಮುಖವನ್ನಿಟ್ಟು ರೋದನವಮಾಡುತ್ತಿರುವಾಗ ಅವಳನ್ನು ಸಮಾಧಾನಪಡಿಸಲು ಅವನಿಗೆ ಶಕ್ತಿಯಿರಲಿಲ್ಲ. ಬಹಳ ಹೊತ್ತಾದ ಬಳಿಕ ಅವನು ಮನಸ್ಸಿಗೆ ಸ್ಥೈರ್ಯವನ್ನು ತಂದುಕೊಂಡು, "ವಿಮಲೆ! ಅದೆಲ್ಲಾ ಕಾರಣವಿಲ್ಲದ ಭಯ; ನೀನು ಹಗಲೆಲ್ಲಾ ಕೆಲಸವಿಲ್ಲದೆ ಇಲ್ಲದುದನ್ನೆಲ್ಲಾ ಚಿಂತಿಸುತ್ತಿರುವುದರಿಂದ ರಾತ್ರಿ ಅದೇ ಪ್ರಕಾರ ಭಯಂಕರವಾದ ಕನಸು ಬೀಳುವುದು. ಈಗ್ಗೆ ಕೆಲವು ದಿನಗಳಿಂದ ನೀನಾವಾಗಲೂ ಚಿಂತೆಯಲ್ಲಿ ಮುಳುಗಿರುವಂತೆ ತೋರುತ್ತದೆ. ಅಂತಹ ಚಿಂತೆಗೆ ಕಾರಣವೇನು?" ಎಂದು ಕೇಳಿದನು.

ವಿಮಲೆ—(ಸಾವಧಾನವಾಗಿ) ಅಪ್ಪಾ! ನೀನು ಕೇಳುತ್ತಿರುವಾಗ ನಾನು ಆವಶ್ಯಕ ಪ್ರತ್ಯುತ್ತರವನ್ನು ಹೇಳುವೆನು. ನಿನಗೆ ತಿಳಿಸದಿರುವ ವಿಷಯವಾವದೂ ಇಲ್ಲ. ನನ್ನ ಚಿಂತೆಗೆ ನೀನೇ ಕಾರಣ; ಈಗ್ಗೆ ಒಂದು ತಿಂಗಳಿಂದಲೂ ನೀನಾವಾಗಲೂ ದುಃಖಿಸುತ್ತ ಚಿಂತೆಯಲ್ಲಿರುವುದನ್ನು ನೋಡುತ್ತಿದ್ದೇನೆ; ನಿನ್ನಾ ಚಿಂತೆಯು ನಿತ್ಯವೂ ಗಾಢತರವಾಗುತ್ತಿದೆ; ನೀನು ಊಟಮಾಡುವಾಗ ನಿನಗೆ ಊಟದಮೇಲೆ ದೃಷ್ಟಿಯಿಲ್ಲ; ರಾತ್ರಿ ನಿನಗೆ ನಿದ್ರೆಯಿಲ್ಲ; ನಿದ್ರೆಯು ಬಂದರೂ ಅದು ದುಸ್ವಪ್ನಗಳಿಂದ ತುಂಬಿರುವಂತಿದೆ; ಹಗಲು ನೀನು ಕುಳಿತಿರುವಲ್ಲಿಗೆ ನಾನು ಬಂದು ನೋಡಿದಾಗೆಲ್ಲಾ ನೀನು ಚಿಂತೆಯಲ್ಲಿ ಮುಳುಗಿರುವೆ; ರಾತ್ರಿ ನೀನು ಮಲಗಿರುವಾಗ ಬಂದು ನೋಡಿದರೆ ದುಸ್ಸ್ವಪ್ನಗಳಿಂದ ನಿನ್ನ ಲಲಾಟವು ಕುಂಚಿತವಾಗಿ ಮುಖವು ವಿಕೃತವಾಗಿರುವುದು; ನಿನಗಾಪ್ರಕಾರ ಯಾತನೆಯಂ ಕೊಡುವ ಚಿಂತೆ ಯಾವುದು? ಸಾಮಾನ್ಯರಾದ ಜಮೀನುದಾರರೂ ಸಾಮಾನ್ಯರಾದ ರೈತರೂ ಹಗಲೆಲ್ಲಾ ಕಷ್ಟಪಟ್ಟು ರಾತ್ರಿ ಸುಖವಾಗಿ ನಿದ್ದೆಗೈಯುವರು. ವಂಗದೇಶದ ರಾಜಾಧಿರಾಜನಾದ ದಿವಾನನು ಅಂತಹ ವಿಶ್ರಾಮಕ್ಕೆ ಅಧಿಕಾರಿಯಲ್ಲವೇ?

ವಿಮಲೆಯು ಸ್ವಲ್ಪಹೊತ್ತು ಸುಮ್ಮನಿದ್ದಳು. ತಂದೆಯು ತಾನು ಹೇಳಿದುದನೆಲ್ಲಾ ಮನವಿಟ್ಟು ಕೇಳುತಿದ್ದನೆಂದು ತಿಳಿದು ಪುನಃ ಹೇಳತೊಡಗಿದಳು.—

ಈಗ್ಗೆ ಒಂದು ತಿಂಗಳಿಂದ ನಿನ್ನ ಒಳಿಗೆ ಬಹು ಮಂದಿ ಗೂಢಚಾರರು ಬರುತಿದ್ದುದೇಕೆ? ಬಂದ ಚಾರರು ಅಷ್ಟೊಂದು ಏಕಾಂತವಾಗಿ ಬಂದು ಏಕಾಂತವಾಗಿ ಹೊರಟುಹೋಗಲೇಕೆ? ರಾತ್ರಿ ಹಗಲು ನೀನು ಏಕಾಂತ ಆಲೋಚನೆಯಂ ಮಾಡಲೇಕೆ? ವಂಗದೇಶದ ದಿವಾನನು ಮಾಡುವ ಕೆಲಸ ಕಾರ್ಯಗಳ ಭಾರವು ಗುರುತರವಾದುದೇನೋ ಅಹುದು; ಆದರೆ ದೇಶದ ಸುಶಾಸನವನ್ನೂ ಪ್ರಜೆಗಳ ಕ್ಷೇಮವನ್ನೂ ಉದ್ದೇಶವುಳ್ಳುದುದಾಗಿರುವ ಕೆಲಸ ಕಾರ್ಯಗಳನ್ನು ರಾತ್ರಿ ಎರಡನೆಯ ಜಾವದಲ್ಲಿ ಮನೆಯ ಬಾಗಿಲನ್ನು ಹಾಕಿಕೊಂಡು ಗೂಢಚಾರರೊಡನೆ ಏಕಾಂತವಾಗಿ ಆಲೋಚಿಸಿ ನಡೆಯಿಸಬೇಕಾದುದು ಆವಶ್ಯಕವೆ? ಏನನ್ನೂ ಅರಿಯದ

ಬಾಲೆಯಾದ ನಾನು ಅವುಗಳೆಲ್ಲಾ ವಿಚಾರಮಾಡಿ ಚರ್ಚಿಸುವುದುಚಿತವಲ್ಲ; ನನ್ನ ಅಪರಾಧವನ್ನು ಕ್ಷಮಿಸಬೇಕು; ನೀನು ವಿವೇಕಿ ಮತ್ತು ವಿಚಕ್ಷಣನು; ಯೋಚಿಸಿನೋಡು; ಖಲಸ್ವಭಾವವುಳ್ಳ ಸರ್ಪದ ಗತಿಯು ವಕ್ರವಾಗಿರುವುದು; ಉದಾರಚಿತ್ತವುಳ್ಳವರ ಗತಿಯು ಸರಳವಾಗಿರುವುದು; ಸರಳಚರಿತ್ರೆಯುಳ್ಳವರ ಗತಿಯೂ ಸದುದ್ದೇಶವುಳ್ಳವರ ಗತಿಯೂ ವಕ್ರವಾಗಿರಲೇಕೆ? ಬಾಲೆಯ ಮಾತಿಗೆ ಗಮನವಂ ಕೊಡು; ಕಪಟಾಚಾರಿಗಳ ದುರಾಲೋಚನೆಗೊಳಪಡಬೇಡ; ಸರಳ ಮಾರ್ಗವಾದ ಧರ್ಮ ಮಾರ್ಗವನ್ನವಲಂಬಿಸುವ ಹಾಗೆ ಮಾಡಿದರೆ ಆರಿಗೂ ಭಯ ಪಡಬೇಕಾದ ಆವಶ್ಯಕವಿಲ್ಲ; ಮತ್ತಾವ ಚಿಂತೆಯೂ ಇರದು. ಪಾಪಮಾರ್ಗದಲ್ಲಾವಾಗಲು ಭಯ; ಧರ್ಮ ಮಾರ್ಗವು ನಿರಾಪದವಾಗಿಯೂ ನಿಷ್ಕಂಟಕವಾಗಿಯೂ ಇರುವುದು.

ಈ ಪ್ರಕಾರ ಹೇಳುತ್ತಿದ್ದ ಹಾಗೆ ವಿಮಲೆಯ ಉದಾರ ಲಲಾಟವೂ ವದನ ಮಂಡಲವೂ ಹೆಚ್ಚು ಉದ್ದೀಪ್ತವಾಗುತ್ತ ಬಂದುವು. ಅವಳಾ ಉಜ್ವಲವಾದ ಕಣ್ಣುಗಳು ಉಜ್ವಲತರವಾದ ಝಳತ್ಕಾರದಿಂದ ಝಳಪಿಸುತ್ತಿದ್ದುವು. ವಿಮಲೆಯು ಪಿತೃವತ್ಸಲೆಯಾದ ಮಗಳು. ಆದರೂ ಅವಳ ಹೃದಯದಲ್ಲಿ ನೈಸರ್ಗಿಕವಾದ ಗೌರವವೂ ಧರ್ಮ ಬಲವೂ ತುಂಬಿದ್ದುವು. ಅಂತಹ ಗೌರವವು ಹೊರಗೆ ಪ್ರಕಟವಾದರೆ, ಅದರೆದುರಿಗೆ, ಜನಾಕೀರ್ಣವಾದ ಮಹಾರಾಜ ಸಭೆಯಲ್ಲಿ ವಾಕ್ಚತುರನಾಗಿ ವಾಗ್ವೈಖರಿಯಿಂದ ತನ್ನ ಸಭಾ ಪಾಂಡಿತ್ಯವನ್ನು ತೋರಿ, ವಾಕ್ಚಾತುರ್ಯವಾದ ಭಾಷಣಕ್ಕೆ ಸಲುವಾಗಿ ಪ್ರಶಂಸಾಭಾಜನನಾಗಿದ್ದವನು ಹದಿನೇಳು ವರ್ಷದಾ ಹುಡುಗಿಯ ಮಾತಿಗೆ ನಿಬ್ಬೆರಗಾಗಿ ನಿರುತ್ತರವಾಗಿ ನಿಂತಿರುವನು.

"ಪಾಪ ಮಾರ್ಗದಲ್ಲಾವಾಗಲೂ ಭಯ, ಧರ್ಮ ಮಾರ್ಗವು ನಿರಾಪದವಾಗಿಯೂ ನಿಷ್ಕಂಟಕವಾಗಿಯೂ ಇರುವುದು" ಎಂದು ಹುಡುಗಿಯು ಹೇಳಿದ ಮಾತುಗಳನ್ನು ಪುನರುಕ್ತಿಯಾಗಿ ಅಸ್ಫುಟ ಸ್ವರದಿಂದ ಹೇಳಿಕೊಳ್ಳುತ್ತ ಸತೀಶನು ಕೊಠಡಿಯಿಂದ ಹೊರಗೆ ಹೊರಟುಹೋದನು.

———

# ಏಳನೆಯ ಪರಿಚ್ಛೇದ

Try what repentance can : What can it not ?
Yet what can it when one cannot repent ?
O wretched state! O bosom black as death !
O limed soul that struggling to be free,
Art more engaged. Help angels, make assay!
Bow stubborn knees ! and hearts with strings of steel,
Be soft as sinews of the new born babe,
All may be well. *Shakespeare.*

ಸತೀಶಚಂದ್ರನು ಹೊರಗೆ ಬಂದು ತನ್ನ ಚಿಕ್ಕಮನೆಗೆ ಹೋದನು. ಸೇವಕನು ಪ್ರಭುವಿನ ಸೇವೆಗೆ ಸಲುವಾಗಿ ಬಂದನು. ಸತೀಶನು ಅವನನ್ನು ಮುಷ್ಟಿಯಿಂದ ಹೊಡೆದು, ಶಕುನಿಯನ್ನು ಕರೆತರುವಂತೆ ಅಪ್ಪಣೆಯಂ ಮಾಡಿದನು. ಆಳು ಬೇಗನೆ ಹೊರಟುಹೋದನು.

ಹೊರಗಣ ಚಿಕ್ಕಮನೆಯು ಪ್ರಶಸ್ತವಾಗಿ ಅತಿಸುಂದರವಾಗಿ ಅಲಂಕರಿಸಲ್ಪಟ್ಟಿದ್ದಿತು; ನೆಲದಮೇಲೆ ಮನೋಹರವಾದ ಚಿತ್ರಗಳಿಂದ ಶೋಭಿತವಾದ ಬಟ್ಟೆಗಳು ಹಾಸಲ್ಪಟ್ಟಿದ್ದುವು; ಬಾಗಿಲಗಳಲ್ಲಿಯೂ ಗವಾಕ್ಷಗಳಲ್ಲಿಯೂ ಹೂವಿನ ಮಾಲೆಗಳು ತೂಗುಹಾಕಲ್ಪಟ್ಟಿದ್ದುವು; ಅಲ್ಲಲ್ಲಿ ಹೂವು ಸ್ತೂಪಾಕಾರವಾಗಿ ರಾಶಿಮಾಡಲ್ಪಟ್ಟಿದ್ದಿತು; ದೀಪಗಳಿಗೆ ನಾಲ್ಕು ಕಡೆಯಲ್ಲಿಯೂ ಅಲಜೋರಂಪುಗಳನ್ನು ತೂಗುಹಾಕಿದ್ದಿತು. ಸತೀಶಚಂದ್ರನು ಕುಳಿತುಕೊಳ್ಳುವ ಸ್ಥಳವು ಬಿಳಿಯುಳ್ಳ ಬಟ್ಟೆಗಳಿಂದಲಂಕೃತವಾಗಿದ್ದಿತು. ಅಂತಹ ಸುಂದರವಾದ ಕೊಠಡಿಯಲ್ಲಿ ಅಂತಹ ಮಹಾರ್ಘ ಆಲವರ್ಗಸೆಯಲ್ಲಿ ಕುಳಿತು ಮಹಾಬಲ ಪರಾಕ್ರಮಶಾಲಿಯಾಗಿ ಮಹಾ ಧನಸಂಪನ್ನನಾಗಿ ರಾಜಾಧಿರಾಜ ದಿವಾನನಾಗಿದ್ದಾ ಸತೀಶಚಂದ್ರನು ಮುಖವು ಕಂದಿದವನಾಗಿರಲೇಕೆ ?

ಪಾಠಕಮಹಾಶಯರು ನಮ್ಮಂತೆ ದರಿದ್ರರಾಗಿದ್ದರೆ, ಈರ್ಷಾಪರವಶರಾಗಿ ಅವರಾವಾಗಲಾದರೂ "ವಿಷಯಿ" ಜನರ ವಿಷಯವನ್ನು ನೋಡಿದ್ದರೆ, ಅವರಾವಾಗಲಾದರೂ ಬೀದಿಯಲ್ಲಿ ಹೋಗುತ್ತ ಹಾದಿಯಲ್ಲಿ ನಿಂತು ದೊಡ್ಡ ಮನುಷ್ಯರ ಬೈಠಕ್ಕು ಖಾನೆಯಲ್ಲಿ ನೇತಾಡುವ ಕಾಚಬಳ್ಳಿಗಳನ್ನೂ ದೀಪಗಳನ್ನೂ ಸತೃಷ್ಣನಯನಗಳಿಂದ ಇಣಿಕಿ ನೋಡಿದ್ದರೆ, ಅರ್ಥಕ್ಕೆ ಆವಾಸಸ್ಥಾನವೇ ಸುಖಕ್ಕೆ ಆವಾಸಸ್ಥಾನವೆಂದು ತಿಳಿದುಕೊಂಡಿದ್ದರೆ, ನಮ್ಮ ಸಂಗಡ ಬಂದು ಲಕ್ಷಪತಿಯಾಗಿದ್ದಾ ಸತೀಶಚಂದ್ರನನ್ನು ನೋಡಿ ಮನಸ್ಸನ್ನು ಶಾಂತಮಾಡಿಕೊಳ್ಳೋಣಾಗಲಿ, ಲೋಭವನ್ನು ದೂರಮಾಡೋಣಾಗಲಿ.

ಸತೀಶಚಂದ್ರನ ಹೃದಯವು ಪಾಪದಿಂದ ಕಲುಷಿತವಾಗಿ ಪಾಪಾಂಧಕಾರದಿಂದಾವೃತವಾಗಿದ್ದಿತು. ಆ ಪಾಪರಾಶಿಯ ಮಧ್ಯದಲ್ಲೊಂದು ಮಾತ್ರ ಪುಣ್ಯದ ರೇಖೆಯು ಕಾಣುತ್ತಿದ್ದಿತು—ವಿಮಲೆಯಲ್ಲಿ ಅವನಿಗಿದ್ದ ನಿರ್ಮಲವಾದ ಅಪತ್ಯ

ಸ್ನೇಹವು ನಿರಿವಿಣಾಲಲ್ಲೊಂದು ನರಿಕರೂಡಲಿದ್ದಂತೆ ಆ ಪಾಪಾಂಧಕಾರದ ಮಧ್ಯದಲ್ಲಿ ರೇಖಾಕಾರವಾಗಿ ಕಾಣುತಿದ್ದಿತು. ಮಗಳನ್ನು ಅತ್ಯಂತವಾಗಿ ಪ್ರೀತಿಸುತಿದ್ದನು; ಬಹಳ ಮಮತೆಯಿಂದ ಲಾಲನಪಾಲನೆ ಮಾಡುತ್ತಿದ್ದನು. ಹೆಂಡತಿಯು ಹೋದ ಬಳಿಕ ಮಗಳನ್ನು ಸ್ನೇಹಿತೆಯಂತೆ ನೋಡುತ್ತ ಕೆಲಸ ಕಾರ್ಯಗಳನ್ನು ಮಾಡುವುದರಲ್ಲಿ ಅವಳೊಡನೆ ಆಲೋಚಿಸಿ ಮಾಡುವನು. ಅದುಕಾರಣ ಮಗಳು ಆಗಿಂದಾಗ ಸ್ನೇಹಿತೆಯಂತೆ ಬುದ್ಧಿವಾದಗಳನ್ನು ಹೇಳುತಿದ್ದಳು. ವಿಮಲೆಯು ತಂದೆಯಲ್ಲಿ ಹೆಚ್ಚು ವಿಶ್ವಾಸವುಳ್ಳವಳಾಗಿದ್ದರೂ ಉನ್ನತ ಚರಿತ್ರೆಯುಳ್ಳವಳಾಗಿಯೂ ಧರ್ಮಪರಾಯಣೆಯಾಗಿಯೂ ಮಾನಿನಿಯಾಗಿಯೂ ಇದ್ದಳು. ತಂದೆಯ ಕಪಟಾಚರಣೆಯನ್ನು ಕಂಡಾಗ ಅತ್ಯಂತ ಕಷ್ಟಬ್ದೆಯಾಗಿ ಮನಗುಂದಿದವಳಾಗುವಳು. ಬೆಳಕಿನಲ್ಲಿ ಕತ್ತಲೆಯು ಲೀನವಾಗುವುದು; ಸತ್ಯದೆದುರಿಗೂ ಸರಳತೆಯೆದುರಿಗೂ ಪಾಪವೂ ಕಾಪಟ್ಯವೂ ಸ್ವಭಾವಸಿದ್ಧವಾದ ಭೀತಿಗೊಳ್ಳುವುವು. ವಿಮಲೆಯೆದುರಿಗೆ ಸತೀಶಚಂದ್ರನು ನಿರುತ್ತರನಾಗಿರುವನು. ಸತೀಶಚಂದ್ರನ ಚರಿತ್ರೆಯು ಎಷ್ಟರಮಟ್ಟಿಗೆ ಕಳಂಕಿತವಾಗಿದ್ದಿತೋ ಅದನ್ನು ವಿಮಲೆಯು ಅರಿಯಳು. ಭಕ್ತಿಗೆ ಪಾತ್ರನಾಗಿದ್ದ ತಂದೆಯ ಚರಿತ್ರೆಯು ಹೆಚ್ಚು ಪಾಪಾಸಕ್ತವಾಗಿರುವುದೆಂಬ ಭಾವನೆಯು ನಿರ್ಮಲವಾದವಳ ಅಂತಃಕರಣದಲ್ಲಿ ಒತ್ತಡವೆಯೂದರೂ ಹುಟ್ಟದು. ಆದರೂ ತಂದೆಯ ನೂತನ ಆಚರಣೆಗಳನ್ನೂ ವ್ಯವಹಾರಗಳನ್ನೂ ನೋಡಿ ಅವಳ ಮನಸ್ಸು ಸಂದೇಹದಿಂದ ಬಳಕುತಿದ್ದಿತು.

ಒಂದೊಂದು ಕಾಲದಲ್ಲಿ, ಒಂದು ಘಟನೆಯಾಗಲೀ ಒಂದು ಮಾತಾಗಲೀ ಒಂದು ಸಹವಾಸವಾಗಲೀ ಒಮ್ಮಿಂದೊಮ್ಮೆ ನಮ್ಮ ಹೃದಯದ ಕವಾಟವನ್ನು ತೆರೆದು ಚಿಂತೆಯ ತರಂಗವು ಬಂದು ಸಮುದ್ರದ ಅಲೆಗಳಂತೆ ಹೃದಯವನ್ನು ಮುಳುಗಿಸುವುದು. ಮರೆತುಹೋಗಿದ್ದ ಬಹುಕಾಲದ ಮಾತು ನೆನಪಿಗೆ ಬರುವುದು. ಸ್ನೇಹಮಯಿಯಾದ ಮಗಳ ಸ್ನೇಹಪೂರ್ವಕವಾದ ತಿರಸ್ಕಾರದ ವಚನಗಳಿಂದ ಆ ಪ್ರಕಾರವಾದಂತಿದೆ. ಹೃದಯಕಂದರದಲ್ಲಿ ವ್ಯಥೆಯುಂಟಾಯಿತು. ಸಹಸ್ರಾರು ಚಿಂತೆಗಳು ನೂಕಿ ಹೊರಟುವು. ಪೂರ್ವವೃತ್ತಾಂತಗಳು ಸ್ಮರಣೆಗೆ ಬಂದುವು. ಶೈಶವಕಾಲದಲ್ಲಿ ಆಡಿದ ಆಟಗಳೂ ಬಾಲ್ಯಕಾಲದಲ್ಲಿ ಮಾಡಿದ ಅಧ್ಯಯನವೂ ಸ್ಮರಣೆಗೆ ಬಂದುವು. ಆವ ವಿದ್ಯಾಲಾಭವು ಅವನ ವಿಚಾರದಲ್ಲಿ ವಿಷಮಯವಾದ ಫಲವನ್ನು ಧಾರಣೆಯಂ ಮಾಡಿತೋ ಅಂತಹ ವಿದ್ಯಾಲಾಭಕ್ಕೆ ಆರಂಭವಾದುದು ಮನದಲ್ಲಿ ಜಾಗರಿತವಾಗುತಬಂದಿತು. ಸಮವಯಸ್ಕರಾದ ಸಹಪಾಠಿಗಳೊಂದಿಗೆ ಅಧ್ಯಯನಮಾಡುವುದಕ್ಕೆ ಶಾಲೆಗೆ ಹೋಗಿ ಶಾಲೆಯಿಂದ ಸಹಪಾಠಿಗಳೊಂದಿಗೆ ಬಂದು ನಿಷ್ಪಾಪವಾಗಿಯೂ ನಿಶ್ಚಿಂತವಾಗಿಯೂ ಇದ್ದ ಚಿತ್ತದಿಂದ ಹಾಸ್ಯ ಪರಿಹಾಸ್ಯವನ್ನು ಮಾಡುತ್ತ ಆಡುತಿದ್ದನು. ಅವು ಸ್ಮರಣೆಗೆ ಬಂದಾಗವನು ವಂಗದೇಶದಲ್ಲೊಬ್ಬ ಪ್ರಧಾನ ಮನುಷ್ಯನಾಗಿದ್ದನು. ಲಕ್ಷ ಲಕ್ಷ ದ್ರವ್ಯಕ್ಕೆ ಅಧಿಪತಿ

ಯಾಗಿದ್ದನು ; ಆ ಲಕ್ಷ ಲಕ್ಷ ದ್ರವ್ಯವನ್ನು ವೆಚ್ಚವಮಾಡಿದರೆ ಒಂದು ಮುಹೂರ್ತ ಕಾಲದವರೆಗಾದರೂ ಆಗಣ ನಿಶ್ಚಿಂತವಾದ ನಿಷ್ಪಾಪಚಿತ್ತವು ಹಿಂದಿರುಗಿ ಬರಲಾಪದೆ? ಬಾಲ್ಯಕಾಲವು ಕಳೆದುಹೋಗಿ ಯೌವನಕಾಲವು ಪ್ರಾಪ್ತವಾಯಿತು. ಯೌವನಕಾಲವು ನೆಸವಿಗೆ ಬಂದಾಗ ಆ ಕಾಲವು ಗಭೀರವಾದ ಪಾಪರೇಖೆಯಿಂದ ಅಂಕಿತವಾಗಿದ್ದಿತು. ವಿದ್ಯೆಯ ದರ್ಪ, ಅದರಮೇಲೆ ಧನದ ದರ್ಪ, ಅದರಮೇಲೆ ದುರ್ಧರ್ಷವಾದ ಪ್ರಬಲ ಉಚ್ಚಾಭಿಲಾಷೆ! ಅವನ ಪಕ್ಷದಲ್ಲಿ ಪ್ರಬಲವಾದಾ ಉಚ್ಚಾಭಿಲಾಷೆಯೇ ಭಯಂಕರವಾದ ವಿಷಮಯಫಲಕ್ಕೆ ಕಾರಣವಾಯಿತು.

ಬಳಿಕ, ಪ್ರಜಾರಂಜಕನಾಗಿಯೂ ಮಹಾನುಭಾವನಾಗಿಯೂ ವೀರಪುರುಷನಾಗಿಯೂ ಇದ್ದ ಸಮರಸಿಂಹನ ವಿಚಾರವು ಸತೀಶನ ಪಾಮರ ಹೃದಯದಲ್ಲಿ ಉದಯವಾಯಿತು. ವಂಗದೇಶಕ್ಕೆ ಗೌರವಕ್ಕೆ ಸ್ತಂಭಸ್ವರೂಪನಾಗಿಯೂ ಪ್ರಜೆಗಳಿಗೆ ಪಿತನಸ್ವರೂಪನಾಗಿಯೂ ಜಮೀನುದಾರರಿಗೆ ಜ್ಯೇಷ್ಠಭ್ರಾತಸ್ವರೂಪನಾಗಿಯೂ ಕಾಯಸ್ಥಕುಲಕ್ಕೆ ತಿಲಕದಂತೆ ನಾಯಕಸ್ವರೂಪನಾಗಿಯೂ ಇದ್ದ ಮಹಾತ್ಮನಾದಾ ಸಮರಸಿಂಹನ ಪ್ರಾಣವನ್ನು ಸತೀಶಚಂದ್ರನು ಸಂಹಾರ ಮಾಡಿದನು! ಸಮರಸಿಂಹನ ರಕ್ತಮಯವಾದ ಛಿನ್ನಮಸ್ತಕವು ಅವನ ಸ್ಮರಣೆಗೆ ಬಂದಿತು. ಸತೀಶಚಂದ್ರನು ನಡುಗಿದನು. ರಕ್ತಮಯವಾದಾ ಛಿನ್ನಮಸ್ತಕವು ವಿಕೃತಿಯನ್ನು ತಾಳಿ ತೀವ್ರದೃಷ್ಟಿಯಿಂದ ಸತೀಶಚಂದ್ರನನ್ನು ನೋಡುತ್ತ "ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತಕ್ಕೆ ವಿಳಂಬವಿಲ್ಲ" ಎಂದು ಹೇಳುತ್ತಿದ್ದಂತೆ ಕಾಣುತಿತ್ತು. ಸತೀಶನು ಕಣ್ತೆರೆದು ಮುಂದೆ ನೋಡಲಾರದೆ ಹೋದನು. ದೀಪವನ್ನು ನೊಂದಿಸಿದನು. ಎಲೈ, ಮೂರ್ಖ! ಸ್ಮೃತಿದೀಪವು ಅಷ್ಟು ಬೇಗನೆ ನೊಂದಿಹೋಗದು.

ಸತೀಶಚಂದ್ರನು ಘೋರಾಂಧಕಾರದಲ್ಲಿ ಕುಳಿತುಕೊಂಡು ಯೋಚಿಸುತಿದ್ದುದೇನು? ಆ ಚಿಂತೆಯನ್ನನುಭವಿಸುವುದಾರಿಗೆ ಸಾಧ್ಯ? ಆ ಚಿಂತೆಯು ಸಹಸ್ರಾರು ವೃಶ್ಚಿಕದಂಶನಕ್ಕಿಂತ ಹೆಚ್ಚು ಕ್ಲೇಶದಾಯಕವಾದುದು. ಸತೀಶನು ಯಾತನೆಯಿಂದ ಅಸ್ಥಿರನಾಗಿ ತನ್ನೊಳುತಾನೇ ಹೀಗೆಂದು ಹೇಳಿಕೊಂಡನು—"ಆ ಪಾಪಕ್ಕೆ ಪ್ರಾಯಶ್ಚಿತ್ತವಿಲ್ಲವೆ? ಹಾಗೆ ಪ್ರಾಯಶ್ಚಿತ್ತವಿದ್ದರೆ ನನ್ನ ಹೃದಯದ ರಕ್ತವನ್ನಾದರೂ ಚೆಲ್ಲಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವೆನು. ಭಗವಂತ! ನೀನು ಸಹಾಯವನ್ನು ಮಾಡು. ಈಗ, ಇನ್ನು ಮುಂದೆ, ಹುಡುಗಿಯ ಬುದ್ಧಿವಾದದಂತೆ ಕೆಲಸವನ್ನು ಮಾಡುವೆನು. ಧರ್ಮಮಾರ್ಗದಲ್ಲಿ ನಡೆಯಲು ಪ್ರಯತ್ನಪಡುವೆನು. ನಿಜವನ್ನೊಪ್ಪಿಕೊಳ್ಳುವೆನು. ಕ್ಷಮೆಯನ್ನು ಬೇಡುವೆನು. ಕ್ಷಮೆಯನ್ನು ಮಾಡದಿದ್ದರೆ ಅಕಿಂಚಿತ್ಕರನಾದೆನ್ನ ರಕ್ತದಿಂದ ಸಮರಸಿಂಹನ ರಕ್ತಪ್ರವಾಹವನ್ನು ವೃದ್ಧಿಗೊಳಿಸುವೆನು."

ಹೀಗೆಂದು ಹೇಳಿಕೊಳ್ಳುತ್ತಿದ್ದ ಉತ್ತರಕ್ಷಣದಲ್ಲಿಯೇ ಶಕುನಿಯು ಕೂಕಿಡಿ

ಯೊಳಗೆ ಪ್ರವೇಶಿಸಿದನು. ಒಳಗೆ ಬಂದವನು, "ಇದೇನು? ಕತ್ತಲೆಯಲ್ಲಿ ಒಬ್ಬರೇ ಕುಳಿತಿರೋಣಾಗಿದೆ?" ಎಂದನು.

ಸತೀಶನು ಅತಿಶಯ ಗಂಭೀರಸ್ವರದಿಂದ, "ಬೆಳಕನ್ನು ಸಹಿಸಲಾರೆನು, ಹೃದಯವು ದುರ್ಭೇದ್ಯವಾದ ಅಂಧಕಾರದಿಂದ ವ್ಯಾಪ್ತವಾಗಿದೆ, ನನ್ನ ಜೀವನಾಲೋಕವು ಅನಂತವಾದ ಅಂಧಕಾರದೊಂದಿಗೆ ಶೀಘ್ರವಾಗಿ ಸೇರಿಹೋಗುವುದು. ನನ್ನ ಮಾನವ ಲೀಲೆಯು ಸಾಂಗವಾಗುತ ಬಂದಿದೆ" ಎಂದು ಹೇಳಿದನು.

ಶಕುನಿಯು ಅದಕ್ಕೆ ಉತ್ತರವನ್ನು ಕೊಡಲಾರದವನಾಗಿ ಭೃತ್ಯನನ್ನು ಕರೆದು ದೀಪವನ್ನು ಹಚ್ಚಿಸುವಂತೆ ಹೇಳಿದನು. ಭೃತ್ಯನು ದೀಪವನ್ನು ಹಚ್ಚಿ ಹೊರಟು ಹೋದನು.

ಸತೀಶ—(ಪುನಃ) ಶಕುನಿ! ನಿನ್ನ ಮಾತನ್ನು ಕೇಳಿ ನಾನು ಇಷ್ಟು ದೂರ ಕೆಲಸವನ್ನು ಮಾಡಿದೆನು, ಫಲವೇನಾಯಿತು, ನೋಡಿದೆಯಾ? ನನಗೆ ಪರಕಾಲವು ಅಂದಿಗೇವೇ ಹೋಗಿ ಇಹದಲ್ಲೀಗ ಸರ್ವನಾಶಕ್ಕೆ ಕಾರಣವಾಯಿತು. ಈ ಪಾಪರಾಶಿಯಲ್ಲಿ, ಈ ವಿಪತ್ತಿನಲ್ಲಿ ನನ್ನನ್ನು ಹಾಕಿದವನು ನೀನು—ನಿನ್ನಿಂದುಳಿದಿರುವುದು ಮತ್ತಾವುದು? ನನ್ನನ್ನು ಬಿಟ್ಟುಹೋಗಿ ಮತ್ತಾರಾದರೂ ಉನ್ನತಶೀಲರಾದ ಮಹಾನುಭಾವರನ್ನು ಹಾಳುಮಾಡುವುದಕ್ಕೆ ಪ್ರಯತ್ನಪಡು. ನಾನೀಗ ಮಾಡಿರುವ ಘೋರವಾದ ಪಾಪಕ್ಕೆ ಪ್ರಾಯಶ್ಚಿತ್ತವೇನಾದರೂ ಇದ್ದರೆ, ಅದರಲ್ಲಿ ಪ್ರವೃತ್ತನಾಗುವೆನು.

ಶಕುನಿಯು ಪ್ರಭುವಿನ ಗಂಭೀರ ಸ್ವರವನ್ನು ಕೇಳಿ ಚಮಕಿತನಾಗಿ ಪ್ರಭುವಿನ ಹೃದಯದಲ್ಲಿ ಹುಟ್ಟಿದ್ದ ಕ್ರೋಧವೂ ಕ್ಷೋಭೆಯೂ ಸಾಮಾನ್ಯವಾದುದಲ್ಲವೆಂದು ತಿಳಿದುಕೊಂಡು ಕಪಟವಾದ ನಾಲ್ಕಾರು ಕಂಬನಿಗಳನ್ನು ತೋರಿ, "ಪ್ರಭುಗಳ ಉಚ್ಚವಾದ ಗೌರವದ ಕಾಲದಲ್ಲಿ ಅವರ ಪ್ರೀತಿಗೆ ಪಾತ್ರನಾಗಬೇಕೆಂಬ ಅಭಿಲಾಷೆಯು ಹೊರತು ಬೇರೆ ಅಭಿಲಾಷೆಯನ್ನುಳ್ಳವನಾಗಿರಲಿಲ್ಲ. ಈಗ ನಿಜವಾಗಿಯೂ ಸರ್ವನಾಶ ಸಂಭವಿಸುವುದಾದರೆ ಪ್ರಭುಗಳಿಗೆ ಸಂಭವಿಸುವ ಸರ್ವನಾಶದಲ್ಲಿ ನಾನೂ ಭಾಗಿಯಾಗಬೇಕೆಂಬ ಆಶೆಯು ಹೊರತು ಬೇರೆ ಮತ್ತಾವ ಆಶೆಯೂ ಇಲ್ಲ" ಎಂದನು.

ಸತೀಶ—ಶಕುನಿ! ನಿನ್ನ ಮಾತು ಬಹಳ ಇಂಪಾದುದು. ವಿಧಾತನು ವಿಷಪಾತ್ರೆಯನ್ನು ಹಾಲಿನಿಂದ ಮುಚ್ಚಿದನೇಕೋ ಗೊತ್ತಾಗುವುದಿಲ್ಲ.

ಶಕುನಿ—ನಾನು ಪಾಪಿಷ್ಠನೇನೋ ಅಹುದು. ಹಾಗಿಲ್ಲದಿದ್ದರೆ, ಪ್ರಭುಭಕ್ತಿಗೆ ಇಂತಹ ಫಲವು ಫಲಿಸಲೇಕೆ?

ಹೀಗೆಂದು ಹೇಳಿ ಶಕುನಿಯು ನಾಲ್ಕಾರು ಕಂಬನಿಗಳನ್ನು ಹೊರಪಡಿಸಿದನು. ಸತೀಶಚಂದ್ರನು ಅದನ್ನು ನೋಡಿ ಸ್ವಲ್ಪ ಮುಗ್ಧನಾಗಿ, "ನೀನೆನಗೆ ಮೇಲುಂಟುಮಾಡಲು ಪ್ರಯತ್ನಪಡುವುದನ್ನು ಬಲ್ಲೆನು. ಆದರೆ ಪಾಪಮಾರ್ಗ

ದಲ್ಲಿ ಸರ್ವದಾ ವಿಪತ್ತುಂಟು. ಶಕುನಿ! ಅದನ್ನು ಬಿಟ್ಟು ಉನ್ನತಿಗೆ ಬೇರೇ ಮಾರ್ಗವಿರಲಿಲ್ಲವೆ?'' ಎಂದು ಹೇಳಿದನು.

ಶಕುನಿಯು ತನ್ನ ಕಂಬನಿಗಳು ಕೇವಲ ನಿರರ್ಥಕವಾಗಲಿಲ್ಲವೆಂದು ತಿಳಿದವನಾಗಿ, ''ಪ್ರಭುಭಕ್ತಿಯು ಪಾಪವೆಂದಾದರೆ ನಾನು ಪಾಪಿಷ್ಠನೇ ಅಹುದು. ಅದು ಹೊರತು ಬೇರೆ ಪಾಪವಾವುದೋ ಅದನ್ನು ನಾನರಿಯೆನು'' ಎಂದನು.

ಸತೀಶ—ಅರಿತಿರಲಾರೆ—ವಂಗಚೂಡಾಮಣಿಯಾಗಿದ್ದ ರಾಜಾ ಸಮರ ಸಿಂಹನನ್ನು ವಿನಾಶಮಾಡುವುದಕ್ಕೆ ಆಲೋಚನೆಯನ್ನು ಕೊಟ್ಟವರಾರು?

ಶಕುನಿ—ರಾಜಾಜ್ಞೆಯಿಂದ ಅವನಿಗೆ ದಂಡನೆಯಾಯಿತು.

ಸತೀಶ—ಒಳ್ಳೆಯದು—ಅವನ ಜಮೀನುದಾರಿಯು ಈಗಾರವಶದಲ್ಲಿದೆ?

ಶಕುನಿ—ಸುಭಾದಾರನು ಮಮತೆಯಿಂದಾವುದನ್ನು ಕೊಟ್ಟರೂ ಅದು ಶಿರೋಧಾರ್ಯವಾದುದು.

ಸತೀಶ—ಶಕುನಿ! ಸಾಕು. ನನ್ನನ್ನು ಹೆಚ್ಚು ಪುಸಲಾಯಿಸಿ ಮರುಳುಗೊಳಿಸಬೇಡ. ನನ್ನ ಜ್ಞಾನಚಕ್ಷುಗಳು ತೆರೆದಿವೆ. ಅದರಿಂದ ನನ್ನ ಹೃದಯದಲ್ಲಣ ಘೋರಾಂಧಕಾರವನ್ನೂ ಪಾಪರಾಶಿಯನ್ನೂ ನೋಡಿ ತಿಳಿದುಕೊಳ್ಳಬಲ್ಲೆನು. ಅದನ್ನು ನೋಡಿ ಹೆಚ್ಚು ತಡೆಯಲಾರದವನಾಗಿದ್ದೇನೆ. ಇಂದು ನನ್ನ ಹುಡುಗಿಯಿಂದ ಉಪದೇಶವನ್ನು ಹೊಂದಿದ್ದೇನೆ.

ಹೀಗೆಂದು ಹೇಳಿ ವಿಮಲೆಯೊಡನೆ ನಡೆದ ಸಂಭಾಷಣೆಯನ್ನು ವಿವರವಾಗಿ ತಿಳಿಯಹೇಳಿದನು.

ಶಕುನಿ—ವಂಗದೇಶದ ರಾಜಾಧಿರಾಜ ದಿವಾನನು ಒಬ್ಬ ಹುಡುಗಿಯ ಮಾತಿನಿಂದ ಭೀತಿಪಡುವುದು ಯುಕ್ತಿಸಿದ್ಧವೆ?

ಸತೀಶ—ಹುಡುಗಿಯು ಸತ್ಯವಾದುದನ್ನು ನುಡಿದರೆ, ಹುಡುಗಿಯ ಬಾಯಿಂದ ಹೊರಟುದುದೆಂದು ಪರಿಹಾರ್ಯವಾದುದಾಗುವುದಿಲ್ಲ. ಪಾಪಮಾರ್ಗದಲ್ಲಿ ಸರ್ವದಾ ವಿಪತ್ತು ಎಂಬುದನ್ನು ಇಷ್ಟುಕಾಲವಾದ ಬಳಿಕ ತಿಳಿದೆನು.

ಶಕುನಿ—ಅಪ್ಪಣೆಯಾದರೆ ಕೇಳುವೆನು,—ತಮಗೆ ಬಂದಿರುವ ಆಪತ್ತಾವುದೋ ಅದನ್ನು ಅರಿಯದವನಾಗಿದ್ದೇನೆ.

ಸತೀಶ—ಈಗ್ಗೆ ಆರುವರ್ಷಕ್ಕೆ ಹಿಂದೆ ರಾಜಾ ಟೋಡರಮಲ್ಲನು ಮೊದಲನೆಯ ತಡವೆ ಬಂದು ವಂಗವಿಹಾರ ದೇಶಗಳನ್ನು ಜಯಿಸಿ ದಿಲ್ಲೀಗೆ ಹಿಂದಿರುಗಿ ಹೊರಟುಹೋದ ಸ್ವಲ್ಪಕಾಲದಲ್ಲೇ ಪುಣ್ಯಾತ್ಮನಾಗಿದ್ದಾ ಸಮರಸಿಂಹನು ಹತನಾದುದು ನನ್ನ ಕೈಯಿಂದಲ್ಲವೆ? ಅಕೃತ್ಯವನ್ನು ಮಾಡಿಸಲು ಪ್ರೇರಕನು ನೀನಲ್ಲವೆ?

ಶಕುನಿ—ದಿಲ್ಲೀಶ್ವರನಿಗೆ ಅಧೀನನಾದ ವಂಗವಿಹಾರ ದೇಶಗಳ ಸೇನಾಪತಿಯಾದ ಮನಾಯಿಂಖಾನನ ಅಪ್ಪಣೆಯ ಪ್ರಕಾರ ಸಮರಸಿಂಹನು ದಂಡಿಸಲ್ಪಟ್ಟನು.

ಸತೀಶ—ನಿಜ, ಆದರೆ ಅದು ನಮ್ಮ ಪಾಪಕೃತ್ಯವಾದ ಒಳಸಂಚುಗಳಿಂದ ನಡೆದುದಾಗಿದೆ. ಅದಾದ ಎರಡು ವರ್ಷಗಳ ಒಳಿಕ ರಾಜಾ ಟೋಡರಮಲ್ಲನು ವಂಗದೇಶವನ್ನು ಎರಡನೆಯಾವರ್ತಿ ಜಯಿಸಿದಾಗ ಸಮರಸಿಂಹನ ಮರಣದ ವಿಷಯದಲ್ಲಿ ಸುಳ್ಳು ಸಮಾಚಾರವನ್ನು ಹುಟ್ಟಿಸಿ ನಾವು ತಲೆತಪ್ಪಿಸಿಕೊಂಡುದುದು ಮರೆತುಹೋಯಿತಲ್ಲವೆ?

ಶಕುನಿ—ಅದರಿಂದಾದುದೇನು?

ಸತೀಶ—ಪುನಃ, ಟೋಡರಮಲ್ಲನು ಸೇನಾಪತಿಯಾಗಿಯೂ ಸುಭಾದಾರನಾಗಿಯೂ ಮಾಂಗೀರಿಗೆ ಬಂದಿದ್ದಾನೆ—ನಾವು ನಿಸ್ತಾರವಾಗುವುದು ಕಷ್ಟ.

ಶಕುನಿ—ಆವ ಕೌಶಲದಿಂದ ಆ ವಿದ್ಯಮಾನಗಳೆಲ್ಲಾ ಇದುವರೆಗೆ ಗುಪ್ತವಾಗಿದ್ದುವೋ ಆ ಕೌಶಲವೇ ಈಗಲೂ ಸಿದ್ಧವಾಗಿರುವುದು.

ಸತೀಶ—ದೂರದೃಷ್ಟಿಯುಳ್ಳ ಟೋಡರಮಲ್ಲನು ನಮ್ಮ ಕೌಶಲದಿಂದ ಪರಾಸ್ತನಾಗನು—ನೀನು ರಾಜಾ ಟೋಡರಮಲ್ಲನನ್ನು ಅರಿಯೆ.

ಶಕುನಿ—ಆದರೆ, ಅದೇ ಟೋಡರಮಲ್ಲನು ನಮ್ಮ ಕೌಶಲಗಳಿಂದ ಪರಾಸ್ತವಾಗಿದ್ದನಷ್ಟೆ!

ಸತೀಶ—ನಿಜ, ಆದರೆ ಆಗವನು ಒಂದೆರಡು ತಿಂಗಳಿದ್ದು ಹೊರಟುಹೋದನು. ಈತಡವೆ ಸುಭೇದಾರನಾಗಿ ಬಂದಿದ್ದಾನೆ. ಇಲ್ಲಿಯೇ ವಾಸವಾಗಿರುವನು. ಶಕುನಿ! ನೀನು ತಡೆಮಾಡಬೇಡ, ನಾನು ಹೋಗಿ ಆತನಲ್ಲಿ ನಡೆದ ವೃತ್ತಾಂತವನ್ನೆಲ್ಲಾ ಅರುಹಿ ಕ್ಷಮೆಯನ್ನು ಬೇಡಿಕೊಳ್ಳುವೆನು. ಆತನು ಒಂದು ತಡವೆ ಕ್ಷಮಿಸಿದ್ದಾನೆ; ಪುನಃ ಕ್ಷಮಿಸುವನು. ಅನಂತರ ನಾನೀ ಪಾಪಸಂಸಾರದಲ್ಲಿರೆನು. ಯೋಗಿಯಾಗಿ ಆ ಪಾಪಕ್ಕೆ ಪ್ರಾಯಶ್ಚಿತ್ತವಂ ಮಾಡಿಕೊಳ್ಳುವುದಕ್ಕೆ ತೊಡಗುವೆನು.

ಶಕುನಿ—ನೀವು ಮನಃಪೂರ್ವಕವಾಗಿ ಈ ಸಂಸಾರವನ್ನು ಬಿಡಲಾರಿರಿ. ರಾಜಾ ಟೋಡರಮಲ್ಲನು ತನಗೆ ಪ್ರಿಯಸ್ನೇಹಿತನಾಗಿದ್ದ ಸಮರಸಿಂಹನು ಖೂನಿಯಾದನೆಂಬ ವಿಚಾರವನ್ನು ಸರಿಯಾಗಿ ತಿಳಿಯುವವನಾದರೆ ಎಂತಹ ಆಜ್ಞೆಯನ್ನು ಮಾಡುವನೋ ಅದನ್ನು ನೀವು ತಿಳಿದಿರುವಿರಾ?

ಶಕುನಿಯ ವ್ಯಂಗೋಕ್ತಿಯಿಂದ ಸತೀಶನಿಗೆ ಮರ್ಮಾಂತಿಕ ವೇದನೆಯುಂಟಾಯಿತು. ಆದರೆ ಅವನೇನನ್ನೂ ಹೇಳದೆ, ಶಕುನಿಯು ಹೇಳುವುದೇ ಸತ್ಯವಾದುದೆಂದೂ ಒಳಸಂಚಿನ ವೃತ್ತಾಂತವು ಏಕಾಂತವಾಗಿರುವ ಸಂಭವವೆಂದೂ ಅದು ಹೊರಪಟ್ಟರೆ ತನ್ನ ಪ್ರಾಣವುಳಿಯದೆಂದೂ ತಿಳಿದುಕೊಂಡು ಬಳಿಕ ಬಹಳ ಹೊತ್ತು ಚಿಂತಿಸಿ, "ಶಕುನಿ! ನೀನು ನನಗಿಂತಲೂ ಹೆಚ್ಚು ಪಾಪಿಷ್ಠನು, ನೀನು ಪಾಪದ ಮೂರ್ತಿಯೇ ಆಗಿದ್ದರೂ ನಿನ್ನ ಆಲೋಚನೆಯ ಹೊರತು ನನಗೆ ಬೇರೇ ಗತಿಯಿಲ್ಲ; ನಿನ್ನ ಮಾತಿಗೆ ಪ್ರತ್ಯುತ್ತರವಿಲ್ಲ."

ಶಕುನಿ—ನಿಮ್ಮ ಸಂಗಡ ತರ್ಕಿಸುವ ಶಕ್ತಿಯೆನಗಿಲ್ಲ. ಆದರೆ ವಂಗದೇಶದ ದಿವಾನರಮೇಲೆ ಸುಭಾದಾರನಲ್ಲಿ ಹೋಗಿ ಫಿರ್ಯಾದನ್ನು ಮಾಡಲಾರಿಗೆ ಸಾಧ್ಯ? ಪ್ರಭುವೆ! ನನ್ನ ಮಾತನ್ನು ಕೇಳೋಣಾಗಲಿ, ಆರುವರ್ಷಕಾಲ ಗೋಪ್ಯವಾಗಿದ್ದ ಸಮಾಚಾರವು ಮುಂದೆಯೂ ಹೊರಪಡದು. ನಾನಾ ಸಮಾಚಾರವನ್ನು ಏಕಾಂತವಾಗಿಡಲಾರದೆ ಹೋದರೆ ತಮ್ಮ ಸಮ್ಮುಖದಲ್ಲಿ ಪ್ರಾಣತ್ಯಾಗವನ್ನು ಮಾಡುವೆನು.

ಆಶೆಯ ಪ್ರಭಾವವು ಅತಿ ಚಮತ್ಕಾರವಾದುದು! ಮನುಷ್ಯನಿಗೆ ಅನೇಕ ಸುಖವನ್ನೂ ಸಮಾಧಾನವನ್ನೂ ಕೊಡತಕ್ಕ ಆಶೆಯು ಅನೇಕ ದುಃಖಕ್ಕೂ ಕಾರಣವಾಗುವುದು. ಮಾನವಹೃದಯವೂ ಅತಿ ಚಮತ್ಕಾರವಾದುದು! ಅದು ಆಶೆಯ ಕುಹಕೋಕ್ತಿಗಳಿಗೊಳಗಾಗಿ ವಿಹರಿಸುತ್ತಿರುವುದು. ವಿಪತ್ತಿನ ಸಮಯದಲ್ಲೂ ಆಲಸ್ಯದ ಸಮಯದಲ್ಲೂ ದುಃಖದ ಸಮಯದಲ್ಲೂ ಹೃದಯದಲ್ಲಿ ಧರ್ಮಭಯವು ಪ್ರಬಲವಾಗಿರುವುದು. ವಿಪತ್ತನ್ನು ನೀಗಿದರೆ, ಆಲಸ್ಯವು ಹೋಗಿ ಆರೋಗ್ಯವಾದರೆ, ದುಃಖವು ಅವಸಾನವನ್ನು ಹೊಂದಿದರೆ ಧರ್ಮಭಯವು ಕ್ರಮವಾಗಿ ದೂರವಾಗುತ್ತಿರುವುದು. ಇದಕ್ಕೆ ಮೊದಲು ಸತೀಶನು ವಿಪತ್ತನ್ನು ಆಶಂಕಿಸುತ್ತಿದ್ದನು. ಅದರೊಂದಿಗೆ ಪಾಪದ ಮೇಲಣ ದ್ವೇಷವೂ ಧರ್ಮಭಯವೂ ಮನದಲ್ಲ ಜಾಗರಿತವಾಗಿದ್ದುವು. ಆಶೆಯು ಅವನ ಕಿವಿಯಲ್ಲಿ "ಭಯವಾವುದು!" "ವಿಪತ್ತೆಲ್ಲಿಯದು?" "ಸುಳ್ಳು ಭಯವೇಕೆ?" ಎಂದು ಹೇಳತೊಡಗಿತು. ಸತೀಶನು ಆ ಕುಹಕೋಕ್ತಿಗಳಿಗೆ ಕಿವಿಗೊಟ್ಟು ಮುಗ್ಧನಾಗಿ ಮನದಲ್ಲಿ, "ವಿಪತ್ತು ಬಾರದಿರುವ ಸಂಭವವೂ ಉಂಟು," ಎಂದು ಆಲೋಚಿಸುತ್ತ, ವಿಪತ್ತಿನ ಭಯವು ಅಂತರ್ಹಿತವಾಗಿ ಧರ್ಮಭಯವು ಅಳಿಸಿಹೋಯಿತು. ಮಾನವ ಹೃದಯದಲ್ಲಿ ವಿಪತ್ತಿನ ಭಯವು ಪ್ರಬಲವಾಗಿರುವಷ್ಟು ಧರ್ಮಭಯವೂ ಪ್ರಬಲವಾಗಿದ್ದರೆ ಪೃಥ್ವಿಯಲ್ಲಿ ಇಷ್ಟು ದುಃಖವಿರುತ್ತಿರಲಿಲ್ಲ.

ಸತೀಶನು ಬಹಳಹೊತ್ತು ಯೋಚಿಸಿ, ಬಳಿಕ, "ಶಕುನಿ! ನಿನ್ನಮೇಲೆ ಭರವಸಪಟ್ಟಿದ್ದೇನೆ. ಪ್ರಕೃತ ಸಮಗೀ ಕೂಡಲೆ ವಿಪತ್ತಿನ ಸಂಭವವೇನಾದರೂ ಉಂಟೆ?" ಎಂದು ಕೇಳಿದನು.

ಶಕುನಿ—(ಸಮಯವನರಿತು) ಈ ಕೂಡಲೆಯಾಗಲೀ ವಿಳಂಬದಲ್ಲಾಗಲೀ ನಮ್ಮ ಒಳಸಂಚಿನ ಸಮಾಚಾರವು ಹೊರಗಾಗುವ ಸಂಭವವಿಲ್ಲ. ಒಂದುವೇಳೆ ವಿಪತ್ತಿನ ಸಂಭವವಿದ್ದರೂ ತಮ್ಮಂತಹ ಮಹಾಪುರುಷರು ವಿಪತ್ತಿನ ಸಮಯದಲ್ಲಿ ಕಾತರರಾಗುವುದು ಯುಕ್ತಿಸಿದ್ಧವೆ? ವಂಗದೇಶದಲ್ಲಿ ತಮ್ಮ ಯಶಸ್ಸನ್ನು ಕೊಂಡಾಡದಿರುವವರಾರು? ಬ್ರಾಹ್ಮಣ ಕುಲದಲ್ಲಿ ತಮ್ಮ ಕುಲದಂತೆ ಪವಿತ್ರವಾದುದು ಮತ್ತಾರ ಕುಲವುಂಟು? ತಮ್ಮ ಶಕ್ತಿಯಂತೆ ಮತ್ತಾರಿಗೆ ಶಕ್ತಿಯುಂಟು? ತಮ್ಮಂತೆ ಮತ್ತಾರಿಗೆ ಅಧಿಕಾರವುಂಟು? ತಮಗಿಂತ ಮತ್ತಾರಿಗೆ ಹೆಚ್ಚು

ಗೌರವವುಂಟು? ಒಬ್ಬ ಹುಡುಗಿಯ ಮಾತನ್ನು ಕೇಳಿ ಸಾಹಸಗಳನ್ನೆಲ್ಲಾ ತೊರೆಯುವುದು ರಾಜಾಧಿರಾಜ ದಿವಾನಮಹಾಶಯರಿಗೆ ಉಚಿತವೆ? ತಮಗೆ ಆಲೋಚನೆಯನ್ನು ಹೇಳುವುದಕ್ಕೆನಗೆ ಶಕ್ತಿಯಿಲ್ಲ. ತಾವೇ ಆಲೋಚಿಸಿ ನೋಡಬೇಕು.

ಸತೀಶಚಂದ್ರನು ಅದಕ್ಯಾವ ಉತ್ತರವನ್ನೂ ಕೊಡದೆ, ಮನದಲ್ಲಿ, "ಇದೇನು, ನಾನು ಹುಚ್ಚನಾದೆನು! ಹುಡುಗಿಯ ಮಾತನ್ನು ಕೇಳಿ ಬೆರಗಾಗಿ ಭೀತನಾಗಿದ್ದೆನು!" ಎಂದಂದುಕೊಂಡನು. ಶಕುನಿಯು ಅವನ ಮುಖವನ್ನು ನೋಡಿ ಅವನ ಮನಸ್ಸಿನ ಆಂತರಿಕಭಾವವನ್ನು ತಿಳಿದವನಾಗಿ, ಪ್ರಕಾಶ್ಯವಾಗಿ, "ರುದ್ರಪುರಕ್ಕೆ ಕಳುಹಿದ್ದ ಗೂಢಚಾರರು ತಂದ ಸುದ್ದಿಯನ್ನು ಕೇಳಿಯಾಯಿತೆ?" ಎಂದನು.

ಸತೀಶ—ಇಲ್ಲ; ಅದೊಂದು ವಿಷಯದಲ್ಲಿ ಯೋಚಿಸಬೇಕಾಗಿದೆ. ಸಮರಸಿಂಹನ ಹೆಂಡತಿಯು ಸಾಮಾನ್ಯ ಹೆಂಗಸಲ್ಲವೆಂದು ಕೇಳಿದ್ದೇನೆ. ಟೋಡರಮಲ್ಲನು ದೇಶಕ್ಕೆ ಬರುತ್ತಲೇ ಒಂದು ಅವಾಂತರವನ್ನು ಮಾಡುವವಳಂತಿದೆ.

ಶಕುನಿ—ಆ ಭಯವೇನೂ ಇಲ್ಲ. ಟೋಡರಮಲ್ಲನು ಬರುವುದಕ್ಕೆ ಮೊದಲೇ ಸಮರಸಿಂಹನ ವಂಶದವರ ಬಾಯಿಯು ಮುಚ್ಚಿಹೋಗುವುದು.

ಸತೀಶ—ಹಾಗಾದರೆ ನಾನು ರುದ್ರಪುರಕ್ಕೆ ಕಳುಹಿದ್ದ ಗೂಢಚಾರರು ಸಮರಸಿಂಹನ ಹೆಂಡತಿಯನ್ನು ಹಿಡಿದು ತಂದಿದ್ದಾರೆಯೆ?

ಶಕುನಿ—ಇಲ್ಲ, ಅದಿನ್ನೂ ಸಾಧ್ಯವಾಗಲಿಲ್ಲ; ಆದರೂ ಆ ಕಾರ್ಯವು ಶೀಘ್ರವಾಗಿ ಪೂರೈಸಿ ಹೋಗುವುದು.

ಸತೀಶ—ಸಾಧ್ಯವಾಗಲಿಲ್ಲವೇಕೆ?

ಶಕುನಿ—ಅವರು ಎರಡು ದಿನಕ್ಕೆ ಮೊದಲೇ ಸುದ್ದಿಯನ್ನು ಕೇಳಿದ್ದರು. ಆ ಹುಚ್ಚಿಯು ಸುದ್ದಿಯನ್ನವರಿಗೆ ಹೇಳಿರಬಹುದು.

ಸತೀಶ—ಆ ಪಿಶಾಚಿಯು ನಮ್ಮ ಕೆಲಸಕ್ಕೆಲ್ಲಾ ಅಡ್ಡಿಯಾಗಿ ಬರುತ್ತಿದ್ದಾಳೆ. ಅವಳನ್ನು ಹಿಡಿಸಿ ತರಲಾರೆಯಾ?

ಶಕುನಿ—ಪ್ರಯತ್ನಗಳಿಗೆ ಕಡಿಮೆಯಿಲ್ಲ; ಆದರೆ ಅವಳಿರುವ ಸ್ಥಳವು ಗೊತ್ತಾಗಿಲ್ಲ. ನಿಜವಾಗಿಯೂ ಅವಳಿಗೆ ಪಿಶಾಚಿಯ ಬಲವಿರುವಂತೆ ತೋರುತ್ತದೆ. ಹಾಗಿಲ್ಲದಿದ್ದರೆ, ಏಕಾಂತವಾದೆಮ್ಮ ನಡವಳಿಕೆಗಳೆಲ್ಲ ಅವಳಿಗೆ ಗೊತ್ತಾಗುವ ಬಗೆ ಹೇಗೆ? ನೂರಾರು ಗೂಢಚಾರರೂ ಅವಳಿರುವ ಸ್ಥಳವನ್ನು ಗೊತ್ತುಮಾಡಲಾರದವರಾಗಿದ್ದಾರೆ.

ಸತೀಶ—ಹಾಗಾದರೆ ಉಪಾಯವೇನು?

ಶಕುನಿ—ಚಿಂತಿಸಬೇಕಾದ ಅವಶ್ಯಕವಿಲ್ಲ. ಜಾಗ್ರತೆಯಲ್ಲಿ ಎಲ್ಲರ ಬಾಯಿಯೂ ಮುಚ್ಚಿಹೋಗುವುದು. ಶಕುನಿಯು ಒಳಸಂಚನೆಗಾರರೂ ಹೊರಗಾಗರು. ತಾವು ವಿಶ್ರಮಿಸಿಕೊಳ್ಳಬಹುದು.

ಹೀಗೆಂದು ಹೇಳಿ ಶಕುನಿಯು ತನ್ನ ಮನೆಗೆ ಹೊರಟುಹೋದನು. ಹೋಗು ವಾಗ ಒಂದೆರಡು ತಡವೆ ಸತೀಶನಕಡೆ ತಿರುಗಿ ನೋಡಿ, ತನ್ನೊಳು ತಾನೇ "ನಿನಗೂ ನಿಸ್ತಾರವಿರದು. ನೀನೂ ಹೊರಗಾಗಲಾರೆ" ಎಂದಂದುಕೊಂಡನು.

---

## ಎಂಟನೆಯ ಪರಿಚ್ಛೇದ

Curse on his perjured arts' dissembling smooth ?
Are honor, pity, conscience, all exiled ?
Is there no pity, no relenting truth ? *Burns.*

ಮಾರನೆಯ ದಿನ ಪ್ರಾತಃಕಾಲದಲ್ಲಿ ದಿವಾನಸಾಹೇಬನು ಮಾಂಗೀರಿಗೆ ಪಯಣವಾಗಿ ಹೊರಟನು. ಮಗಳಿಂದ ಬೀಳ್ಕೊಂಡು ಹೋಗುವ ಸಮಯದಲ್ಲಿ ವಿಮಲೆಯು "ಅಪ್ಪಾ! ನೀನು ಹೊರಟುಹೋಗುತ್ತಿ. ನೀನು ಸಮ್ಮತಿಸಿದರೆ ನಾನು ಪ್ರಸಿದ್ಧವಾದಾ ಮಹೇಶ್ವರ ಮಂದಿರಕ್ಕೆ ಹೋಗಿ ನಿನಗೆ ಮಂಗಳವಾಗಲೆಂದು ದೇವರಪೂಜೆಯನ್ನು ಮಾಡುತ್ತಿರುವೆನು. ನಾನು ಕೆಲವು ದಿನ ಅಲ್ಲಿರಬೇಕೆಂದಿದ್ದೇನೆ" ಎಂದಳು. ತಂದೆಯು ಸಮ್ಮತನಾಗಿ ಸ್ನೇಹಪೂರ್ಣ ವಚನಗಳಿಂದ ಬೀಳ್ಕೊಂಡು ಹೊರಟುಹೋದನು. ಮಗಳ ಕಣ್ಣುಗಳಿಂದ ಧಾರೆಯು ಹೊರಟು ಅವಳ ಸೆರಗು ತೋಯ್ದುಹೋಯಿತು. ತಂದೆಯು ಹೊರಟುಹೋದ ಹಾದಿಯಕಡೆ ನೋಡುತ್ತ ವಿಮಲೆಯು ತನ್ನೊಳುತಾನೇ "ಈ ವಿಪುಲ ಸಂಸಾರ ದಲ್ಲಿ ನಿನ್ನನ್ನು ಬಿಟ್ಟರೆ ಹತಭಾಗಿನಿಯಾದೆನಗೆ ಮತ್ತಾರೂ ಇಲ್ಲ; ನೀನಿಲ್ಲದಿದ್ದರೆ ಇಹಸಂಸಾರವೆನಗೆ ಅಂಧಕಾರಮಯವಾಗಿರುವುದು; ಭಗವಂತನು ನಿನ್ನನ್ನು ನಿರಾಪದವಾಗಿಟ್ಟಿರಲಿ; ಧರ್ಮಮಾರ್ಗದಲ್ಲಿ ನಿನ್ನ ಮತಿಯು ಹೋಗುತ್ತಿರಲಿ; ನಿನ್ನ ನಿಜವಾದ ಸ್ವಂತ ಚರಿತ್ರೆಯು ಉದಾರವಾದುದು ಹಾಗೂ ಕಪಟ ರಹಿತ ವಾದುದು; ಕುಕ್ಷಣದಲ್ಲಿ ಶಕುನಿಯ ಸಹವಾಸವು ನಿನಗೆ ದೊರಕಿತು" ಎಂದಂದುಕೊಂಡಳು.

ಸತೀಶಚಂದ್ರನು ಶಕುನಿಗೆ ಹೇಳಿಬರಲು ಅವನ ಬಳಿ ಹೋದಾಗ ಶಕುನಿಯು, "ತಾವು ದಯಮಾಡಿಸೋಣಾಗಲಿ; ನಾನು ಸಮರಸಿಂಹನ ಹೆಂಡತಿಯನ್ನು ಸರಿಯಾದ ಸ್ಥಳದಲ್ಲಿಟ್ಟು ಮಿಕ್ಕ ಕೆಲಸಗಳನೆಲ್ಲಾ ಪೂರೈಸಿಕೊಂಡು ತಮ್ಮ ಬಳಿಗೆ ಬರುವೆನು" ಎಂದು ಹೇಳಿದನು. ಸತೀಶಚಂದ್ರನು, "ಆವದುಚಿತವೋ ಅದನ್ನು ಮಾಡು; ನಿನ್ನ ತೀಕ್ಷ್ಣವಾದ ಬುದ್ಧಿಯಮೇಲೆ ಭರವಸವನ್ನಿಟ್ಟಿದ್ದೇನೆ" ಎಂದು ಹೇಳಿ ಹೊರಗೆ ಹೊರಟುಹೋದ ಬಳಿಕ, ಶಕುನಿಯು ಮನಸ್ಸಿನಲ್ಲಿ, "ಬುದ್ಧಿಯು ತೀಕ್ಷ್ಣವಾದುದು ಅಹುದೋ ಅಲ್ಲವೋ ಕೂಡಲೇ ತಿಳಿಯುವೆ; ಹೆಚ್ಚು ತಳುವಿಲ್ಲ" ಎಂದಂದುಕೊಂಡನು.

ಸತೀಶಚಂದ್ರನಿಗೆ ಶಕುನಿಯ ಪರಿಚಯವಾಗಿ ಎಂಟು ವರ್ಷಗಳಾದುವು.

ಮೊದಲು ಪರಿಚಯವಾದಾಗ ಶಕುನಿಗೆ ಇಪ್ಪತ್ತುವರ್ಷ ವಯಸ್ಸು, ಸತೀಶಚಂದ್ರನಿಗೆ ಇಪ್ಪತ್ತುನಾಲ್ಕುವರ್ಷ. ಶಕುನಿಯು ನೋಡುವುದಕ್ಕೆ ಚಲುವನಾಗಿದ್ದನು. ಚಿಕ್ಕವಯಸ್ಸಿನಲ್ಲೇ ಅನಾಥ ಬ್ರಾಹ್ಮಣಪುತ್ರನೆಂದು ಹೇಳಿಕೊಂಡು ಬಂದು ಸತೀಶಚಂದ್ರನಿಗೆ ಶರಣಾಗತನಾದನು. ಸತೀಶಚಂದ್ರನು, ಕುಮಾರನಾದ ಆಶ್ರಯವಿಲ್ಲದಾ ಬ್ರಾಹ್ಮಣಪುತ್ರನಿಗೆ ಆಶ್ರಯವನ್ನು ಕೊಟ್ಟನು—ಅದು ಮೊದಲ್ಗೊಂಡು ಹೃದಯದಲ್ಲಿ ಕಾಳಸರ್ಪವನ್ನು ಧಾರಣಮಾಡಿದಂತಾಯಿತು.

ತೀಕ್ಷ್ಣಬುದ್ಧಿಯುಳ್ಳ ಶಕುನಿಯು ಶೀಘ್ರದಲ್ಲಿ ಸತೀಶಚಂದ್ರನ ಹೃದಯವನ್ನರಿತುಕೊಂಡನು. ಸತೀಶಚಂದ್ರನ ದುರ್ದಮನೀಯವಾದ ಉಚ್ಚಾಭಿಲಾಷೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಅದಕ್ಕೆ ತಕ್ಕಹಾಗೆ ಭೀಷಣವಾದಾ ಅಗ್ನಿಯಲ್ಲಿ ಘೃತಾಹುತಿಯನೆರೆಯಲಾರಂಭಿಸಿದನು. ಆಹುತಿಯನ್ನು ಹೊಂದಿದಾ ಅಗ್ನಿಯ ಶಿಖೆಯು ದಿನೆದಿನೆ ಗಗನಸ್ಪರ್ಶಿಯಾಗಲು ಏರುತ್ತ ಹೋಯಿತು. ಘೋರವಾದಾ ಮದದಿಂದ ಮತ್ತನಾದಾ ಸತೀಶಚಂದ್ರನು ದಿಕ್ಕೆಟ್ಟು ಜ್ಞಾನವನ್ನು ಹೋಗಲಾಡಿಸಿಕೊಂಡನು—ಧರ್ಮಾಧರ್ಮಜ್ಞಾನವು ಅಳಿಸಿಹೋಯಿತು—ಒಂದೇ ತಡವೆಗೆ ಅಂಧಪ್ರಾಯನಾಗಿ ಹೋದನು.

ಶಕುನಿಗೆ ಸಮಯವೊದಗಿತು. ಅಂಧನನ್ನು ಕುಟಿಲಮಾರ್ಗದಲ್ಲೊಯ್ಯುವದು ಕಷ್ಟವಲ್ಲ—ಒಳ್ಳೆಯದಾದ ಆಲೋಚನೆಗಳನ್ನು ಹೇಳುತ್ತ ಕ್ರಮೇಣ ಕೆಟ್ಟ ಆಲೋಚನೆಗಳನ್ನು ಹೇಳುವುದಕ್ಕೆ ತೊಡಗಿದನು. ಪ್ರಭುವನ್ನು ಸನ್ಮಾರ್ಗದಿಂದ ಕೆಟ್ಟಮಾರ್ಗದಲ್ಲೊಯ್ಯುವುದಕ್ಕಾರಂಭಿಸಿ ಕಟ್ಟಕಡೆಗೆ ಘೋರವಾದ ಕೆಸರಿನಲ್ಲಿ ಮುಳುಗಿಸಿದನು. ಅದನ್ನು ತಪ್ಪಿಸಿಕೊಂಡು ಹಿಂದಿರುಗಿ ಬರಲು ಮನುಷ್ಯನಿಗೆ ಸಾಧ್ಯವಾಗಲಿಲ್ಲ. ತರುವಾಯ ಸತೀಶಚಂದ್ರನು ಕಣ್ದೆರೆದು ನೋಡಿದನು, ಕ್ರಮವಾಗಿ ತನ್ನ ಭ್ರಮೆಯು ಕಣ್ಗೊಳಿಸಿತು. ಆಗವನಿಗೆ ಪಶ್ಚಾತ್ತಾಪವು ಹೊರತು ಉಪಾಯಾಂತರವು ತೋರಲಿಲ್ಲ. ಶಕುನಿಯ ಇಷ್ಟಾರ್ಥವು ಕೈಗೊಂಡಿತು, ಪ್ರಭುವನ್ನು ಸಂಪೂರ್ಣವಾಗಿ ಕೈಯಲ್ಲಿ ಹಾಕಿಕೊಂಡನು.

ಶಕುನಿಗೆ ಆಶ್ರಯವನ್ನು ಕೊಟ್ಟ ಬಳಿಕ ಸತೀಶಚಂದ್ರನು ಸ್ವಲ್ಪ ಕಾಲದಲ್ಲಿಯೇ ಅವನ ತೀಕ್ಷ್ಣಬುದ್ಧಿಯನ್ನು ತಿಳಿದು ಅವನ ವಿನೀತಭಾವ ಮುಂತಾದುದನ್ನು ನೋಡಿ ಸಂತುಷ್ಟನಾಗಿ ಅವನ ಆಲೋಚನೆಗಳನ್ನು ಕೇಳಿ ಚಮತ್ಕೃತನಾಗಿ ಅವನಲ್ಲಿ ಪ್ರೀತಿಯುಳ್ಳವನಾದನು. ದಿನದಿನಕ್ಕೂ ಆ ಪ್ರೀತಿಯು ಹೆಚ್ಚುತ್ತ, ತಾನು ಅಪುತ್ರವಂತನಾಗಿದ್ದುದರಿಂದ ಶಕುನಿಯನ್ನು ಪುತ್ರನ ಭಾವದಲ್ಲಿ ನೋಡುತ್ತ ಪ್ರೀತಿಸುವನು, ಒಂದೊಂದುವೇಳೆ ಅವನನ್ನು ತನ್ನ ಪೋಷ್ಯಪುತ್ರನನ್ನಾಗಿ ಮಾಡಿಕೊಳ್ಳಲೆಳಸುವನು. ಒಂದೊಂದು ಸಮಯದಲ್ಲಿ ಅವನಿಗೆ ತನ್ನ ಮಗಳನ್ನು ಕೊಟ್ಟು ಮದುವೆಮಾಡಬೇಕೆಂದು ಸಂಕಲ್ಪಮಾಡಿಕೊಳ್ಳುವನು. ಆದರೆ ಆ ಕೂಡಲೇ; ನಿರಾಶ್ರಯನಾದಾ ಬ್ರಾಹ್ಮಣಕುಮಾರನಿಗೆ ಮಗಳನ್ನು ಕೊಟ್ಟು ಮದುವೆಯಂ

ಮಾಡಿದರೆ ಮಾನಹಾನಿಯಾಗುವುದೆಂಬ ಭಯದಿಂದ ಶಕುನಿಯನ್ನು ಮನೇ ಅಳಿಯನನ್ನಾಗಿ ಮಾಡಿಕೊಳ್ಳಲಾರದೆ ಹೋದನು. ಕ್ರಮೇಣ ಮಗಳಿಗೆ ವಯಸ್ಸಾಗುತ್ತ ಬಂದಿತು. ಆದರೆ ಕುಲೀನರ ಮನೆಯ ಹೆಣ್ಣು ದೊಡ್ಡದಾದ ಮಾತ್ರಕ್ಕೆ ನಷ್ಟವೇನು? ಅದಲ್ಲದೆ ಸತೀಶಚಂದ್ರನಿಗೆ ಹೆಂಡತಿಯು ಕಾಲವಾದ ಬಳಿಕ ಮಗಳ ಮೇಲಣ ಮಮತೆಯು ಇಮ್ಮಡಿಯಾಗುತ್ತ ಬಂದಿತು. ಮಗಳನ್ನು ಮದುವೆ ಮಾಡಿಕೊಟ್ಟು ಕಳುಹಿದರೆ ಮನೆಯು ಶೂನ್ಯವಾಗುವುದು. ಅದಕ್ಕೆ ಸಲುವಾಗಿ ವಿವಾಹವು ವಿಳಂಬವಾಗುತ ಬಂದಿತು; ಅದಕ್ಕೆ ಸಲುವಾಗಿ ಶಕುನಿಯನ್ನು ಮನೆಯ ಅಳಿಯನನ್ನಾಗಿ ಮಾಡಿ ಮನೆಯಲ್ಲಿಟ್ಟುಕೊಳ್ಳಬೇಕೆಂಬ ಸಂಕಲ್ಪವು ಹುಟ್ಟಿದ್ದಿತು.

ಬಳಿಕ, ಪಾಪಪಂಕದಲ್ಲಿ ಬಿದ್ದು ಸತೀಶಚಂದ್ರನ ಕಣ್ಣು ಬಿಚ್ಚಿದಾಗ ಆ ಸಂಕಲ್ಪವು ದೂರವಾಯಿತು. ಪಾಪವು ಅತ್ಯಂತ ಅಸಹ್ಯವಾದ ದೂಷ್ಯಪದಾರ್ಥವಾದುದರಿಂದ ಪಾಪಿಯಾದವನು ಮತ್ತೊಬ್ಬ ಪಾಪಿಷ್ಠನನ್ನು ಪ್ರೀತಿಸನು. ಸತೀಶಚಂದ್ರನು ಶಕುನಿಯನ್ನು ಪ್ರೀತಿಸುವುದು ನಿಂತುಹೋಯಿತು. ಉನ್ನತ ಚರಿತ್ರಯುಳ್ಳ ಧರ್ಮಪರಾಯಣೆಯಾಗಿದ್ದ ಮಗಳನ್ನು ಕುಟಿಲಸ್ವಭಾವವುಳ್ಳ ಕಪಟಾಚಾರಿಯಾದಾ ಶಕುನಿಯ ಕೈಯಲ್ಲಿ ಅರ್ಪಣಮಾಡುವ ಯೋಚನೆಯು ಸತೀಶಚಂದ್ರನಿಗೆ ಅಸಹ್ಯವಾಗಿ ಕಂಡುಬಂದಿತು. ಅವನು ಮನಸ್ಸಿನಲ್ಲಿ, "ನಾನು ಪಾಪಿಷ್ಠನೇನೋ ಅಹುದು, ಆದರೆ ಪಾಪಕ್ಕೂ ಎಲ್ಲೇಕಟ್ಟುಂಟು. ಧರ್ಮಪರಾಯಣನಾಗಿದ್ದ ಸಮರಸಿಂಹನನ್ನು ಕೊಂದಿರುವೆನಾದರೂ, ನನ್ನ ಪ್ರೀತಿಗೆ ಪುತ್ತಳಿಸ್ವರೂಪವಾದ ವಿಮಲೆಯನ್ನು ನರಕಕ್ಕೆ ತಳ್ಳಲಾರೆನು. ನನಗೇನೋ ಹಣೆಯಲ್ಲಿ ಬರೆದಿದ್ದಂತಾಯಿತು. ವಿಮಲೆಯಾದರೋ ಧರ್ಮಮಾರ್ಗದಲ್ಲಿರುತ್ತಿರಲಿ" ಎಂದು ಮುಂತಾಗಿ ಯೋಚಿಸಿಕೊಂಡನು. ಅದಾವುದನ್ನೂ ಶಕುನಿಗವನು ತಿಳಿಸಲಿಲ್ಲ. ಶಕುನಿಯು ಸುಭಾದಾರನಲ್ಲೊಂದು ಮಾತನ್ನುಸುರಿದರೆ ತನ್ನ ಶಿರಚ್ಛೇದನವಾಗುವುದೆಂದು ಸತೀಶನು ಚೆನ್ನಾಗಿ ತಿಳಿದಿದ್ದನು. ಆದುದರಿಂದ ಅವನ ಪ್ರಾಣವು ಶಕುನಿಯ ಕೈಯಲ್ಲಿತ್ತಾದಕಾರಣ ಅವನಿಗೆ ಅಡಿಯಾಳಾಗಿದ್ದನು.

ಶಕುನಿಯು ಕಡುಪಾಪಿಯಾಗಿದ್ದನೆಂದು ಹೇಳಬೇಕಾದ ಆವಶ್ಯಕವಿಲ್ಲ. ಸತೀಶಚಂದ್ರನೂ ಪಾಪಿಷ್ಠನೇ ಅಹುದು, ಆದರೆ ಅವನ ಪಾಪಕ್ಕೆ ಎಲ್ಲೆಕಟ್ಟಿದ್ದಿತು. ಅವನ ಚರಿತ್ರಯಲ್ಲೊಂದೆರಡು ಸದ್ಗುಣಗಳೂ ಇದ್ದುವು. ಅವನ ಹೃದಯದಲ್ಲೊಂದೆರಡು ಮಹಾನುಭಾವಗಳು ಕಾಣುತ್ತಿದ್ದುವು. ಪಾಪಕ್ಕೆ ಪ್ರಾಯಶ್ಚಿತ್ತರೂಪವಾಗಿ ಮಧ್ಯೆ ಮಧ್ಯೆ ಆತ್ಮಗ್ಲಾನಿಯನ್ನು ಹೊಂದುತ್ತಿದ್ದನು. ಶಕುನಿಗೆ ಅದಾವುದೂ ಇರಲಿಲ್ಲ. ಅವನಿಗಿದ್ದುವುವು, ಘೋರವಾದ ಸ್ವಾರ್ಥಪರತೆ, ದುರ್ಭೇದ್ಯವಾದ ಕುಟಿಲತೆ.

ಶಕುನಿಯ ಮನೋವೃತ್ತಿಗಳಲ್ಲಾವುದೂ ಸತೀಶನ ಮನೋವೃತ್ತಿಗಳಂತೆ ದುರ್ದಮನೀಯವಾಗಿಯೂ ವೇಗವಾಗಿಯೂ ಇರಲಿಲ್ಲ. ಅವನ ಹೃದಯದ

ಪ್ರವೃತ್ತಿಗಳೆಲ್ಲವೂ ಶಾಂತವಾದುವು—ಪ್ರವೃತ್ತಿಗಳೆಲ್ಲವೂ ಘೋರವಾದ ಸ್ವಾರ್ಥಪರತೆಯ ಅನುಗಾಮಿಗಳಾಗಿದ್ದುವು. ಜಾಡರಹುಳವು ಮರದೆಲೆಗಳನ್ನು ಹುಡುಕಿ ಆರಿಸಿನೋಡಿ ಮೆಲ್ಲಮೆಲ್ಲನೆ ತನ್ನ ಬಲೆಯನ್ನು ಕಟ್ಟಿ ಹೇಗೆ ಹರಡುವುದೋ ಹಾಗೆ ಶಕುನಿಯು ಅನ್ಯಜನರ ಮನೋವೃತ್ತಿಗಳ ವೇಗವನ್ನು ತಿಳಿದು ಮೆಲ್ಲಮೆಲ್ಲನೆ ತನ್ನ ಸೂಕ್ಷ್ಮವಾದ ಬಲೆಯನ್ನು ಹರಡುತ್ತಿದ್ದನು. ಅವನು ಕೊಡುತ್ತಿದ್ದ ಆಲೋಚನೆಗಳು ಅತಿಸೂಕ್ಷ್ಮವಾದವಾಗಿಯೂ ಅತಿ ದುರ್ಭೇದ್ಯವಾದವಾಗಿಯೂ ಇದ್ದುವು. ಅವುಗಳನ್ನು ಚೆನ್ನಾಗಿ ಭೇದಿಸಿ ತಿಳಿಯಲಾರಿಗೂ ಸಾಧ್ಯವಾಗಿರಲಿಲ್ಲ. ಜಗತ್ತನ್ನು ಬದ್ಧಿಸಿ ಮಾನವಜಾತಿಯನ್ನು ಒಕ್ಕಟ್ಟು ಮಾಡುವ ಸ್ನೇಹ, ಪ್ರೇಮ, ದಯೆ, ಕೃತಜ್ಞತೆ ಮುಂತಾದ ಸುಕುಮಾರ ಮನೋವೃತ್ತಿಗಳಿಂದ ಅವನ ಹೃದಯವು ದೂರವಾಗಿದ್ದಿತು. ಅನೇಕರನ್ನು ವಿಚಲಿತರನ್ನಾಗಿ ಮಾಡಿ ಚಂಚಲಗೊಳಿಸುವ ಯಶಸ್ಸಿನಲ್ಲಿ ಅಭಿರುಚಿ, ಉಚ್ಚಾಭಿಲಾಷೆ ಮುಂತಾದ ದುರ್ದಮವಾದ ಮನೋವೃತ್ತಿಗಳೂ ಅವನ ಹೃದಯದಲ್ಲಿ ಸ್ಥಾನವನ್ನು ಹೊಂದಿರಲಿಲ್ಲ. ಆದುದರಿಂದ ಅವನ ತೀಕ್ಷ್ಣಬುದ್ಧಿಯಿಂದಲೂ ಅವನ ಗೂಢವಾದ ಆಲೋಚನೆಗಳಿಂದಲೂ ತನ್ನ ಸ್ವಾರ್ಥವನ್ನಾವಾಗಲೂ ತಪ್ಪದೆ ಸಾಧಿಸಿಕೊಳ್ಳುತ್ತಿದ್ದನು.

ಸಮರಸಿಂಹನ ಹೆಂಡತಿಯು ಗೂಢಚಾರರಿಗೆ ಸಿಗಲಿಲ್ಲವೆಂದು ಶಕುನಿಯು ಸತೀಶನಿಗೆ ಹೇಳಿದ್ದುದು ಸುಳ್ಳಾದ ಮಾತು. ತೀಕ್ಷ್ಣಬುದ್ಧಿಯುಳ್ಳ ಶಕುನಿಗೆ ಮಹಾಶ್ವೇತೆಯನ್ನು ಕಂಡುಹಿಡಿಯುವುದು ಕಷ್ಟಸಾಧ್ಯಕಾರ್ಯವಾಗಿರಲಿಲ್ಲ—ಸತೀಶನೊಂದಿಗೆ ಮಾಂಗೀರಿಗೆ ಹೋಗದಿರುವುದಕ್ಕೆ ಅವನದನ್ನು ಹೇಳಿದನು. ಶಕುನಿಯ ಮಂತ್ರಣಾಜಾಲವನ್ನು ಭೇದಿಸುವುದು ನಮಗೆ ಸಾಧ್ಯವಾದುದಲ್ಲ. ಪಾಠಕಮಹಾಶಯರೇ ! ನಮ್ಮ ಸಂಗಡ ಬರೋಣಾಗಲಿ ; ಶಕುನಿಯು ಕುಳಿತಿರುವಲ್ಲಿಗೆ ಹೋಗಿ ಅವನು ಚಿಂತಿಸುತ್ತಿರುವುದನ್ನು ನೋಡೋಣ. ಅದೇನನ್ನಾದರೂ ತಿಳಿಯಬಹುದಾದರೆ ತಿಳಿದುಕೊಳ್ಳೋಣಾಗಲಿ.

ಚತುರ್ವೇಷ್ಟಿತ ದುರ್ಗದಲ್ಲಿ ಪ್ರಶಸ್ತವಾದೊಂದು ಕೊಠಡಿಯೊಳಗೆ ಶಕುನಿಯು ಒಬ್ಬೊಂಟಿಗನಾಗಿ ತಿರುಗಾಡುತ್ತಿದ್ದನು ; ನಾಲ್ಕುಕಡೆಗಳಲ್ಲಿರುವ ಕ್ಷೇತ್ರಗಳನ್ನು ನೋಡುತ್ತಿರುವನು. ದುರ್ಗದ ತಳಗೆ ಹರಿಯುವ ಕಲ್ಲೋಲಿನಿಯಾದ ಯಮುನೆಯ ಕಲ ಕಲ ಶಬ್ದವನ್ನು ಕೇಳುತ್ತಿರುವನು ; ಮಧ್ಯೆ ಮಧ್ಯೆ ಪ್ರಶಸ್ತವಾಗಿದ್ದ ದುರ್ಗದ ಪರಿಶುದ್ಧವಾದ ಅಂತಃಪುರದ ಕಡೆಗೆ ನೋಡುತ್ತಿರುವನು ; ಅವನ ಮುಖಮಂಡಲದಲ್ಲಿ ಆನಂದದ ಲಕ್ಷಣ—ಸ್ವಾರ್ಥಪರರಾದವರಿಗೆ ಸ್ವಾರ್ಥಸಾಧನೆಯಾದರೆ ಉಂಟಾಗುವ ಆನಂದೋಲ್ಲಾಸಗಳಂತೆ ಆನಂದದ ಲಕ್ಷಣ. ಅವನ ಮನದಲ್ಲಿ ಹೀಗೆಂದು ಚಿಂತೆಯುದಯವಾಗುತ್ತಿದ್ದಿತು :—

ವಿಸ್ತರವಾದೀ ಜಮೀನುದಾರಿಯೂ ಪ್ರಶಸ್ತವಾದೀ ದುರ್ಗವೂ ಅಂತಃಪುರನಿವಾಸಿನಿಯಾದಾ ಹದಿನೇಳು ವರ್ಷದ ಸುಂದರಿಯೂ ಶೀಘ್ರದಲ್ಲಿ ಹೊಸ

ಯಜಮಾನನನ್ನು ಪಡೆದು, ಸಮರಸಿಂಹನ ಪ್ರಜೆಗಳೂ ಸತೀಶಚಂದ್ರನ ಪ್ರಜೆಗಳೂ ಶೀಘ್ರದಲ್ಲಿ ಶಕುನಿಯ ಹೆಸರನ್ನು ಹೊಗಳುವರು. ಕಲ್ಲೋಲಿನಿಯಾದ ಯಮು ನೆಯೂ ಶಕುನಿಯ ಗೌರವಗೀತವನ್ನು ಹಾಡುವುದು. ವಿಮಲೆ! ನೀನೋ? ನೀನೆನ್ನನ್ನು ಕಂಡರೆ ವೆಕ್ಕಸವಾಗುವುದನ್ನು ನಾನು ಬಲ್ಲೆನು, ಆದರೆ ಹಾಗೆ ವೆಕ್ಕಸವಾಗಿ ಅಸಂಹಿಸಿಕೊಳ್ಳುವ ಕಾಲವು ಈಗ ಹೋಯಿತು, ನೀನು ಇಷ್ಟ ಪಟ್ಟರೂ ಇಷ್ಟಪಡದಿದ್ದರೂ ನನ್ನನ್ನು ನಿನ್ನ ಸ್ವಾಮಿಯೆಂದು ಆಲಿಂಗನೆಯಂ ಮಾಡಿಕೊಳ್ಳಬೇಕು. ಒಂದುವೇಳೆ ನೀನೆನ್ನನ್ನು ಪ್ರೀತಿಸದೆ ತಿರಸ್ಕರಿಸಿದರೆ ನಿನ್ನನ್ನು ಕಾಡಿ ಕಾಲಲ್ಲೊರಸಿಬಿಟ್ಟು ಭೂಗತಮಾಡುವೆನು—ಪ್ರೇಮಕ್ಕೆ ಸಲುವಾಗಿ ನಾನು ನಿನ್ನನ್ನು ಮದುವೆಮಾಡಿಕೊಳ್ಳುವವನಲ್ಲ. ಪ್ರೇಮವೆಂಬುದು ಬಾಲಕ ಬಾಲೆಯರ ಸ್ವಪ್ನಮಾತ್ರ! ನಿನ್ನ ರೂಪಲಾವಣ್ಯಗಳಿಗೆ ಸಲುವಾಗಿ ನಿನ್ನನ್ನು ಪ್ರಾಣಿಗ್ರಹಣವಂ ಮಾಡತಕ್ಕವನಲ್ಲ. ನನ್ನಲ್ಲಿ ರೂಪಲಾವಣ್ಯಗಳಿಗೆ ಆದರವಿಲ್ಲ. ಆದರವಿದ್ದರೂ ಲಕ್ಷಾಧಿಪತಿಯಾಗುವವನಿಗೆ ರೂಪಲಾವಣ್ಯಗಳ ಅಭಾವವುಂಟೆ? ನಿನ್ನನ್ನು ಈಗಲೇ ಭೂಗತಮಾಡದಿರುವುದೇಕೆ? ಸತೀಶಚಂದ್ರ, ಎಚ್ಚರಿಕೆ! ಸಾವಧಾನವಾಗಿರು! ಇಂದು ನಿನ್ನನ್ನು ಯಮಮಂದಿರಕ್ಕೆ ಕಳುಹಿಸಿರುವೆನು. ಗೂಢಚಾರರನ್ನಿಟ್ಟಿರು ವೆನು, ಗೋಪ್ಯವಾದ ಸಮಾಚಾರವು ಹೊರಪಡುವುದು. ಮತ್ತು ಶಕುನಿಯ ಕೃತ್ಯಗಳೆಲ್ಲಾ ನಿನ್ನಲ್ಲಿ ಆರೋಪಿತವಾಗುವುವು. ಒಳಿಕ? ಸಂತಾನವಿಲ್ಲದೆ ಗತಿಸಿ ಹೋದ ಸತೀಶಚಂದ್ರನಿಗೆ ಅವನ ಅಳಿಯ ಶಕುನಿಯೇ ಉತ್ತರಾಧಿಕಾರಿಯಾಗು ವನು. ತೀಕ್ಷ್ಣಬುದ್ಧಿಯು ಚಿರಕಾಲ ಜಯವನ್ನು ಹೊಂದುವುದು.

ಈ ಪ್ರಕಾರ ಯೋಚಿಸಿಕೊಳ್ಳುತ್ತ ಶಕುನಿಯು ಅಂತಃಪುರದ ಗವಾಕ್ಷದ ಕಡೆ ತಿರುಗಿ ನೋಡಿದನು. ವಿಮಲೆಯು ಗವಾಕ್ಷದ ಪಾರ್ಶ್ವದಲ್ಲಿಯೇ ನಿಂತಿ ದ್ದಳು. ತಂದೆಯು ಹೊರಟುಹೋದನು. ಆದರೂ ತಂದೆಯು ಹೊರಟುಹೋದ ದಾರಿಯ ಕಡೆ ಎವೆ ಇಕ್ಕದೆ ನೋಡುತ್ತಿದ್ದಳು. ಅಳುವಿನಿಂದಾ ಉನ್ನತವಾದವಳ ಪ್ರಶಸ್ತ ಲಲಾಟದ ನರಗಳು ಹುರಿಗೊಂಡುಬ್ಬಿದ್ದುವು; ಕಣ್ಣುಗಳು ಜಲದಿಂದ ಭಾರೈಸಿಕೊಂಡಿದ್ದುವು; ಓಷ್ಠಗಳು ಅದುರುತ್ತಿದ್ದುವು; ಉನ್ನತ ವಕ್ಷಸ್ಥಳವು ಉಬ್ಬಿದ್ದಿತು; ಉಟ್ಟಿದ್ದ ಸೀರೆಯು ಅಶ್ರುಜಲದಿಂದ ತೋಯ್ದಿದ್ದಿತು; ಅವಳು ಘಟ್ಟಿಯಾಗಿ ಅಳುತ್ತಿರಲಿಲ್ಲ; ಅವಳ ಹೃದಯದ ಗಂಭೀರವಾದ ವ್ಯಸನದ ಭಾವವು ಬಾಲೆಯರ ಉಚ್ಚರೋದನದಂತೆ ಪ್ರಕಾಶಗೊಳ್ಳುತ್ತಿರಲಿಲ್ಲ; ನಿಶ್ಶಬ್ದವಾಗಿ ಆರಿಗೂ ಕಾಣದಹಾಗೆ ತಡೆಯಿಲ್ಲದ ಅಶ್ರುಜಲದಿಂದದು ಪ್ರಕಟಿತವಾಗುವುದು; ಒಂದೊಂದು ತಡವೆ ಶಾಂತವಾಗುತ್ತಿದ್ದಿತು.

ಶಕುನಿಯು ಅವಳನ್ನು ನೋಡಿ ತಾನೂ ಕಣ್ಣುಗಳಲ್ಲಿ ನೀರನ್ನು ತಂದು ಕೊಂಡು ಅವಳಿದ್ದೆಡೆ ಗವಾಕ್ಷದ ಪಾರ್ಶ್ವ ಒಂದು ನಿಂತನು. ವಿಮಲೆಯು ತಲೆ ಯೆತ್ತಿ ತಿರುಗಿ ನೋಡಿದಳು; ಶಕುನಿಯು ನಿಂತಿದ್ದನು. ಕ್ರೋಧದಿಂದಲೂ

ವೆಕ್ಕಸದಿಂದಲೂ ಹುಬ್ಬು ಸುರುಗಿ ವಿಮಲೆಯು ಸಿಡಿಮಿಡಿಗೊಂಡು ಅಲ್ಲಿಂದೆದ್ದು ಹೊರಟುಹೋದಳು, ವಿಮಲೆಯ ಮನಸ್ಸನ್ನು ತಿರುಗಿಸಲು ಅದು ಶಕುನಿಯ ಪ್ರಥಮ ಉದ್ಯಮ—ನಿಷ್ಫಲವಾಯಿತು.

---

## ಒಂಭತ್ತನೆಯ ಪರಿಚ್ಛೇದ

Enamoured, yet not daring for deep awe
To speak her love :—and watched his nightly sleep,
Sleepless herself, to gaze upon his lips
Parted in slumber, whence the regular breath
Of innocent dreams arose: then when red morn
Made paler the pale moon, to her cold home
Wildered and wan and panting, she returned. *Shelly.*

ಚತುರ್ವೇಷ್ಟಿತ ದುರ್ಗಕ್ಕೆ ಎರಡು ಹರಿದಾರಿಯ ದೂರದಲ್ಲಿ ಇಚ್ಛಾಮತಿ ನದಿಯ ತೀರದಲ್ಲಿ ಪ್ರಸಿದ್ಧವಾದ ಮಹೇಶ್ವರ ಮಂದಿರವಿದ್ದಿತು. ಸಂಧ್ಯಾಕಾಲದಲ್ಲಿ ವಿಮಲೆಯು ಪಾಲ್ಕಿಯನ್ನೇರಿ ಪಯಣವಾಡಿದಳು. ಅವಳ ಜತೆಯಲ್ಲಿ ನಾಲ್ಕಾರು ಮಂದಿ ವೃದ್ಧರಾದ ಹೆಂಗಸರೂ ಅನೇಕ ದಾಸ ದಾಸಿಯರೂ ಹೊರಟರು. ವಂಗದೇಶದ ದಿವಾನಸಾಹೇಬನ ಏಕಮಾತ್ರ ಪ್ರಿಯಪಾತ್ರಿಯಾದ ಪುತ್ರಿಯು ಆವ ಸಂಭ್ರಮದಿಂದ ಹೊರಡುವುದುಚಿತವೋ ಆ ಮಾದರಿ ಸಮಾರೋಹದಿಂದ ವಿಮಲೆಯು ಮಹೇಶ್ವರನ ಮಂದಿರಕ್ಕೆ ಹೊರಟಳು.

ಅನೇಕ ದೂರದೇಶಗಳಿಂದ ಅನೇಕ ಜನರು ನಿತ್ಯವೂ ಪುಣ್ಯಕ್ಷೇತ್ರವಾದಾ ಮಂದಿರಕ್ಕೆ ಬರುತ್ತಿರುವರು. ವೃದ್ಧರಾದ ಹೆಂಗಸರು ಮಕ್ಕಳಿಗೆ ಕ್ಷೇಮವಾಗಲೆಂದು ಪೂಜೆಯನ್ನು ಮಾಡುವುದಕ್ಕೆ ಬರುವರು. ಯುವತಿಯರು ಗಂಡುಮಕ್ಕಳಾಗಬೇಕೆಂಬ ಆಶೆಯಿಂದ ದೇವರಿಗೆ ಪೂಜೆಯನ್ನೊಪ್ಪಿಸಲು ಬರುವರು. ಹಳೇ ರೋಗಿಗಳು ರೋಗ ಶಾಂತಿಯಾಗಬೇಕೆಂಬ ಆಶೆಯಿಂದ ಮಂದಿರಕ್ಕೆ ಬರುವರು. ಯೋದ್ಧರು ಜಯಾಕಾಂಕ್ಷೆಯಿಂದಲೂ, ಕೃಪಣರು ಧನಾಕಾಂಕ್ಷೆಯಿಂದಲೂ, ಯುವಕರು ವಿದ್ಯಾಕಾಂಕ್ಷೆಯಿಂದಲೂ, ನಾನಾತೆರದ ಜನರು ನಾನಾವಿಧ ಆಶೆಗಳಿಂದ ಬಂದು ಮಂದಿರದಲ್ಲಿ ಸೇರುವರು. ಮಂದಿರದಲ್ಲಿ ಬಹುಕಾಲದಿಂದ ಸಂಚಿತವಾಗಿದ್ದ ದ್ರವ್ಯವು ರಾಶಿ ರಾಶಿಯಾಗಿ ಸುರಿಯಲ್ಪಟ್ಟಿದ್ದಿತು. ಮಂದಿರದ ಕಟ್ಟಣಗಳು ದಿನ ದಿನಕ್ಕೂ ಹೆಚ್ಚಾಗುತ್ತಿದ್ದುವು. ಮಧ್ಯೆ ಎತ್ತರವಾದ ಮಂದಿರ. ಅದಕ್ಕೆ ನಾಲ್ಕೂ ದಿಕ್ಕುಗಳಲ್ಲಿ ಸಾಲು ಸಾಲಾಗಿ ಉಜ್ವಲವಾದ ಉನ್ನತ ಸೌಧಮಾಲೆಗಳು. ಯಾತ್ರಾರ್ಥವಾಗಿ ಬಂದ ಆಗಂತುಕರು ಸೌಧಗಳಲ್ಲಿರುತ್ತಿದ್ದರು. ಅದರಿಂದ ಹುಟ್ಟಿದ ಉತ್ಪನ್ನವು ದೇವರ ಸೇವೆಗೆ ಅರ್ಪಿಸಲ್ಪಡುತ್ತಿದ್ದಿತು.

ಪ್ರಕಾಂಡವಾದಾ ಅಟ್ಟಾಲಿಕಾಶ್ರೇಣಿಗಳು ಮಂದಿರಕ್ಕೆ ನಾಲ್ಕೂ ದಿಕ್ಕು

ಗಳಲ್ಲಿ ಕಟ್ಟಲ್ಪಟ್ಟಿದ್ದುವು. ಅವುಗಳ ಮಧ್ಯೆ ಅತಿ ವಿಸ್ತಾರವಾದ ಸ್ಥಳ. ಆದುದರಿಂದ ಮಂದಿರಕ್ಕಾವ ದಿಕ್ಕಿನಲ್ಲಿ ನಿಂತು ನೋಡಿದರೂ ಕೇವಲ ಸೌಧಮಾಲೆಗಳೇ ಕಣ್ಗೊಳಿಸುತಿದ್ದುವು. ಮತ್ತಾವುದೂ ಗೋಚರವಾಗುತ್ತಿರಲಿಲ್ಲ.

ಸೌಧಮಾಲೆಯೊಳಗಣಿಂದ ಮಂದಿರಾಭಿಮುಖವಾಗಿ ಹೋಗಲು ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಸಿಂಹದ್ವಾರಗಳು. ಬಂಡಿಯಾಗಲೀ ಪಾಲ್ಕಿಯಾಗಲೀ ಸಿಂಹದ್ವಾರಗಳವರೆಗೆ ಬರುತ್ತಿದ್ದುವು; ಒಳಗೆ ಪ್ರವೇಶಿಸುವುದಕ್ಕೆ ಅಧಿಕಾರವಿಲ್ಲ. ಸಿಂಹದ್ವಾರದೊಳಗೆ ಪ್ರವೇಶವಾದ ಬಳಿಕ ಧನಗೌರವ ಮುಂತಾದ ಭೇದಗಳಾವುವೂ ಇರುತ್ತಿರಲಿಲ್ಲ. ರಾಜಕುಮಾರಿಯಾದರೂ ಭಿಕಾರಿಣಿಯೊಂದಿಗೆ ಸಿಂಹದ್ವಾರದಿಂದ ಮಂದಿರದ ಪರ್ಯಂತ ನಡೆದುಕೊಂಡು ಹೋಗಬೇಕು. ಭಸ್ಮಭೂಷಿತನಾದ ಸಂನ್ಯಾಸಿಯೊಂದಿಗೆ ಸ್ವರ್ಣರೌಪ್ಯಾಲಂಕೃತನಾದ ಮಹಾರಾಜನೂ ಒಟ್ಟಿಗೆ ಹಾದಿಯನ್ನು ನಡೆದುಹೋಗಬೇಕು. ಧರ್ಮದೆದುರಿಗೆ ಉಚ್ಚನಾರು? ನೀಚನಾರು? ಧನವಂತನಾರು? ದರಿದ್ರನಾರು? ಎಲ್ಲರೂ ಸಮಾನ.

ಸೌಧಮಾಲೆಗಳು ಸುತ್ತುಗಟ್ಟಿ ಮಧ್ಯದಲ್ಲಿದ್ದ ಭೂಖಂಡವು ಅತಿ ಪ್ರಶಸ್ತವಾಗಿಯೂ ವಿಸ್ತೀರ್ಣವಾದುದಾಗಿಯೂ ಇದ್ದರೂ ಯಾತ್ರಿಗಳ ಸಮಾಗಮದಿಂದ ತುಂಬಿ ಜನಸಮ್ಮರ್ದವಾಗಿರುವುದು. ಅಲ್ಲಿಗೆ ಉಪಾಸಕರು ಮಾತ್ರವೇ ಯಾತ್ರಾರ್ಥವಾಗಿ ಬರುತಿರಲಿಲ್ಲ. ನಾನಾಪ್ರಕಾರದ ಜನರು ನಾನಾತೆರನ ಸಾಮಾನುಗಳನ್ನು ವಿಕ್ರಯಿಸುವುದಕ್ಕೆ ಸಲುವಾಗಿ ನಾನಾದೇಶಗಳಿಂದ ಬರುವರು. ಹುಡುಗರಿಗೆ ಸಲುವಾಗಿ ಆಡುವ ಸಾಮಾನುಗಳನ್ನೂ, ಯುವಕ ಯುವತಿಯರಿಗೆ ಸಲುವಾಗಿ ನಾನಾತೆರನ ಆಭರಣಗಳನ್ನೂ ಎಲ್ಲರಿಗೆ ಸಲುವಾಗಿ ಉಡುವ ಬಟ್ಟೆಗಳನ್ನೂ ಊಟದ ಸಾಮಾನುಗಳನ್ನೂ ಇತರ ವಿಧ ವ್ಯವಹಾರ್ಯ ಪದಾರ್ಥಗಳನ್ನೂ ತಂದು ಹಗಲೂ ರಾತ್ರಿ ಮಾರಾಟಮಾಡುವರು. ಕೊಂಬುವವರು ಎಡಬಿಡದೆ ತುಂಬಿರುವರು.

ವಿಮಲೆಯು ಸಂಗಡಿಗರೊಡನೆ ಮಹೇಶ್ವರಮಂದಿರಕ್ಕೆ ಬಂದು ಮುಟ್ಟಿದಾಗ ರಾತ್ರಿಯಾಗಿದ್ದಿತು. ಬಂದು ವಿಶ್ರಮಿಸಿಕೊಂಡು ಊಟವಾಗುವುದರೊಳಗೆ ರಾತ್ರಿ ಎರಡು ತಾಸಾಗಿದ್ದಿತು. ಆಗ ವಿಮಲೆಯ ಸಂಗಡಿಗಿತ್ತಿಯರು ಅವಳನ್ನು ದೇವಸ್ಥಾನಕ್ಕೆ ಅಷ್ಟುಹೊತ್ತಿನಲ್ಲಿ ಹೋಗಲು ನಿಷೇಧಿಸಿದರು. ಆದರೆ ವಿಮಲೆಯ ಹೃದಯವು ಚಿಂತೆಯಿಂದ ಪರಿಪೂರ್ಣವಾಗಿದ್ದಿತು. ಅವಳು "ನನ್ನನ್ನು ಮನ್ನಿಸಿರಿ; ನಾನು ದೇವರ ದರ್ಶನವನ್ನು ಮಾಡದೆ ಮಲಗೆನು—ಮಲಗಿದರೂ ನಿದ್ರೆಹೋಗೆನು" ಎಂದು ಹೇಳಿ ಒಬ್ಬಳೇ ಮೆಲ್ಲಮೆಲ್ಲನೆ ಮಂದಿರಾಭಿಮುಖವಾಗಿ ಹೊರಟುಹೋದಳು.

ಚಂದ್ರೋದಯವಾಯಿತು. ಎದುರಿಗೆ ಎತ್ತರವಾದ ಮಹೇಶ್ವರಮಂದಿರವು ಚಂದ್ರಾಲೋಕದಲ್ಲಿ ಅಧಿಕತರ ಉಜ್ವಲವಾಗಿ ಗಭೀರವಾದ ನೀಲಾಕಾಶಪಟದಲ್ಲಿ

ಚಿತ್ರಿತವಾಗಿಟ್ಟಿದ್ದಂತೆ ತೋರುವುದು. ನಾಲ್ಕೂಕಡೆಗಳಲ್ಲಿ ಬಿಳುಪಾದ ಸೌಧ ಮಾಲೆಗಳು ಚಂದ್ರಿಕಿರಣದಲ್ಲಿ ಬೆಳ್ಳಿಯ ತಗಡಿನಿಂದ ಮಂಡಿತವಾಗಿದ್ದಂತೆ ಕಾಂತಿ ಯುಕ್ತವಾಗಿ ಕಾಣುವುವು. ಸೌಧಗಳಿಂದ ಅಸಂಖ್ಯ ದೀಪಗಳ ಬೆಳಕು ಹೊರಡುತಿದ್ದಿತು. ಮಧ್ಯದಲ್ಲಿದ್ದ ಭೂಖಂಡವು ಪ್ರಾಯವಾಗಿ ಜನಶೂನ್ಯ ವಾಗಿದ್ದಿತು. ಪಗಲೆಲ್ಲಾ ಗದ್ದಲವಾಗುತಿದ್ದಾ ಸ್ಥಳದಲ್ಲಿ ಆಗ ನಿಸ್ತಬ್ಧವಾಗಿದ್ದಿತು. ಅಲ್ಲಲ್ಲಿ ಮರದೆಲೆಗಳ ಮಧ್ಯೆ ಗುಂಪು ಗುಂಪಾಗಿದ್ದ ಮಿಂಚಿನ ಹುಳುಗಳು ಮಾಲಾ ಕಾರವಾಗಿ ಸಂಚರಿಸುತ್ತ ಸಮನಾನಂದವನ್ನುಂಟುಮಾಡುತಿದ್ದುವು. ಸುಗಂಧ ವುಳ್ಳ ತಂಗಾಳಿಯು ನಿಂತು ನಿಂತು ಬೀಸುತಿದ್ದಿತು. ಹತ್ತಿರದಲ್ಲಿ ಎತ್ತರವಾದ ಮರಗಳಿಂದ ಗಂಭೀರವಾದ ಶಬ್ದವು ಹೊರಡುತಿದ್ದಿತು. ಆ ಶಬ್ದವು ಹೊರತು ಬೇರೆ ಮತ್ತಾವ ಶಬ್ದವೂ ಇಲ್ಲ. ಒಂದೊಂದು ಪೇಚಕಪಕ್ಷಿಯು ಗೂಕಿಡುವ ಶಬ್ದವು ಮಾತ್ರ ಅಲ್ಲಲ್ಲಿ ಕೇಳುವುದು. ದೂರದಲ್ಲಿದ್ದ ಗದ್ದೆ ಹೊಲಗಳಲ್ಲಿ ಒಂದೆರಡು ಹಸುಗಳ ಹಂಬಾರವವು ಕೇಳುವುದು. ದೂರಗ್ರಾಮವಾಸಿಗಳು ಹಾಡುತಿದ್ದ ಗೀತದ ಗಾನವು ಒಂದೊಂದು ತಡವೆ ವಾಯುಮಾರ್ಗದಲ್ಲಿ ಬಂದು ಕಿವಿಗಿಂಪಾಗಿ ಕೇಳುವುದು. ಅಂತಹ ಸ್ಥಳದಲ್ಲಿ ಅಂತಹ ಸಮಯದಲ್ಲಿ ಅಂತಹ ಗೀತವು ಹೆಚ್ಚು ಸುಲಲಿತವಾದುದಾಗಿ ಬೋಧೆಯಾಗುವುದು.

ನಿಸ್ತಬ್ಧವಾಗಿಯೂ ಶಾಂತವಾಗಿಯೂ ಇದ್ದಾ ಮಾರ್ಗದಲ್ಲಿ ಹೋಗುತಿದ್ದ ಹಾಗೆ ವಿಮಲೆಯ ಹೃದಯವೂ ಸ್ವಲ್ಪ ಶಾಂತವಾಯಿತು. ಚಿಂತೆಯೂ ಸ್ವಲ್ಪ ಮಟ್ಟಿಗೆ ದೂರವಾಯಿತು. ಪ್ರಕೃತಿಯ ನಿಸ್ತಬ್ಧತೆಯನ್ನು ನೋಡಿ ವಿಮಲೆಯ ಹೃದಯದಲ್ಲಿ ಶಾಂತಭಾವವುಂಟಾಗಲಾರಂಭವಾಯಿತು. ದೇವಾಯತನದಲ್ಲಿ ಪ್ರಾತಃಕಾಲದಲ್ಲಿ ಒಬ್ಬಿಬ್ಬರು ಬಂದಿರುವರು. ಮಧ್ಯಾಹ್ನಕಾಲದಲ್ಲಿ ಕೋಲಾ ಹಲಕ್ಕೆ ಮಿತಿಯೇ ಇರದು. ಸಾಯಂಕಾಲದಲ್ಲಿ ಕೋಲಾಹಲಗಳೆಲ್ಲಾ ಕ್ರಮ ವಾಗಿ ಕಡಿಮೆಯಾಗುವುದು. ರಾತ್ರಿ ಎಲ್ಲೆಲ್ಲಿಯೂ ನಿರ್ಜನ ನಿಸ್ತಬ್ಧತೆ, ಶಾಂತಿ! ಅದನ್ನು ಕಂಡು ವಿಮಲೆಯ ಮನದಲ್ಲಿ ಯೋಚನೆಯೊಂದು ಹುಟ್ಟಿ ಹೀಗೆಂದವಳು ವಿವೇಚನೆಯಂ ಮಾಡಿದಳು:—"ನಮ್ಮ ಜೀವನವೂ ಇದೇ ಮಾದರಿಯಾಗಿರು ವುದು. ಶೈಶವದಲ್ಲಿ ಮನಸ್ಸಿನ ಪ್ರವೃತ್ತಿಗಳೆಲ್ಲವೂ ಮೆಲ್ಲಮೆಲ್ಲನೆ ಹೋಗು ತ್ತಿರುವುವು. ಯೌವನದಲ್ಲಿ ಅದೇ ಪ್ರವೃತ್ತಿಗಳಿಗೆ ದುರ್ದಾಂತಪ್ರತಾಪ— ಜಗತ್ಸಂಸಾರವನ್ನೆಲ್ಲಾ ನುಂಗುವುದಕ್ಕೆ ಹೋಗುವಂತಿರುವುವು. ವಾರ್ಧಕ್ಯದಲ್ಲಿ ಕ್ರಮವಾಗಿ ನಿಸ್ತೇಜವಾಗುತ್ತ ಬಂದು, ಶೀಘ್ರದಲ್ಲಿ ಶಾಂತವಾಗಿಯೂ ನಿಸ್ತಬ್ಧ ವಾಗಿಯೂ ಅನಂತವಾಗಿಯೂ ಇರುವ ಮಹಾಸಾಗರದಲ್ಲಿ ಲೀನವಾಗಿಹೋಗು ವುವು—ಜಲದ ಬಿಂದುವಿನಂತೆ ಅನಂತವಾದಾ ಸಾಗರದಲ್ಲಿ ಲೀನವಾಗಿಹೋಗುವುವು. ಹಾಗಾಗುವುದಾದರೆ ಇಷ್ಟೊಂದು ದೂಮುಧಾಮು ಏಕೆ? ಇಷ್ಟೊಂದು ದರ್ಪ ವೇಕೆ? ಇಷ್ಟೊಂದು ಗರ್ವವೇಕೆ? ಇಷ್ಟೊಂದು ಕೌಶಲವೇಕೆ? ಇಷ್ಟೊಂದು

ಯೋಚನೆಯೇಕೆ? ಇಷ್ಟೊಂದು ಕ್ರೋಧ, ಇಷ್ಟೊಂದು ಲೋಭ, ಇಷ್ಟೊಂದು ಅರ್ಥಲಾಲಸೆ, ಇಷ್ಟೊಂದು ಉಚ್ಚಾಭಿಲಾಷೆಯೇಕೆ? ಹೇಳಬಲ್ಲವರಾರು? ವಿಧಿಯ ನಿರ್ಬಂಧವನ್ನು ತಿಳಿಯಬಲ್ಲವರಾರು? ಮುಹೂರ್ತಕಾಲದಲ್ಲಿ ಸುಟ್ಟು ಭಸ್ಮವಾಗಿ ಹೋಗುವ ಪತಂಗವು ತನ್ನ ರೆಕ್ಕೆಯನ್ನು ವಿಸ್ತರಿಸಿಕೊಂಡು ಆಕಾಶಕ್ಕೆ ಹಾರ ಯತ್ನಿಸಲೇಕೆ? ಮುಹೂರ್ತಕಾಲದಲ್ಲಿ ಮನುಷ್ಯನ ಕಾಲಿಂದ ತುಳಿಯಲ್ಪಟ್ಟಾಗಲೀ ಪ್ರಾತಃಕಾಲದ ರವಿಯ ಕಿರಣದ ಸ್ಪರ್ಶದಿಂದ ಒಣಗಿಸಲ್ಪಟ್ಟಾಗಲೀ ನಶಿಸಿ ಹೋಗುವ ಶಿಶಿರಬಿಂದುವು ವಜ್ರದಂತೆ ಕಾಂತಿಯನ್ನು ಬೀರಯತ್ನಿಸಲೇಕೆ?''

ವಿಮಲೆಯ ಹೃದಯವು ಈ ಪ್ರಕಾರ ಚಿಂತಾಸ್ರೋತದಲ್ಲಿ ತೇಲಿಹೋಗುತ್ತಿರುವಾಗ ರಾತ್ರಿಯ ಎರಡನೆಯ ಜಾಮದ ಘಂಟಾಶಬ್ದವು ಕೇಳಿಬಂದು ಘಂಟಾರವವು ನಾಲ್ಕು ಕಡೆಗಳಲ್ಲಿದ್ದ ಸೌಧಮಾಲೆಗಳ ಮೇಲೆ ಬಿದ್ದು ಪ್ರತಿಹತವಾಗಿ ದಶಗುಣ ವೃದ್ಧಿಗೊಂಡು ವಾಯುಮಾರ್ಗದಲ್ಲಿ ಹೊರಟು ನಿಸ್ತಬ್ಧವಾಗಿದ್ದಾ ನಿಶಿಯ ಗಗನಕ್ಕೇರಿ ಸಂಚರಿಸಲಾರಂಭಿಸಿತು ; ಘಂಟೆಯ ಘೋಷವು ನಿಂತುಹೋಗುವುದರೊಳಗೆ ದೇವರಿಗೆ ಎರಡನೆಯ ಯಾಮದ ಪೂಜೆಗೆ ಆರಂಭವಾಯಿತು ; ಮಹಾದೇವನ ಅನಂತವಾದ ಸ್ತೋತ್ರಪಠನಕ್ಕಾರಂಭವಾಯಿತು ; ಮೇಘದ ಗಂಭೀರವಾದ ಗರ್ಜನೆಗೆ ಸಮನಾಗಿ ವೇದಘೋಷವು ಒಂದೊಂದು ತಡವೆ ಮಂದೀಭೂತವಾಗಿಯೂ ಒಂದೊಂದು ತಡವೆ ಸತೇಜವಾಗಿಯೂ ಉಚ್ಚರಿಸಲ್ಪಡುತಿದ್ದಿತು ; ದೇವೋಪಾಸಕರಾಗಿದ್ದವರ ಮನಸ್ಸು ದ್ರವೀಭೂತವಾಗಿ ಕರಗಲಾರಂಭಿಸಿತು ; ವಿಮಲೆಯೂ ಆ ಗಾನದಲ್ಲಿ ತನ್ನ ಕಂಠವನ್ನೂ ಸೇರಿಸಿದಳು ; ಅವಳ ಹೃದಯವು ಪವಿತ್ರವಾದ ಪ್ರೇಮದಲ್ಲಿಯೂ ಉಲ್ಲಾಸದಲ್ಲಿಯೂ ಮುಳುಗೇಳುವುದಕ್ಕಾರಂಭವಾಯಿತು.

ವಿಮಲೆಯು ಮಂದಿರದೊಳಗೆ ಬಂದಾಗ ಹೆಚ್ಚು ಮಂದಿ ಉಪಾಸಕರಿರಲಿಲ್ಲ: ಎಲ್ಲರೂ ಹೊರಟುಹೋಗಿದ್ದರು. ವಿಮಲೆಯು ಪೂಜೆಯನ್ನು ಮಾಡುವುದಕ್ಕೆ ತೊಡಗಿದಳು.

ಅವಳು ಹೆಚ್ಚು ಕಡಿಮೆ ಒಂದು ಪ್ರಹರದ ಕಾಲ ಮುಚ್ಚಿದ ಕಣ್ಣುಗಳುಳ್ಳವಳಾಗಿಯೂ ಕದಲದ ಶರೀರವುಳ್ಳವಳಾಗಿಯೂ ನಿಂತು ಧ್ಯಾನಪೂಜೆಗಳನ್ನು ಮಾಡತೊಡಗಿದಳು. ಅವಳ ಹೃದಯದಲ್ಲಿ ಪವಿತ್ರವಾದ ಆವ ಇಷ್ಟಾರ್ಥವುದಯವಾಗುತಿದ್ದಿತೋ ಅವಳ ವದನಮಂಡಲದಲ್ಲಿ ತದನುರೂಪವಾದ ಭಾವವು ಅಂಕಿತವಾಗುತಿದ್ದಿತು. ವಿಮಲೆಗೆ ತಾಯಿಯಿಲ್ಲ, ಅಣ್ಣತಮ್ಮಂದಿರಿಲ್ಲ, ಅಕ್ಕತಂಗಿಯರಿಲ್ಲ, ಗಂಡನಿಲ್ಲ, ಬಂಧು ಬಾಂಧವರಿಲ್ಲ, ಪಿತನೊಬ್ಬನು ಮಾತ್ರ ಅವಳ ಭಕ್ತಿಗೆ ಆಧಾರನಾಗಿದ್ದನು. ಪಿತನೇ ಅವಳ ಸ್ನೇಹಕ್ಕೆ ಪಾತ್ರ, ಪಿತನೇ ಅವಳಿಗೆ ಪರಮ ಬಂಧು, ಪಿತನೇ ಪೂಜಿಸಲ್ಪಡತಕ್ಕ ದೇವತೆಯಾಗಿದ್ದನು. ವಿಮಲೆಯ ಅಪಾರವಾದ ಸ್ನೇಹಪ್ರವಾಹವೂ ಸೀಮಾರಹಿತವಾದ ಭಕ್ತಿಸ್ರೋತವೂ ಅವುಗಳಿ

ಗೇಕವಮಾತ್ರವಾದಾ ಆಧಾರಾಭಿಮುಖವಾಗಿ ಓಡುತಿದ್ದುವು. ಪಿತನ ದುಃಖ ದಲ್ಲಿಯೇ ದುಃಖ, ಪಿತನ ಆನಂದದಲ್ಲಿಯೇ ಆನಂದ, ಪಿತನ ವಿಪತ್ತಿನಲ್ಲಿ ಚಿಂತೆ, ಪಿತನ ಸಂಪತ್ತಿನಲ್ಲಿ ಭರವಸೆ—ವಿಮಲೆಯು ಪಿತನ ಜೀವನದಲ್ಲಿ ಜೀವನಧಾರ ಣವಂ ಮಾಡಿಕೊಂಡಿದ್ದಳು; ಅಂತಹ ಪಿತನ ಮಂಗಳಾರ್ಥವಾಗಿ ಪ್ರಾರ್ಥನೆ ಯನ್ನು ಮಾಡುತ್ತ ಅವಳ ಹೃದಯದ ಬಾಗಿಲು ತೆರೆಯಲ್ಪಟ್ಟಿತು. ಹೃದಯ ದೊಳಗಣ ನಿಭೃತವಾದ ಕಂದರವು ಭಕ್ತಿರಸದಿಂದ ಸೂಸುವಂತೆ ತುಂಬಿತು. ಅರ್ಧ ಪ್ರಹರದ ಕಾಲ ವಿಮಲೆಯು ಉಪಾಸನೆಯನ್ನು ಮಾಡಿದಳು. ಉಪಾ ಸನೆಯಂ ಮಾಡಿ ನಮಸ್ಕಾರವನ್ನು ಮಾಡಿ ಎದ್ದುನಿಂತ ಬಳಿಕ ಅವಳ ಹೃದಯವು ಸಂಪೂರ್ಣವಾಗಿ ಚಿಂತಾಶೂನ್ಯವಾಗಿ ಶಾಂತವಾಯಿತು.

ತರುವಾಯ ಅವಳು ಕೂಡಲೇ ಮಂದಿರದಿಂದ ಹೊರಗೆ ಹೋಗದೆ ಔತ್ಸುಕ್ಯದಿಂದರಳಿದ ಕಣ್ಣುಗಳಿಂದ ಮಂದಿರದಲ್ಲಿ ನಾಲ್ಕುಕಡೆ ನೋಡುತಿದ್ದಳು. ಅವಳು ಮಂದಿರಕ್ಕೆ ಬಂದು ಬಹಳ ದಿನಗಳಾಗಿದ್ದುವು. ಮಂದಿರದಲ್ಲಿ ನೋಡಿ ದುದೆಲ್ಲಾ ನೂತನವಾದುವೆಂದು ತೋರುವುದು, ಪ್ರಶಸ್ತವಾಗಿಯೂ ನಿರ್ಮಲ ವಾಗಿಯೂ ಕಟ್ಟಲ್ಪಟ್ಟಿದ್ದಾ ದೊಡ್ಡ ಕಟ್ಟಣವನ್ನು ಅವಳು ನೋಡಿರಲಿಲ್ಲ, ಸುವರ್ಣ ಪುಷ್ಪಗಳಿಂದಲಂಕೃತವಾಗಿದ್ದಾ ಕಂಭಗಳನ್ನು ನೋಡಿ ಆಶ್ಚರ್ಯಪಡುವಳು. ಗೋಡೆಗಳ ಮೇಲೆ ಕೆತ್ತಿದ್ದ ಶಿಲಾಮೂರ್ತಿ ಮುಂತಾದ ಶಿಲ್ಪಕಾರ್ಯವನ್ನು ನೋಡಿ ಬೆರಗಾಗುವಳು. ಅತ್ತಿತ್ತ ಮೆಲ್ಲಮೆಲ್ಲನೆ ತಿರುಗಾಡುತ್ತ ದೇವ ದಾಸಿಯರನ್ನು ಕುರಿತು ಮಂದಿರದ ವೃತ್ತಾಂತದ ವಿಷಯವಾಗಿ ವಿಚಾರವಂ ಮಾಡುವಳು, ಉಪಾಸಕರು ಮತ್ತಾರೂ ಅಲ್ಲಿರಲಿಲ್ಲವಾದಕಾರಣ ಅವಳ ಔತ್ಸುಕ್ಯಕ್ಕೆ ವ್ಯಾಘಾತವಾವುದೂ ಉಂಟಾಗಲಿಲ್ಲ.

ಒಂದು ಪಾರ್ಶ್ವದಲ್ಲೊಬ್ಬ ಉಪಾಸಕನು ಒಬ್ಬೊಂಟಿಗನಾಗಿ ಮಲಗಿ ನಿದ್ರಿತನಾಗಿದ್ದನು. ವಿಮಲೆಯ ದೃಷ್ಟಿಯು ಇದ್ದಕ್ಕಿದ್ದಹಾಗೆ ಅತ್ತಕಡೆ ಬಿದ್ದಿತು; ಅವನ ಅಲೌಕಿಕ ತೇಜೋಮಯವಾದ ಸೌಂದರ್ಯವನ್ನೂ ಪುಂಜಾಗಿದ್ದಾ ವ್ಯೆಯನ್ನೂ ನೋಡಿ ವಿಸ್ಮಿತೆಯಾದಳು—ಪುನಃ ದೃಷ್ಟಿಯನ್ನು ಅತ್ತಕಡೆಯಿಂದ ಹಿಂದಕ್ಕೆ ತಿರುಗಿಸಲಾರದೆ ಹೋದಳು; ಯುವಕನ ಲಲಾಟವು ಪ್ರಶಸ್ತವಾಗಿ ಉದಾರವ್ಯಂಜಕವಾಗಿದ್ದರೂ ನಿದ್ರಿತಾವಸ್ಥೆಯಲ್ಲಿಯೂ ಗಾಢವಾದ ಚಿಂತೆಯಿಂದ ಕುಂಚಿತವಾಗಿದ್ದಂತಿರುವುದು ; ಕಣ್ಣುಗಳು ಮುಚ್ಚಿದ್ದುವು: ವದನಮಂಡಲವು ಉಜ್ವಲವಾಗಿ ವೀರದರ್ಪ ಪ್ರಕಾಶಕವಾಗಿದ್ದಿತು ; ವಿಮಲೆಯು ನಿದ್ರಿತನಾಗಿದ್ದಾ ಉಪಾಸಕನನ್ನು ಅಪಾದಮಸ್ತವಾಗಿ ನೋಡಿ, ಅವನಾರೋ ವೀರಪುರುಷನೆಂದೂ ಆವುದೋ ವೀರವ್ರತದಲ್ಲಿ ವ್ರತಿಯಾಗಿ ದೂರದೇಶಕ್ಕೆ ಹೋಗುವವನಾಗಿದ್ದನೆಂದೂ ಹೋಗುತ್ತ ಹಾದಿಯಲ್ಲಿದ್ದ ಮಂದಿರವನ್ನು ಕಂಡು ದೇವರ ಸಂದರ್ಶನಕ್ಕೆ ಬಂದಿದ್ದವನಾಗಿರಬಹುದೆಂದೂ ಶ್ರಾಂತನಾಗಿಯೋ ಅಥವಾ ಉಳಿಯುವುದಕ್ಕೆ

ಬೇರೆ ಸ್ಥಳವು ದೊರಿಯುದೆಯೋ ದೇವರ ದರ್ಶನವಾದ ಬಳಿಕ ಅಲ್ಲಿ ಮಲಗಿಕೊಂಡಿರ ಬಹುದೆಂದೂ ತಿಳಿದುಕೊಂಡಳು. ವಿಮಲೆಯ ಅಬಲಾ ಹೃದಯದಲ್ಲಿ ವೀರಭಾವಕ್ಕೆ ಅಭಾವವಿರಲಿಲ್ಲವಾದಕಾರಣ ಉಪಾಸಕನ ಅಲೌಕಿಕವಾದ ವೀರಾಕೃತಿಯನ್ನು ಕಂಡು ಅವಳ ಹೃದಯವು ಒಮ್ಮೆಂದೊಮ್ಮೆ ಸ್ತಂಭಿತವಾಯಿತು ; ಎವೆ ಇಕ್ಕದೆ ಆ ವೀರಪುರುಷನನ್ನು ನೋಡುತ್ತಿದ್ದಳು.

ಉಪಾಸಕನಿಗೆ ನಿದ್ರಾಭಂಗವಾಗಿ ಎದ್ದು ನಿಂತುಕೊಂಡನು. ತನ್ನೆದು ರಿಗೆ ಉಜ್ವಲವಾದ ಕಣ್ಣುಗಳುಳ್ಳ ತನ್ವಂಗಿಯೊಬ್ಬಳು ನಿಂತಿದ್ದುದನ್ನು ಕಂಡನು. ನಾಲ್ಕು ಕಣ್ಣುಗಳೂ ಕೂಡಿದುವು. ಕೂಡಲೇ ವಿಮಲೆಗೆ ಎಚ್ಚರವಾಗಿ ತಾನು ಅಪರಿಚಿತನಾಗಿದ್ದಾ ಪುರುಷನನ್ನು ನೋಡುತಿದ್ದೆನೆಂದು ಬೋಧೆಯುಂಟಾಗಿ, ಬಳಿಕ ಲಜ್ಜೆಯಿಂದ ಮುಖತಗ್ಗಿದವಳಾಗಿ ಮೆಲ್ಲಮೆಲ್ಲನೆ ಮಂದಿರದಿಂದ ಹೊರಗೆ ಹೊರಟುಹೋದಳು.

ನಿಶಿಯು ಪ್ರಭಾತವಾಯಿತು. ಪ್ರಾತಃಕಾಲದ ಪ್ರಥಮರಶ್ಮಿಯು ವಿಮ ಲೆಯ ಕಣ್ಣುಗಳಮೇಲೆ ಬಿದ್ದಿತು. ಅಲ್ಲಲ್ಲಿ ಒಬ್ಬಿಬ್ಬರು ಹೊರಗೆ ಹೊರಟು ಬರು ತಿದ್ದರು. ವಿಮಲೆಗೆ ಜನರೆದುರಿಗೆ ಬೀದಿಯಲ್ಲಿ ತಿರುಗಾಡುವ ಅಭ್ಯಾಸವಿಲ್ಲದ ಕಾರಣ ಭಿಡೆಯುಳ್ಳವಳಾಗಿ ಬೇಗ ಬೇಗನೆ ಬಿಡುದೀ ಮನೆಯಕಡೆ ಹೋದಳು. ವೃದ್ಧರಾದ ಮುತ್ತೈದೆಯರು, "ಅಷ್ಟೊಂದು ಹೊತ್ತು ಏನನ್ನು ಮಾಡು ತ್ತಿದ್ದೆ ?" ಎಂದು ಕೇಳಿದರೆ, ವಿಮಲೆಯು ಏನೆಂದುತ್ತರವನ್ನು ಕೊಡುವಳು ?— ಅದುವರೆಗೂ ಉಪಾಸನೆಯಂ ಮಾಡುತ್ತಿದ್ದೆನೆಂದು ಹೇಳುವಳೆ ?

ವಿಮಲೆಗೆ ಬೇರೆ ಚಿಂತೆಗಳು ಹುಟ್ಟಿದುವು. ವೀರಪುರುಷನಾರು ? ಎಂತಹ ವ್ರತದಲ್ಲಿ ವ್ರತಿಯಾಗಿ ರಾತ್ರಿಯೆಲ್ಲಾ ಉಪಾಸನೆಯಂ ಮಾಡುತಿದ್ದನು ? ಅಂತಹ ಭಾಗ್ಯಶಾಲಿಯಾದ ವೀರಪುರುಷನಿಗೆ ಪ್ರಾರ್ಥನೀಯವಾದುದಾವುದು ? ಎಂಬಿವೇ ಮುಂತಾದ ಚಿಂತೆಯಿಂದ ಅಭಿಭೂತೆಯಾಗಿ ತನ್ನ ಶಯನಗೃಹಕ್ಕೆ ಹೋದಳು.

---

## ಹತ್ತನೆಯ ಪರಿಚ್ಛೇದ

Amid the jagged shadows
Of mossy leafless boughs,
Kneeling in the moonlight
To make her gentle vows ;

Her slender palms together prest,
And heaving sometimes on her breast:
Her face resigned to bliss or bale,—
Her face, O ! call it fair not bale,—
And both her eyes more bright than clear,
And each about to have a tear.
*Coleridge*

ರಾತ್ರಿಯೆಲ್ಲಾ ಜಾಗರಣೆಯಂ ಮಾಡಿದ್ದುದರಿಂದ ಸ್ವಲ್ಪ ವಿಶ್ರಮಿಸಿ ಕೊಳ್ಳುವುದಕ್ಕೆ ಸಲುವಾಗಿ ವಿಮಲೆಯು ತನ್ನ ಶಯನಭವನಕ್ಕೆ ಹೋದಳು. ಹಗಲು ಹೊತ್ತಾದುದರಿಂದ ಹೆಚ್ಚು ನಿದ್ರೆಯು ಹತ್ತಲಿಲ್ಲ. ಸ್ವಲ್ಪ ಹೊತ್ತು ನಿದ್ರೆಯು ಬಂದಿದ್ದುದು ಸ್ವಪ್ನದಲ್ಲಿ ಪರ್ಯವಸಾನವಾಯಿತು. ಆ ದೇವಪ್ರಾಂಗಣ, ಆ ಚಂದ್ರಾಲೋಕದಲ್ಲಿ ಮಹಾದೇವನ ಸ್ತೋತ್ರಪಠನ, ದೇವಮಂದಿರದಲ್ಲಿ ಆ ಮಹೇಶ್ವರಮೂರ್ತಿ, ಪಾರ್ಶ್ವದಲ್ಲಿ ಆ ಉಪಾಸಕ—ಇವೇ ಮುಂತಾದುದನ್ನು ಕನಸಿನಲ್ಲಿ ಕಂಡಳು.

ನಿದ್ರೆಯು ಮುಗಿದು ಎದ್ದು ನೋಡಿದಳು; ಕೊಟಡಿಯೊಳಗೆ ಬಿಸಿಲು ಬಿದ್ದಿದ್ದಿತು; ಪ್ರಾಂಗಣದಲ್ಲಿ ಜನರು ತಿರುಗಾಡುತಿದ್ದರು. ಹಕ್ಕಿಗಳ ಕಾಕಲಿ ಶಬ್ದವು ಕೇಳುತಿದ್ದಿತು. ರಾತ್ರಿ ಜಾಗರಣೆಯಿಂದ ವಿಮಲೆಯ ಕಣ್ಣುಗಳು ಮಸಕಾಗಿದ್ದುವು. ಅವಳು ಸ್ವಾಭಾವಿಕವಾಗಿ ಗೌರಾಂಗಿ. ಅವಳ ಗೌರವಾದ ವದನವು ರಕ್ತಶೂನ್ಯವಾಗಿ ಮತ್ತಷ್ಟು ಬೆಳ್ಳಗಾಗಿದ್ದಿತು. ಕಪೋಲದಲ್ಲಿಯೂ ಗಂಡಸ್ಥಳದಲ್ಲಿಯೂ ವಕ್ಷಸ್ಥಳದಲ್ಲಿಯೂ ಸ್ವಲ್ಪ ಸ್ವಲ್ಪ ಬೆವರ್ಗೊಂಡಿದ್ದಿತು. ಬಿಚ್ಚಿ ಕೆದರಿದ್ದ ಕೂದಲನ್ನು ಮುಡಿಕಟ್ಟಿಕೊಂಡು ಹಾಸಿಗೆಯನ್ನು ಬಿಟ್ಟಿದ್ದಳು.

ಹಗಲೆಲ್ಲಾ ಅನ್ಯಮನಸ್ಕಳಾದವಳಂತಿದ್ದಳು. ಹಿಂದಿನ ರಾತ್ರಿಯ ವಿಚಾರಗಳು ನೆನವಿಗೆ ಬರುವುವು. ಅನೇಕವಾಗಿ ಚಿಂತಿಸುತ್ತ ಅದಕ್ಕೆ ಕಾರಣವನ್ನು ತಿಳಿಯಲಾರದವಳಾಗಿದ್ದಳು.

ಅಂದು ರಾತ್ರಿ ಒಂದನೆಯ ಪ್ರಹರದ ಸಮಯದಲ್ಲಿ ವಿಮಲೆಯು ಪೂಜೆಯಂ ಮಾಡುವುದಕ್ಕೆ ಸಲುವಾಗಿ ಹೋದಳು. ಹಗಲೆಲ್ಲಾ ಅನ್ಯಮನಸ್ಕಳಾಗಿದ್ದರೂ ಪೂಜೆಯನ್ನು ಮಾಡುವ ಸಮಯದಲ್ಲಿ ಅವಳ ಚಿತ್ತವು ಸ್ಥಿರಭಾವವನ್ನು ಹೊಂದಿದ್ದಿತು. ನಮಸ್ಕಾರವನ್ನು ಮಾಡಿ ಪೂಜೆಯನ್ನು ಪೂರೈಸಿದಳು.

ಎದ್ದೊಡನೆ ಅಪರಿಚಿತನಾಗಿದ್ದಾ ಉಪಾಸಕನನ್ನು ನೋಡಿದಳು! ಅವನೂ

ಪೂಜೆಯನ್ನು ಪೂರೈಸಿಕೊಂಡಿದ್ದನು! ವಿಮಲೆಗೆ ಚಿತ್ತವನ್ನು ಸ್ವಾಧೀನದಲ್ಲಿಟ್ಟು ಕೊಳ್ಳುವ ಶಕ್ತಿಯಿದ್ದಿತು. ಅವಳು ಚಿತ್ತವನ್ನು ವಶದಲ್ಲಿಟ್ಟುಕೊಂಡು ಕ್ಷಣ ಮಾತ್ರ ಉಪಾಸಕನ ಕಡೆ ನೋಡಿ ಅವನತ ಮುಖಿಯಾಗಿ ಮಂದಿರದಿಂದ ಹೊರಗೆ ಹೋಗಯತ್ನಿಸಿದಳು.

ಯುವಕನು ಸ್ವಲ್ಪ ವಿಸ್ಮಿತನಾದನು. ಎರಡು ದಿನವೂ ಪರಮಸುಂದರಿ ಯಾಗಿದ್ದಾ ರಮಣಿಯನ್ನು ನೋಡಿದನು. ಎರಡು ದಿನವೂ ಸುಂದರಿಯು ಒಂದೇ ದೃಷ್ಟಿಯಿಂದ ಕ್ಷಣಮಾತ್ರ ಅವನನ್ನು ದೃಷ್ಟಿಸಿ ನೋಡಿದಳು. ಅವನ ಮನಸ್ಸಿನಲ್ಲಿ, ರಮಣಿಯು ವಿಶೇಷವೇನೋ ಹೇಳತಕ್ಕುದಿದೆಯೆಂದೂ ಆದರೆ ಅಪರಿಚಿತ ಪುರುಷನ ಸಂಗಡ ಮಾತನಾಡುವುದಕ್ಕೆ ಲಜ್ಜೆಯುಳ್ಳವಳಾಗಿದ್ದಳೆಂದೂ ಸಿದ್ಧಾಂತವಾಗಿ ತಿಳಿದುಕೊಂಡನು. ತಾನೇ ಅವಳ ಬಳಿಗೆ ಹೋಗಿ ಕೇಳಬೇಕೆಂದು ಇಷ್ಟವುಳ್ಳವನಾದನು. ಆದರೆ ಅಪರಿಚಿತೆಯಾಗಿಯೂ ತರುಣಿಯಾಗಿಯೂ ಇದ್ದ ದೊಡ್ಡವರ ಮನೆಯ ಕನ್ಯೆಯ ಸಂಗಡ ಮಾತನಾಡುವುದು ಹೇಗೆ? ಎರಡು ದಿನದ ವೃತ್ತಾಂತವನ್ನೂ ಕ್ಷಣಕಾಲ ಯೋಚಿಸಿದವನಾಗಿ, ಕಡೆಗೆ "ನಾನೇ ಹೋಗಿ ವಿಚಾರವನ್ನು ಮಾಡದಿದ್ದರೆ ಒಂದಾವುದೋ ವಿಶೇಷವಾದ ವಿದ್ಯಮಾನವು ಹೊರ ಪಡದೆ ಹೋಗುವುದು. ಅವಳಾವ ಉದ್ದೇಶಕ್ಕೆ ಸಲುವಾಗಿ ಮಂದಿರಕ್ಕೆ ಬಂದಿರು ವಳೋ ಅದೂ ನಿಷ್ಫಲವಾಗುವುದು" ಎಂದು ಯೋಚಿಸಿಕೊಂಡು ಮೆಲ್ಲಮೆಲ್ಲನೆ ವಿಮಲೆಯ ಬಳಿ ಹೋಗಿ, "ಭದ್ರೆ! ಅಪರಿಚಿತನಾಗಿದ್ದರೂ ಬಂದು ಮಾತನಾಡು ತ್ತೇನೆ. ಕ್ಷಮಿಸು. ನನ್ನ ಮನಸ್ಸಿಗೆ ನೀನೇನನ್ನೋ ಹೇಳತಕ್ಕುದಿದೆಯೆಂದು ತೋರುತ್ತದೆ, ಹಾಗಿದ್ದರೆ ಹೇಳಬಹುದು" ಎಂದು ಹೇಳಿದನು.

ವಿಮಲೆಯ ಕಿವಿಗಳಲ್ಲಿ ಅಮೃತವನ್ನು ಹೊಯ್ದಂತಾಗಿ ಶರೀರವು ಪುಲಕಿಸಿ ಸ್ವಲ್ಪ ಕಂಪಿತವಾಯಿತು. ಅವಳು ಮುಖವನ್ನು ತಗ್ಗಿಸಿಕೊಂಡು ನಿರುತ್ತರೆಯಾಗಿ ನಿಂತಿದ್ದಳು.

ಯುವಕನು ನೋಡಿದನು; ಉತ್ತರವಿಲ್ಲ. ಆದರೂ ರಮಣಿಯು ನಿಂತಲ್ಲಿಂದ ಕದಲಲಿಲ್ಲ,—ಅವನು ಪುನಃ "ಭದ್ರೆ! ಹೇಳತಕ್ಕುದೇನಾದರೂ ಇದ್ದರೆ ಹೇಳ ಬಹುದು, ಕೇಳುವೆನು, ಇಲ್ಲಿ ಮತ್ತಾರೂ ಇಲ್ಲ" ಎಂದನು.

ವಿಮಲೆಗೆ ವಿಹ್ವಲತೆಯೂ ಕಳವಳವೂ ಹೆಚ್ಚು ಹೊತ್ತು ಸ್ಥಾಯಿಯಾಗಿರದು. ಅವಳು ಮೆಲ್ಲಮೆಲ್ಲನೆ "ತಮ್ಮ ಹೆಸರೇನು?" ಎಂದು ಕೇಳಿದಳು.

ಯುವಕ—ಹೆಸರು ಪ್ರಕೃತಕ್ಕೆ ಅಜ್ಞಾತವಾಗಿರುವುದು. ಈಗ್ಗೆ ನನ್ನನ್ನು ಇಂದ್ರನಾಥನೆಂದು ತಿಳಿದಿರು.

ವಿಮಲೆ—ತಾವು ಮಹೇಶ್ವರನ ಮಂದಿರಕ್ಕೆ ಬಂದು ಉಪಾಸನೆಯಂ ಮಾಡಲು ಕಾರಣವೇನೋ ಅದನ್ನು ಕುರಿತು ಕೇಳಬಹುದೆ?

ಇಂದ್ರನಾಥ—ಸಂಕ್ಷೇಪವಾಗಿ ಹೇಳುವೆನು—ಅನಾಥೆಯಾಗಿಯೂ ಆಶ್ರಯ

ವಿಲ್ಲದವಳಾಗಿಯೂ ಇರುವ ಒಬ್ಬ ಹೆಂಗಸಿಗೆ ಸಹಾಯವನ್ನು ಮಾಡಬೇಕೆಂದು ಸಂಕಲ್ಪವುಳ್ಳವನಾಗಿದ್ದೇನೆ.

ವಿಮಲೆ—ಧನದಿಂದ ಸಹಾಯವಾಗಬಹುದೆ?

ಇಂದ್ರನಾಥ—ಇಲ್ಲ—ಆದರೂ ನೀನು ಅಪರಿಚಿತರಾದವರಿಗೂ ಉಪಕಾರವಂ ಮಾಡಬೇಕೆಂದು ತತ್ಪರೆಯಾಗಿರುವುದನ್ನು ಕಂಡು ಆನಂದಿತನಾದೆನು. ಈಶ್ವರನು ನಿನ್ನನ್ನು ಸುಖವಾಗಿಟ್ಟಿರಲಿ.

ವಿಮಲೆ—ಹಾಗಾದರೆ ಆವ ವಿಧವಾಗಿ ಸಹಾಯವಾಗುವ ಸಂಭವ?

ಇಂದ್ರನಾಥ—ವಿಚಾರಣೆಯಿಂದ; ನಾನೀಗ ಮಾಂಗೀರಿಗೆ ಹೋಗಿ ವಿಚಾರಣೆಯಾಗಬೇಕೆಂದು ಪ್ರಾರ್ಥಿಸುವೆನು; ಆದರೆ ನೀನು ಅವುಗಳನ್ನೆಲ್ಲಾ ವಿಚಾರ ಮಾಡಲೇಕೆ?

ಮಾಂಗೀರ ಹೆಸರನ್ನು ಕೇಳಿ ವಿಮಲೆಗೆ ತನ್ನ ಪಿತನ ನೆನಪು ಬಂದಿತು. ಅವನಿಗೆ ವಿಪತ್ತುಂಟಾಗುವ ಆಶಂಕೆಯುಂಟಾಯಿತು. ಆಗವಳ ಲಜ್ಜೆಯು ಒಮ್ಮೆ ದೂರವಾಯಿತು. ಅವಳು ಸಜಲನಯನೆಯಾಗಿ ಇಂದ್ರನಾಥನನ್ನು ಕುರಿತು "ನೀನು ವೀರಪುರುಷನಾಗಿ ತೋರುತ್ತದೆ, ನಿನಗೆ ಹೆಚ್ಚು ಅಧಿಕಾರವುಂಟು. ಈ ದಾಸಿಯ ಭಿಕ್ಷೆಯೊಂದನ್ನು ದಯಪಾಲಿಸಿ ನಡೆಯಿಸುವುದಾಗಿ ಪ್ರತಿಜ್ಞೆಯನ್ನು ಮಾಡಬೇಕೆಂದು ಬೇಡುವೆನು" ಎಂದಳು.

ಇಂದ್ರನಾಥ—ರಮಣಿ! ಅಧಿಕಾರವೆನಗಿಲ್ಲ. ಆದರೂ ನಿನ್ನ ಪ್ರಾರ್ಥನೆಯನ್ನು ನಡೆಯಿಸಿಕೊಡಲು ಪ್ರಯತ್ನಪಡುವೆನು—ಅದಾವುದು?

ವಿಮಲೆ—ಮಾಂಗೀರಿನಲ್ಲಿ ನೀನು ವಂಗದೇಶದ ದಿವಾನ ಸತೀಶಚಂದ್ರನನ್ನು ನೋಡುವೆ. ಅವನೀಗ ವಿಪತ್ತಿನಲ್ಲಿ ಬಿದ್ದಿದ್ದಾನೆ, ಅವನನ್ನು ರಕ್ಷಿಸುವುದಾಗಿ ಪ್ರತಿಜ್ಞೆಯನ್ನು ಮಾಡು.

ಇಂದ್ರನಾಥನ ಮುಖವು ಗಂಭೀರಭಾವವನ್ನು ತಾಳಿತು. ಲಲಾಟವು ಸುರುಗಿತು. ವಿಮಲೆಯು ಪುನಃ ಹೇಳತೊಡಗಿದಳು :—"ಆ ವಿಚಾರದಲ್ಲಿ ನೀನು ಚಿಂತಿಸಲೇಕೆ? ವಿಪನ್ನರ ವಿಪತ್ತನ್ನು ಶಾಂತಿಮಾಡುವುದು ವೀರಪುರುಷರಿಗೆ ಕರ್ತವ್ಯವಾಗಿದೆ, ಮತ್ತು ಜನರು ಅವನನ್ನು ಕೆಟ್ಟವನೆಂದು ಹೇಳಿದ್ದುದನ್ನು ಕೇಳಿದ್ದರೆ ಅದು ಸುಳ್ಳೆಂದು ತಿಳಿ. ಅದೆಲ್ಲಾ ಶಕುನಿಯ ವಂಚನೆ."

ಇಂದ್ರನಾಥ—ನೀನು ಹೇಳುವುದೆನಗೆ ಅರ್ಥವಾಗಲಿಲ್ಲ. ಸ್ಪಷ್ಟವಾಗಿ ಹೇಳು, ಶಕುನಿ ಯಾರು?

ವಿಮಲೆ—ಶಕುನಿಯು ಸತೀಶಚಂದ್ರನಿಗೆ ಶನಿ. ಆ ಪಾಮರನೇ ಎಲ್ಲಾ ದೋಷಗಳಲ್ಲೂ ದೋಷಿಯಾಗಿರುವನು. ಸತೀಶಚಂದ್ರನ ಉದಾರಚರಿತೆಯು ದೋಷಾಕ್ತವಾದುದಲ್ಲ. ವೀರಪುರುಷ! ನೀನೀಗ ಸತೀಶಚಂದ್ರನಿಗೆ ಸಹಾಯವನ್ನು ಮಾಡುವೆನೆಂದು ದೇವಾಲಯದಲ್ಲಿ ಪ್ರತಿಜ್ಞೆಯನ್ನು ಮಾಡಿ ಅಭಯವನ್ನು ಕೊಡು.

ಇಂದ್ರನಾಥನು ವಿಮಲೆಯ ಮಾತನ್ನು ಕೇಳಿ ಬುದ್ಧಿಹೋದವನಹಾಗಾದನು. ಸ್ವಲ್ಪಹೊತ್ತಾದ ಬಳಿಕ, "ಸತೀಶಚಂದ್ರನು ನಿಜವಾಗಿಯೂ ನಿರ್ದೋಷಿಯಾಗಿದ್ದರೆ ನನ್ನ ಮೈರಕ್ತವನ್ನು ಸುರಿಸಿ ಅವನನ್ನುಳಿಸುವ ಪ್ರಯತ್ನವಂ ಮಾಡುವೆನು. ಆದರೆ ನಿನ್ನ ಹೆಸರೇನು? ನೀನಾರು? ನನ್ನ ಉಪಾಸನೆಯನ್ನೂ ನಾನು ಪ್ರತಿಜ್ಞೆಮಾಡಲು ಕಾರಣವನ್ನೂ ತಿಳಿದ ಬಗೆ ಹೇಗೆ?" ಎಂದು ಕೇಳಿದನು.

ವಿಮಲೆ—(ಮೆಲ್ಲಮೆಲ್ಲನೆ) ನಿನ್ನ ಉದ್ದೇಶವನ್ನು ನಾನರಿಯೆನು, ಆದರೆ ನೀನೊಬ್ಬ ಮಹಾ ವೀರಪುರುಷನೆಂದೂ, ಅವದೋ ಒಂದು ಮಹತ್ಕಾರ್ಯಕ್ಕೆ ಸಲುವಾಗಿ ಮಾಂಗೀರಿಗೆ ಹೋಗುತ್ತಿರುವೆ ಎಂದೂ ನನ್ನ ಹೃದಯವೆನಗೆ ತಿಳಿಯ ಹೇಳಿತು. ನಿನ್ನ ಪರಿಚಯವನ್ನು ತಿಳಿದುಕೊಳ್ಳಬೇಕೆಂದಿದ್ದೇನೆ.

ಇಂದ್ರನಾಥ—ನನ್ನ ಪರಿಚಯವನ್ನು ಇಷ್ಟರವಟ್ಟಿಗೆ ತಿಳಿದಿರು. ನಾನೊಬ್ಬ ಕಾಯಸ್ಥ ಜಮೀನುದಾರನ ಮಗನು, ಯುದ್ಧವ್ಯವಸಾಯವನ್ನು ಕಲಿಯುವುದಕ್ಕೆ ಸಲುವಾಗಿ ಮಾಂಗೀರಿಗೆ ಹೋಗುವೆನು.

ಬ್ರಾಹ್ಮಣ ಕುಮಾರಿಯು ನಿಸ್ತಬ್ಧೆಯಾಗಿ ಮಂದಿರದಿಂದ ಹೊರಟು ಹೋದಳು.

---

## ಹನ್ನೊಂದನೆಯ ಪರಿಚ್ಛೇದ

How he heard the ancient helmsman
Chant a song so wild and clear,
That the sailing sea-bird slowly
Poised upon the mast to hear,
Till his soul was full of longing,
And he cried with impulse strong,—
"Helmsman! for the love of heaven,
Teach me, too, that wondrous song!" *Longfellow*

ಗಂಗಾ ನದಿಯ ತೀರದಲ್ಲಿ ಮಾಂಗೀರುನಗರದ ಭೀಮಾಕಾಂತ ದುರ್ಗವು ಕಣ್ಗೊಳಿಸುತಿದೆ. ಗಂಗೆಯ ತರಂಗಮಾಲೆಗಳು ಕಲ ಕಲ ರವದಿಂದ ಹರಿದುಹೋಗುತ್ತಿವೆ. ಒಂದೊಂದು ತಡವೆ ದುರ್ಗದ ಗೋಡೆಗೆ ಬಲವಾಗಿ ಹೊಡೆದು ನೊರೆ ನೊರೆಯಾಗಿ ಬೇಗಬೇಗನೆ ವೇಗವಾಗಿ ಹರಿದುಹೋಗುತಿವೆ; ಅಲ್ಲಲ್ಲಿ ನದಿಯ ದಡದ ಮಣ್ಣು ಕೂಲಾರಿ ಕುಸಿದುಬಿದ್ದು ಶಬ್ದವಾಗುತಿದೆ; ಜಲರಾಶಿಯು ಸ್ವಲ್ಪ ಮಾತ್ರ ಕೆಸರಾಗಿ ಪುನಃ ಮುಹೂರ್ತಮಧ್ಯದಲ್ಲಿ ತನ್ನ ಗಂಭೀರವಾದ ಆಕಾರವನ್ನು ತಾಳಿ ಹರಿದುಹೋಗುತಿದೆ; ಅಲ್ಲಲ್ಲಿ ನದಿಯಲ್ಲಿ ಮರಳಗುಡ್ಡೆಗಳು ಕಾಣುತಿವೆ; ಮರಳಗುಡ್ಡೆಗಳ ಮೇಲೆ ನಾನಾತೆರನ ಹಕ್ಕಿಗಳು ಸಂಚರಿಸುತಿವೆ; ಒಂದೊಂದು ಸ್ಥಳದಲ್ಲಿ ಹಡಗಿನಲ್ಲಿ ವಾಸಮಾಡತಕ್ಕವರು ಹಡಗಿನಿಂದಿಳಿದು ದಡಕ್ಕೆ ಬಂದು

ಇಲ್ಲದವಳಾಗಿಯೂ ಇರುವ ಒಬ್ಬ ಹೆಂಗಸಿಗೆ ಸಹಾಯವನ್ನು ಮಾಡಬೇಕೆಂದು ಸಂಕಲ್ಪವುಳ್ಳವನಾಗಿದ್ದೇನೆ.

ವಿಮಲೆ—ಧನದಿಂದ ಸಹಾಯವಾಗಬಹುದೆ?

ಇಂದ್ರನಾಥ—ಇಲ್ಲ—ಆದರೂ ನೀನು ಅಪರಿಚಿತರಾದವರಿಗೂ ಉಪಕಾರವಂ ಮಾಡಬೇಕೆಂದು ತತ್ಪರೆಯಾಗಿರುವುದನ್ನು ಕಂಡು ಆನಂದಿತನಾದೆನು. ಈಶ್ವರನು ನಿನ್ನನ್ನು ಸುಖವಾಗಿಟ್ಟಿರಲಿ.

ವಿಮಲೆ—ಹಾಗಾದರೆ ಆವ ವಿಧವಾಗಿ ಸಹಾಯವಾಗುವ ಸಂಭವ?

ಇಂದ್ರನಾಥ—ವಿಚಾರಣೆಯಿಂದ ; ನಾನೀಗ ಮಾಂಗೀರಿಗೆ ಹೋಗಿ ವಿಚಾರಣೆಯಾಗಬೇಕೆಂದು ಪ್ರಾರ್ಥಿಸುವೆನು ; ಆದರೆ ನೀನು ಅವುಗಳನ್ನೆಲ್ಲಾ ವಿಚಾರ ಮಾಡಲೇಕೆ?

ಮಾಂಗೀರ ಹೆಸರನ್ನು ಕೇಳಿ ವಿಮಲೆಗೆ ತನ್ನ ಪಿತನ ನೆನವು ಬಂದಿತು. ಅವನಿಗೆ ವಿಪತ್ತುಂಟಾಗುವ ಆಶಂಕೆಯುಂಟಾಯಿತು. ಆಗವಳ ಲಜ್ಜೆಯು ಒಮ್ಮೆ ದೂರವಾಯಿತು. ಅವಳು ಸಜಲನಯನೆಯಾಗಿ ಇಂದ್ರನಾಥನನ್ನು ಕುರಿತು “ನೀನು ವೀರಪುರುಷನಾಗಿ ತೋರುತ್ತದೆ, ನಿನಗೆ ಹೆಚ್ಚು ಅಧಿಕಾರವುಂಟು. ಈ ದಾಸಿಯ ಭಿಕ್ಷೆಯೊಂದನ್ನು ದಯಪಾಲಿಸಿ ನಡೆಯಿಸುವುದಾಗಿ ಪ್ರತಿಜ್ಞೆಯನ್ನು ಮಾಡಬೇಕೆಂದು ಬೇಡುವೆನು” ಎಂದಳು.

ಇಂದ್ರನಾಥ—ರಮಣಿ! ಅಧಿಕಾರವೆನಗಿಲ್ಲ. ಆದರೂ ನಿನ್ನ ಪ್ರಾರ್ಥನೆಯನ್ನು ನಡೆಯಿಸಿಕೊಡಲು ಪ್ರಯತ್ನಪಡುವೆನು—ಅದಾವುದು?

ವಿಮಲೆ—ಮಾಂಗೀರಿನಲ್ಲಿ ನೀನು ವಂಗದೇಶದ ದಿವಾನ ಸತೀಶಚಂದ್ರನನ್ನು ನೋಡುವೆ. ಅವನೀಗ ವಿಪತ್ತಿನಲ್ಲಿ ಬಿದ್ದಿದ್ದಾನೆ, ಅವನನ್ನು ರಕ್ಷಿಸುವುದಾಗಿ ಪ್ರತಿಜ್ಞೆಯನ್ನು ಮಾಡು.

ಇಂದ್ರನಾಥನ ಮುಖವು ಗಂಭೀರಭಾವವನ್ನು ತಾಳಿತು. ಲಲಾಟವು ಸುರುಗಿತು. ವಿಮಲೆಯು ಪುನಃ ಹೇಳತೊಡಗಿದಳು :—“ಆ ವಿಚಾರದಲ್ಲಿ ನೀನು ಚಿಂತಿಸಲೇಕೆ? ವಿಪನ್ನರ ವಿಪತ್ತನ್ನು ಶಾಂತಿಮಾಡುವುದು ವೀರಪುರುಷರಿಗೆ ಕರ್ತವ್ಯವಾಗಿದೆ, ಮತ್ತು ಜನರು ಅವನನ್ನು ಕೆಟ್ಟವನೆಂದು ಹೇಳಿದ್ದುದನ್ನು ಕೇಳಿದ್ದರೆ ಅದು ಸುಳ್ಳೆಂದು ತಿಳಿ. ಅದೆಲ್ಲಾ ಶಕುನಿಯ ವಂಚನೆ.”

ಇಂದ್ರನಾಥ—ನೀನು ಹೇಳುವುದೆನಗೆ ಅರ್ಥವಾಗಲಿಲ್ಲ. ಸ್ಪಷ್ಟವಾಗಿ ಹೇಳು, ಶಕುನಿ ಯಾರು?

ವಿಮಲೆ—ಶಕುನಿಯು ಸತೀಶಚಂದ್ರನಿಗೆ ಶನಿ. ಆ ಪಾಮರನೇ ಎಲ್ಲಾ ದೋಷಗಳಲ್ಲೂ ದೋಷಿಯಾಗಿರುವನು. ಸತೀಶಚಂದ್ರನ ಉದಾರಚರಿತೆಯು ದೋಷಾಕ್ರಾಂತವಾದುದಲ್ಲ. ವೀರಪುರುಷ! ನೀನೀಗ ಸತೀಶಚಂದ್ರನಿಗೆ ಸಹಾಯವನ್ನು ಮಾಡುವೆನೆಂದು ದೇವಾಲಯದಲ್ಲಿ ಪ್ರತಿಜ್ಞೆಯನ್ನು ಮಾಡಿ ಅಭಯವನ್ನು ಕೊಡು.

ಇಂದ್ರನಾಥನು ವಿಮಲೆಯ ಮಾತನ್ನು ಕೇಳಿ ಬುದ್ಧಿಹೋದವನಹಾಗಾದನು. ಸ್ವಲ್ಪಹೊತ್ತಾದ ಬಳಿಕ, "ಸತೀಶಚಂದ್ರನು ನಿಜವಾಗಿಯೂ ನಿರ್ದೋಷಿಯಾಗಿದ್ದರೆ ನನ್ನ ಮೈರಕ್ತವನ್ನು ಸುರಿಸಿ ಆವನನ್ನುಳಿಸುವ ಪ್ರಯತ್ನವಂ ಮಾಡುವೆನು. ಆದರೆ ನಿನ್ನ ಹೆಸರೇನು? ನೀನಾರು? ನನ್ನ ಉಪಾಸನೆಯನ್ನೂ ನಾನು ಪ್ರತಿಜ್ಞೆಮಾಡಲು ಕಾರಣವನ್ನೂ ತಿಳಿದ ಬಗೆ ಹೇಗೆ?" ಎಂದು ಕೇಳಿದನು.

ವಿಮಲೆ—(ಮೆಲ್ಲಮೆಲ್ಲನೆ) ನಿನ್ನ ಉದ್ದೇಶವನ್ನು ನಾನರಿಯೆನು, ಆದರೆ ನೀನೊಬ್ಬ ಮಹಾ ವೀರಪುರುಷನೆಂದೂ, ಆವುದೋ ಒಂದು ಮಹತ್ಕಾರ್ಯಕ್ಕೆ ಸಲುವಾಗಿ ಮಾಂಗೀರಿಗೆ ಹೋಗುತ್ತಿರುವೆ ಎಂದೂ ನನ್ನ ಹೃದಯವೆನಗೆ ತಿಳಿಯ ಹೇಳಿತು. ನಿನ್ನ ಪರಿಚಯವನ್ನು ತಿಳಿದುಕೊಳ್ಳಬೇಕೆಂದಿದ್ದೇನೆ.

ಇಂದ್ರನಾಥ—ನನ್ನ ಪರಿಚಯವನ್ನು ಇಷ್ಟರವುಟ್ಟಿಗೆ ತಿಳಿದಿರು. ನಾನೊಬ್ಬ ಕಾಯಸ್ಥ ಜಮೀನುದಾರನ ಮಗನು, ಯುದ್ಧವ್ಯವಸಾಯವನ್ನು ಕಲಿಯುವುದಕ್ಕೆ ಸಲುವಾಗಿ ಮಾಂಗೀರಿಗೆ ಹೋಗುವೆನು.

ಬ್ರಾಹ್ಮಣ ಕುಮಾರಿಯು ನಿಸ್ತಬ್ಧೆಯಾಗಿ ಮಂದಿರದಿಂದ ಹೊರಟು ಹೋದಳು.

---

## ಹನ್ನೊಂದನೆಯ ಪರಿಚ್ಛೇದ

How he heard the ancient helmsman
Chant a song so wild and clear,
That the sailing sea-bird slowly
Poised upon the mast to hear,
Till his soul was full of longing,
And he cried with impulse strong,—
"Helmsman! for the love of heaven,
Teach me, too, that wondrous song!" *Longfellow*

ಗಂಗಾ ನದಿಯ ತೀರದಲ್ಲಿ ಮಾಂಗೀರುನಗರದ ಭೀಮಾಕಾಂತ ದುರ್ಗವು ಕಣ್ಗೊಳಿಸುತಿದೆ. ಗಂಗೆಯ ತರಂಗಮಾಲೆಗಳು ಕಲ ಕಲ ರವದಿಂದ ಹರಿದುಹೋಗುತ್ತಿವೆ. ಒಂದೊಂದು ತಡವೆ ದುರ್ಗದ ಗೋಡೆಗೆ ಬಲವಾಗಿ ಹೊಡೆದು ನೊರೆ ನೊರೆಯಾಗಿ ಬೇಗಬೇಗನೆ ವೇಗವಾಗಿ ಹರಿದುಹೋಗುತಿವೆ; ಅಲ್ಲಲ್ಲಿ ನದಿಯ ದಡದ ಮಣ್ಣು ಕೊಲಾರಿ ಕುಸಿದುಬಿದ್ದು ಶಬ್ದವಾಗುತಿದೆ; ಜಲರಾಶಿಯು ಸ್ವಲ್ಪ ಮಾತ್ರ ಕೆಸರಾಗಿ ಪುನಃ ಮುಹೂರ್ತಮಧ್ಯದಲ್ಲಿ ತನ್ನ ಗಂಭೀರವಾದ ಆಕಾರವನ್ನು ತಾಳಿ ಹರಿದುಹೋಗುತಿದೆ; ಅಲ್ಲಲ್ಲಿ ನದಿಯಲ್ಲಿ ಮರಳಗುಡ್ಡೆಗಳು ಕಾಣುತಿವೆ; ಮರಳಗುಡ್ಡೆಗಳ ಮೇಲೆ ನಾನಾತೆರನ ಹಕ್ಕಿಗಳು ಸಂಚರಿಸುತಿವೆ; ಒಂದೊಂದು ಸ್ಥಳದಲ್ಲಿ ಹಡಗಿನಲ್ಲಿ ವಾಸಮಾಡತಕ್ಕವರು ಹಡಗಿನಿಂದಿಳಿದು ದಡಕ್ಕೆ ಬಂದು

ಸಾಯಂಕಾಲದ ಅಡಿಗೆಯನ್ನು ಮಾಡುತಿದ್ದಾರೆ; ಹಡಗುಗಳಲ್ಲಿ ನಕ್ಷತ್ರಗಳಂತೆ ಬೆಳಗುವ ಅಸಂಖ್ಯ ದೀಪಗಳ ಬೆಳಕು ಹೊರಟು ಗಂಗೆಯ ವಕ್ಷವು ಜಳಿಪಿಸುತಿದೆ; ಆಕಾಶದಲ್ಲಿ ಒಂದೆರಡು ನಕ್ಷತ್ರಗಳು ತಲೆದೋರುತ್ತಿದ್ದುವು. ಗಂಗೆಯ ತೀರದಲ್ಲಿ ಒಬ್ಬಿಬ್ಬರು ಘಟ್ಟಿಯಾಗಿ ಹಾಡುತಿದ್ದರು. ನಗರದ ಗದ್ದಲವು ಅಡಗಿ ನಿಸ್ತಬ್ಧವಾಗುತ ಬಂದಿತು.

ಗಂಗಾತೀರದಲ್ಲೊಬ್ಬ ಯೌವನಪುರುಷನು ಒಬ್ಬೊಂಟಿಗನಾಗಿ ತಿರುಗಾಡುತಿದ್ದನು. ಅವನು ನಮ್ಮ ಪೂರ್ವಪರಿಚಿತನಾದ ಇಂದ್ರನಾಥ. ಇಂದ್ರನಾಥನು ಅಂದು ಮಾಂಗೀರಿಗೆ ಬಂದಿದ್ದನು. ಚಿಂತೆಯಲ್ಲಿ ಮಗ್ನನಾಗಿ ಅತ್ತಿತ್ತ ತಿರುಗಾಡುತಿದ್ದನು.

ಇಂದ್ರನಾಥನಾವ ಕೆಲಸಕ್ಕೆ ಸಲುವಾಗಿ ಮಾಂಗೀರಿಗೆ ಬಂದಿದ್ದನು? ಸಮರಸಿಂಹನ ಮರಣಕ್ಕೆ ಪ್ರತಿಹಿಂಸಾಸಾಧನಕ್ಕೆ ಸಲುವಾಗಿ ಬಂದಿದ್ದನು! ನಿಜ. ಆದರೆ ಪ್ರತಿಹಿಂಸೆಯನ್ನು ಹೇಗೆ ಸಾಧಿಸಿಕೊಳ್ಳಬೇಕು? ತಾನೇ ಆಶ್ರಯಹೀನನಾಗಿಯೂ ಸಹಾಯಶೂನ್ಯನಾಗಿಯೂ ಧನಹೀನನಾಗಿಯೂ ಅಪರಿಚಿತನಾಗಿಯೂ ಇದ್ದುಕೊಂಡು ಪ್ರತಿಹಿಂಸಾ ಸಾಧನೆಯಂ ಮಾಡಿಕೊಳ್ಳುವ ಬಗೆ ಹೇಗೆ? ರಾಜಾ ಟೋಡರಮಲ್ಲನು ಮಾಂಗೀರಿನಲ್ಲಿದ್ದಾನೆ; ಅವನ ಬಳಿ ಹೋಗಿ ವಿಚಾರಣೆಯಾಗಬೇಕೆಂದು ಪ್ರಾರ್ಥಿಸಿಕೊಂಡರೆ ಸಾಧಿಸಿಕೊಳ್ಳಲಾಗದೆ? ರಾಜಾ ಟೋಡರಮಲ್ಲನು ಯುದ್ಧಸಂಬಂಧವಾದ ವಿಷಯದಲ್ಲಿ ಮಗ್ನನಾಗಿದ್ದಾನೆ. ಹಾಗಿರುತ್ತ ಅವನು ಬೇರೆ ವಿಷಯದಲ್ಲಿ ಕೈಹಾಕುವನೆ? ವಂಗದೇಶವು ಜಯಿಸಲ್ಪಟ್ಟಿರಲಿಲ್ಲವಾದುದರಿಂದ ವಂಗವಾಸಿಗಳ ನ್ಯಾಯಾನ್ಯಾಯವನ್ನು ಕುರಿತು ವಿಚಾರ ಮಾಡಬಲ್ಲನು ಹೇಗೆ?

ಒಂದುವೇಳೆ ವಿಚಾರಣೆ ಮಾಡಬಲ್ಲನಾದರೆ, ಅಪರಿಚಿತನಾದವನ ಹೇಳಿಕೆಯನ್ನು ನಂಬುವನು ಹೇಗೆ? ಮಾನ್ಯಾಸ್ಪದನಾಗಿರುವ ದಿವಾನಸಾಹೇಬನಿಗೆ ವಿರುದ್ಧವಾಗಿ ಅಪರಿಚಿತನಾದೊಬ್ಬ ಜವಿಾನುದಾರನ ಮಗನ ಹೇಳಿಕೆಯು ನಂಬಲರ್ಹವಾಗುವುದೇ? ರಾಜಾ ಟೋಡರಮಲ್ಲನು ವಿಚಾರಣೆಮಾಡಲು ಸಮ್ಮತನಾದರೂ ಇಂದ್ರನಾಥನು ಸತೀಶಚಂದ್ರನ ಮೇಲೆ ದೋಷಾರೋಪಣೆಯಂ ಮಾಡುವಷ್ಟು ಪ್ರಮಾಣಗಳನ್ನೆಲ್ಲಿಂದ ತಂದೊದಗಿಸಬಲ್ಲನು?

ಮತ್ತು, ಒಮ್ಮಿಂದೊಮ್ಮೆ ದೋಷಾರೋಪವಂ ಮಾಡುವುದುಚಿತವೆ? ಅಪರಿಚಿತೆಯಾದ ರಮಣಿಯೊಬ್ಬಳು ಮಹೇಶ್ವರ ಮಂದಿರದಲ್ಲಿ ಹೇಳಿದ್ದುದನ್ನು ಇಂದ್ರನಾಥನು ಮರೆತಿರಲಿಲ್ಲ; ಅವಳು ಸುಳ್ಳನ್ನು ಹೇಳಿದ್ದಳೆಂದೂ ಬೋಧೆಯಾಗುವುದಿಲ್ಲ. ಅವಳು ಹೇಳಿದುದು ನಿಜವಾಗಿದ್ದರೆ ಸತೀಶಚಂದ್ರನು ನಿರಪರಾಧಿಯಾಗಿರುವನು. ನಿಜವನ್ನು ಸ್ಥಿರಮಾಡಿಕೊಳ್ಳದೆ ಸತೀಶಚಂದ್ರನ ಮೇಲೆ ದೋಷಾರೋಪಣೆಯಂ ಮಾಡುವುದುಚಿತವೆ?

ಮತ್ತು, ಸುಂದರಿಯಾದಾ ರಮಣಿಯು ಹೇಳಿದ ಶಕುನಿಯೆಂಬ ಮನುಷ್ಯ

ನಾರು? ಇಂದ್ರನಾಥನು ಯೋಚಿಸಿದಹಾಗೆಲ್ಲಾ ಇತಿಕರ್ತವ್ಯದಲ್ಲಿ ಮೌಢ್ಯವು ಹೆಚ್ಚುತ ಬಂದಿತು. ಬಹಳ ಹೊತ್ತು ಒಬ್ಬೊಂಟಿಗನಾಗಿ ಗಂಗಾತೀರದಲ್ಲಿ ತಿರುಗಾಡುತ ಯೋಚಿಸುತಿದ್ದನು. ಅವನಾವುದನ್ನೂ ಸ್ಥಿರಮಾಡಲಾರದೆ ಹೋದನು. "ಈಗಾವ ಉಪಾಯವೂ ತೋಚುವುದಿಲ್ಲ; ಸ್ವಲ್ಪಕಾಲ ಮಾಂಗೀರಲ್ಲಿರೋಣ; ಸಮಯವರಿತು ಕಾರ್ಯಸಾಧನೆ ಮಾಡುವೆನು" ಎಂದಂದುಕೊಂಡನು.

ಇದ್ದಕ್ಕಿದ್ದಹಾಗೆ ಅಪೂರ್ವವಾದೊಂದು ಸ್ವರ್ಗೀಯ ಸಂಗೀತದಿಂದ ಇಂದ್ರನಾಥನ ಚಿಂತೆಯು ಭಂಗವಾಯಿತು. ಅವನು ತಲೆಯೆತ್ತಿ ದೃಷ್ಟಿಸಿ ನೋಡಿದನು. ಬೆಳದಿಂಗಳಿಂದ ಬೆಳಗುತಿದ್ದಾ ಜಲರಾಶಿಯಮೇಲೆ ಚಿಕ್ಕದೊಂದು ದೋಣಿಯು ತೇಲುತಿದ್ದಿತು. ದೋಣಿಯಲ್ಲೊಬ್ಬನು ಕುಳಿತಿದ್ದವನಾ ಸಂಗೀತವನ್ನು ಹಾಡುತಿದ್ದನು. ಗಾನವು ಮಧುರವಾಗಿದ್ದಿತೋ ಇಲ್ಲವೋ ನಾವದನ್ನರಿಯೆವು. ಅದು ಇಂದ್ರನಾಥನಿಗೆ ಕಿವಿಗಿನಿವಾದ ಸ್ವರ್ಗೀಯ ಸಂಗೀತವೆಂದು ಬೋಧೆಯಾಯಿತು.

ಗಾನವು ಒಂದು ತಡವೆ, ಎರಡು ತಡವೆ, ಮೂರು ತಡವೆ ಹಾಡಲ್ಪಟ್ಟಿತು. ಅದು ಗಂಗೆಯ ಅನಂತವಾದ ಗೀತದೊಂದಿಗೆ ಸೇರಿ ವಾಯುಮಾರ್ಗಕ್ಕೇರಿ ಸಂಚರಿಸಲಾರಂಭಿಸಿತು. ದೋಣಿಯು ಕ್ರಮವಾಗಿ ತೇಲಾಡಿಕೊಂಡು ಇಂದ್ರನಾಥನು ಕುಳಿತಿದ್ದ ಸ್ಥಳಕ್ಕೆ ಅವನ ಸಮಿಾಪ ಬಂದು ನಿಂತಿತು. ದೋಣಿಯಲ್ಲಿ ಸಂಭಾವಿತನಾದ ಸಭ್ಯನೊಬ್ಬನು ಮಾತ್ರ ಕುಳಿತಿದ್ದವನು ಸ್ವಂತವಾಗಿ ಹುಟ್ಟುಹೊಡೆಯುತ ಮನಕೊಲಿದ ಹಾಡನ್ನು ಮನಹಿಗ್ಗಿ ಹಾಡುತಿದ್ದನು.

ಸಂಭಾವಿತನನ್ನು ನೋಡಿ ಅವನ ಗಾನವನ್ನು ಕೇಳಿ ಇಂದ್ರನಾಥನಿಗೆ ಅವನೊಡನೆ ಮಾತನಾಡಬೇಕೆಂದು ಮನಸ್ಸಾಕ್ಕರವುಂಟಾಯಿತು. ಅವನನ್ನು ಕುರಿತು, ಮೊದಲು ಮಾಂಗೀರು ನಗರದ ಸಮಾಚಾರವಾಗಿ ಒಂದೆರಡು ಪ್ರಶ್ನೆಗಳನ್ನು ಮಾಡಿದನು. ಅಡಕ್ಕವನು ಉತ್ಸಾಹದಿಂದುತ್ತರವನಿತ್ತನು. ಸ್ವಲ್ಪ ಹೊತ್ತಿನಲ್ಲಿಯೇ ಅವರಿಬ್ಬರಿಗೂ ಪರಸ್ಪರ ಪ್ರೀತಿಯುಂಟಾಯಿತು.

ಇಂದ್ರನಾಥ—ಮಹಾಶಯರೆ! ತಾವು ಇಷ್ಟಪಟ್ಟರೆ ನಾನೂ ಬಂದು ತಮ್ಮ ದೋಣಿಯಲ್ಲಿ ಕುಳಿತು ಬೆಳದಿಂಗಳಲ್ಲಿ ಹುಟ್ಟುಹೊಡೆಯುತ ತಮ್ಮ ಅಪೂರ್ವ ಗಾನವನ್ನು ಕೇಳಿ ಹೃದಯವನ್ನು ತೃಪ್ತಿಗೊಳಿಸಿಕೊಳ್ಳುವೆನು.

ಸಂಭಾವಿತಸಭ್ಯ—ತಮ್ಮಂತಹವರನ್ನು ನೋಡಿದ್ದುದು ನನ್ನ ಭಾಗ್ಯವೇ ಸರಿ. ದಯೆಗೈದು ದೋಣಿಯನ್ನೇರಿ ಬರಬಹುದು. ಹತಭಾಗ್ಯನ ಹಾಡಿನಲ್ಲಿ ತಮಗೆ ಅಭಿರುಚಿಯಿದ್ದರೆ ಕೇಳೋಣಾಗಲಿ.

ದೋಣಿಯು ಪುನಃ ಹೊರಟಿತು. ಪುನಃ ಸುಂದರವಾದ ಖೇದಪೂರ್ಣವಾದ ಗಾನದಿಂದ ನೈಶಗಗನವು ಪೂರ್ಣವಾಯಿತು.

ಬಹಳ ಹೊತ್ತಾದ ಬಳಿಕ ದೋಣಿಯ ಯಜಮಾನನು "ಮಹಾಶಯರೆ! ತಾವು ಮಾಂಗೀರಿಗೆ ಎಂದು ಬರೋಣಾಯಿತು?" ಎಂದು ಕೇಳಿದನು.

ಇಂದ್ರನಾಥ—ನಾನಿಂದು ಬಂದೆನು.

ದೋಣಿಯ ಯಜಮಾನ—ತಮ್ಮ ನಾಮಧೇಯವೇನು? ನಿವಾಸವೆಲ್ಲಿ?

ಇಂದ್ರನಾಥ—ನನ್ನ ಹೆಸರು ಇಂದ್ರನಾಥನೆಂದು ತಿಳಿದಿರೋಣಾಗಲಿ. ನಿವಾಸವು ಬಹಳ ದೂರ—ನದಿಯಾ ಜಿಲ್ಲೆಯಲ್ಲಿ.

ದೋಣಿಯ ಯಜಮಾನ—ನದಿಯಾ ಜಿಲ್ಲೆಯಲ್ಲಾವ ಗ್ರಾಮದಲ್ಲಿ?

ಇಂದ್ರನಾಥ—ಇಚ್ಛಾಪುರ ಗ್ರಾಮದಲ್ಲಿ.

ದೋಣಿಯ ಯಜಮಾನ—ಇಚ್ಛಾಪುರ ಗ್ರಾಮದಲ್ಲೆ? ತಮ್ಮ ತೀರ್ಥರೂಪರ ನಾಮಧೇಯವೇನೋ ಕೇಳಬಹುದೊ?

ಇಂದ್ರನಾಥ—ತಾವು ಇಚ್ಛಾಪುರಗ್ರಾಮಕ್ಕೆ ಹೋಗಿರೋಣಾಗಿದೆಯೊ?

ದೋಣಿಯ ಯಜಮಾನನು ಸ್ವಲ್ಪ ಹೊತ್ತು ಮೌನವಾಗಿದ್ದು ಬಳಿಕ, "ಕೆಲಸ ಕಾರ್ಯಗಳಿಗೆ ಸಲುವಾಗಿ ಎಲ್ಲಾ ಸ್ಥಳಗಳಿಗೂ ಹೋಗಬೇಕು. ತಮ್ಮ ತೀರ್ಥರೂಪರ ನಾಮಧೇಯವೇನು? ಒಂದುವೇಳೆ ನಾನವರನ್ನು ನೋಡಿದ್ದರೂ ನೋಡಿರಬಹುದು" ಎಂದನು.

ಇಂದ್ರನಾಥನು ತನ್ನ ನಿಜವಾದ ಹೆಸರನ್ನಾರಿಗೂ ಹೇಳದೆ ಗುಪ್ತಭಾವದಲ್ಲಿ ದೇಶ ದೇಶದಲ್ಲಿ ಸಂಚಾರಮಾಡುತಿದ್ದನು. ಆದರೆ ದೋಣಿಯ ಯಜಮಾನನಲ್ಲಿ ತಂದೆಯ ಹೆಸರನ್ನು ಹೇಳದೆ ಮರೆಮಾಜುವುದಕ್ಕೆ ಕಾರಣವೇನೂ ಕಾಣಲಿಲ್ಲ. ಅವನು ಮನಸ್ಸಿನಲ್ಲಿ, "ನಾನು ತಂದೆಯ ಮನೆಯನ್ನು ಬಿಟ್ಟು ಬಂದು ಬಹಳ ಕಾಲವಾಯಿತು. ಈ ಸಂಭಾವಿತ ಸಭ್ಯನು ಈಚೀಚೆಗೆ ಆ ಗ್ರಾಮಕ್ಕೆ ಹೋಗಿ ಬಂದಿರಬೇಕಾಗಿದ್ದು ತಂದೆಯ ಕ್ಷೇಮಸಮಾಚಾರವನ್ನು ಹೇಳಬಲ್ಲವನಾಗಿರುವನು." ಎಂದು ಯೋಚಿಸಿಕೊಂಡು "ಇಚ್ಛಾಪುರದ ಜಮೀನುದಾರ ನಗೇಂದ್ರನಾಥ ಚೌಧುರಿಯು ನಮ್ಮ ತಂದೆ" ಎಂದು ಹೇಳಿದನು. ಅಪರಿಚಿತನಾದ ಸಭ್ಯನು ಕೇಳಿ ಚಮಕಿತನಾಗಿ ಕೈಯಿಂದ ಕಣ್ಣುಗಳೆರಡನ್ನೂ ಮುಚ್ಚಿಕೊಂಡು— "ಹಾ, ನಗೇಂದ್ರನಾಥ! ಪುಣ್ಯಾತ್ಮ ನಗೇಂದ್ರನಾಥ!" ಎಂದು ಹಂಬಲಿಕೆಯಿಂದ ಹೇಳಿದನು.

ದೋಣಿಯ ಯಜಮಾನ—(ಆದರಿಂದ್ದ ಚಿತ್ರವನ್ನು ಬಚ್ಚಿಟ್ಟು ವಶಮಾಡಿಕೊಂಡು) ಇಂದ್ರನಾಥರೆಂತಲೇ ತಮ್ಮ ಹೆಸರು?

ಇಂದ್ರನಾಥ—ಇಂದ್ರನಾಥನೆಂಬುದಾವಾಗಲೂ ನನ್ನ ಹೆಸರಲ್ಲ, ಅಜ್ಞಾತ ಸಾರವಾಗಿ ದೇಶಗಳನ್ನು ತಿರುಗುವೆನಾದುದರಿಂದ ಅಲ್ಲಲ್ಲಿ ನನ್ನ ಹೆಸರು ಇಂದ್ರನಾಥನೆಂದು ಹೇಳಿಕೊಂಡು ಬಂದಿದ್ದೇನೆ, ನನ್ನ ಹೆಸರು ಸುರೇಂದ್ರನಾಥ.

"ಸುರೇಂದ್ರನಾಥ!" ಎಂದು ಹೇಳುತಲೇ ಅಪರಿಚಿತನ ಕಣ್ಣುಗಳಲ್ಲಿ ನೀರು ತುಂಬಿತು. ಮುಂದೆ ಮಾತು ನಿಂತುಹೋಯಿತು.

ಸ್ವಲ್ಪ ಹೊತ್ತಾದ ಬಳಿಕ ಅವನು—ನನ್ನ ಬಾಲ್ಯಾವಸ್ಥೆಯಲ್ಲಿ ಪುಣ್ಯಾತ್ಮ

ನಾದಾ ನಗೇಂದ್ರನಾಥನ ಮನೆಯಲ್ಲಿ ಸ್ವಲ್ಪಕಾಲ ವಾಸವಾಗಿದ್ದೆನು. ಆದುದರಿಂದ ತಮ್ಮನ್ನು ಶೈಶವಾವಸ್ಥೆಯಲ್ಲಿ ನೋಡಿದ್ದೆನು. ನಮ್ಮ ಪೂರ್ವ ಸ್ನೇಹಿತರ ಸಂಸಾರವನ್ನು ಕುರಿತು ವಿಚಾರಿಸುತ್ತೇನೆ; ನಗೇಂದ್ರನಾಥರು ಚೆನ್ನಾಗಿದ್ದಾರೆಯೆ?

ಇಂದ್ರನಾಥ—ಇದ್ದಾರೆ.

ಅಪರಿಚಿತ—ಅವರ ಹಿರಿಯ ಮಗನು ಈಗೆಲ್ಲಿದ್ದಾನೆ?

ಇಂದ್ರನಾಥ—ನನ್ನ ಹಿರಿಯಣ್ಣನು ಕಾಲವಾಗಿ ಬಹಳ ಕಾಲವಾಯಿತು.

ಅಪರಿಚಿತ—ಆತನ ಹೆಸರು ಉಪೇಂದ್ರನಾಥನಲ್ಲವೆ?

ಇಂದ್ರನಾಥ—ಅಹುದು.

ಅಪರಿಚಿತ—ಆತಗೆ ಮರಣವುಂಟಾದುದು ಹೇಗೆ?

ಇಂದ್ರನಾಥ—ಇಚ್ಛಾಪುರದಲ್ಲಿ ಹುಲಿಗಳ ಹಾವಳಿಯು ಬಹಳವಾಗಿದ್ದಿತು. ಉಪೇಂದ್ರನಾಥನು ಹುಲಿಯ ಬಾಯಿಗೆ ತುತ್ತಾಗಿ ಕಾಲವಾದನು; ನನಗೆ ಆತನ ಜ್ಞಾಪಕವಿಲ್ಲ; ನಾನಾಗ ಚಿಕ್ಕವನಾಗಿದ್ದೆನು; ಬಹಳ ಕಾಲವಾಯಿತು.

ಅಪರಿಚಿತ—ತಮ್ಮ ಮಾತೃಶ್ರೀಯವರು ಹೇಗಿದ್ದಾರೆ?

ಇಂದ್ರನಾಥ—ಹಿರಿಯ ಮಗನ ಮರಣವಾರ್ತೆಯನ್ನು ಕೇಳಿ ಅತ್ಯಂತ ಕಾತರೆಯಾಗಿ ಪುತ್ರಶೋಕದಿಂದ ಆಕೆಗೆ ಪ್ರಾಣವಿಯೋಗವುಂಟಾಯಿತು.

ಒಂದು ಘಂಟೆಯ ಹೊತ್ತು ಅವರಿಬ್ಬರಲ್ಲೊಬ್ಬರೂ ಮಾತನಾಡಲಿಲ್ಲ. ಒಂದು ಘಂಟೆಯ ಹೊತ್ತು ದೋಣಿಯು ತಾನಾಗಿಯೇ ಪ್ರವಾಹದೊಂದಿಗೆ ಹೊರಟುಹೋಗುತಿದ್ದಿತು. ಒಂದು ಘಂಟೆಯ ಹೊತ್ತಾದ ಬಳಿಕ, ಇಂದ್ರನಾಥನು ಕಣ್ಣೆತ್ತಿ ನೋಡಿದನು. ಸಂತತ ಧಾರೆಯಾಗಿ ಹರಿಯುತಿದ್ದ ಕಣ್ಣೀರಿನಿಂದ ಅಪರಿಚಿತನ ಮುಖಮಂಡಲವೂ ಅವನ ಬಟ್ಟೆಯೂ ತೋಯ್ದುಹೋಗಿದ್ದುವು! ಇಂದ್ರನಾಥನು ಆಶ್ಚರ್ಯಗೊಂಡನು.

ದೋಣಿಯು ಒಂದು ಹರದಾರಿಯ ದೂರ ಹೊರಟುಹೋಗಿದ್ದಿತು. ಗಂಗೆಯ ನೀರು ಬೆಳದಿಂಗಳಲ್ಲಿ ಥಳಗುಟ್ಟುತಿದ್ದಿತು. ಆಕಾಶದಲ್ಲಿ ಬಿಳುಪಾದ ಒಂದೆರಡು ತೆಳ್ಳಾದ ಮೇಘಗಳ ತುಣುಕುಗಳು ಹಾರುತಿದ್ದುವು; ಒಂದೊಂದು ತಡವೆ ಅವು ಚಂದ್ರನಿಗೆ ಅಡ್ಡಾಗಿ ಬರುತಿದ್ದುವು. ಕೂಡಲೇ ಗಾಳಿಯಿಂದ ಚದರಿಸಲ್ಪಟ್ಟು ಚಂದ್ರಕಿರಣವು ಪುನಃ ವಿಶಾಲವಾದಾ ನದಿಯ ಜಲರಾಶಿಯ ಮೇಲೆ ಬಿದ್ದು ಬೆಳಗುತಿದ್ದಿತು. ಆಕಾಶವು ಗಂಭೀರವಾದ ನೀಲವರ್ಣ; ಒಂದೆರಡು ನಕ್ಷತ್ರಗಳು ಭಿಡೆಯುಳ್ಳ ಹೊಸ ಮದುಮಗಳಂತೆ ಇಣಿಕಿ ಮುಖವನ್ನು ತೋರುತಿದ್ದುವು; ಪ್ರಪಂಚವೆಲ್ಲಾ ನಿಸ್ತಬ್ಧವಾಗಿದ್ದಿತು; ಒಂದೊಂದು ತಡವೆ ಒಂದು ಸಂಗೀತದ ಧ್ವನಿಯು ದೂರದಿಂದ ವಾಯುಮಾರ್ಗವಾಗಿ ಬಂದು ವಿಸ್ತರವಾದಾ ಗಂಗೆಯ ನೀರಿನಲ್ಲಿಯೂ ಪಾರ್ಶ್ವದಲ್ಲಿದ್ದ ಮರಳ ದಿಬ್ಬದಲ್ಲಿಯೂ

ಮಾವೆರ್ೞಳಗುತಿದ್ದಿತು ; ಗಂಗೆಯಲ್ಲಿ ಮತ್ತಾವ ದೋಣಿಯೂ ನಡೆಯುತಿರಲಿಲ್ಲ ; ಸುರೇಂದ್ರನಾಥನು ಕುಳಿತಿದ್ದ ಚಿಕ್ಕದೋಣಿಯು ಮಾತ್ರ ತರತರ ಶಬ್ದವನ್ನು ಮಾಡುತ ಹೋಗುತಿದ್ದಿತು.

ಬಹಳ ದೂರ ಹೋದ ಬಳಿಕ ದಡದಲ್ಲೊಂದು ದೀಪದ ಬೆಳಕು ದೃಷ್ಟಿಗೆ ಬಿದ್ದಿತು. ದೋಣಿಯನ್ನು ನಡೆಯಿಸುತಿದ್ದ ಅಪರಿಚಿತ ಮನುಷ್ಯನು ದೀಪದ ಬೆಳಕನ್ನು ತೋರಿ, "ಅದೇ ನನ್ನ ಮನೆ, ಅದಕ್ಕೆ ಸ್ವಲ್ಪ ದೂರದಲ್ಲಿ ಕಾಣುವ ನಿಕುಂಜದಲ್ಲಿನ್ನ ಮನವು ನೆಲೆಗೊಂಡಿರುವುದು" ಎಂದು ಹೇಳಿದನು.

ಸುರೇಂದ್ರನು ಅಪರಿಚಿತ ಮನುಷ್ಯನ ಗಂಭೀರಭಾವವನ್ನು ಕಂಡು ಚಮತ್ಕೃತನಾಗಿ ಅವನನ್ನು ದೃಷ್ಟಿಸಿ ನೋಡಿದನು, ಅವನ ಕಣ್ಣುಗಳಲ್ಲಿ ನೀರು ತುಂಬಿ ತುಳುಕುತಿದ್ದುದನ್ನು ಕಂಡು ದುಃಖಗೊಂಡು ಸ್ನೇಹಪೂರ್ವಕವಾಗಿ, "ಅಯ್ಯ ಮಹಾಶಯರೆ! ತಮ್ಮ ಹೆಸರನ್ನು ನಾನರಿಯೆನು. ತಮ್ಮ ಕೆಲಸಕಾರ್ಯಗಳು ನನಗೆ ಗೊತ್ತಿಲ್ಲ. ಆದರೂ ತಮ್ಮನ್ನು ನೋಡಿದರೆ ತಾವೆನಗೆ ಸ್ನೇಹಿತರೆಂದೂ, ಸೋದರರೆಂದೂ, ಮನಸ್ಸಿನಲ್ಲೊಂದು ಹೇಳಲಶಕ್ಯವಾದ ಮಮತೆಯು ಹುಟ್ಟುತದೆ ; ತಮ್ಮ ದುಃಖವೇನಿದ್ದರೂ ಸ್ನೇಹಿತನಲ್ಲಿ ಸಹೋದರನಲ್ಲಿ ಸಂಕೋಚವಿಲ್ಲದೆ ಬಿಚ್ಚಿ ಹೇಳುವಿರಾದರೆ ನನಗೆ ಸಾಧ್ಯವಿದ್ದಷ್ಟು ಪ್ರಯತ್ನಪಟ್ಟು ತಮ್ಮ ದುಃಖವು ದೂರವಾಗುವಂತೆ ಮಾಡುವೆನು" ಎಂದು ಹೇಳಿದನು.

ಅಪರಿಚಿತ— ತಾವೆನ್ನಲ್ಲಿ ಅಷ್ಟೊಂದು ಅನುಗ್ರಹವುಳ್ಳವರಾಗಿದ್ದು ದಯೆಗೈದು ನನ್ನ ಕುಟೀರಕ್ಕೆ ಬಂದರೆ ಸಮಸ್ತ ವೃತ್ತಾಂತವನ್ನೂ ಅರುಹುವೆನು.

ಸುರೇಂದ್ರನಾಥನು ಸಮ್ಮತನಾದನು ; ದೋಣಿಯು ದಡಕ್ಕೆ ಮುಟ್ಟಿ ಇಬ್ಬರೂ ಮೌನವಾಗಿ ದೋಣಿಯಿಂದಿಳಿದು ಅಪರಿಚಿತ ಮನುಷ್ಯನ ಕುಟೀರಕ್ಕೆ ಹೋದರು.

---

# ಹನ್ನೆರಡನೆಯ ಪರಿಚ್ಛೇದ

How sweet the days that I have spent,
In yon sequestered bower,
Those citron trees, still sweet of scent,
Had then some magic power,
Or some fair spirit did reside,
In that sweet purling brook,
Which runs by yon green mountain side,
Now haunted by the rook.
No charm was in the spicy grove,
No spirit in the stream,
O'twas the smile of her I love,
Now vanished like a dream!

*L. C. Dutt.*

ಸುರೇಂದ್ರನಾಥನು ಹೊಸ ಪರಿಚಯದ ಮನುಷ್ಯನ ವಾಸಸ್ಥಾನಕ್ಕೆ ಬಂದನು. ಗುಡಿಸಲು ಚಿಕ್ಕದಾಗಿದ್ದರೂ ಚೊಕ್ಕಟವಾಗಿ ಅಚ್ಚುಕಟ್ಟಾಗಿದ್ದಿತು. ಗುಡಿಸಲ ಹೊರಗಡೆ ಒಂದು ಚಿಕ್ಕ ತೋಟ. ಅದರಲ್ಲಿ ಕೆಲವು ಹೂವಿನ ಗಿಡಗಳು. ಗುಡಿಸಲಿಗೆ ಹತ್ತಿರ ಒಂದು ಹಳ್ಳ. ಎದುರಿಗೊಂದು ಅನಂತವಾದ ನದಿ. ಹಿಂದುಗಡೆ ಮನೋಹರವಾದೊಂದು ನಿಕುಂಜವನ ಮತ್ತು ಧಾನ್ಯಕ್ಷೇತ್ರಗಳು. ಗುಡಿಸಲ ಯಜಮಾನನು ಮಾಂಗೀರುನಗರದಲ್ಲಿ ಸಾಮಾನ್ಯವಾದ ಕೆಲಸಕಾರ್ಯಗಳನ್ನು ಮಾಡುವವನಾಗಿದ್ದನು. ಆದರೆ ಸ್ವಭಾವತಃ ಚಿಂತೆಯಲ್ಲಿಯೂ ದುಃಖದಲ್ಲಿಯೂ ಮುಳುಗಿದ್ದವನಾದುದರಿಂದ ನಗರಕ್ಕೆ ದೂರವಾಗಿದ್ದ ಹಳ್ಳಿಗೆ ಹತ್ತಿರದಲ್ಲೊಂದು ಗುಡಿಸಲನ್ನು ಕಟ್ಟಿಕೊಂಡು, ಅಚ್ಚಾಳಾಗಿ ವಾಸಮಾಡುತಿದ್ದನು. ಸಾಯಂಕಾಲದ ಹೊತ್ತು ತನ್ನ ದೋಣಿಯಲ್ಲಿ ಕುಳಿತು ನದಿಯಲ್ಲಿ ತಾನೇ ಹುಟ್ಟುಹೊಡೆಯುತ ಹೋಗುವನು. ಇಷ್ಟಬಂದಂತೆ ಹಾಡುತಿರುವನು. ಇಬ್ಬರೂ ಕುಟೀರಕ್ಕೆ ಹೋಗಿ ಕುಳಿತುಕೊಂಡರು. ಕುಟೀರಸ್ವಾಮಿಯು ಸುರೇಂದ್ರನನ್ನು ಕುರಿತು ಹೇಳತೊಡಗಿದನು :—

"ತರುಣರೇ! ಹೃದಯದಲ್ಲಿ ಸಿಟ್ಟಾಗಲೀ, ಸೊಕ್ಕಾಗಲೀ ನೆಲೆಗೊಂಡಿದ್ದರೆ ಅವನ್ನು ತೊರೆಕೊಳ್ಳಬೇಕು. ಸೊಕ್ಕಿನಿಂದ ನಾನು ಕೇಡಿಗೇಡಾಗಿ ಎಲ್ಲವನ್ನೂ ಕಳಕೊಂಡವನಾದೆನು. ಚಿಕ್ಕಂದಿನಲ್ಲಿ ಸೊಕ್ಕಿನವನಾಗಿದ್ದೆನು. ಆಗ ನಾನು ಹೇಳಿದಂತೆ ನನ್ನ ಇಷ್ಟವು ಈಡೇರದಿದ್ದರೆ ಒಂದೆರಡು ದಿನ ಊಟವನ್ನೂ ಬಿಟ್ಟಿರುತಿದ್ದೆನೆಂದು ಹೇಳುವರು. ವಿಜಾತೀಯವಾಗಿ ತೋರುವಂತಹ ಸಿಟ್ಟಿನಿಂದ ಎಲ್ಲವನ್ನೂ ಕಳಕೊಂಡೆನು.

"ಚಿಕ್ಕಂದಿನಲ್ಲಿ ಹೀಗಿದ್ದೆನು. ಆದರೆ ಸ್ವಭಾವತಃ ಓದುವುದರಲ್ಲಿ ಆಶೆಯುಳ್ಳವನಾಗಿರುತ್ತಿರುವೆನು. ಒಂದೊಂದುವೇಳೆ ಉಪಾಧ್ಯಾಯನು ಅನ್ಯಾಯವಾಗಿ ನನ್ನನ್ನು ತಿರಸ್ಕಾರಮಾಡುವನು. ಆಗೆನಗೆ ಸ್ವಭಾವಸಿದ್ಧವಾದಾ ಸಿಟ್ಟು

ಬಂದು ಪುಸ್ತಕವನ್ನು ದೂರೆಸೆದುಬಿಡುವೆನು. ಎಷ್ಟು ಹೊಡೆದರೂ ಮಾತ ನಾಡುತಿರಲಿಲ್ಲ. ಅಳುತಲೂ ಇರಲಿಲ್ಲ. ಉಪಾಧ್ಯಾಯನಿಗೆ ನನ್ನಲ್ಲಿ ಹೆಚ್ಚು ವಿಶ್ವಾಸವುಂಟು. ಆದರೆ ಒಂದೊಂದು ಸಮಯದಲ್ಲಿ ನನ್ನ ಕ್ರೋಧವನ್ನು ಕಂಡು ಕೋಪಗೊಳ್ಳುವನು! ಒಂದು ತಡವೆ ಉಪಾಧ್ಯಾಯನು ಚಿತ್ರಹಿಂಸೆಯನ್ನು ಕೊಟ್ಟನು. ನಾನು ಅಳಲಿಲ್ಲ. ಆದರೆ ಸ್ವಲ್ಪಹೊತ್ತಿನಲ್ಲಿ ಆ ಹಿಂಸೆಯಿಂದ ಅಚೇತನ ನಾಗಿ ನೆಲದಮೇಲೆ ಬಿದ್ದೆನು. ಆಗ ಗುರುಮಹಾಶಯನಿಗೆ ಬುದ್ಧಿಯು ಬಂದಿತು. ಆಗವನು ನನ್ನನ್ನು ತನ್ನ ಸ್ವಂತ ಮಗುವಿನಂತೆ ತೊಡೆಯಮೇಲೆತ್ತಿ ಮಲಗಿಸಿ ಕೊಂಡು ಶೀತೋಪಚಾರದಿಂದ ಚೇತನವುಂಟಾಗುವಂತೆ ಮಾಡಿದನು. ಅದ ರೊಂದಿಗೆ ನನ್ನ ಓದುಬರಹವು ಮುಗಿಯಿತು. ಗುರುಮಹಾಶಯನು ನನಗೆ ಪುನಃ ಪಾಠವನ್ನು ಹೇಳಿಕೊಡಲಿಲ್ಲ. ನಾನು ಮೂರ್ಖನಾಗಿ ಮುಂದ್ಯಾಳ ನಾದೆನು.

"ನನ್ನ ತಾಯಿಯು ನನ್ನನ್ನಾವಾಗಲೂ ಬೈದು ತಿರಸ್ಕರಿಸುತಿರಲಿಲ್ಲ; ಆಕೆಯು ನನ್ನ ಮನಸ್ಸನ್ನು ಬಲ್ಲಳು; ಮನಸ್ಸನ್ನು ನೋಯಿಸದೆ ಪ್ರೀತಿಸುವಳು, ಆಕೆ ಹೇಳಿದ ಮಾತುಗಳಿಂದೆನಗೆ ಕೋಪವು ಹುಟ್ಟದು. ನಾನು ತಂದೆಯಲ್ಲಿ ಅವಿಧೇಯನಾಗಿದ್ದೆನು. ಉಪಾಧ್ಯಾಯನಲ್ಲಿಯೂ ಅವಿಧೇಯನಾಗಿದ್ದೆನು. ಆದರೆ ನಾನಾವಾಗಲೂ ತಾಯಿಯ ಮಾತಿಗೆ ಎದುರು ಹೇಳುತಿರಲಿಲ್ಲ. ಮನೆ ಯಲ್ಲಾರು ಹೇಗೆ ಹೇಳಿದರೂ, ಭಯವನ್ನು ತೋರಿದರೂ, ಹೊಡೆದರೂ ಮಾಡದ ಕೆಲಸವನ್ನು ತಾಯಿಯು ಹೇಳಿದರೆ ಆ ನಿಮಿಷದಲ್ಲಿ ಮಾಡುತಿದ್ದೆನು. ಅಯ್ಯೋ! ಅಂತಹ ಕರುಣೆಯೇ ಮೂರ್ತಿಗೊಳಿಸಿದ್ದಂತಿದ್ದು ಮಮತೆಯುಳ್ಳವ ಳಾಗಿದ್ದಾ ತಾಯಿಯನ್ನು ಪುನಃ ಎಲ್ಲಿ ನೋಡುವೆನು?" ಹೀಗೆಂದು ಹೇಳುತಿದ್ದ ಹಾಗೆ ಕಂಠವು ರುದ್ಧವಾಗಿ ತಲೆಯನ್ನು ಬೊಗ್ಗಿಸಿಕೊಂಡು ಸಂತತವಾಗಿ ಕಣ್ಣೀರ ಧಾರೆಯನ್ನು ಸುರಿಸಿದನು.

ಸುರೇಂದ್ರನಾಥನು ಅತಿಶಯ ದುಃಖಿತನಾಗಿ, "ಹಾಗಾದರೆ ತಮ್ಮ ತಾಯಿಯು ಕಾಲವಾಗಿ ಹೋದಳೆ?" ಎಂದು ಹೇಳಿದನು.

ಅಪರಿಚಿತ—ಆಕೆ ಕಾಲವಾದಳೆಂದು ಕೇಳಿದೆನು.

ಸ್ವಲ್ಪ ಹೊತ್ತು ಕಣ್ಣೀರು ಸುರಿದ ಬಳಿಕ ಮನಸ್ಸಿನಲ್ಲಿ ದುಃಖವು ತುಸು ಶಾಂತವಾಗಿ ಅಪರಿಚಿತನು ಪುನಃ ಹೇಳತೊಡಗಿದನು—

"ನಮ್ಮ ತಂದೆಯು ದೇಶದಲ್ಲೆಲ್ಲ ಪ್ರಖ್ಯಾತಿಗೊಂಡಿದ್ದ ಕಾಯಸ್ಥಜಾತಿಯ ಜಮೀನುದಾರನಾಗಿದ್ದನು; ಆತನಿಗೆ ಬಹಳ ಅಧಿಕಾರವೂ ಸೈನ್ಯವೂ ಇದ್ದುವು; ಸ್ವಭಾವತಃ ಗರ್ವಿತನಾಗಿಯೂ ಮುಂಗೋಪಿಯಾಗಿಯೂ ಇದ್ದನು; ನನ್ನನ್ನು ಬಹಳವಾಗಿ ಪ್ರೀತಿಸುತಿದ್ದನು; ನಾನು ಬಹಳ ಬುದ್ಧಿಯುಳ್ಳವನೆಂದು ಕೇಳಿ ಸಂತೋಷದಿಂದುಬ್ಬುವನು; ನನ್ನನ್ನಾರಾದರೂ ದೂಷಿಸಿದರೆ ಮುಖಬಾಡಿದವ

ನಾಗುವನು; ಆದರೆ ಸ್ವಭಾವಸಿದ್ಧವಾಗಿದ್ದಾ ಕೋಪವನ್ನು ಅಡಗಿಸಲಾರದವನಾಗಿದ್ದನು; ಒಂದಾನೊಂದು ದಿನ ನನ್ನಲ್ಲಾವ ತಪ್ಪಿತವೂ ಇಲ್ಲದೆ ನನ್ನನ್ನು ಹೊಡೆದು, 'ನಿನ್ನ ಮುಖವನ್ನು ನೋಡೆನು; ಮನೆಯಿಂದ ತೊಲೆದುಹೋಗು' ಎಂದು ಹೇಳಿದನು. 'ಇದೋ ಹೊರಟೆನು' ಎಂದು ಹೇಳಿ ತಂದೆಯ ಮನೆಯಿಂದ ಹೊರಟೆನು.

"ಪ್ರಹಾರದಿಂದಲೂ ತಿರಸ್ಕಾರದ ಮಾತುಗಳಿಂದಲೂ ಅನೇಕ ಹುಡುಗರು ಶಾಂತರಾಗಿ ಮಾರ್ಗಕ್ಕೆ ಬರುವರು. ನಾನಾದರೋ ಕ್ರೋಧದಿಂದ ಅಂಧನಾದೆನು; ಹೃದಯದಲ್ಲಿ ಬೆಂಕಿಯು ಉರಿಯಲಾರಂಭಿಸಿತು; ಆ ಬೆಂಕಿಯಿಂದ ಪಿತೃಭಕ್ತಿಯೂ ಮಾತೃಸ್ನೇಹವೂ ಉರಿದುಹೋದುವು; ಆ ಬೆಂಕಿಯಿಂದ ಸಂಸಾರದ ಸುಖವೂ ತಾಯಿತಂದೆಗಳ ಆಶೆ ಭರವಸೆಗಳೆಲ್ಲವೂ ಒಮ್ಮೆ ಸುಟ್ಟುಹೋದುವು; ತಂದೆಯು ತೊಲೆದುಹೋಗೆಂದನು; ನಾನವನನ್ನು ತೊರೆದು ಬಂದೆನು; ಅದು ಮೊದಲ್ಗೊಂಡು ಪಿತೃಗೃಹವನ್ನು ತ್ಯಾಗಮಾಡಿದೆನು; ಆಗೆನಗೆ ಹನ್ನೆರಡು ವರ್ಷದ ಪ್ರಾಯವಾಗಿದ್ದಿತು.

"ಬಳಿಕ ಕೆಲವು ವರ್ಷಗಳವರೆಗೆ ಹೇಗೆ ಕಾಲಕ್ಷೇಪವನ್ನು ಮಾಡಿದೆನೋ, ಅದನ್ನು ವಿಚಾರಮಾಡಬೇಕಾದ ಆವಶ್ಯಕವಿಲ್ಲ; ನನ್ನ ಜೀವನದಾ ಹತ್ತು ವರ್ಷಗಳೂ ಮರುಭೂಮಿಯಲ್ಲಿ ಪ್ರಚಂಡವಾದಾ ವಾಯುವು ಬೀಸುವಂತೆ ಕಳೆದುಹೋದುವು; ಪ್ರಚಂಡತೆಯೇನೋ ಇದ್ದಿತು; ಆದರೆ ಫಲವಿಲ್ಲ, ಅರ್ಥವಿಲ್ಲ, ಆರಿಗೂ ಉಪಕಾರವಾಗಲಿಲ್ಲ; ಪ್ರಾಣಿಶೂನ್ಯವಾಗಿಯೂ ನಿರ್ಜನವಾಗಿಯೂ ಇರುವ ಪರ್ವತದ ಪಾರ್ಶ್ವದಲ್ಲಿ ಮೊರೆಯುವ ಸಮುದ್ರದ ಗರ್ಜನೆಯಂತೆ ನನ್ನ ಹೃದಯದ ಪ್ರವೃತ್ತಿಗಳೆಲ್ಲವೂ ಗರ್ಜಿಸಿದುವು; ಆದರೆ ಆ ಗರ್ಜನೆಯನ್ನು ಕೇಳುವವರು ಇರಲಿಲ್ಲ; ಆ ಗರ್ಜನೆಯನ್ನು ಕೇಳಿ ಆನಂದಪಟ್ಟವರಿಲ್ಲ; ವಿಸ್ಮಿತರಾದವರೂ ಇಲ್ಲ; ಭೈರವ ಕಲ್ಲೋಲದಿಂದ ಪಾತಾಳದಲ್ಲಿ ಪ್ರವಹಿಸುವ ಭೋಗವತೀ ನದಿಯ ಅಲೆಗಳ ಮಾಲೆಗಳಂತೆ ನನ್ನ ಹೃದಯಕಂದರದಲ್ಲಿ ಅನೇಕ ಪ್ರವೃತ್ತಿಗಳು ಪ್ರವಹಿಸಿದುವು; ಆದರೆ ಆ ಪ್ರವಾಹವು ಭೋಗವತಿಯಂತೆ ಮನುಷ್ಯನಿಗೆ ಗೋಚರವಾಗದೆ ಅಂಧಕಾರದಲ್ಲಿ ಪ್ರವಹಿಸುತಿದ್ದಿತು.

"ಆ ಹತ್ತು ವರ್ಷಗಳಾದ ಬಳಿಕ ಆ ಅಂಧಕಾರದ ರಾಶಿಯಲ್ಲಿ ಒಮ್ಮಿಂದೊಮ್ಮೆ ಬೆಳಕಿನ ಝಳತ್ಕಾರದ ರೇಖೆಯೊಂದು ಜಳಿಪಿಸಿತು." ಹೀಗೆಂದು ಹೇಳಿ ಅಪರಿಚಿತನು ಸ್ವಲ್ಪ ಹೊತ್ತು ಸುಮ್ಮನಾಗಿ ಚಿಂತಿಸಲಾರಂಭಿಸಿದನು. ಸುರೇಂದ್ರನಾಥನು ಏನೆ ಇಕ್ಕದೆ ಹುಚ್ಚನವಸಂತಾಗಿದ್ದಾ ಮನುಷ್ಯನ ಮಾತುಗಳನ್ನು ಮರದಾದವನಂತೆ ಕೇಳುತಿದ್ದನು. ಸ್ವಲ್ಪ ಹೊತ್ತಾದ ಬಳಿಕ ಆ ಮನುಷ್ಯನು ಪುನಃ ಹೇಳತೊಡಗಿದನು:—

"ಆ ಹತ್ತು ವರ್ಷಗಳ ಕಾಲ ನನ್ನ ಹೃದಯವನ್ನು ವ್ಯಥೆಪಡಿಸುತಿದ್ದ

ಪ್ರವೃತ್ತಿಗಳಲ್ಲಿ ಪ್ರೇಮವು ಮುಂದುವರಿದಿದ್ದಿತು. (ಸುರೇಂದ್ರನಾಥನು ಹೆಚ್ಚು ಆತುರದಿಂದ ಕೇಳತೊಡಗಿದನು.) ಸಾಮಾನ್ಯವಾದ ಹೆಂಗಸಿನ ಪ್ರೇಮವನ್ನು ನಾನು ಅಪೇಕ್ಷಿಸಿದವನಲ್ಲ; ಆವ ಪ್ರೇಮವು ಒಮ್ಮೊಂದೊಮ್ಮೆ ಮಾನವನ ಹೃದಯವನ್ನು ಪರಿಪೂರ್ಣವಾಗಿ ತುಂಬಿ ಸೂಸಿ ಹರಿಯುವುದಾಗುವುದೋ, ಆವ ಪ್ರೇಮವು ಜೀವನಕ್ಕೆ ಅಂಶವಾಗಿರುವುದೋ, ಆವ ಪ್ರೇಮವು ದೇಹಕ್ಕೆ ಆತ್ಮಸ್ವರೂಪವಾಗುವುದಾಗುವುದೋ, ಆವ ಪ್ರೇಮವು ಮುಗಿದರೆ ಜೀವನವೇ ಮುಗಿದುಹೋಗುವುದಾಗುವುದೋ, ಅಂತಹ ಪ್ರೇಮವನ್ನು ಅಪೇಕ್ಷಿಸುತಿದ್ದೆನು; ಎಷ್ಟೋ ತಡವೆ ಅಂಧಕಾರದಲ್ಲಿ ಕುಳಿತು ಅಂತಹ ಪ್ರೇಮವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತಿದ್ದೆನು. ಚಿಂತೆಯ ಬಲದಿಂದ ಅನೇಕ ಸಮಯಗಳಲ್ಲಿ, ಅಲೌಕಿಕವಾಗಿಯೂ ಸ್ನೇಹಮಯವಾಗಿಯೂ ಇರುವ ಅಂತಹ ಪ್ರೇಮದ ಪ್ರತಿಮೆಯು ಆಕಾಶದಲ್ಲಿ ಜಾಗರಿತವಾಗಿರುವಂತೆ ಕಲ್ಪಿಸಿಕೊಂಡು ಅದರೊಂದಿಗೆ ಕಾಲಹರಣವಂ ಮಾಡುತಿದ್ದೆನು. ಇದ್ದಕ್ಕಿದ್ದಹಾಗೆ ಆ ಮೂರ್ತಿಯು ನೀರಿನಲ್ಲಿ ಕಂಡ ಬಿಂಬದಂತೆ ಅಳಿಸಿಹೋಗುವುದು; ಕಲ್ಪನಾಶಕ್ತಿಯು ಶ್ರಾಂತವಾಗಿ ಹೋಗುವುದು. ಆಗ ನಾನು ಒಮ್ಮೆ ಮೂರ್ಛಿತನಾಗಿ ನೆಲದಮೇಲೆ ಬಿದ್ದುಬಿಡುವೆನು.

"ಈ ಪ್ರಕಾರ ಮನಸ್ಸಿನ ಕಲ್ಪನೆಯು ದಿನದಿನಕ್ಕೂ ವೃದ್ಧಿಗೊಳ್ಳುತಿದ್ದಿತು; ಹಗಲುಹೊತ್ತು, ಅರ್ಧಕಾಲವೆಲ್ಲಾ ನಾನೀ ಪ್ರಪಂಚದಲ್ಲಿರುತಿರಲಿಲ್ಲ; ಕಾಲ್ಪನಿಕವಾದ ಪ್ರಪಂಚದಲ್ಲಿ ವಿಹರಿಸುತಿರುವೆನು; ಕಾಲ್ಪನಿಕವಾದಾ ಪ್ರಪಂಚದಲ್ಲಿ ಉಜ್ವಲವಾದ ಆಕಾಶ, ಉಜ್ವಲವಾದ ಕ್ಷೇತ್ರಗಳು, ಉಜ್ವಲವಾದ ವೃಕ್ಷಗಳು, ಉಜ್ವಲವಾದ ಅಟ್ಟಾಲಿಕೆ, ಉಜ್ವಲವಾದ ಗೃಹಪದಾರ್ಥಗಳು, ಅವುಗಳ ಮಧ್ಯದಲ್ಲಿ ಉಜ್ವಲವಾದಾ ಪ್ರೇಮದ ಪ್ರತಿಮೆಯು ಕುಳಿತಿರುವುದು. ನಿಬಿಡವಾದ ಕೃಷ್ಣವರ್ಣದ ಕೇಶಪಾಶವು ಜ್ಯೋತಿರ್ಮಯವಾದಾ ಸುವರ್ಣಕಾಂತಿಯುಳ್ಳ ಮುಖಮಂಡಲವನ್ನು ವೇಷ್ಟನಮಾಡಿಕೊಂಡಿರುವುದು; ಆ ಬಾಲೆಯ ರಕ್ತವರ್ಣದ ಸಣ್ಣ ತುಟಿಗಳು ಮೆಲ್ಲಗುವನಿಂದ ವಿಸ್ಫಾರಿತವಾಗಿರುವುವು; ಭ್ರಮರದಂತೆ ಕಪ್ಪಾದ ಕಣ್ಣುಗಳೆರಡೂ ಪ್ರೇಮಾಶ್ರುವಿನಿಂದ ಪರಿಪೂರ್ಣವಾಗಿರುವುವು; ಮುಖಮಂಡಲವೆಲ್ಲಾ ಪ್ರೇಮದಲ್ಲಿ ಥಳಥಳಿಸುತ್ತಿರುವುದು. ಇದ್ದಕ್ಕಿದ್ದ ಹಾಗೆ ನನ್ನ ಕಲ್ಪನಾಶಕ್ತಿಯು, ತಂತಿಯು ಹರಿದ ವೀಣೆಯಂತೆ, ತಣ್ಣಗಾಗುವುದು; ನಾನು ಮೂರ್ಛಿತನಾಗಿ ಬಿದ್ದುಬಿಡುವೆನು.

"ಒಂದಾನೊಂದು ದಿನ ಈ ಪ್ರಕಾರ ರಾತ್ರಿಯ ಕಡೆಯ ಜಾಮದಲ್ಲಿ ಕಲ್ಪನೆಯ ಪ್ರವಾಹವು ನಿಂತು ಮೂರ್ಛೆಹೋಗಿ ಈ ಗಂಗಾತೀರದಾ ಕುಂಜವನದಲ್ಲಿ ಮಲಗಿದ್ದೆನು. ಎಷ್ಟು ಹೊತ್ತು ಮೂರ್ಛೆಯಲ್ಲಿದ್ದೆನೋ ಅದನ್ನು ಹೇಳಲಾರೆನು,—ಆರೋ ಮುಖಕ್ಕೂ ತಲೆಗೂ ತಣ್ಣೀರನ್ನು ತಳಿದು ಬೀಸಣಿಗೆಯಿಂದ ಗಾಳಿಯನ್ನು ಬೀಸುತಿದ್ದಂತೆ ಬೋಧೆಯಾಯಿತು. ಮೆಲ್ಲಮೆಲ್ಲನೆ ಕಣ್ತೆರೆದು

ನೋಡಿದೆನು,—ಹೇಳಿದರೆ ನೀವು ನಂಬಲಾರಿರೆಂದು ತೋರುತ್ತದೆ,—ಅದೇ ಪ್ರೇಮದ ಪ್ರತಿಮೆ! ಆ ಸ್ವಪ್ನದಲ್ಲಿ ಕಂಡ ಬಾಲೆಯು ಮೂರ್ತಿಮತಿಯಾಗಿ ಬಂದು ಕುಳಿತು ನನ್ನ ತಲೆಗೂ ಮುಖಕ್ಕೂ ತಣ್ಣೀರನ್ನು ತಳಿಯುತಿದ್ದಳು!"

ಇಬ್ಬರೂ ಸ್ವಲ್ಪಹೊತ್ತು ಮೌನವಾಗಿದ್ದರು. ಸುರೇಂದ್ರನಾಥನು ಅಸಂಭವವಾದಾ ಮಾತುಗಳನ್ನು ಕೇಳುತ ಅಚ್ಚರಿಗೊಂಡನು. ಬಳಿಕ ಅಪರಿಚಿತನಾದಾ ಮನುಷ್ಯನು ಪುನಃ ಹೇಳತೊಡಗಿದನು.

"ಅಲ್ಲಿ ಕಾಣುವ ಆ ನಿಕುಂಜವನದಲ್ಲಿ ನಾನು ವಾಸಮಾಡುತ್ತಿದ್ದೆನು! ಆಕಾಶದಲ್ಲಿ ಶರತ್ಕಾಲದ ಉಷೆಯು ಪವಿತ್ರವಾದೊಂದು ಬಣ್ಣವನ್ನು ಬಿತ್ತರಿಸುವುದಷ್ಟೆ; ನನ್ನ ಹೃದಯಾಕಾಶದಲ್ಲಿ ಅದಕ್ಕಿಂತ ಹೆಚ್ಚು ಪವಿತ್ರವಾದೊಂದು ಬಣ್ಣವು ಬೆಳಗುತಿದ್ದಿತು. ಸಂಧ್ಯೆಯಲ್ಲಿ ಸ್ವಲ್ಪವಾದ ಅಂಧಕಾರವು ಹೇಗೆ ಶಾಂತವಾಗಿಯೂ ನಿಸ್ತಬ್ಧವಾಗಿಯೂ ಇರುವುದೋ ನನ್ನ ಹೃದಯದಲ್ಲಿ ಪ್ರೇಮವಾದುದು ಅದಕ್ಕಿಂತ ಹೆಚ್ಚಾಗಿ ನಿಸ್ತಬ್ಧವಾಗಿಯೂ ಶಾಂತವಾಗಿಯೂ ಇರುವುದು, ನಾನು ಆ ರಮಣಿಯನ್ನು ಕುಂಜವಾಸಿನಿಯೆಂದು ಕರೆಯುತಿದ್ದೆನು, ಏಕೆಂದರೆ, ಅಲ್ಲಾವ ಕುಂಜವನವು ಕಾಣುವುದೋ ಆ ಸ್ಥಳದಲ್ಲಿ—"

ಮುಂದಕ್ಕೆ ಮಾತು ಸಾಗಲಿಲ್ಲ, ಅಪರಿಚಿತನು ಉನ್ಮತ್ತನಾದವನಂತೆ ಆ ಕುಂಜವನವನ್ನು ದೃಷ್ಟಿಸಿ ನೋಡುತಿದ್ದನು,—ಮುಖದಲ್ಲಾವ ಭಾವವೂ ಇಲ್ಲ. ಸಂಜ್ಞೆಯಿದ್ದ ಲಕ್ಷಣವಾವದೂ ಕಾಣಲಿಲ್ಲ. ಸುರೇಂದ್ರನಾಥನು ಅವನಿಗೆ ಹೆಚ್ಚು ಶೈತ್ಯೋಪಚಾರಗಳನ್ನು ಮಾಡಿ ಚೈತನ್ಯವನ್ನುಂಟುಮಾಡಿದನು. ಬಳಿಕ ಬೇರೆ ಪ್ರಸ್ತಾವಗಳನ್ನು ಕುರಿತು ಮಾತನಾಡುತಿದ್ದಂತೆ ಬಹಳ ಹೊತ್ತಾಯಿತು. ಇಬ್ಬರೂ ಅಣ್ಣತಮ್ಮಂದಿರಂತೆ ಒಂದೇ ಹಾಸಿಗೆಯಲ್ಲಿ ಮಲಗಿಕೊಂಡರು—ಕೂಡಲೇ ನಿದ್ರಾಭಿಭೂತರಾದರು.

---

## ಹದಿಮೂರನೆಯ ಪರಿಚ್ಛೇದ

A combination and a form indeed
Where every god did seem to set his seal
To give the world assurance of a man. *Shakespeare.*

ಮಾಂಗೀರುನಗರದ ದುರ್ಗದ ಮಧ್ಯದಲ್ಲಿದ್ದೊಂದು ಪ್ರಶಸ್ತವಾಗಿದ್ದ ಮನೆಯಲ್ಲಿ ವೀರಪುರುಷನೊಬ್ಬನು ಕುಳಿತಿದ್ದನು. ಅವನು ಕ್ಷತ್ರಿಯ ಕುಲಕ್ಕೆ ಚೂಡಾಮಣಿಯಂತಿದ್ದ ರಾಜಾ ಟೋಡರಮಲ್ಲನಾಗಿದ್ದನು.

ಆಗವನ ಸಂಗಡ ಹೆಚ್ಚು ಮಂದಿ ಜನರಿರಲಿಲ್ಲ. ನಾಲ್ಕಾರು ಮಂದಿ ಆಪ್ತರಾಗಿದ್ದ ಯೋದ್ಧರಿದ್ದರು. ಅವರೆಲ್ಲರೂ ಏಕಾಂತವಾಗಿ ಆಲೋಚನೆಯನ್ನು ಮಾಡುತಿದ್ದರು. ಆ ಸಮಯದಲ್ಲಿ ಸೈನಿಕನೊಬ್ಬನು ಬಂದು ಪ್ರಣಾಮವನ್ನು

ಮಾಡಿ, "ಮಹಾಸ್ವಾಮಿ! ಕುದುರೆ ರಾಹುತನೊಬ್ಬನು ಭೇಟಿಗೆ ಸಲುವಾಗಿ ಅಪ್ಪಣೆಯನ್ನೆದುರುನೋಡುತ ಬಾಗಿಲಲ್ಲಿ ಕಾದು ನಿಂತಿರುವನು" ಎಂದು ಹೇಳಿದನು.

ಟೋಡರಮಲ್ಲ—ಅವನು ಬಂದಿರುವ ಕೆಲಸವನ್ನು ಕುರಿತು ವಿಚಾರಿಸಿ ಕೊಂಡು ಬಂದು ಹೇಳು.

ಸೈನಿಕ—ವಿಚಾರ ಮಾಡಿದೆನು. ಮಹಾರಾಜರವರ ಸನ್ನಿಧಾನದಲ್ಲಿ ಹೊರತು ಮತ್ತಾರಿಗೂ ಹೇಳುವುದಿಲ್ಲವೆಂದು ಹೇಳಿದನು.

ಟೋಡರಮಲ್ಲ—ಅವನು ಹಿಂದುವೋ ಮುಸಲಮಾನನೋ?

ಸೈನಿಕ—ಅವನೊಬ್ಬ ಕಾಯಸ್ಥಜಾತಿಯ ಜಮಾನುದಾರನ ಮಗನು.

ಟೋಡರಮಲ್ಲ—ವಂಗದೇಶದಲ್ಲಿ ಪರಾಕ್ರಮಶಾಲಿಗಳಾದ ಅನೇಕ ಕಾಯಸ್ಥ ಜಾತಿಯ ಜಮಾನುದಾರರಿರುವರು. ಅವರಲ್ಲಿ ಕಾಲಾಳು ಬಲವು ಎಂಟುಲಕ್ಷ ಸೈನ್ಯಕ್ಕೆ ಹೆಚ್ಚಾಗಿದೆಯೆಂದು ಕೇಳಿದ್ದೇನೆ. ಸಮ್ರಾಜರವರ ಕಾರ್ಯದಲ್ಲಿ ಅವರ ಸಹಾಯವು ಆವಶ್ಯಕವಾಗಿರುವುದು. ಬಂದಿರುವವನನ್ನು ಕರೆತಂದು ಬಿಡು.

ಸೈನಿಕನು ಅಶ್ವಾರೋಹಿಯಾಗಿ ಬಂದಿದ್ದವನನ್ನು ಒಳಗೆ ಕರೆತರಲು ಹೊರಗೆ ಹೊರಟುಹೋದನು.

ಈ ಮಧ್ಯ ಪಾಠಕಮಹಾಶಯರಿಗೆ ಟೋಡರಮಲ್ಲನ ಪರಿಚಯವನ್ನು ತಿಳಿಯಹೇಳುವೆವು.

ಕ್ಷತ್ರಿಯಕುಲಾವತಂಸನಾಗಿದ್ದ ರಾಜಾ ಟೋಡರಮಲ್ಲನಂತಿದ್ದ ಸರ್ವ ಗುಣ ವಿಭೂಷಿತನಾದ ವೀರಪುರುಷನು ಭಾರತವರ್ಷದಲ್ಲಿ ಜನ್ಮಗ್ರಹಣಮಾಡಿದ್ದ ನೆಂದು ಹೇಳುವುದು ಕಷ್ಟವಾಗಿರುವುದು. ರತ್ನಪ್ರಸವಿನಿಯಾದ ಭಾರತಭೂಮಿ ಯಲ್ಲಿ ಪುಣ್ಯಾತ್ಮರಾಗಿಯೂ ಧರ್ಮಪರಾಯಣರಾಗಿಯೂ ಇದ್ದ ಮಹಾಪುರು ಷರು ಜನ್ಮಗ್ರಹಣ ಮಾಡಿರುವವರಲ್ಲದೆ, ವೀರಪ್ರಸು ಆದ ಕ್ಷತ್ರಿಯಕುಲದಲ್ಲಿ ವೀರಪುರುಷರನೇಕರು ಅವತೀರ್ಣರಾಗಿದ್ದಾರೆ. ಮತ್ತು ಪ್ರಾಚೀನ ಭಾರತ ವರ್ಷದಲ್ಲಿ ತೀಕ್ಷ್ಣಬುದ್ಧಿಸಂಪನ್ನರಾದ ರಾಜನೀತಿಜ್ಞರೂ ಅನೇಕರು ಹುಟ್ಟಿ ಖ್ಯಾತಿಗೊಂಡಿದ್ದಾರೆ. ರಾಜಾ ಟೋಡರಮಲ್ಲನಾದರೋ, ಮೇಲೆ ಹೇಳಿರುವ ಮೂರು ಗುಣಗಳಿಂದಲೂ ಅಲಂಕೃತನಾಗಿದ್ದನು.

ಹಿಂದೂ ಧರ್ಮದಲ್ಲಿ ಅವನ ಭಕ್ತಿಯು ಅಚಲವಾಗಿದ್ದಿತೆಂಬುದಕ್ಕೆ ಚರಿತ್ರೆ ಗಳಲ್ಲಿ ಅನೇಕ ಉದಾಹರಣೆಗಳನ್ನು ನೋಡಬಹುದು. ಒಂದಾನೊಂದು ಕಾಲ ದಲ್ಲಿ ಅಕಬರಷಹನ ಸಂಗಡ ಅವನು ಪಂಜಾಬಿಗೆ ಅವಸರವಾಗಿ ಪ್ರಯಾಣಮಾಡಿ ಹೋಗುತಿದ್ದಾಗ ನಿಯಮಿತವಾದ ಅವನ ದೇವಾರಾಧನೆಯ ಕಾರ್ಯಕ್ಕೆ ವಿಘ್ನ ವುಂಟಾಯಿತು. ಟೋಡರಮಲ್ಲನು ಪ್ರಾತಃಕಾಲದಲ್ಲಿ ದೇವತಾರಾಧನೆಯನ್ನು ಮಾಡದೆ ಆವ ಕೆಲಸವನ್ನೂ ಮಾಡನು; ಜಲಗ್ರಹಣವನ್ನೂ ಮಾಡುತಿರಲಿಲ್ಲ.

ಅದುಕಾರಣ, ದೇವತಾರಾಧನೆಗೆ ಅಂದು ವ್ಯಾಘಾತವುಂಟಾದುದರಿಂದ ಆ ದಿನ ವೆಲ್ಲಾ ಅನಾಹಾರಿಯಾಗಿದ್ದುಬಿಟ್ಟನು. ಅಕಬರಷಹನು ಎಷ್ಟೊಂದು ಹೇಳಿದರೂ ಟೋಡರಮಲ್ಲನು ಅಂದಾವ ಕಾರ್ಯವನ್ನೂ ಮಾಡಲಿಲ್ಲ. ಅಕಬರಷಹನ ಮುಸಲಮಾನ ಮಂತ್ರಿಗಳಾಗಿದ್ದ ಅಬುಲ್‌ಫಜಲ್ ಮುಂತಾದವರು ಟೋಡರ ಮಲ್ಲನನ್ನು ಗೊಡ್ಡ ವೈದಿಕನೆಂದು ಸರ್ವದಾ ನಿಂದಿಸುವರು. ಮಹಾನುಭಾವ ನಾಗಿದ್ದ ದಿಲ್ಲೀಶ್ವರನಾದ ಅಕಬರನು ಸ್ವಧರ್ಮಾನುರಾಗಿಯಾಗಿದ್ದಾ ವೀರಪುರುಷ ನನ್ನು ಸನ್ಮಾನಮಾಡುತಿದ್ದನು. ಟೋಡರಮಲ್ಲನು ವೃದ್ಧನಾಗಿ ಭಾರತ ಭೂಮಿಯೆಲ್ಲಾ ಅವನ ಯಶಸ್ಸಿನಿಂದ ತುಂಬಿ ಅವನ ಪದಗೌರವಗಳು ಪರಾಕಾಷ್ಠ ವನ್ನು ಹೊಂದಿದ್ದಾಗ ಟೋಡರಮಲ್ಲನು ಅವನ್ನೆಲ್ಲಾ ತೊರೆದು ಗಂಗಾತೀರದಲ್ಲಿ ದೇಹತ್ಯಾಗವಂ ಮಾಡಬೇಕೆಂಬ ಅಭಿಪ್ರಾಯದಿಂದ ದಿಲ್ಲೀಶ್ವರನ ಅನುಮತಿಯನ್ನು ಪಡೆದು ರಾಜ್ಯಾಧಿಕಾರವನ್ನು ಬಿಟ್ಟು ಹರಿದ್ವಾರಕ್ಕೆ ಹೊರಟುಹೋಗಿ ಅಲ್ಲಿ ವಾಸವಾಗಿರುತಿದ್ದನು.

ರಾಜಾ ಟೋಡರಮಲ್ಲನು ವಂಗದೇಶವನ್ನು ಕ್ರಮವಾಗಿ ಮೂರು ತಡವೆ ಜಯಿಸಿ ಅವನ ಸಾಹಸಕ್ಕೂ ಯುದ್ಧಕೌಶಲಕ್ಕೂ ಯಥೇಷ್ಟ ಪ್ರಮಾಣ ಗಳನ್ನು ತೋರಿರುವನು. ಮೊದಲು ತಡವೆ ಮೌನಾಯಿಮಖಾನನ ಸಂಗಡಲೂ ಎರಡನೆಯ ತಡವೆ ಹಸ್ಸೆನಕುಲಿಖಾನನ ಸಂಗಡಲೂ ಬಂದು ಅವರ ಅಧೀನದ ಲ್ಲಿದ್ದು ಕೆಲಸವನ್ನು ಮಾಡಿದ್ದರೂ ಅವನ ಸಾಹಸದಿಂದಲೇವೇ ಎರಡು ತಡವೆಯೂ ದಿಲ್ಲೀಶ್ವರನಿಗೆ ಜಯಲಾಭವುಂಟಾಯಿತು. ಮೂರನೆಯ ತಡವೆ ಸ್ವಯಂ ಸೇನಾ ಪತಿಯಾಗಿ ಬಂದಿದ್ದನು. ವಂಗದೇಶದಲ್ಲಿ ಮಾತ್ರವೇ ಅಲ್ಲ—ಅವನು ಹೋಗಿದ್ದ ಸ್ಥಳಗಳಲ್ಲೆಲ್ಲಾ ತನ್ನ ಅಸಾಧಾರಣವಾದ ವೀರತ್ವವನ್ನು ತೋರಿರುವನು. ಗುಜ ರಾತನಲ್ಲೆದ್ದಿದ್ದ ದಂಗೆದಾರರ ಸಂಗಡ ಮಾಡಿದ ಯುದ್ಧದಲ್ಲಿ ಟೋಡರಮಲ್ಲನು ಸಿಂಹದಂತೆ ಶೌರ್ಯವೀರ್ಯಗಳನ್ನು ತೋರಿರುವನು. ಧೋಳಕರದಲ್ಲಿ ನಡೆದ ಯುದ್ಧದಲ್ಲಿ ಸೇನಾಪತಿಯಾಗಿದ್ದ ವಜೀರಖಾನನು ಪಲಾಯನತತ್ಪರನಾಗಿದ್ದನು; ಆದರೆ ರಾಜಾ ಟೋಡರಮಲ್ಲನು ಅವನನ್ನು ನಿಷೇಧಿಸಿ ನಿಲ್ಲಿಸಿ ಸ್ವಂತವಾಗಿ ಯುದ್ಧವನ್ನು ಮಾಡಿ ತನ್ನ ಅಪೂರ್ವ ವೀರತ್ವವನ್ನು ತೋರಿದ ಬಳಿಕ ವಿಜಯ ಲಕ್ಷ್ಮಿಯು ಅವನ ಅಂಕಶಾಯನಿಯಾದಳು. ಅಕಬರಷಹನ ದಂಡಿನಲ್ಲಿ ಅನೇಕ ಸೇನಾಪತಿಗಳಿದ್ದರು. ಅವರಲ್ಲಾರೂ ಟೋಡರಮಲ್ಲನಿಗೆ ಸಮಾನ ವೀರರಾಗಿರಲಿಲ್ಲ.

ಅಕಬರಷಹನು ಸಮಸ್ತ ಭಾರತವರ್ಷದಲ್ಲಿ ಸರಕಾರಕ್ಕೆ ಬರತಕ್ಕ ಕಂದಾ ಯದ ಶಿಸ್ತುವನ್ನು ಕರಾವು ಮಾಡುವ ಭಾರವನ್ನು ರಾಜಾ ಟೋಡರಮಲ್ಲನಿಗೆ ವಹಿಸಿದ್ದನು. ಅಂತಹ ಮಹತ್ಕಾರ್ಯವನ್ನು ನಿರ್ವಹಿಸುವುದರಲ್ಲಿ ಟೋಡರ ಮಲ್ಲನ ಅತ್ಯಂತವಾದ ಸೂಕ್ಷ್ಮಬುದ್ಧಿಯೂ ಅಪಾರವಾದ ರಾಜನೀತಿಜ್ಞಾನವೂ ಪ್ರಕಾಶಗೊಂಡಿವೆ.

ರಾಜಾ ಟೋಡರಮಲ್ಲನು ಲಾಹೋರ ನಗರದಲ್ಲಿ ಹುಟ್ಟಿದನು. ಶೈಶವಾವಸ್ಥೆಯಲ್ಲಿಯೇ ಅವನ ತಂದೆಯು ಮೃತನಾದನು. ಅವನ ತಾಯಿಯು ದಾರಿದ್ರ್ಯದಿಂದ ಎಷ್ಟೊಂದು ಕಷ್ಟಾನುಭವ ಮಾಡುತಿದ್ದರೂ ಮಗನನ್ನು ಪ್ರಯತ್ನಪುರಸ್ಸರವಾಗಿ ಲಾಲನ ಪಾಲನೆಮಾಡುತಿದ್ದಳು. ಮಗನು ಅಲ್ಪವಯಸ್ಸಿನಲ್ಲಿಯೇ ತೀಕ್ಷ್ಣಬುದ್ಧಿಯನ್ನು ಪ್ರಕಾಶಪಡಿಸುತಿದ್ದು ಹುಡುಗನಾಗಿದ್ದಾಗಲೇ ಒಂದು ಗುಮಾಸ್ತೆಯ ಕೆಲಸಕ್ಕೊಪ್ಪಿಕೊಂಡನು. ಅವನ ಅಸಾಧಾರಣ ಬುದ್ಧಿಯ ಬಲದಿಂದ ಅಷ್ಟೊಂದು ಅಲ್ಪವಾದ ಕೆಲಸದಿಂದ ರತ್ನಪರಿಪೂರ್ಣವಾಗಿದ್ದ ಅಕಬರಷಹನ ಸಭೆಯಲ್ಲಿ ಪ್ರಧಾನರತ್ನವಾಗಿ ಬೆಳಗಿದನು.

ಸೈನಿಕಪುರುಷನು ಅಪರಿಚಿತನಾಗಿ ಬಂದಿದ್ದ ಅಶ್ವಾರೋಹಿಯನ್ನು ರಾಜನ ಸಮ್ಮುಖಕ್ಕೆ ಕರೆತಂದು ಬಿಟ್ಟನು. ಅಶ್ವಾರೋಹಿಯು ಪಾಠಕರಿಗೆ ಅಪರಿಚಿತನಲ್ಲ. ಟೋಡರಮಲ್ಲನು ಅವನನ್ನು ಕುರಿತು, "ಯುವಕ! ನಿನ್ನ ಹೆಸರೇನು?" ಎಂದು ವಿಚಾರಮಾಡಿದನು. ಯುವಕನು ತನ್ನ ಹೆಸರು ಇಂದ್ರನಾಥ ಚೌಧುರಿಯೆಂದು ಹೇಳಿದನು.

ಟೋಡರಮಲ್ಲ—ನಿವಾಸವೆಲ್ಲಿ?

ಇಂದ್ರನಾಥ—ನದಿಯಾ ಜಿಲ್ಲೆಯಲ್ಲಿ ಇಚ್ಛಾಪುರವೆಂಬ ಗ್ರಾಮದಲ್ಲಿ.

ಟೋಡರಮಲ್ಲ—ನಿಮಗಿರುವ ಸೈನ್ಯವೆಷ್ಟು?

ಇಂದ್ರನಾಥ—ಸಮ್ರಾಜರ ಕಾರ್ಯಕ್ಕೆ ಸಲುವಾಗಿಯೂ ದೇಶದಲ್ಲಿ ಸುಶಾಸನವನ್ನೂ ಶಾಂತಿಯನ್ನೂ ಕಾಪಾಡುವುದಕ್ಕೆ ಸಲುವಾಗಿಯೂ ವಂಗದೇಶದಲ್ಲಿ ಎರಡುಮೂರು ಸಾವಿರ ಕಾಲಾಳುಬಲವು ತಂದೆಯ ಅಧೀನದಲ್ಲಿದೆ. ಪ್ರಕೃತದಲ್ಲಿ ನಾನೊಬ್ಬನೇ ಸಮ್ರಾಜರ ಕಾರ್ಯಸಾಧನಾರ್ಥವಾಗಿ ಬಿಹಾರ ಪ್ರದೇಶಕ್ಕೆ ಬಂದಿರುವೆನು.

ರಾಜಾ ಟೋಡರಮಲ್ಲನು ಸ್ವಲ್ಪ ರುಷ್ಟನಾದವನಂತಾಗಿ ನಿಸ್ತಬ್ಧಭಾವದಿಂದ ಯುವಕನನ್ನು ತೀವ್ರದೃಷ್ಟಿಯಿಂದ ಕುರಿತು ನೋಡಿದನು. ಯುವಕನ ಆಕಾರದಲ್ಲಿ ಉದಾರಭಾವವು ಹೊರತು ಮತ್ತಾವದೂ ಗೋಚರವಾಗಲಿಲ್ಲ. ಸ್ವಲ್ಪಹೊತ್ತಾದ ಬಳಿಕ ಯುವಕನನ್ನು ಕುರಿತು, ಪುನಃ, "ನಿಮ್ಮ ತಂದೆಯು ಸಮ್ರಾಜರ ಕಾರ್ಯಕ್ಕೆ ಸಲುವಾಗಿ ಕೆಲವು ಸೈನ್ಯವನ್ನು ಕಳುಹಿಸಿಕೊಡಲಿಲ್ಲವೇಕೆ?" ಎಂದು ಕೇಳಿದನು.

ಇಂದ್ರನಾಥ—ಪ್ರಭುಗಳ ಅಪ್ಪಣೆಯಾದರೆ ಕಳುಹಿಸಬಹುದು. ಅಪ್ಪಣೆಯಾದರೆ ನಾನೀಗ ಪ್ರಭುಗಳ ಕಾರ್ಯಸಾಧನದಲ್ಲಿ ಆಶೆಯುಳ್ಳವನಾಗಿರುವೆನು—ಹೀಗೆಂದು ಹೇಳಿ ಇಂದ್ರನಾಥನು ಒರೆಯಿಂದ ತನ್ನ ಕತ್ತಿಯನ್ನು ಹಿರಿದೆತ್ತಿ ಹಿಡಿದು ಪುನಃ ಅದನ್ನು ಒರೆಯಲ್ಲಿ ಕೂರಿಸಿದನು.

ಸಾದೀಖಾನನೆಂಬೊಬ್ಬ ಸೇನಾಪತಿಯು ಅಲ್ಲಿದ್ದವನು, "ಯುವಕ!

ನೀನು ಕತ್ತಿಯನ್ನೊರೆಯಿಂದ ಹಿರಿದೆತ್ತಿ ಹಿಡಿದುದನ್ನು ನೋಡಿದರೆ, ಯುದ್ಧದಲ್ಲಿ ನಿನ್ನ ಕೈಯಲ್ಲಾ ಕತ್ತಿಗೆ ಅವಮಾನವಾಗದೆಂದು ತೋರುತ್ತೆ" ಎಂದನು.

ಅಲ್ಲಿದ್ದ ತಾರಸಖಾನನೆಂಬ ಮತ್ತೊಬ್ಬ ಸೇನಾಪತಿಯು ರಾಜನನ್ನು ಕುರಿತು ಮೃದುಸ್ವರದಲ್ಲಿ, "ಮಹಾರಾಜ! ಯುವಕನು ಶತ್ರುಗಳ ಗುಪ್ತಚರನು, ಅವನನ್ನು ಗಲ್ಲಿಗೆ ಹಾಕುವವನ ವಶಮಾಡುವುದು ಒಳ್ಳೆಯದು" ಎಂದನು.

ರಾಜಾ ಟೋಡರಮಲ್ಲನು ಅವರಾರಿಗೂ ಉತ್ತರವನ್ನು ಹೇಳದೆ ತೀವ್ರ ದೃಷ್ಟಿಯಿಂದ ಹುಡುಗನನ್ನು ನೋಡತೊಡಗಿದನು—ಹುಡುಗನ ಆಕೃತಿಯಲ್ಲಾಗಲೀ ಮುಖಭಾವದಲ್ಲಾಗಲೀ ವೈಲಕ್ಷಣ್ಯಗಳಾವವೂ ಕಂಡುಬರಲಿಲ್ಲ—ಪುನಃ ಹೆಚ್ಚು ಪರೀಕ್ಷಿಸುವುದಕ್ಕೆ ಸಲುವಾಗಿ ಹುಡುಗನನ್ನು ಕುರಿತು, "ನೀನೊಬ್ಬೊಂಟಿಗನಾಗಿ ನಮ್ಮ ಕಾರ್ಯಸಾಧನೆಗೆ ಸಲುವಾಗಿ ಬಂದಿರುವುದರ ಅರ್ಥವೇನು?" ಎಂದು ಪ್ರಶ್ನೆಮಾಡಿದನು.

ಇಂದ್ರನಾಥ—ನನ್ನದೊಂದು ಭಿಕ್ಷೆಯುಂಟು, ನನ್ನ ಸೇವೆಯಿಂದೆನ್ನ ಪ್ರಭುಭಕ್ತಿಯನ್ನು ತೋರಿ, ಅದರಿಂದ ತಮ್ಮನ್ನು ಸಂತೋಷಗೊಳಿಸುವೆನಾದರೆ ಬಳಿಕ ಸನ್ನಿಧಾನದಲ್ಲಿ ನನ್ನಾ ಭಿಕ್ಷೆಯಂ ಬೇಡುವೆನು—ಈಗೆನ್ನ ಭಿಕ್ಷೆಯಂ ಬೇಡಿದರೆ ಅದು ವ್ಯರ್ಥವಾಗುವುದು.

ಟೋಡರಮಲ್ಲ—ಅನೇಕ ಸಮಯಗಳಲ್ಲಿ ಶತ್ರುಗಳು ನಮ್ಮ ಸೈನ್ಯದಲ್ಲಿ ವಿದ್ರೋಹವನ್ನುಂಟುಮಾಡಲು ತಮ್ಮ ಗುಪ್ತಚರರನ್ನು ಕಳುಹಿಸುವರು. ನೀನಂತಹವನಲ್ಲವೆಂದು ನಾನು ತಿಳಿಯುವ ಬಗೆ ಹೇಗೆ?

ಇಂದ್ರನಾಥ—ಮಹಾರಾಜ! ನಾನಾವಾಗಲೂ ಕಪಟಾಚರಣೆಯಂ ಆಚರಿಸುವವನಲ್ಲ. ನಮ್ಮ ವಂಶದಲ್ಲಾ ದೋಷವಿಲ್ಲ—ಹೀಗೆಂದು ಹೇಳುತ್ತಿದ್ದಾಗ ಇಂದ್ರನಾಥನ ಸ್ವರವು ಕ್ರೋಧದಿಂದ ರುದ್ಧವಾಯಿತು.

ಟೋಡರಮಲ್ಲ—ನಿನ್ನ ಮಾತು ಉದಾರಚೇತನಾದ ವೀರಪುರುಷನ ಮಾತಿನಂತಿದೆ; ಆದರೆ ಅನೇಕ ಸಮಯಗಳಲ್ಲಿ ಖಲತೆಯೂ ಬಾಹ್ಯಕವಾದ ಔದಾರ್ಯವನ್ನವಲಂಬಿಸುವುದು.

ಕೇಳಿ ಇಂದ್ರನಾಥನ ಮುಖವು ಕ್ರೋಧದಿಂದ ರಕ್ತಬಣ್ಣವಂ ತಾಳಿತು. ಆದರೂ ಅವನು ತಾಳ್ಮೆಬುದ್ಧಿಯಿಂದ, "ತಮ್ಮಲ್ಲಿ ನಾನು ಖಲಾಧಮನಾಗಿ ಬಂದು ಕಪಟಾಚರಣೆಯಂ ಮಾಡುವವನೆಂದು ತಾವು ನಂಬಿದ್ದರೆ, ಅಪ್ಪಣೆಯಾಗಲಿ, ಬೀಳ್ಕೊಳ್ಳುವೆನು."

ಟೋಡರಮಲ್ಲನು ಹುಡುಗನ ವಾರ್ತೆಯಂ ಕೇಳಿ ಸಂತುಷ್ಟನಾಗಿ ಸಮ್ಮಾನ ಪುರಸ್ಸರವಾಗಿ ಅವನನ್ನೊಂದು ಅಶ್ವಾರೋಹಿಯ ಪದದಲ್ಲಿ ನಿಯಮಿಸಿದನು.

---

## ಹದಿನಾಲ್ಕನೆಯ ಪರಿಚ್ಛೇದ

Alas! they had been friends in youth. *Coleridge.*

ಕೆಲವು ತಿಂಗಳುಗಳು ಕಳೆದುವು; ಇಂದ್ರನಾಥನು ಕ್ರಮವಾಗಿ ಯುದ್ಧಕಾರ್ಯದಲ್ಲಿ ನೈಪುಣ್ಯವನ್ನು ತೋರಿ ಖ್ಯಾತಿಗೊಂಡನು. ರಾಜವಿದ್ರೋಹಿಗಳು ಭಾಗಲಪುರದಲ್ಲಿ ಸೇರಿದ್ದುದರಿಂದ, ಭಾಗಲಪುರದಲ್ಲಿಯೂ ಮೊಂಗೀರ ಮಧ್ಯಪ್ರದೇಶದಲ್ಲಿಯೂ ಸದಾ ಸರ್ವದಾ ಯುದ್ಧಾದಿಗಳು ನಡೆಯುತಿದ್ದುವು.

ಒಂದಾನೊಂದು ದಿನ ವಿದ್ರೋಹಿಗಳು ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಟೋಡರಮಲ್ಲನ ದುರ್ಗದೊಳಗೆ ಪ್ರವೇಶಿಸಲು ಸಂಚು ನಡಿಸುತ್ತ ಪ್ರಯತ್ನಿಸುತಿದ್ದರು. ಟೋಡರಮಲ್ಲನು ಅವರ ಉದ್ದೇಶವನ್ನು ತಿಳಿದಿದ್ದವನು, ಅನಾಯಾಸದಿಂದ ಪ್ರತಿರೋಧಿಸಿ ಅವರ ಪ್ರಯತ್ನವನ್ನು ಸಾಗಗೊಡಿಸಲಿಲ್ಲ—ಅವನು ಬೆಳಗಿನಿಂದ ಸಂಜೆಯವರೆಗೂ ದುರ್ಗದಲ್ಲೊಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಿ ಬರುತಿದ್ದನು. ಅವನ ಉತ್ಸಾಹದಿಂದಲೂ ಅವನ ಬುದ್ಧಿಬಲದಿಂದಲೂ ಅವನ ರಣಕೌಶಲದಿಂದಲೂ ಸೈನ್ಯದವರು ಪ್ರೋತ್ಸಾಹಿತರಾಗಿ ಶತ್ರುಗಳನ್ನು ಅನಾಯಾಸವಾಗಿ ಎಲ್ಲಾ ಸ್ಥಳಗಳಲ್ಲಿಯೂ ಪರಾಸ್ತಮಾಡಿದರು. ಟೋಡರಮಲ್ಲನು ಇದಕ್ಕೆ ಮೊದಲು ಇಂದ್ರನಾಥನ ಸಾಹಸವನ್ನೂ ಯುದ್ಧದಲ್ಲಿ ಅವನ ಉತ್ಸಾಹವನ್ನೂ ನೋಡಿ ಸಂತುಷ್ಟನಾಗಿದ್ದನು. ಇಂದವನು ಹಗಲೆಲ್ಲಾ ರಣಮುಖದಲ್ಲಿ ಉತ್ಸಾಹದಿಂದ ನಿಂತು ಶತ್ರುಗಳನ್ನು ಕಂಡಕಂಡಲ್ಲಿ ಕೈತೆರಪಿಲ್ಲದ ಜಾಣ್ಮೆಯಿಂದ ಜದಪಿ ರಟ್ಟಿಸಿ ಓಡಿಸಿದ ಬಗೆಯನ್ನು ಕಂಡು ಸೇನಾಪತಿ ಟೋಡರಮಲ್ಲನು ಅತಿಶಯವಾಗಿ ಆನಂದಿತನಾದನು—ಸೂರ್ಯಾಸ್ತದ ಸಮಯದಲ್ಲಿ ಶತ್ರುಗಳು ರಣರಂಗವನ್ನು ಬಿಟ್ಟು ಭಾಗಲಪುರದ ಕಡೆಗೆ ಪಲಾಯಿತರಾಗಿ ಹೋದರು.

ಸೂರ್ಯಾಸ್ತವಾದ ಬಳಿಕ ಇಂದ್ರನಾಥನು ಸೇನಾಪತಿಯನ್ನು ನೋಡಬಂದನು–ಟೋಡರಮಲ್ಲನಾಗ ಒಬ್ಬನೇ ತೆರಪಾಗಿ ಕುಳಿತಿದ್ದವನು ಇಂದ್ರನಾಥನು ಬಂದು ನೋಡಬಹುದೆಂದು ಅಪ್ಪಣೆಯನ್ನು ಮಾಡಿದನು.

ಅಂದು ಇಂದ್ರನಾಥನ ಸಾಹಸಿಕ ಕಾರ್ಯಗಳನ್ನು ನೋಡಿ ಟೋಡರಮಲ್ಲನ ಮನವು ಪ್ರಫುಲ್ಲವಾಗಿದ್ದಿತು. ಅವನಾ ಯುವಕ ಸೈನಿಕನೊಡನೆ ಸಾದರಿಂದ ಸಂಭಾಷಣೆಯಂ ಮಾಡಿ ತನ್ನ ಸಮೀಪದಲ್ಲಿ ಕುಳ್ಳಿರಿಸಿಕೊಂಡನು—ಆಗ ಮತ್ತಾರೂ ಅಲ್ಲಿರಲಿಲ್ಲ.

ಟೋಡರಮಲ್ಲ—ಇಂದ್ರನಾಥ! ನೀನಿಂದು ತೋರಿದ ನಿನ್ನ ವಿಕ್ರಮವನ್ನು ನೋಡಿ ಸಂತುಷ್ಟನಾದೆನು. ಇಂದು ಯುದ್ಧದಲ್ಲಿ ನಿನ್ನ ಜೀವನವು ಸಂಶಯದಲ್ಲಿದ್ದಿತು—ನೀನುಳಿದುಕೊಂಡುದುದು ಪರಮಾಶ್ಚರ್ಯವೆಂದು ತೋರುತ್ತದೆ.

ಇಂದ್ರ—ಮಹಾರಾಜ! ನಾನೆಂದು ಸೈನಿಕನಾದೆನೋ ಅಂದೆನ್ನ ಜೀವನ ವನ್ನು ರಾಜಕಾರ್ಯದಲ್ಲೊಪ್ಪಿಸಿದೆನು; ಯುದ್ಧವಾದ ಬಳಿಕ ಜೀವಿತನಾಗಿದ್ದರೆ ಅದು ತಮ್ಮ ಆಶೀರ್ವಾದದ ಬಲದಿಂದಲೂ ತಂದೆಯ ಪುಣ್ಯದಿಂದಲೂ ಉಂಟಾದ ಫಲವಾಗಿರುವುದು.

ಟೋಡರಮಲ್ಲ—ನಿಮ್ಮ ತಂದೆಯು ಊರಲ್ಲಿರುವನೆ!

ಇಂದ್ರ—ಅಹುದು.

ಟೋಡರಮಲ್ಲ—ನಿನಗೆ ಅಣ್ಣತಮ್ಮಂದಿರಾಗಲೀ ಅಕ್ಕತಂಗಿಯರಾಗಲೀ ಇದ್ದಾರೆಯೆ? ಎಷ್ಟು ಮಂದಿ?

ಇಂದ್ರ—ನನಗೊಬ್ಬ ಹಿರಿಯನಿದ್ದನು. ಅವನು ಕಾಲವಾಗಿ ಹೋದನು. ಈಗ್ಗ ತಂದೆಗೆ ನಾನೊಬ್ಬನೇ ಮಗನು.

ಟೋಡರಮಲ್ಲನ ಮುಖವು ಗಂಭೀರವಾಯಿತು. ಅವನು "ಇಂದಿನ ಯುದ್ಧದಲ್ಲಿ ನೀನು ಮೃತನಾಗಿದ್ದರೆ ನಿನ್ನ ತಂದೆಗೆ ಬಹಳ ವ್ಯಥೆಯುಂಟಾಗಿ ಪುತ್ರಶೋಕದಿಂದವನು ಬಹಳ ಗಳಿತನಾಗುತಿದ್ದನು. ನನಗೂ ಒಬ್ಬ ಮಗನಿರು ವನು. ಅದಕ್ಕೆ ಸಲುವಾಗಿ ಆ ಚಿಂತೆಯುಂಟಾಯಿತು. ಅವನಿಗೂ ನಿನ್ನ ವಯಸ್ಸು, ಅವನೂ ನಿನ್ನಂತೆ ಸಾಹಸಿ, ಅವನೂ ನಿನ್ನಂತೆ ವಿಪತ್ತನ್ನು ತುಚ್ಛವಾಗಿ ಎಣಿಸು ವನು. ಮರಣಕ್ಕೆ ಅಂಜುವವನಲ್ಲ—ಅಂತಹವನು ಯುದ್ಧದಲ್ಲಿ ಮಡಿದರೆ ತಂದೆಯು ತಲೆಯಮೇಲೆ ಸಿಡಿಲು ಬಿದ್ದಂತಾಗುವುದು—ಆದರೂ ರಾಜಕಾರ್ಯದಲ್ಲಿ ಮರಣ ಕ್ಕಿಂತ ಹೆಚ್ಚು ವಾಂಛನೀಯವಾದುದಾವದುಂಟು? ಅಕ್ಬರಷಹನ ಕಾರ್ಯದಲ್ಲಿ ನಾವು ತಂದೆ ಮಕ್ಕಳಿಬ್ಬರೂ ನಿಯಮಿಸಲ್ಪಟ್ಟವರಾಗಿರುವೆವು; ಆ ಕಾರ್ಯದಲ್ಲಿ ಜೀವನವನ್ನೊಪ್ಪಿಸಲೆನಗೆ ಆಕ್ಷೇಪವಿಲ್ಲ."

ಇಂದ್ರ—ದೇವರಾ ದಿನವನ್ನು ದೂರಮಾಡಿಟ್ಟಿರಲಿ; ಈ ಮಧ್ಯೆ ಪ್ರಭು ಗಳಾದ ತಾವು ಬಹುಕಾಲ ಜೀವಿತರಾಗಿದ್ದು ದಿಲ್ಲೀಶ್ವರನ ಅನೇಕ ಕಾರ್ಯಗಳನ್ನು ನಿರ್ವಹಿಸಿಕೊಂಡಿರೋಣಾಗಲಿ, ಹೆಚ್ಚು ಗೌರವವನ್ನೂ ಖ್ಯಾತಿಯನ್ನೂ ಹೊಂದೋಣಾಗಲಿ, ತಮ್ಮಂತೆ ಗೌರವಗೊಂಡ ಹೆಸರುಳ್ಳವರು ಭಾರತವರ್ಷದ ಹಿಂದುಗಳಲ್ಲಿ ಮತ್ತಾರೂ ಇಲ್ಲ, ತಮ್ಮಂತೆ ಹೆಸರ್ಗೊಂಡ ಕಾರ್ಯಗಳನ್ನು ಸಾಧಿಸಿ ಕೈಗೊಂಡವರು ಮತ್ತಾರೂ ಇಲ್ಲ.

ಟೋಡರಮಲ್ಲ—ನನಗಿಂತ ಹೆಚ್ಚಾಗಿ ಗೌರವದ ಕಾರ್ಯದಲ್ಲಿ ನನ್ನ ಪ್ರಾಣ ಸ್ನೇಹಿತನೊಬ್ಬನು ಪ್ರಾಣವನ್ನು ವಿಸರ್ಜನೆ ಮಾಡಿದ್ದಾನೆ.

ಟೋಡರಮಲ್ಲನಾ ಮಾತನ್ನು ಹೇಳಿ ಬಿಸುಸುಯ್ದೊಂದು ನಿಟ್ಟುಸಿರ್ವನ್ನು ಬಿಟ್ಟನು.

ಇಂದ್ರನಾಥನು ನಿಸ್ತಬ್ಧನಾಗಿದ್ದನು. ಟೋಡರಮಲ್ಲನು ಮೆಲ್ಲಮೆಲ್ಲನೆ ಮುಂದೆ ಹೇಳತೊಡಗಿದನು:—ಇಂದೆನಗೆ ಆನಂದದ ದಿನ, ಶತ್ರುಗಳು ಇಂದು

ಪರಾಸ್ತರಾದ ರೀತಿಯನ್ನು ತಿಳಿದು ದಿಲ್ಲೀಶ್ವರನು ಹೆಚ್ಚು ಸಂತುಷ್ಟನಾಗುವನು. ಆದರೆ, ಈ ಆನಂದದ ದಿನ ದುಃಖಕರವಾದೊಂದು ವಾರ್ತೆಯು ನೆನಪಿಗೆ ಬರುತ್ತಿದೆ. ನನ್ನ ಬಾಲ್ಯಕಾಲದೊಬ್ಬ ಪರಮಸ್ನೇಹಿತನು ಇದೇ ತಿಂಗಳು ಇದೇ ದಿನ ಪ್ರಾಣವನ್ನು ಬಿಟ್ಟನು. ಇಂದಿಗೆ ಸರಿಯಾಗಿ ಹನ್ನೆರಡು ವರ್ಷಗಳಾದುವು.

ಇಂದ್ರನಾಥ—ಆ ಮಹಾತ್ಮನೂ ಯೋದ್ಧನಾಗಿದ್ದು ದಿಲ್ಲೀಶ್ವರನ ಕಾರ್ಯದಲ್ಲಿ ಜೀವನದಾನವಂ ಮಾಡಿದವನೆಂದು ತೋರುತ್ತದೆ.

ಟೋಡರಮಲ್ಲ—ಆಶ್ಚೈವವೂ ಅವನಿಗೆ ಯುದ್ಧವು ಹೊರತು ಬೇರೆ ವ್ಯವಸಾಯವಿರಲಿಲ್ಲ. ಆದರೆ ಅವನು ದಿಲ್ಲೀಶ್ವರನ ಕಾರ್ಯದಲ್ಲಿ ಪ್ರಾಣವನ್ನು ಕೊಟ್ಟವನಲ್ಲ. ದಿಲ್ಲೀಶ್ವರನಿಗೆ ವಿರುದ್ಧವಾಗಿ ಯುದ್ಧದಲ್ಲಿ ಪ್ರಾಣವನ್ನು ಬಿಟ್ಟನು.

ಟೋಡರಮಲ್ಲನ ಬಾಯಲ್ಲಿ ಆ ಮಾತನ್ನು ಕೇಳಿ ಇಂದ್ರನಾಥನು ಚಮಕಿತನಾದನು. ಟೋಡರಮಲ್ಲನು ಸ್ವಲ್ಪ ನಕ್ಕು ಹೇಳತೊಡಗಿದನು :—

"ದಿಲ್ಲೀಶ್ವರನಿಗೆ ದಾಸನಾದ ನಾನು ದಿಲ್ಲೀಶ್ವರನಿಗೆ ಶತ್ರುವಾಗಿದ್ದವನ ಪ್ರಶಂಸೆಯಂ ಮಾಡುವುದನ್ನು ಕೇಳಿ ನೀನು ಚಮಕಿತನಾದಂತಿದೆ. ಆದರೆ ನೀನಾವಾಗಲಾದರೂ ದಿಲ್ಲಿಗೆ ಹೋದರೆ ಸ್ವಯಂ ಅಕಬರಷನ ಬಾಯಿಂದಲೇ ಅವನ ಪರಮ ಶತ್ರುವಾಗಿದ್ದಾ ಪ್ರತಾಪಸಿಂಹನ ಪ್ರಶಂಸೆಯನ್ನು ಕೇಳಿ ಮತ್ತಷ್ಟು ಚಮಕಿತನಾಗುವೆ. ಇಂದ್ರನಾಥ! ಅಕಬರನ ಸೇವೆಯಲ್ಲಿಯೇ ನನ್ನ ಜೀವನವು ಕಳೆಯುತ್ತ ಬಂದಿದೆ, ಅಕಬರನಿಗೆ ಶತ್ರುವಾದವನೆನಗೂ ಶತ್ರು, ಆದರೆ ಸಾಹಸವನ್ನೂ ಅಧ್ಯವಸಾಯವನ್ನೂ ಸ್ವದೇಶಪ್ರಿಯತೆಯನ್ನೂ ನೋಡಿದರೆ, ಶತ್ರುವೇನು ಮಿತ್ರನೇನು ಎಲ್ಲರೂ ಪ್ರಶಂಸೆ ಮಾಡುವರು. ಪ್ರತಾಪಸಿಂಹನು ಸ್ವದೇಶದ ಸ್ವಾಧೀನತೆಗೆ ಸಲುವಾಗಿ ತನ್ನ ಪ್ರಾಣವನ್ನೇ ಪಣವಾಗಿಟ್ಟು ಪರ್ವತಕಂದರಗಳಲ್ಲಿಯೂ ಮರುಭೂಮಿಯಲ್ಲಿಯೂ ವಾಸಮಾಡುತ ವರ್ಷಂಪ್ರತಿವರ್ಷವೂ ಅಕಬರನ ಸೈನ್ಯದೊಡನೆ ಯುದ್ಧವಂ ಮಾಡುತಿರುವನು ; ಅದನ್ನು ನೋಡಿ ಸ್ವಯಂ ಅಕಬರಷಹನು ಅಚ್ಚರಿಗೊಂಡು ಆನಂದಿತನಾಗುವನು. ಇಂದಿಗೆ ನಾಲ್ಕುವರ್ಷಗಳಿಗೆ ಹಿಂದೆ ಪ್ರತಾಪನು ಹಲದೀಘಾಟಿನ ಯುದ್ಧದಲ್ಲಿ ಬಹು ಸೈನ್ಯವನ್ನು ಕಳೆದುಕೊಂಡನು. ಬಳಿಕ ದುರ್ಗ, ಭೂಮಿ, ಸಂಪತ್ತು ಸಮಸ್ತವನ್ನೂ ನಷ್ಟಮಾಡಿಕೊಂಡನು. ಆದರೆ ಅವನಾ ಪಣವನ್ನೂ ಆ ಸಾಹಸವನ್ನೂ ಆ ಅಧ್ಯವಸಾಯವನ್ನೂ ಬಿಡಲಿಲ್ಲ. ಕಂದರವಾಸಿಯಾಗಿದ್ದಾ ಪ್ರತಾಪಸಿಂಹನು ಸ್ವದೇಶಕ್ಕೆ ಸಲುವಾಗಿ ಈಗಲೂ ಹೋರಾಡುವನು, ಪ್ರಾಣವಿರುವತನಕ ಹೋರಾಡುವನು. ಶತ್ರುವೇನು, ಮಿತ್ರನೇನು, ಭಾರತವರ್ಷದ ಹಿಂದುವಾಗಲೀ ಮುಸಲ್ಮಾನನಾಗಲೀ ಪ್ರತಾಪನಿಗೆ ಸಾಧುವಾದವನ್ನು ಮಾಡದಿರುವವನಿಲ್ಲ. ಭಾರತವರ್ಷವು ಇಂದು ಪ್ರತಾಪಸಿಂಹನ ಗೌರವದಿಂದ ಪೂರ್ಣವಾಗಿರುವುದು."

ಇಂದ್ರನಾಥನು ಕೇಳಿ ಉತ್ಸಾಹಪೂರ್ಣವಾದ ಹೃದಯದವನಾಗಿ ನಿಬ್ಬೆರಗಾಗಿದ್ದನು. ಟೋಡರಮಲ್ಲನು ಹೇಳತೊಡಗಿದನು:—

ಆದರೆ ನಾನಿಂದು ಪ್ರತಾಪಸಿಂಹನ ವಿಷಯವಾಗಿ ಯೋಚಿಸಲಿಲ್ಲ. ಈಗ್ಗೆ ಹನ್ನೆರಡು ವರ್ಷಕ್ಕೆ ಮೊದಲು ಮೇವಾರದೇಶಕ್ಕೆ ರಾಜಧಾನಿಯಾದ ಚಿತ್ತೋರ ನಗರದ ರಕ್ಷಣಾರ್ಥವಾಗಿ ಪ್ರಾಣವನ್ನು ಕೊಟ್ಟ ಮತ್ತೊಬ್ಬ ಯೋದ್ಧನ ವಿಷಯವಾಗಿ ಯೋಚಿಸುತಿದ್ದೆನು. ಇಂದ್ರನಾಥ! ಇಂದು ನಿನ್ನ ಕೆಲಸವನ್ನು ನೋಡಿ ಸಂತುಷ್ಟನಾದೆನು. ನಾನು ಮಿಕ್ಕವರಾರಿಗೂ ಹೇಳದಿರುವ ವಿಚಾರವನ್ನು ನಂಬುಗೆಯಿಂದ ನಿನಗೆ ಹೇಳುವೆನು. ಒಂದು ಕಥೆಯನ್ನು ಕೇಳು, ಹೇಳುವೆನು:—

ನನಗೆ ಯೌವನಕ್ಕೆ ಪ್ರಾರಂಭದಲ್ಲಿ ದೇಶಪರ್ಯಟನಕ್ಕೆ ಸಲುವಾಗಿ ಮೇವಾರ ದೇಶಕ್ಕೆ ಹೋಗಿದ್ದೆನು. ಒಂದು ವರಾಹದ ಬೇಟೆಯಲ್ಲಿ ಪ್ರಾಯವಾಗಿ ಪ್ರಾಣವನ್ನೇ ಕಳೆದುಕೊಂಡಿದ್ದೆನು. ಅಸುರವೀರ್ಯವುಳ್ಳೊಬ್ಬ ಯೋದ್ಧನ ಬೀಸರಂಬೋಗದ ಭಲ್ಲೆಯದ ಆಘಾತದಿಂದಾ ವರಾಹವು ಹತವಾಯಿತು, ನಾನು ಬದುಕಿಕೊಂಡೆನು. ಅಸುರ ವೀರ್ಯವುಳ್ಳಾ ಯೋದ್ಧನು ಸೂರ್ಯಮಹಲ ದುರ್ಗದ ತಿಲಕಸಿಂಹನು.

ಕ್ರಮವಾಗಿ ತಿಲಕಸಿಂಹನಿಗೂ ನನಗೂ ವಿಶೇಷ ಸೌಹೃದ್ಯವುಂಟಾಯಿತು. ನಾನಾಗ ಅವನ ಅಸಾಧಾರಣ ಗುಣಗಳನ್ನು ತಿಳಿಯುತ ಬಂದೆನು. ಅವನೂ ನನ್ನಲ್ಲಿ ವಿಶೇಷ ಸ್ನೇಹವನ್ನು ಬೆಳೆಯಿಸಿದನು, ಕ್ರಮವಾಗಿ ನಮ್ಮ ನಮ್ಮ ಬಂಧುತ್ವವು ನಿಜವಾದ ಬಂಧುತ್ವವಾಗಿ ಪರಿಣಮಿಸಿತು.

ಜೀವನ ಬಂಧುತ್ವವು ಒತ್ತಡವೆ ಉಂಟಾಗುವುದು, ಎರಡು ತಡವೆಯಾಗದು. ಇಂದ್ರನಾಥ! ನೀನು ನಾರಿಯರ ಪ್ರಣಯದ ವಿಚಾರವಾಗಿ ಅನೇಕ ಓದಿರುವೆ, ಕೇಳಿರುವೆ, ಆದರೆ ಯೌವನದಲ್ಲಿ ಸರಳಸ್ವಭಾವವುಳ್ಳ ಉತ್ಸಾಹಪೂರ್ಣಹೃದಯರಾದ ಈರ್ವರು ಪುರುಷರ ಮಧ್ಯೆ ಹುಟ್ಟುವ ಬಂಧುತ್ವದಂತೆ ನಿಜವಾದ ಪ್ರಣಯವು ಪ್ರಪಂಚದಲ್ಲಿ ಮತ್ತಾವುದೂ ಇರುವುದೆಂದು ನಾನರಿಯೆನು.

ನಾನು ದಿಲ್ಲೀಶ್ವರನ ಕಾರ್ಯದಲ್ಲಿ ವ್ರತಿಯಾದ ಬಳಿಕ ತಿಲಕಸಿಂಹನೂ ಆ ಕಾರ್ಯದಲ್ಲಿ ವ್ರತಿಯಾಗಬೇಕೆಂದು ಅವನಿಗೆ ಪ್ರೇರಣೆಯಿಂದ ಪ್ರಯತ್ನಪಟ್ಟೆನು. ಅವನಂತಹ ರಣಪಂಡಿತನೂ ಅಸುರ ವೀರ್ಯವುಳ್ಳ ಯೋದ್ಧನೂ ಆ ಕೆಲಸಕ್ಕೊಪ್ಪಿಕೊಂಡಿದ್ದರೆ ಅವನನ್ನು ಗುರುವೆಂದು ಮನ್ನಣೆ ಮಾಡದಿರುವವನು ದಿಲ್ಲೀಶ್ವರನ ಸೇನಾಪತಿಗಳಲ್ಲೊಬ್ಬನೂ ಇರುತಿರಲಿಲ್ಲ. ತಿಲಕಸಿಂಹನಾ ಕೆಲಸಕ್ಕೊಪ್ಪಿಕೊಂಡಿದ್ದರೆ ಇಷ್ಟು ದಿನಗಳಿಗಾಗಲೇ ಅವನು ವಂಗದೇಶಕ್ಕೂ ದಾಕ್ಷಿಣಾತ್ಯಕ್ಕೂ ಶಾಸನಕರ್ತನಾಗುತಿದ್ದನು.

ಆದರೆ ತಿಲಕಸಿಂಹನಾ ಕೆಲಸಕ್ಕೊಪ್ಪಲಿಲ್ಲ. ಅವನೆನ್ನ ಪ್ರಸ್ತಾವಕ್ಕೆ ಉತ್ತರವಾಗಿ ಹೇಳಿದ ಮಾತುಗಳು ಈಗಲೂ ನನ್ನ ಹೃದಯದಲ್ಲಿ ಅಂಕಿತವಾಗಿವೆ.

ಅವನು, "ನನ್ನ ತಂದೆಯೂ ಪಿತಾಮಹನೂ ಪ್ರಪಿತಾಮಹನೂ ಮೇವಾರದ ರಾಣಾನ ರಾಜ್ಯದಲ್ಲಿ ಕೆಲಸವನ್ನು ಮಾಡಿದರು. ನಾನೂ ಅದೇ ಕೆಲಸವನ್ನು ಮಾಡುವೆನು; ದಿಲ್ಲೀಶ್ವರನು ಚಿರಕಾಲದಿಂದಲೂ ಮೇವಾರದೇಶಕ್ಕೆ ಶತ್ರು. ಅವನೊಂದಿಗೆ ನಮಗೆ ಸಂಪರ್ಕವಿಲ್ಲ— ಅಥವಾ ದಿಲ್ಲೀಶ್ವರನು ಚಿತೋರನ್ನು ತೆಗೆದುಕೊಳ್ಳಲು ಪ್ರಯತ್ನಪಡುತಿದ್ದಾನೆಂದು ಕೇಳಿದೆನು; ಅವನಾ ಉದ್ಯಮದಲ್ಲಿ ಚಿತೋರಿಗೆ ಬಂದರೆ ಆಗವನು ತಿಲಕಸಿಂಹನನ್ನೊಮ್ಮೆ ನೋಡುವನು" ಎಂದು ಹೇಳಿದನು.

ಆ ವೀರನು ಹೇಳಿದ ತನ್ನಾ ಮಾತುಗಳನ್ನು ಕಾಪಾಡಿಕೊಂಡನು—ದಿಲ್ಲೀಶ್ವರನು ಚಿತೋರನ್ನು ಆಕ್ರಮಣಮಾಡಿದಾಗ ತಿಲಕಸಿಂಹನು ತನ್ನ ಸಿಂಹ ಬಲವನ್ನು ತೋರಿ ಚಿತೋರಿನ ರಕ್ಷಣಾರ್ಥವಾಗಿ ಪ್ರಾಣವನ್ನು ಬಿಟ್ಟನು. ದಿಲ್ಲೀಶ್ವರನನ್ನು ಸ್ವಂತವಾಗಿ ನೋಡಿದ್ದವನು ನನಗದನ್ನು ಹೇಳಿದ್ದನು.

ಟೋಡರಮಲ್ಲನು ಬಹಳ ಹೊತ್ತು ಮೌನವಾಗಿದ್ದನು. ಮೆಲ್ಲಮೆಲ್ಲನೆ ಅವನಾ ಧೀರವಾಗಿದ್ದ ಆಕೃತಿಯು ಮಲಿನಗೊಂಡಿತು; ಯೋದ್ಧನಾದವನ ಗಂಡಸ್ಥಳದಲ್ಲೊಂದೆರಡು ಕಂಬನಿಗಳು ಹರಿದುಬಿದ್ದುವು. ಆ ಅಶ್ರುಜಲವನ್ನೊರಸಿಕೊಂಡು ಟೋಡರಮಲ್ಲನು ಹೇಳತೊಡಗಿದನು :—

ಇಂದ್ರನಾಥ! ಪ್ರತಾಪಸಿಂಹನು ನಮಗೀಗ ಶತ್ರು; ತಿಲಕಸಿಂಹನ ಮಗನು ತೇಜಸಿಂಹನು ಪ್ರತಾಪಸಿಂಹನ ಅಧೀನದಲ್ಲಿದ್ದು ಯುದ್ಧವನ್ನು ಮಾಡುತಿದ್ದಾನೆಂದು ಕೇಳುತ್ತೇನೆ; ದಿಲ್ಲೀಶ್ವರನು ನನ್ನನ್ನು ಮೇವಾರಿಗೆ ಕಳುಹಿಸಿದರೆ ಬಂಧುವಿನ ಪುತ್ರನೊಂದಿಗೆ ಯುದ್ಧವನ್ನು ಮಾಡಲು ನಾನು ಸಂಸಕುಚಿತನಾಗೆನು; ಆದರೂ ಶತ್ರುವಿನಲ್ಲಿ ಗುಣವಿದ್ದರೆ ಆ ಗುಣವನ್ನೊಪ್ಪಿಕೊಳ್ಳುವುದು ನಿಷಿದ್ಧವಲ್ಲ, ಜೀವನದ ಪರಮ ಬಂಧುವಾದವನು ವಿಧಿಯ ವಿಡಂಬನದಿಂದ ಶತ್ರುಪಕ್ಷದವನಾದರೆ, ಅವನ ಮರಣಕ್ಕೆ ಸಲುವಾಗಿ ಒಂದು ಬಿಂದು ಅಶ್ರುಜಲವನ್ನು ಬಿಡುವುದು ನಿಷಿದ್ಧವಲ್ಲ.

---

## ಹದಿನೈದನೆಯ ಪರಿಚ್ಛೇದ

Prisoner! pardon youthful fancies,
Wedded? If you can say no!
Blessed is and be your consort;
Hopes I cherished let them go! *Wordsworth.*

ಇಂದ್ರನಾಥನು ಟೋಡರಮಲ್ಲನ ಬಿಡಾರದಿಂದ ಚಿಂತೆಯಿಂದಲೂ ಆಶ್ಚರ್ಯದಿಂದಲೂ ಖೇದದಿಂದಲೂ ಪೂರ್ಣವಾಗಿ ಸ್ವಂತ ಬಿಡಾರಕ್ಕೆ ಬಂದನು. ಅಲ್ಲೊಬ್ಬನೇ ನಿರ್ಜನದಲ್ಲಿ ಬಿಡಿಯಾಗಿ ಕುಳಿತು ಮೇವಾರನ್ನೂ ಪ್ರತಾಪಸಿಂಹನನ್ನೂ ತಿಲಕಸಿಂಹನನ್ನೂ ಕುರಿತು ಚಿಂತಿಸತೊಡಗಿದನು.

ಇಂದ್ರನಾಥನು ಹಾಗೆ ಚಿಂತಾಯುಕ್ತನಾಗಿದ್ದ ಸಮಯದಲ್ಲಿ ಭೃತ್ಯನೊಂದು ಕಾಗದವನ್ನು ತಂದದನ್ನು ಅವನಿಗೆ ಕೊಟ್ಟನು—ಇಂದ್ರನಾಥನದನ್ನು ಬಿಚ್ಚಿ ಒತ್ತಡವೆ, ಎರಡು ತಡವೆ, ಮೂರು ತಡವೆ ಓದಿದನು; ಅದರ ಮರ್ಮಗ್ರಹಣ ಮಾಡಲು ಶಕ್ತನಾಗಲಿಲ್ಲ—ಕಾಗದವು ಈ ಪರಿ ಬರೆಯಲ್ಪಟ್ಟಿದ್ದಿತು:—

"ನಿನ್ನ ಬುದ್ಧಿಯ ಕೌಶಲವನ್ನು ನೋಡಿ ಚಮತ್ಕೃತನಾದೆನು, ಭಾರತವರ್ಷದಲ್ಲಾರಿಗೂ ಕೌಶಲದಿಂದ ಪರಾಸ್ತಮಾಡ ಸಾಧ್ಯವಿಲ್ಲದವನ ಕಣ್ಣಿಗೆ ನೀನು ಮಣ್ಣನ್ನು ಹಾಕಿರುವೆ. ನಾವು ಅದೇ ಮಾರ್ಗವಂ ಅವಲಂಬಿಸುವೆವು. ಏಕೆಂದರೆ, ಪತನೋನ್ಮುಖವಾಗಿರುವ ಮನೆಯನ್ನು ಬಿಟ್ಟು ಹೋಗುವವನೇ ಬುದ್ಧಿವಂತನು. ಇಂದು ರಾತ್ರಿ ಒಂದು ಪ್ರಹರವಾದ ಬಳಿಕ ನೀನು ಶ್ಮಶಾನ ಭೂಮಿಯಲ್ಲಿ ಸಂದರ್ಶನವನ್ನು ಕೊಡಬೇಕು."

ಕಾಗದದ ಅರ್ಥಗ್ರಹಣವನ್ನು ಮಾಡುವುದು ಅಸಾಧ್ಯವಾಯಿತು.—"ಭಾರತವರ್ಷದಲ್ಲಾರಿಗೂ ಕೌಶಲದಿಂದ ಪರಾಸ್ತಮಾಡ ಸಾಧ್ಯವಿಲ್ಲದವನು" ಅಂತಹವನಾರು? ರಾಜಾ ಟೋಡರಮಲ್ಲನಾಗಿರಬಹುದೆಂದು ತೋರುತ್ತದೆ. ಆದರೆ ಅವನ ಕಣ್ಣಿಗೆ ಮಣ್ಣನ್ನು ಹಾಕಿದವನಾರು! ಪತನೋನ್ಮುಖವಾದ ಗೃಹವೆಂದರೇನು? ಇಂದ್ರನಾಥನು ಕಾಗದವನ್ನಾವನೋ ವಿದ್ರೋಹಿಯಾದವನು ಬರೆದಿರುವನೆಂದು ತಿಳಿದುಕೊಂಡನು. ಶ್ಮಶಾನಭೂಮಿಗೆ ಹೋಗುವುದು ಕರ್ತವ್ಯವೆ? ಇಂದ್ರನಾಥನು ಸ್ವಲ್ಪಹೊತ್ತು ಯೋಚಿಸಿ, ಶ್ಮಶಾನಭೂಮಿಗೆ ಹೋಗುವುದು ಕರ್ತವ್ಯವೆಂದು ಸ್ಥಿರಮಾಡಿಕೊಂಡನು; ಹೋದರೆ ಹಾನಿಯಿಲ್ಲ, ಹೋದರೆ ಆವುದೋ ಒಂದು ಒಳಸಂಚಿನ ವಿಷಯವು ಗೊತ್ತಾದಂತಾಗುವುದು. ಹೀಗೆಂದು ಯೋಚಿಸಿಕೊಂಡು, ಇಂದ್ರನಾಥನು ರಾತ್ರಿ ಗೊತ್ತಾಗಿದ್ದ ಹೊತ್ತಿಗೆ ಸರಿಯಾಗಿ ಪುಸುಪಿನ (ಪರಸ್ಪರ ಕಲಿಯಲು ಗೊತ್ತಾದ ಸ್ಥಳಕ್ಕೆ ಪುಸುಪು ಎಂದು ಹೇಳುವರು) ಸ್ಥಳವಾದ ಶ್ಮಶಾನ ಘಾಟಿಗೆ ಹೋದನು. ಅವನ ಸಂಗಡ ಮತ್ತಾರೂ ಇಲ್ಲ, ಕತ್ತಿಯೊಂದು ಅವನಿಗೆ ಏಕಮಾತ್ರ ಸಹಾಯವಾಗಿದ್ದಿತು.

ರಾತ್ರಿಯು ಘೋರತಮಸಾಚ್ಛನ್ನವಾಗಿದ್ದಿತು, ಆಕಾಶವು ನಿಬಿಡ ಮೇಘಾಚ್ಛನ್ನವಾಗಿದ್ದಿತು! ಆಕಾಶದಲ್ಲಿ ಕಾರ್ಮುಗಿಲೇರಿ, ಅದೊಂದೊಂದಾಗಿ ಹೋಗಿ ಪಶ್ಚಿಮ ದಿಕ್ಕಿನಲ್ಲಿ ರಾಶೀಕೃತವಾಗುತಿದ್ದಿತು; ಆ ಪಶ್ಚಿಮ ದಿಕ್ಕಿನಲ್ಲಿ ಕಾರ್ಮುಗಿಲ್ಗಿಚ್ಚು ಕ್ಷಣಕ್ಷಣಕ್ಕೂ ಬೆಳಗುತ್ತಿರುವುದು; ಆ ಮುಗಿಲ್ಗಿಚ್ಚಿನ ಬೆಳಕಿನಿಂದ ಭಯಂಕರವಾದಾ ಶ್ಮಶಾನದ ಒಂದೊಂದು ಪದಾರ್ಥವೂ ಕಂಗೆಸೆವುದು. ಒತ್ತಟ್ಟು ಶವದಾಹವಾಗುತ್ತಿರುವುದು, ಒತ್ತಟ್ಟು ಬೂದಿಯ ರಾಶಿಯಲ್ಲಿ ಬೆಂಕಿಯು ಒಮ್ಮೊಮ್ಮೆ ಕಣ್ಣಿಗೆ ಬೀಳುವುದು; ಒತ್ತಟ್ಟು ಬೆಂಕಿಯ ಉರಿಯು ಮೇಲಕ್ಕೆದ್ದು ನಿಬಿಡವಾಗಿದ್ದ ಅಂಧಕಾರವನ್ನು ಉದ್ದೀಪ್ತಮಾಡುತ್ತಿರುವುದು; ಆ ಬೆಳಕು ಆ ಅಂಧಕಾರಗಳಲ್ಲಿ ನಾನಾ ಪ್ರಕಾರವಾದ ಛಾಯೆಗಳು ಗೋಚರವಾಗು

ವುವು; ಹತ್ತಿರದಲ್ಲಿದ್ದ ಮರಗಳ ಗುಂಪಿನಲ್ಲಿ ಗಾಳಿಯು ವೇಗದಿಂದ ವಿಧವಿಧವಾದ ಅದ್ಭುತ ಶಬ್ದಗಳು ಶ್ರವಣಗೋಚರವಾಗುವುವು. ಆ ಛಾಯೆಯನ್ನು ಕಂಡು ಆ ಶಬ್ದಗಳನ್ನು ಕೇಳಿ ಇಂದ್ರನಾಥನ ಸ್ವಾಭಾವಿಕವಾಗಿ ಸಾಹಸವುಳ್ಳ ಹೃದಯವು ಒಂದೊಂದು ತಡವೆ ಸ್ತಂಭಿತವಾಗತೊಡಗಿತು. ಅವನಿಗೆ ಒಂದೊಂದು ತಡವೆ ಭಯಂಕರವಾದ ಆಕೃತಿಗಳನ್ನು ಕಂಡಂತಾಗುವುದು. ಅತ್ತ ಹೋಗಿ ನೋಡಿದರೆ ಧೂಮರಾಶಿಯು ಮೇಲಕ್ಕೆದ್ದು ಆ ಆಕೃತಿಯು ಮೆಲ್ಲಮೆಲ್ಲನೆ ಹೋಗಿ ಮರಗಳ ಕತ್ತಲಲ್ಲಿ ಲೀನವಾದಂತೆ ತೋರುವುದು. ಗಗನಮಂಡಲವು ಕ್ರಮೇಣ ಅಂಧ ಕಾರಾಚ್ಛನ್ನವಾಗುತ ಬಂದಿತು, ಗಾಳಿಯು ಕ್ರಮೇಣ ಹೆಚ್ಚು ಭೀತಿಗೊಳಿಸುವ ಶಬ್ದವಂ ಮಾಡುತ ಬಂದಿತು, ಗಂಗೆಯ ತರಂಗಗಳು ಕ್ರಮೇಣ ಭಯಂಕರ ವಾಗುತ ಬಂದುವು. ಆ ಕಾಲದಲ್ಲಿ ನಕ್ಷತ್ರ ಮಾತ್ರ ದೃಷ್ಟಿಗೋಚರವಾಗುತಿರ ಲಿಲ್ಲ. ದೂರದಲ್ಲಿ ನರಿಗಳು ಬಾರಿಬಾರಿಗೂ ವಿಕಟ ಶಬ್ದಗಳನ್ನು ಮಾಡುತಿರುವುವು. ದೂರದಿಂದವು ಪ್ರೇತಪಿಶಾಚಗಳ ಅಟ್ಟಹಾಸದಂತೆ ಕೇಳುವುವು.

ಅಡವಿಯು ದಟ್ಟವಾಗಿದ್ದೆಡೆ ಕತ್ತಲಲ್ಲಿ ಭಯಂಕರವಾದೆರಡು ಆಕೃತಿಗಳು ಕಂಡುಬಂದಂತೆ ತೋರಿತು. ಇಂದ್ರನಾಥನು ಮೊದಲವುಗಳನ್ನು ಗ್ರಾಹ್ಯವಾ ಗೆಣಿಸಲಿಲ್ಲ, ಆದರೆ ಎಷ್ಟೊಂದು ತಡವೆ ನೋಡಿದರೂ ಅಷ್ಟೊಂದು ತಡವೆಯೂ ಅವು ಕಾಣುತಿದ್ದುವು. ಇಂದ್ರನಾಥನು ಅತ್ತ ಹೋದನು. ಆಗಾ ಆಕೃತಿಗಳು ಅದೃಶ್ಯವಾದಂತೆ ತೋರಿದುವು. ಇಂದ್ರನಾಥನು ಆ ದಿಕ್ಕಿನಿಂದ ಹಿಂದಿರುಗಿದನು. ಕೂಡಲೆ ಅತ್ತ ಅಡವಿಯೊಳಗಿನಿಂದೊಂದು ಅಟ್ಟಹಾಸದ ಧ್ವನಿಯು ಕೇಳಿತು. ಇಂದ್ರನಾಥನು ಪುನಃ ತಿರುಗಿನೋಡಿದನು, ಅದೃಶ್ಯವಾಗಿದ್ದಾ ಆಕೃತಿಗಳೆರಡೂ ನಿಂತಿದ್ದುವು!

"ಭಗವಂತನೇ ಸಹಾಯ!" ಎಂದು ಹೇಳುತ್ತ ಇಂದ್ರನಾಥನು ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಪುನಃ ಅತ್ತ ಹೋದನು. ಬಹಳ ಎಚ್ಚರಿಕೆಯಿಂದಾ ಆಕೃತಿಗಳನ್ನು ಕಣ್ಣಿಕ್ಕಿ ನೋಡುತ್ತ ಮೆಲ್ಲಮೆಲ್ಲನೆ ಮುಂದುವರಿದನು—ದಟ್ಟ ವಾಗಿದ್ದಾ ಗಿಡಗಳ ಬಳಿ ಬರುವುದರೊಳಗೆ ಆಕೃತಿಗಳೆರಡೂ ಅದೃಶ್ಯವಾದುವು; ಪುನಃ ದೂರದಿಂದಾ ಪೈಶಾಚಿಕ ಅಟ್ಟಹಾಸವು ಕೇಳಿಬಂದಿತು. "ದೇವರೇ ಸಹಾಯ" ವೆಂದು ಹೇಳುತ್ತ ಇಂದ್ರನಾಥನು ಸಾಂದ್ರವಾಗಿದ್ದಾ ಗಿಡದೊಳಗೆ ಪ್ರವೇಶಿಸಿದನು. ಅಲ್ಲಿ ಕತ್ತಲೆಯು ಕಡುಮುಕ್ಕಾಗಿ ಮಾರುದೂರದಲ್ಲಿದ್ದ ಪದಾರ್ಥವು ಕಣ್ಣಿಗೆ ಕಾಣದು.—ಇಂದ್ರನಾಥನ ಮೈ ಕಂಟಕಿತವಾಯಿತು; ಲಲಾಟವು ಬೆವರ್ಗೊಂಡಿತು. ಅವನಾ ಅಟ್ಟಹಾಸದ ನಗುವಿನ ಶಬ್ದವನ್ನು ಲಕ್ಷ್ಯ ದಲ್ಲಿಟ್ಟುಕೊಂಡು ಅತ್ತಕಡೆಗೆ ಹೋದನು. ಒಮ್ಮೊಂದೊಮ್ಮೆ ಅವನ ಮೈಮೇಲೆ ಮನುಷ್ಯರ ಕೈಯಿಟ್ಟಂತೆ ಸ್ಪರ್ಶಾನುಭವವಂ ಮಾಡಿದನು.

ಇಂದ್ರನಾಥನು ಕಣ್ಣಿಕ್ಕಿ ನೋಡಿದನು, ಪ್ರೇತವಾಗಿರಲಿಲ್ಲ. ಅವರಿಬ್ಬರೂ

ಧರ್ಮವೇಷಿಗಳಾದ ಮನುಷ್ಯರಾಗಿದ್ದರು. ಅವರು ಇಂಗಿತದಿಂದ ಇಂದ್ರನಾಥನನ್ನು ಸಂಗಡ ಬರಲು ಸಂಜ್ಞೆಮಾಡಿದರು. ಇಂದ್ರನಾಥನು ಅವರ ಸಂಗಡ ಹೋದನು.

ಸ್ವಲ್ಪ ಹೊತ್ತು ಇಂದ್ರನಾಥನು ಅವರಿಬ್ಬರ ಸಂಗಡ ಮಾತನಾಡದೆ ಹೋದನು. ನಾಲ್ಕೂ ದಿಕ್ಕುಗಳಲ್ಲಿ ನಿಬಿಡಾರಣ್ಯ, ನಿಬಿಡಾಂಧಕಾರ; ಮೂವರೂ ಅಂಧಕಾರಮಯವಾದಾ ಅಡವಿಯೊಳಗೆ ಹೊಗುತ ಕಡೆಗೆ ಗಂಗಾತೀರಕ್ಕೆ ಬಂದು ಅಲ್ಲೊಂದು ನಿಭೃತವಾಗಿದ್ದ ಸ್ಥಳದಲ್ಲಿ ಕುಳಿತುಕೊಂಡರು—ಅಲ್ಲಿ ಕುಳಿತು ಅವರೀರ್ವರೂ ತಮ್ಮ ಮುಖದ ಆವರಣವನ್ನು ತೆಗೆದರು—ಇಂದ್ರನಾಥನು ನೋಡಿ ಅವರನ್ನು ಗುರುತಿಸಿದನು. ಅವರು ಟೋಡರಮಲ್ಲನಿಗೆ ಅಧೀನರಾಗಿದ್ದಾ ಸೇನಾಪತಿಗಳಾಗಿದ್ದರು! ಒಬ್ಬನ ಹೆಸರು ಹುಮಾಯುನ, ಮತ್ತೊಬ್ಬನ ಹೆಸರು ತರ್ಖನ.

ಇಂದ್ರನಾಥ—(ವಿಸ್ಮಿತನಾಗಿ) ಇಷ್ಟೊಂದು ರಾತ್ರಿಯಲ್ಲಿ ಭಯಂಕರವಾದ ವೇಷದಲ್ಲಿ ಈ ಸ್ಥಳದಲ್ಲಿ ನೀವೀರ್ವರೂ ಏನನ್ನು ಮಾಡುವಿರಿ?

ಹುಮಾಯುನ—(ಸ್ವಲ್ಪ ನಕ್ಕು) ಸೇನಾನಿಯಾದ ಇಂದ್ರನಾಥನ ಸಹಾಸವಂ ಪರೀಕ್ಷಿಸುತಿದ್ದೆವು.

ಇಂದ್ರನಾಥ—ನಾನು ನಿಮ್ಮ ಬಳಿ ಪರೀಕ್ಷೆಯಂ ಕೊಡಲು ಅಸಮ್ಮತನಾದರೆ?

ಹುಮಾಯುನ—ಹಾಗೆ ಅಸಮ್ಮತನಾದರೆ, ನಾವಾವ ಅಸಮ ಸಾಹಸಿಕ ಕಾರ್ಯದಲ್ಲಿ ನಿಯುಕ್ತರಾಗಿ ಕೈಗೊಂಡಿರುವೆವೋ ಸೇನಾನಿ ಇಂದ್ರನಾಥನದನ್ನು ಬಗೆಹರಿಸಲು ಅಕ್ಷಮನಾದನೆಂದು ತಿಳಿಯುವೆವು.

ಇಂದ್ರನಾಥ—ಕಾರ್ಯದ ಕಾಲದಲ್ಲಿ ಇಂದ್ರನಾಥನು ಅಕ್ಷಮನೋ ಸಕ್ಷಮನೋ ಎಂಬುದನ್ನು ಇತರರು ವಿವೇಚನೆಯಂ ಮಾಡುವರು. ಶ್ಮಶಾನ ಭೂಮಿಯಲ್ಲಿ ಪಿಶಾಚಗಳೊಂದಿಗೆ ಯುದ್ಧಮಾಡಿದರೆ ಸಾಹಸದ ಪರಿಚಯವಾಗದು.

ಹುಮಾಯುನ—ಸೇನಾನಿ ಇಂದ್ರನಾಥನಿಗೆ ಅಸಾಧಾರಣ ಸಾಹಸವಿರುವುದು ನಮ್ಮ ಶಿಬಿರದಲ್ಲಾರಿಗೂ ತಿಳಿಯದೆ ಇಲ್ಲ—ಅವನಿಗೆ ಪೈಶಾಚಿಕ ಸಾಹಸವಿರುವುದೇ ಅಥವಾ ಇಲ್ಲವೆ, ಅದನ್ನು ಪರೀಕ್ಷಿಸುತಿದ್ದೆವು. ಪೈಶಾಚಿಕ ಕಾರ್ಯದಲ್ಲಿ ನಿಯುಕ್ತನಾದ ಬಳಿಕ ಪೈಶಾಚಿಕ ಸಾಹಸವು ಆವಶ್ಯಕ.

ಇಂದ್ರನಾಥ—ನಾನಾವ ಪೈಶಾಚಿಕ ಕಾರ್ಯದಲ್ಲಿ ನಿಯುಕ್ತನಾಗಿರುವೆನು?

ಹುಮಾಯುನ—ನಿನಗದು ಗೊತ್ತಿಲ್ಲವೆ? ನಗುವುದೇಕೆ? ನೀನಾವ ಕಾರ್ಯವನ್ನು ಕೈಗೊಂಡಿರುವೆಯೋ ಗೂಢವಾದ ಮಂತ್ರಾಲೋಚನೆಯಿಂದಲೂ

ಚಮತ್ಕಾರವಾದ ಕೌಶಲದಿಂದಲೂ ಆವ ಕಾರ್ಯವನ್ನು ಸಾಧಿಸ ಬೇಕೆಂದು ಪ್ರಯತ್ನಪಡುತ್ತಿರುವೆಯೋ ಆ ಕೆಲಸವು ನಿನಗೆ ಗೊತ್ತಿಲ್ಲವೆ? ನಿನ್ನ ಕೌಶಲವನ್ನೂ ನಿನ್ನ ಬುದ್ಧಿಯನ್ನೂ ನೋಡಿ ಚಮತ್ಕೃತನಾಗಿದ್ದೇನೆ. ರಾಜಾ ಟೋಡರಮಲ್ಲನನ್ನಾರೂ ವಂಚಿಸಲಾರರು, ಅಂತಹವನನ್ನು ನೀನು ವಂಚಿಸುತ್ತೀ. ನೀನು ಚಿರಜೀವಿಯಾಗಿರು, ಒಂದಾನೊಂದು ದಿನ ನೀನು ವಂಗದೇಶಕ್ಕೆ ಗೌರವವಾಗಿರುವೆ.

ಇಂದ್ರನಾಥನು ಕೇಳಿ ವಿಸ್ಮಿತನಾದನು. ತರ್ಜನನು ಮುಂದೆ ಹೇಳ ತೊಡಗಿದನು :—

ಯಥಾರ್ಥವಾಗಿ ಹುಮಾಯೂನನೂ ನಾನೂ ಅನೇಕತಡವೆ ಅಂತರಾಳ ದಲ್ಲಿ ನಿಂತು ನಿನ್ನ ಸಾಹಸವನ್ನೂ ಕೌಶಲವನ್ನೂ ಕಂಡವುಗಳನ್ನು ಬಹಳವಾಗಿ ಕೊಂಡಾಡಿದ್ದೇವೆ ; ಶಿಬಿರದಲ್ಲಿ ನಮ್ಮಂತೆ ಅನೇಕಮಂದಿ ವಿದ್ರೋಹೋನ್ಮುಖ ರಾದ ಸೇನಾಪತಿಗಳಿರುವರು. ಮೂವತ್ತು ಸಾವಿರದ ಅಶ್ವಾರೋಹಿಗಳಿಗೆ ಸೇನಾಪತಿಯಾಗಿರುವ ಮಸುಮಖಾಫರಂಮುದಿಯೂ ವಿದ್ರೋಹ ತತ್ಪರನಾಗಿ ದ್ದಾನೆ; ಆದರೆ ನಮ್ಮಗಳ ಮೇಲೆ ರಾಜಾ ಟೋಡರಮಲ್ಲನ ಕಣ್ನೋಟವು ಅತಿ ಸೂಕ್ಷ್ಮವಾಗಿಯೂ ಗಡುಸಾಗಿಯೂ ಇರುವುದರಿಂದ ಅವನ ಕಣ್ಣಾಂಜಿಕೆಯಿಂದ ನಾವು ಕೈಕೊಂಡಿರುವ ಕಾರ್ಯವು ಸಾಗದೆ ನಾವು ಇಷ್ಟಸಿದ್ಧರಾಗದಿದ್ದೇವೆ. ನೀನಾವ ಕುಹಕದಿಂದ ಆವ ಕೌಶಲದಿಂದ ಟೋಡರಮಲ್ಲನನ್ನು ಅಂಧನನ್ನಾಗಿ ಮಾಡಿರುವಿಯೋ ನಾವದನ್ನು ತಿಳಿಯಲಾರದವರಾಗಿದ್ದೇವೆ. ನಿನ್ನ ಬುದ್ಧಿಯ ಬಲವು ಧನ್ಯವಾದುದು !

ತರ್ಜನನು ಮತ್ತೂ ಹೇಳತೊಡಗಿದನು ; ಆದರೆ ಇಂದ್ರನಾಥನು ಕ್ರುದ್ಧ ನಾಗಿ, " ನಾನು ವಿದ್ರೋಹಿಯಲ್ಲ, ನೀವೆನ್ನನ್ನು ಗುಪ್ತಚರನೆಂತಲೂ ಕಪಟಾ ಚಾರಿಯಾಗಿ ವಿದ್ರೋಹಿಯ ಅಭಿಪ್ರಾಯದಿಂದ ಟೋಡರಮಲ್ಲನ ಕೈಕೆಳಗೆ ಕೆಲಸ ವನ್ನು ಮಾಡುತ್ತಿರುವೆನೆಂತಲೂ ತಿಳಿದುಕೊಂಡಿದ್ದರೆ ನೀವು ಘೋರವಾದ ಭ್ರಾಂತಿಯಲ್ಲಿ ಬಿದ್ದಿರುವಿರಿ. ಮತ್ತೂ ನೀವೂ ವಿದ್ರೋಹಿಗಳಾಗಿದ್ದರೆ ನನಗೆ ಹೇಳ್ಕೊಟ್ಟು ಕಳುಹಿರಿ ; ನಿಮಗೂ ನನಗೂ ಸಂಪರ್ಕವಾವುದೂ ಇರದು ; ನಾನೀಗಲೇ ಹೋಗಿ ಟೋಡರಮಲ್ಲನಿಗೆ ವೃತ್ತಾಂತವನ್ನೆಲ್ಲಾ ತಿಳುಹಿಸುವೆನು. ಕುಕ್ಷಣದಲ್ಲಿ ನಿಮ್ಮ ಕಾಗದವು ನನ್ನ ಕೈಗೆ ಬಿದ್ದಿತು " ಎಂದನು.

ಹುಮಾಯೂನ ದಿವಾನನೂ ತರ್ಜನ ಘರ್ವಿಲಿಯೂ ಮುಖದಲ್ಲಿ ಗಂಭೀರ ಭಾವವನ್ನು ತಾಳಿ ತಮ್ಮ ತಮ್ಮೊಳಗೆ, " ನಾವಿಂದಿನವರೆಗೂ ಎಂತಹ ಭ್ರಾಂತಿ ಯಲ್ಲಿ ಬಿದ್ದಿದ್ದೆವು ! ಮಸುಮಖಾಫರಂಮುದಿಯೂ ಆ ಹಿಂದುವಿನ ಮನವನ್ನರಿಯ ಲಾರದೆ ಹೋದನೆ ?" ಎಂದಂದುಕೊಂಡು ಒರೆಯಿಂದ ಖಡ್ಗವನ್ನು ತೆಗೆಯ ಲುದ್ಯಮರಾದರು. ಇಂದ್ರನಾಥನೂ ಶಸ್ತ್ರವಿಷಯದಲ್ಲಿ ಅಪಟುವಾಗಿರಲಿಲ್ಲ.

ಅವನೂ ಒರೆಯಿಂದ ಕತ್ತಿಯನ್ನು ಸೆಳೆದನು. ಆಗ ಹುಮಾಯೂನನು ನಕ್ಕು ಹೀಗೆಂದು ಹೇಳಿದನು:—"ನೀನಿನ್ನೂ ನಮ್ಮನ್ನು ನಂಬುವುದಿಲ್ಲವೆಂದು ತೋರುವಂತಿದೆ, ಅದಕ್ಕೆ ಸಲುವಾಗಿ ನಮ್ಮೊಂದಿಗೆ ವಿದ್ರೋಹದ ವಿಚಾರವಾಗಿ ಆಲೋಚಿಸುವವನಾಗಿ ಕಾಣುವುದಿಲ್ಲ, ಆದರೆ ನಿನ್ನ ವಿದ್ರೋಹಾಚರಣೆಯ ಅಭಿಪ್ರಾಯವನ್ನು ಅರಮರೆಮಾಡುವ ಆವಶ್ಯಕವಿಲ್ಲ; ನೀನು ನಿನ್ನ ಕೆಲಸಕ್ಕೆ ನೇಮಕವಾಗುವುದಕ್ಕೆ ಹಿಂದಿನಿಂದಲೂ ನಾವು ವಿದ್ರೋಹೋನ್ಮುಖರಾಗಿದ್ದೇವೆ; ಈ ಕಾಗದಗಳನ್ನು ನೋಡು, ಅವುಗಳನ್ನು ಅನೇಕ ವಿದ್ರೋಹಿಗಳು ಬರೆದು ಕಳುಹಿದ್ದಾರೆ."

ಇಂದ್ರನಾಥನು ಕ್ರೋಧದಿಂದಲೂ ಆಶ್ಚರ್ಯದಿಂದಲೂ ಅಂಧನಾಗಿ, "ಪಾಮರ, ಕಾಪುರುಷ, ವಿದ್ರೋಹಿಗಳಿರಾ! ನಿಮ್ಮ ಪಾಪಕ್ಕೆ ತಕ್ಕ ದಂಡನೆಯನ್ನು ಕೊಡುವೆನು" ಎಂದನು.

ಇಂದ್ರನಾಥನಿಗೂ ಹುಮಾಯೂನನಿಗೂ ಅಸಿಯುದ್ಧಕ್ಕಾರಂಭವಾಯಿತು. ಇಂದ್ರನಾಥನು ಹುಮಾಯೂನನಿಗಿಂತ ಹೆಚ್ಚು ಬಲಿಷ್ಟನಾಗಿದ್ದನಲ್ಲದೆ ಅಸ್ತ್ರ ಚಾಲನದಲ್ಲಿ ಅಲ್ಪದಿನಗಳಲ್ಲಿ ಹೆಚ್ಚು ಶಿಕ್ಷಣವನ್ನು ಹೊಂದಿ ನಿಪುಣನಾಗಿದ್ದನು. ಮುಹೂರ್ತದೊಳಗೆ ಹುಮಾಯೂನನ ಶರೀರವು ಕ್ಷತವಿಕ್ಷತವಾಗಿ, ಮುಹೂರ್ತದೊಳಗೆ ಅವನು ಭೂತಲಶಾಯಿಯಾದನು.

ಇಂದ್ರನಾಥನಿಗೂ ಹುಮಾಯೂನನಿಗೂ ಮೊದಲು ಯುದ್ಧಕ್ಕಾರಂಭವಾದಾಗ ತರ್ಖನನು ಸ್ವಲ್ಪದೂರ ನಿಂತಿದ್ದನು. ಆರಂಭದಲ್ಲಿಯೇ ಯುದ್ಧವು ಭಯಂಕರ ವೇಗದಿಂದ ಪ್ರಾರಂಭವಾದುದನ್ನು ಕಂಡು ತರ್ಖನನು ಬೆರಗಾಗಿ ಇತಿಕರ್ತವ್ಯವಿಮೂಢನಾಗಿ ನಿಂತುಬಿಟ್ಟನು, ಆದರೆ ನಿಂತಿದ್ದುದು ಒಂದು ಮುಹೂರ್ತಮಾತ್ರ, ಹುಮಾಯೂನನು ಕೆಳಗೆ ಬಿದ್ದುದನ್ನು ಕಂಡು ಅವನು ಉತ್ತರಕ್ಷಣದಲ್ಲಿ ಹಾರಿಹೋಗಿ ಇಂದ್ರನಾಥನನ್ನು ಆಕ್ರಮಣಮಾಡಿದನು. ಇಂದ್ರನಾಥನು ಅವನ ಕಡೆಗೆ ತಿರುಗಿಕೊಂಡು ಅವನೊಂದಿಗೆ ಯುದ್ಧಕ್ಕೆ ತೊಡಗಿದನು. ಅಷ್ಟರೊಳಗೆ ನೆಲಕ್ಕೆ ಬಿದ್ದು ಹೋಗಿದ್ದ ಹುಮಾಯೂನನು ಸಂಭಾಳಿಸಿಕೊಂಡು, ಬಿದ್ದಲ್ಲಿಂದೆದ್ದು ಬಂದು ಪುನಃ ಅಸಿಹಸ್ತನಾದನು. ಆದುದರಿಂದ ಇಂದ್ರನಾಥನನ್ನೆದುರಿಸಲು ಇಬ್ಬರು ಅನುವಾಗಿ ಅವನ ಮೈಮೇಲೆ ಬಿದ್ದರು.

ಇಂದ್ರನಾಥನಿಗೆ ವಿಷಮಸಂಕಟವು ಪ್ರಾಪ್ತವಾಯಿತು—ಅಸಿಯುದ್ಧದಲ್ಲಿ ಒಬ್ಬನಿಬ್ಬರನ್ನೆದುರಿಸಿ ನಿಲ್ಲುವುದು ಸಂಭವಿಸತಕ್ಕುದಲ್ಲ; ಅದು ಸಾಧ್ಯವಿಲ್ಲ; ವಿಶೇಷತಃ, ತರ್ಖನನೂ ಹುಮಾಯೂನನೂ ಅಸಿಚಾಲನದಲ್ಲಿ ಅಪಟುಗಳಾಗಿರಲಿಲ್ಲ. ಹುಮಾಯೂನನ ಕಾತರತೆಯಿಂದಲೂ ರಾತ್ರಿಯ ಕತ್ತಲಿನಿಂದಲೂ ಸ್ವಲ್ಪಹೊತ್ತು ಇಂದ್ರನಾಥನ ಪ್ರಾಣರಕ್ಷಣೆಗೆ ಸಂಭವವಾಗಿದ್ದಿತು.

ಹುಮಾಯೂನನು ಕ್ರಮವಾಗಿ ದಣಿಕೆಯಿಂದ ಉಡುಗಿ ಬಳಲುತ್ತ ಬಂದಿದ್ದವನು ತರ್ಜನ ಗರ್ಜನ ಮಾಡುತ ಕಟ್ಟಕಡೆಗೆ ಕಡುಹುರಿಯಾಗಿ ಕತ್ತಿಯನ್ನು

ಕಡೆಗೆಳೆದು ಇಂದ್ರನಾಥನನ್ನು ಒಮ್ಮೆಗೆ ಹೊಡೆದನು—ತರ್ಖನನೂ ಚುಟಾಯಿಸಿಕೊಂಡು ಚುರುಕಾಗಿ ಚೆಂಗಿಬಂದು, ಅವರೀರ್ವರೂ ಏಕಕಾಲದಲ್ಲಿ ಇಂದ್ರನಾಥನನ್ನು ಕಸುವಿನಿಂದ ಎದೆ ಬೀಳಿಸುವಂತೆ ಸದೆಬಡಿಯುತ್ತ ಸತೇಜವಾಗಿ ಆಕ್ರಮಣ ಮಾಡಿದರು. ಅವರೀರ್ವರ ಸಮಕಾಲೀನವಾದ ಹೊಡೆತಗಳನ್ನು ನಿವಾರಿಸುವುದಕ್ಕೆ ಸಲುವಾಗಿ ಇಂದ್ರನಾಥನು ತಟ್ಟನೆ ಒಂದೆರಡು ಹೆಜ್ಜೆಗಳು ಹಿಂದಕ್ಕೆ ಸರಿದಿರಬೇಕೆಂದು ಮನಸ್ಸು ಮಾಡಿದನು. ಆಗವನು ಗಂಗೆಯ ದಡದ ಅಂಚಿನಲ್ಲಿ ನಿಂತಿದ್ದನು. ಹಿಂದಕ್ಕೆ ಒಮ್ಮೆಂದೊಮ್ಮೆ ಹಾರುವುದರಲ್ಲಿ ಗಂಗಾನದಿಯಲ್ಲಿ ಬಿದ್ದುಬಿಟ್ಟನು! "ತಾಯಿ, ಭೂದೇವಿ! ಅಂತಹ ವಿಪತ್ತಿನ ಕಾಲದಲ್ಲಿ ನಿಲ್ಲುವುದಕ್ಕೆ ನೀನೂ ಸ್ಥಳವನ್ನು ಕೊಡದೆ ಹೋದೆಯಾ?" ಎಂದು ಭಾವಿಸಿಕೊಳ್ಳುತ ಇಂದ್ರನಾಥನು ಗಂಗೆಯ ಜಲರಾಶಿಯಲ್ಲಿ ಮುಳುಗಿಹೋದನು. ತರ್ಖನ ಹುಮಾಯುನರೀರ್ವರೂ ಇಂದ್ರನಾಥನು ಸತ್ತನೆಂದು ತಿಳಿದುಕೊಂಡು ತಮ್ಮ ತಮ್ಮ ಕೆಲಸಗಳಿಗೆ ಹೊರಟುಹೋದರು.

ಅವರಿಬ್ಬರೂ ತಿಳಿದುಕೊಂಡುದುದು ಅಷ್ಟೊಂದು ಹೆಚ್ಚು ಸುಳ್ಳಲ್ಲ; ಇಂದ್ರನಾಥನು ಬಿದ್ದ ಹೊಡೆತಕ್ಕೆ ಅವನಿಗೆ ಏಳುವ ಶಕ್ತಿಯಿರಲಿಲ್ಲ— ಈಸುವುದು ಹೆಚ್ಚಿನ ಮಾತು, ಗುಡ್ಡದಂತೆ ಎತ್ತರವಾಗಿದ್ದ ದಡದಿಂದ ಬಿದ್ದು ಒತ್ತಡವೆಗೇವೇ ಅಚೇತನನಾಗಿಬಿಟ್ಟನು—ಹತ್ತಿರ ಘಾಟಿಯಲ್ಲೊಂದು ದೋಣಿಯು ಕಟ್ಟಲ್ಪಟ್ಟಿದ್ದಿತು, ಅದರಲ್ಲಿದ್ದೊಬ್ಬ ವ್ಯಕ್ತಿಯ ಹೇಳಿಕೆಯ ಪ್ರಕಾರ ದೋಣಿಯ ಹುಟ್ಟುಹೊಡಿಗರು ನೀರಿನಲ್ಲಿಳಿದು ಬಂದು ಮೃತಪ್ರಾಯನಾಗಿದ್ದ ಇಂದ್ರನಾಥನನ್ನು ನೀರಿನಿಂದೆತ್ತಿ ತಂದು ದೋಣಿಯಲ್ಲಿ ಹಾಕಿದರು.

ಇಂದ್ರನಾಥನನ್ನು ನೀರಿನಿಂದೆತ್ತಿಕೊಂಡು ಬರಲು ಅಪ್ಪಣೆಯಂ ಮಾಡಿದ ವ್ಯಕ್ತಿಯು ಒಬ್ಬ ರಮಣಿಯಾಗಿದ್ದಳು; ಅವಳು ಬಹಳ ಪ್ರಯತ್ನಪುರಸ್ಸರವಾಗಿ ಇಂದ್ರನಾಥನ ಮೈಯನ್ನು ತೊಳೆದು ಅದರಲ್ಲಿ ಕಂಡುಬಂದ ಅಸ್ತ್ರಾಘಾತದಿಂದುಂಟಾಗಿದ್ದ ಘಾಯಗಳನ್ನು ಒಂದೊಂದಾಗಿ ಒದ್ದೆಯಬಟ್ಟೆಯಿಂದ ಕಟ್ಟಿದಳು—ಆ ಘಾಯಗಳು ಅನೇಕವಾಗಿದ್ದರೂ ಅವು ಅಷ್ಟೊಂದು ಗಭೀರ ಅಥವಾ ಸಾಂಘಾತಿಕವಾದುವಲ್ಲವೆಂದೂ ರಾತ್ರಿ ಚೆನ್ನಾಗಿ ನಿದ್ರೆಯು ಬಂದರೆ ಬೆಳಿಗ್ಗೆ ಮೈಯಲ್ಲಿ ಹೆಚ್ಚು ನೋವಿರದೆಂದೂ ಆ ರಮಣಿಯು ತಿಳಿದುಕೊಂಡಳು.

ಇಂದ್ರನಾಥನು ರಾತ್ರಿಯೆಲ್ಲಾ ಚೆನ್ನಾಗಿ ನಿದ್ರೆಗೈದನು. ಪ್ರಾತಃಕಾಲದಲ್ಲಿ ಕಣ್ಣುಗಳನ್ನು ಬಿಟ್ಟು ನೋಡಿದನು. ಪಾರ್ಶ್ವದಲ್ಲಿ ಪರಮಸುಂದರಿಯಾದೊಬ್ಬ ರಮಣಿಯು ಕುಳಿತಿದ್ದಳು! ಇಂದ್ರನಾಥನಿಗೆ ಅವಳನ್ನು ಮೊದಲು ನೋಡಿದ್ದಂತೆ ಬೋಧೆಯಾಯಿತು; ಆದರೆ ಅವಳನೆಲ್ಲಿ ನೋಡಿದ್ದನೋ ಅದವನ ನೆನಪಿಗೆ ಬರಲಿಲ್ಲ.

ಇಂದ್ರನಾಥ—ಭದ್ರೆ! ತಾವೆನಗೆ ಪ್ರಾಣದಾನವನ್ನು ಮಾಡಿರುವಿರಿ; ತಾವೆನ್ನನ್ನು ನೀರಿನಿಂದ ಉದ್ಧಾರಮಾಡಿದವರೆಂದು ತೋರುತ್ತದೆ; ತಾವಾರು?

ನಾನೇನನ್ನು ಮಾಡಿದರೆ ಈ ಋಣದಿಂದ ಮುಕ್ತನಾಗುವೆನು; ತಾವೆನ್ನ ಪ್ರಾಣವನ್ನು ಕಾಪಾಡಿದವರೆಂದು ತಿಳಿದರೆ, ರಾಜಾ ಟೋಡರಮಲ್ಲನು ತಾವಾವದನ್ನು ಬೇಡಿದರೂ ತಮಗದನ್ನು ಕೊಡಲು ಹಿಂಜರಿಯನು.

ಹೆಂಗಸು ಬಹಳ ಹೊತ್ತಿನತನಕ ಪ್ರತ್ಯುತ್ತರವಂ ಕೊಡಲಿಲ್ಲ; ಇಂದ್ರನಾಥನು ಪುನಃಪುನಃ ಪ್ರಶ್ನೆಯನ್ನು ಒತ್ತಾಯದಿಂದ ಕೇಳಿದುದರಿಂದ, ಕಡೆಗವಳು, "ಸೈನಿಕವರ! ನನ್ನನ್ನು ಇಷ್ಟರೊಳಗೆ ಮರೆತುಬಿಟ್ಟೆಯಾ?" ಎಂದಳು.

ಇಂದ್ರನಾಥನು ಕೋಕಿಲ ನಿಂದಿತವಾದಾ ಕಂಠಧ್ವನಿಯನ್ನಾಗಲೂ ಮರೆತಿರಲಿಲ್ಲವಾದಕಾರಣ ಉದ್ವಿಗ್ನನಾಗಿ, "ರಮಣೀಶಿರೋಮಣಿ! ನಾನು ಪ್ರಾಣದಿಂದ ಬದುಕಿರುವತನಕ ನಿನ್ನನ್ನು ಮರೆಯೆನು. ಆದರೆ ನೀನಿಲ್ಲಿಗೆ ಹೇಗೆ ಬಂದೆ? ಮಹೇಶ್ವರನ ಮಂದಿರವನ್ನು ಬಿಟ್ಟೆಷ್ಟು ದಿನಗಳಾದುವು?" ಎಂದು ಹೇಳಿದನು.

ಆ ನೌಕಾವಾಸಿನಿಯಾಗಿದ್ದವಳು ವಿಮಲೆ! ಇಂದ್ರನಾಥನು ಅವಳನ್ನು ಮಹೇಶ್ವರನ ಮಂದಿರದಲ್ಲಿ ನೋಡಿದ್ದನು. ಇಂತಹ ಅವಸ್ಥೆಯಲ್ಲಿ ಅವಳನ್ನಲ್ಲಿ ಕಂಡು ಆಶ್ಚರಿಗೊಂಡನು. ಇಂದ್ರನಾಥನಾ ಸೋಜಿಗವ ಕಂಡು ವಿಮಲೆಯು ಮೆಲ್ನಗುವು ಪೂಸಿದ ಮುಖದವಳಾಗಿ, ತನ್ನ ಮುಖಾವರಣವನ್ನು ಮತ್ತಷ್ಟು ಮುಖದ ಮೇಲೆಳೆದುಕೊಂಡು ಆಹತನಾಗಿದ್ದಾ ಸೈನಿಕನ ಶುಶ್ರೂಷೆಯಂ ಮಾಡತೊಡಗಿದಳು.

ಇಂದ್ರನಾಥನ ಮೈಯಲ್ಲಿ ಅನೇಕ ಸ್ಥಳಗಳಲ್ಲಿ ಘಾಯಗಳಾಗಿದ್ದುವು. ಆದರೆ ಘಾಯಗಳು ಗುರುತರವಾದವುವಾಗಿರಲಿಲ್ಲ. ವಿಮಲೆಯು ಅತಿ ಜಾಣ್ಮೆಯಿಂದ ನಾಜೋಕಾಗಿ ಅವುಗಳಿಗೆಲ್ಲ ಪುನಃ ಒದ್ದೆಯ ಬಟ್ಟೆಗಳನ್ನು ಕಟ್ಟಿದಳು; ಬಳಿಕ ಇಂದ್ರನಾಥನು ಅಲ್ಲಿಂದ ಹೊರಡಲುದ್ಯುತನಾದನು.

ಬೀಳ್ಕೊಳ್ಳುವ ಸಮಯದಲ್ಲಿ ಅವನಾ ರಮಣಿಗೆ ನೂರಾರು ಧನ್ಯವಾದಗಳನ್ನು ತಿಳಿಹಿದನು. ಬಳಿಕ ಅವಳನ್ನು ಕುರಿತು, ಉಚಿತ ವಾಕ್ಯಗಳಿಂದ ತನ್ನ ಕುರುಹಾಗಿ ಒಂದಾವದಾದರೂ ಬಹುಮಾನವನ್ನು ತೆಗೆದುಕೊಳ್ಳಲು ಒತ್ತಾಯ ಮಾಡಿದನು.

ವಿಮಲೆಯು ಬಹಳ ಹೊತ್ತು ನಿಸ್ತಬ್ಧೆಯಾಗಿದ್ದು, ಬಳಿಕ ಸಜಲನಯನೆಯಾಗಿ, "ಪ್ರಭು, ಸೈನಿಕವರ! ಮಹೇಶ್ವರನ ಮಂದಿರದಲ್ಲಿ ನಿನ್ನಲ್ಲೊಂದು ಭಿಕ್ಷೆಯಂ ಬೇಡಿದ್ದೆನು, ಸತೀಶಚಂದ್ರನನ್ನು ಕಾಪಾಡಬೇಕೆಂದು; ನನಗದನ್ನು ಭಿಕ್ಷವಾಗಿ ನೀಡು" ಎಂದಳು.

ಇಂದ್ರನಾಥ—ಆದರೆ ಅದು ಭಿಕ್ಷೆಯಲ್ಲ. ಸತೀಶಚಂದ್ರನು ನಿರ್ದೋಷಿಯಾಗಿದ್ದರೆ ಅವನನ್ನು ರಕ್ಷಿಸಿ ಕಾಪಾಡುವುದು ಮನುಷ್ಯಮಾತ್ರನಿಗೆ ಕರ್ತವ್ಯವಾದುದು. ನಾನು ನಿನಗೆ ಸಲುವಾಗಿ ಮತ್ತೇನನ್ನು ಮಾಡಬೇಕೋ, ಅದನ್ನು ಶಿರಸಾವಹಿಸಿ ಮಾಡುವೆನೆಂದು ವಚನವಂ ಕೊಡುವೆನು.

ವಿಮಲೆ—(ಬಹಳ ಹೊತ್ತು ಯೋಚಿಸುತಿದ್ದು, ಬಳಿಕ) ಮತ್ತೊಂದು ಭಿಕ್ಷೆಯೇನೆಂದರೆ, ನೀನೆನ್ನನ್ನು ಮಹೇಶ್ವರನ ಮಂದಿರದಲ್ಲಿ ನೋಡಿದ್ದೆ, ಮತ್ತು ಇಲ್ಲಿ ಮಾಂಗೀರಿನಲ್ಲಿ ನೋಡಿರುತ್ತಿ, ಆವೆರಡು ದರ್ಶನಗಳನ್ನು ಮರೆತುಬಿಡು.

ಇಂದ್ರನಾಥ—ನೀನೆನಗೆ ಜೀವನದಾನವಂ ಮಾಡಿರುವುದನ್ನೆಂದಿಗೂ ಮರೆಯೆನು—ನೀನು ಹಾಗೆ ಬೇಡಲು ಕಾರಣವೇನು ?

ವಿಮಲೆ—(ಮೆಲ್ಲಮೆಲ್ಲನೆ) ನಾನು ಬ್ರಾಹ್ಮಣಕುಮಾರಿ, ಅದುಕಾರಣ ನಿನ್ನ ಸ್ಮರಣೆಯಲ್ಲಿರಲು ಯೋಗ್ಯೆಯಲ್ಲ—ಅದಲ್ಲದೆ ಸರಳೆಯು ನಿನ್ನನ್ನೆದುರುನೋಡುತ್ತಿರುವಳು. ಆದುದರಿಂದ ಬೇರೆ ಹೆಂಗಸು ನಿನ್ನ ಸ್ಮರಣೆಯಲ್ಲಿರಲು ಯೋಗ್ಯೆಯಲ್ಲ !

---

# ಹದಿನಾರನೆಯ ಪರಿಚ್ಛೇದ

## ಕಮಲೆ

As in the bosom o' the stream,
The moon-beam dwells at dewy e'en
So trembling, pure was her tender love,
Within the breast o' bonnie Jean.
And now she works her mammie's work
And aye she sighs with care and pain,
Ye wist na what her ail might be,
Or what wad make her weel again. *Burns.*

ವಿಮಲೆಯು ಮಾಂಗೀರಿಗೆ ಬಂದುದೇಕೆಂಬುದನ್ನು ತಿಳಿಯಲು ಪಾಠಕರು ಉತ್ಸುಕರಾಗಿರುವರು. ಆದರೆ ಆ ವಿಚಾರವನ್ನೆಲ್ಲಾ ಹೇಳಹೋದರೆ, ಅದಕ್ಕೆ ಪೂರ್ವದ ಕಥೆಯನ್ನು ಮೊದಲಿಂದ ಪ್ರಾರಂಭಿಸಬೇಕು. ಆದುದರಿಂದ ಇಂದ್ರನಾಥನು ಸರಳೆಯನ್ನಾವ ಮಂದಿರದಲ್ಲಿ ಬಿಟ್ಟು ಬಂದಿದ್ದನೋ, ಆ ಮಂದಿರದ ವೃತ್ತಾಂತವನ್ನು ತೆಗೆದುಕೊಂಡು ಆರಂಭಿಸುವೆವು.

ಇಚ್ಛಾಮತಿಯ ತೀರದಲ್ಲಿದ್ದ ಮಹೇಶ್ವರನ ಮಂದಿರಕ್ಕೆ ಸ್ವಲ್ಪ ದೂರದಲ್ಲಿ ವನಗ್ರಾಮವೆಂಬೊಂದು ಗ್ರಾಮವಿದ್ದಿತೆಂದು ಹೇಳಿರುವೆವಷ್ಟೆ—ಮಂದಿರದ ಮಹಂತನಾದ ಚಂದ್ರಶೇಖರನು ಪ್ರಾಯಕವಾಗಿ ದೇವಾಲಯದಲ್ಲಿರುತಿದ್ದನು. ಆದರೆ ಮಧ್ಯೆಮಧ್ಯೆ ಆ ಹಳ್ಳಿಯಲ್ಲಿ ಬಂದು ವಾಸಮಾಡಲು ಇಷ್ಟವುಳ್ಳವನಾಗಿದ್ದನು.

ಸಾಮಾನ್ಯವಾಗಿ ದೇವಾಲಯಗಳ ಮಹಂತರು ಸ್ವಾರ್ಥಪರರಾಗಿಯೂ ವಿಷಯ ಲುಬ್ಧರಾಗಿಯೂ ಇರುವರು. ಚಂದ್ರಶೇಖರನು ಹಾಗಿರಲಿಲ್ಲ. ಅವನು ಅತ್ಯಂತ ನಿರ್ಮಲ ಚರಿತ್ರೆಯುಳ್ಳವನಾಗಿದ್ದನು ; ಅನೇಕ ಬ್ರಾಹ್ಮಣ ಬ್ರಾಹ್ಮಣಿ

ಯರನ್ನು ಆ ಗ್ರಾಮದಲ್ಲಿರಿಸಿ ಅವರನ್ನು ಭ್ರಾತಾಭಗಿನಿಯರಂತೆ ನೋಡಿಕೊಂಡಿದ್ದನು. ದೇವಾಲಯದ ಕೆಲಸಕ್ಕೆ ಸಲುವಾಗಿ ಬೇರೆ ಪೂಜಕರನ್ನಿಟ್ಟು ಚಂದ್ರಶೇಖರನು ತನಗೆ ಆಶ್ರಿತರಾದ ಕೆಲವು ಮನೆಯ ಜನರೊಡನೆ ಆ ಗ್ರಾಮದಲ್ಲಿ ಉಪಾಸನೆಯಂ ಮಾಡುವನು. ಕಮಲೆಯೆಂಬೊಬ್ಬ ಅನಾಥೆ ಕನ್ನೆಯನ್ನು ಮನೆಯಲ್ಲಿ ಪರಿಚಾರಿಕೆಯ ಕೆಲಸಕ್ಕಿಟ್ಟುಕೊಂಡಿದ್ದನು. ಆದರೆ ಅವಳನ್ನು ತನ್ನ ಸ್ವಂತ ಮಗಳಂತೆ ಲಾಲನ ಪಾಲನೆ ಮಾಡುತಿರುವನು. ಚಂದ್ರಶೇಖರನು ನಿರ್ಮಲ ಚರಿತ್ರನಾಗಿದ್ದಂತೆ ಧರ್ಮಪರಾಯಣನೂ ಆಗಿದ್ದನು; ಅವನನ್ನು ನೋಡಿದರೆ ಪೂರ್ವಕಾಲದ ಮುನಿಋಷಿಗಳಂತೆ ಕಾಣುವನು. ಆದುದರಿಂದ ಅವನ ಶಿಷ್ಯಂದಿರು ಪ್ರಸ್ತಾವವು ಬಂದಾಗ ಅವನನ್ನು ಕಣ್ವಮುನಿಯೆಂದು ಹೇಳುವರು. ಅವನ ಸಾಲಿತೆಯಾದಾ ಹುಡುಗಿಯನ್ನು ಶಕುಂತಲೆಯೆಂದು ಕರೆಯುವರು.

ಸಾಯಂಕಾಲವು ಉಪಸ್ಥಿತವಾಯಿತು—ಆ ಸಾಯಂಕಾಲದಲ್ಲಿ ನದಿಯ ತೀರದಲ್ಲಿಬ್ಬರು ಕುಳಿತಿದ್ದರು. ಅವರಲ್ಲೊಬ್ಬಳು ನಮ್ಮ ಪೂರ್ವಪರಿಚಿತೆಯಾದ ಸರಳೆ, ಮತ್ತೊಬ್ಬಳಾ ಕಮಲೆ.

ಕಮಲೆಯು ಬಹಳ ದಿನಗಳಿಂದಾ ಆಶ್ರಮದಲ್ಲಿ ವಾಸವಾಗಿರುತಿದ್ದಳು. ಅವಳಿಗಿನ್ನೂ ಹತ್ತೊಂಭತ್ತು ವರ್ಷಗಳ ವಯಸ್ಸು. ಅವಳಾರ ಮಗಳೆಂದಾಗಲೀ ಆರ ಮಡದಿಯೆಂದಾಗಲೀ ಅವಳಿನಿಯನಾವಾಗ ಕಾಲಧರ್ಮವಾದನೆಂಬದಾಗಲೀ ಆ ವಿಚಾರಗಳಾರಿಗೂ ತಿಳಿಯದು—ಅದನ್ನು ಕುರಿತು ಕೇಳಿದರೆ ಅವಳು ಅಳುವುದಕ್ಕೆ ತೊಡಗುವಳು— ಅದುಕಾರಣ ಅವಳನ್ನಾರೂ ಆ ವಿಚಾರವಾಗಿ ಪ್ರಶ್ನೆ ಮಾಡುತ್ತಿರಲಿಲ್ಲ.

ಕಮಲೆಯ ಸ್ವಭಾವವನ್ನೂ ಆಚರಣೆಯನ್ನೂ ಕಂಡು ಗ್ರಾಮವಾಸಿಗಳೆಲ್ಲರೂ ವಿಸ್ಮಿತರಾಗುವರು—ಕಮಲೆಯು ಅನುದಿನವೂ ಅನವರತ ಶಾಂತೆಯಾಗಿಯೂ ಚಿಂತಾಯುಕ್ತೆಯಾಗಿಯೂ ಮರಗೊಂಡವಳಂತೆ ಅನ್ಯಮನಸ್ಕಳಾಗಿಯೂ ಇರುವಳು—ಅವಳು ಮಧ್ಯಾಹ್ನ ಮನೆಯ ಕೆಲಸಗಳನ್ನೆಲ್ಲಾ ಮಾಡಿ ಮುಗಿಸಿಕೊಂಡು ಆಶ್ರಮದ ಬಳಿ ದಟ್ಟವಾಗಿ ಬೆಳದಿದ್ದ ಮರಗಳ ಮಧ್ಯೆ ಅಂಧಕಾರಮಯವಾಗಿ ಜನಗಳ ಶಬ್ದವಿಲ್ಲದೆಡೆ ಒಂಟಿಗಿತ್ತಿಯಾಗಿ ಕುಳಿತು ಚಿಂತಿಸುತ್ತಿರಲು ಇಷ್ಟವುಳ್ಳವಳಾಗಿರುವಳು. ಮಧ್ಯಾಹ್ನದಲ್ಲಿ ಪಕ್ಷಿಗಳ ಮೆದುವಾದ ಶಬ್ದವನ್ನು ಕೇಳಲು ಇಷ್ಟವುಳ್ಳವಳಾಗಿರುವಳು—ಸಾಯಂಕಾಲ ಇಚ್ಛಾಮತಿನದಿಯ ಮಾವಿನಮರಗಳ ತಳವನ್ನು ತೊಳಿಯುತ್ತ ಕಲಕಲ ರವವನ್ನು ಮಾಡುತ ಹರಿದು ಹೋಗುತಿದ್ದ ಒಂಟಿನೆಡೆಯಲ್ಲಿ ಒಂಟಿಯಾಗಿ ಕುಳಿತು ಚಿಂತಿಸುತ್ತಿರಲು ಇಷ್ಟವುಳ್ಳವಳಾಗಿರುವಳು—ನದಿಯ ಅನಂತವಾದ ಕಲಕಲ ಧ್ವನಿಯನ್ನು ಕೇಳುತಿರಲು ಇಷ್ಟವುಳ್ಳವಳಾಗಿರುವಳು. ಅವಳಾ ಅನಂತವಾದ ಕಲಕಲ ಧ್ವನಿಯನ್ನು ಕೇಳುತ್ತ ಅನಂತವಾಗಿ ಚಿಂತಿಸುತ್ತಿರುವುದು ಆವದರ ಚಿಂತೆ? ಅದಾವದರ ಚಿಂತೆಯೆಂದು

ಹೇಳಬಲ್ಲವರಾರು ? ಚಂದ್ರಶೇಖರನು ಕಮಲೆಯನ್ನು ತನ್ನ ಮನೆಯಲ್ಲಿಟ್ಟು ಕೊಂಡಿರುವನು. ತನ್ನ ಮಗಳಂತೆ ಪ್ರೀತಿಯಿಂದವಳನ್ನು ಸಲಹುತ್ತಿರುವನು. ಗ್ರಾಮವಾಸಿಗಳೆಲ್ಲರೂ ಅವಳನ್ನು ಪ್ರೀತಿಸುತಿದ್ದರು. ಅವಳ ಮಾತಿನಿಂದವರು ಪ್ರೀತರಾಗುವರು. ಅವಳಾ ಮಾತುಗಳು ಅತಿ ಮಧುರವಾಗಿಯೂ ಭಾವ ಪರಿಪೂರ್ಣವಾಗಿಯೂ ಇರುವುವು. ಕೇಳುವವರ ಕಿವಿಯೆಲ್ಲವು ಅಮೃತವನ್ನು ವರ್ಷಿಸುವಂತೆ ತೋರುವುವು.

ಕಮಲೆಯು ನಿರುಪಮೆಯಾದ ಸುಂದರಿಯಾಗಿದ್ದಳು. ಅವಳ ಕಣ್ಣುಗಳೆರಡು ಶಾಂತವಾದ ಜ್ಯೋತಿಯುಳ್ಳುವುವಾಗಿಯೂ ಚಿಂತಾಪ್ರಕಾಶಕವಾದವಾಗಿಯೂ ಇದ್ದುವು. ಸಮಸ್ತ ಮುಖಮಂಡಲವೂ ಶಾಂತವಾಗಿ ಪ್ರಗಾಢ ಚಿಂತೆಯಿಂದ ಮ್ಲಾನವಾಗಿದ್ದಿತು. ದೇಹವು ಅತಿ ಸುಕುಮಾರವಾದುದು. ವಿಧವೆಯ ಮಲಿನ ವಸ್ತ್ರದಿಂದಾ ಸುಕುಮಾರ ದೇಹವು ಆವೃತವಾಗಿ ಹಾವಸೆಯಿಂದ ಮುಚ್ಚಲ್ಪಟ್ಟಿದ್ದ ಪದ್ಮದಂತೆ ಕಂಗೊಳಿಸುವುದು—ಆದರೆ ಅದಾ ಪ್ರಸ್ಫುಟಿತ ಪದ್ಮವಲ್ಲ. ಸಾಯಂಕಾಲದಲ್ಲಿ ನೀರಿನ ಹಿಲ್ಲೋಲದಲ್ಲಿ ಸ್ವಲ್ಪ ಸ್ವಲ್ಪ ತೂಗಾಡುತ್ತ ಮುದಿತಪ್ರಾಯವಾದ ಪದ್ಮದಂತೆ ಕೋಮಲವಾದಾ ತನ್ವಂಗಿ ತಪಸ್ವಿನಿಯು ಸತತ ಚಿಂತಾಮಗ್ನೆಯಾಗಿ ಲೋಕಾಲಯದಲ್ಲಿ ಮುದಿತಪ್ರಾಯವಾಗಿರುವಳಲ್ಲದೆ ಒಮ್ಮೊಮ್ಮೆ ತನುಮರವೆಯಾಗಿದ್ದಂತಿರುವಳು—ಕಮಲೆಯು ಚಂದ್ರಶೇಖರನನ್ನು ತಂದೆಯೆಂದು ಕರೆಯುವಳು. ಚಂದ್ರಶೇಖರನ ಮನೆಯ ಕೆಲಸಗಳನ್ನೆಲ್ಲಾ ಅವಳೊಬ್ಬಳೇ ನಿರ್ವಹಿಸುವಳು—ಕೆಲಸವಿಲ್ಲದಾಗ ನಿಭೃತವಾಗಿದ್ದಾ ನಿಬಿಡ ಪಾದಪಾವೃತ ಸ್ಥಳಕ್ಕೆ ಹೊರಟುಹೋಗುವಳು. ಶಿಖಂಡಿವಾಹನನು ಅವಳನ್ನು ಪರಿಹಾಸ್ಯಮಾಡಿ ವನದೇವಿಯೆಂದು ಕರೆಯುವನು, ಅವನಂತೆ ಆಶ್ರಮದವರೆಲ್ಲರೂ ಅವಳನ್ನು ವನದೇವಿಯೆಂದು ಕರೆಯುವರು. ವಾಸ್ತವವಾಗಿ ಅವಳು ಏಕಾಂಗಿಯಾಗಿ ವನವನವನ್ನು ತಿರುಗಲು ಇಷ್ಟವುಳ್ಳವಳಾಗಿರುವುದನ್ನು ನೋಡಿದರೆ ಅವಳನ್ನು ಶಾಂತವಾದಾ ಪವಿತ್ರ ಛಾಯಾನ್ವಿತ ಆಶ್ರಮಕ್ಕೆ ಅಧಿಷ್ಠಾತ್ರಿಯಾದ ದೇವಿಯೆಂದು ತಿಳಿಯುವುದು ವಿಚಿತ್ರವಲ್ಲ.

ಇಂದು ಸಂಧ್ಯೆಯ ಸಮಯದಲ್ಲಿ ಕಮಲೆಯು ಸರಳೆಯನ್ನು ಸಂಗಡ ಕರೆದುಕೊಂಡು ಹೋಗಿ ವನದಲ್ಲಿ ಸಂಚರಣಮಾಡುತಿದ್ದಳು—ಆಗ ಅವರಿಬ್ಬರೂ ನದಿಯ ತೀರಕ್ಕೆ ಬಂದು ಅಲ್ಲಿ ಕುಳಿತಿದ್ದರು. ಕಮಲೆಯು ಸರಳೆಯನ್ನು ಪ್ರೀತಿಸುವಳು—ಸರಳಚಿತ್ತವುಳ್ಳಾ ಬಾಲೆಯನ್ನು ಪ್ರೀತಿಸದಿರುವರಾರು ? ಸರಳೆಯು ಕಮಲೆಯ ದುಃಖದಲ್ಲಿ ದುಃಖವನ್ನು ತೋರುವಳು, ತನ್ನ ಸ್ವಂತ ದುಃಖವನ್ನು ಮರೆತು ದುಃಖಿನಿಯಾದಾ ವಿಧವೆಯ ದುಃಖದಲ್ಲಿ ದುಃಖಿಯಾಗುವಳು—ಆದುದರಿಂದ ಕ್ರಮವಾಗಿ ಅವರೀರ್ವರಿಗೂ ಪರಸ್ಪರ ಪ್ರೀತಿವಿಶ್ವಾಸಗಳು ಉಂಟಾಗುತ್ತ ಬಂದುವು.

ಪಾತಕಮಹಾಶಯರು ಸರಳೆಗೆ ದುಃಖವಾವದೆಂದೂ ಬಾಲೆಯ ಹೃದಯದಲ್ಲಾವದರ ಚಿಂತೆಯೆಂದೂ ಚರ್ಚಿಸಿ ಕೇಳುವರು—ನಾವದಕ್ಕೆ ಉತ್ತರವನ್ನು ಕೊಡುವೆವು; ಸರಳೆಯು ಬಾಲೆಯಲ್ಲ, ಅವಳ ಹೃದಯಕೋರಕದಲ್ಲಿ ಪ್ರಣಯಕೀಟವು ಪ್ರವೇಶಮಾಡಿದ್ದಿತು.

ಇಂದ್ರನಾಥನು ಸರಳೆಯಿಂದ ಬೀಳ್ಕೊಂಡ ದಿನದ ಮೊದಲ್ಗೊಂಡು ಸರಳೆಯು ಪ್ರಣಯವಾವುದೆಂಬುದನ್ನು ತಿಳಿದವಳಲ್ಲದೆ, ಅವದಕ್ಕೆ ಚಿಂತೆಯೆಂದು ಹೇಳುವರೋ ಅದನ್ನೂ ತಿಳಿದವಳಾದಳು. ಅವಳು ಮೊದಲಿನಂತೆ ಸ್ನೇಹಮಯಿಯಾದ ಹುಡುಗಿಯಾಗಿದ್ದಳು, ಆದರೆ ತಾಯಿಯ ಸೇವೆ ಶುಶ್ರೂಷೆಯನ್ನು ಮಾಡುತ್ತಿರುವಾಗ ಅವಳ ಮನದಲ್ಲಿ ಮತ್ತೊಬ್ಬನ ವಿಚಾರವು ಜಾಗರಿತವಾಗುತ್ತಿರುವುದು, ಮತ್ತೊಂದು ಮುಖವು ನೆನವಿಗೆ ಬಂದು ಅವಳೆದುರಿಗೆ ಕಾಣುವಂತೆ ತೋರುವುದು. ಆಗಲೂ ಸರಳೆಯು ಶ್ರಮಿಸಿ ಕೆಲಸವನ್ನು ಮಾಡುತ್ತಿರುವಳು. ಆದರೆ ಕೆಲಸವನ್ನು ಮಾಡುತ್ತಿರುವಾಗ ಮಧ್ಯೆ ಮಧ್ಯೆ ನಿಟ್ಟೂರ್ಪನ್ನು ಬಿಡುವಳು; ಮಧ್ಯೆ ಮಧ್ಯೆ ಕಣ್ಣೀರು ತುಂಬುವುದು, ಲಜ್ಜೆಯಿಂದಾ ಕಣ್ಣೀರನ್ನೊರಸಿಕೊಂಡು ಪುನಃ ಕೆಲಸವನ್ನು ಮಾಡತೊಡಗುವಳು. ಪುನಃ ಮೆಲ್ಲಮೆಲ್ಲನೆ ಕಣ್ಣೀರು ತುಂಬುವುದು. ತುಂಬಿ ಮೇಲೆ ಉಕ್ಕಿಬಂದು ಹರಿದು ಮುಖವು ತೋಯ್ಯುವುದು.

ಚಿಂತೆ ಯಾವದರದೆಂದು ಕೇಳಿದರೆ ಸರಳೆಯು ಅದಕ್ಕೆ ಉತ್ತರವನ್ನು ಕೊಡಲಾರಳು—ಆದರೆ ನಾವದನ್ನು ಅನುಭವಮಾಡಬಲ್ಲೆವು. ರುದ್ರಪುರದಲ್ಲಿ ತಣ್ಗದಿರನ ತನಿ ಬೆಳಕಿನಲ್ಲಿ ನೋಡಿದ್ದಾ ದೇವಮೂರ್ತಿಯನ್ನು ಪುನಃ ನೋಡಲಾಪೆನೆ? ಆಟವಾಡುವಾಗ ಅವನ ಕೊರಳಲ್ಲಿ ಪೂಮಾಲೆಯನ್ನು ಹಾಕಿದೆನೋ ಅವನನ್ನು ಪುನಃ ನೋಡಲಾಪೆನೆ? ಯುದ್ಧದಿಂದ ಇಂದ್ರನಾಥನು ಪುನಃ ಬರುವನೆ? ಎಂಬಿವೇ ಮುಂತಾದ ಚಿಂತೆಯನ್ನು ಮಾಡುತ್ತ ಸರಳೆಯು ತಾನು ಮಾಡುತಿದ್ದ ಕೆಲಸವನ್ನು ಮರೆತುಬಿಡುವಳು; ಅವಳಿಗಾಗ ನಾಲ್ಕು ದಿಕ್ಕುಗಳು ಶೂನ್ಯವಾಗಿ ಕಾಣುವುವು, ಮನದ ಕಣ್ಣುಗಳಿಂದಾ ರುದ್ರಪುರದ ಕುಟೀರವನ್ನು ನೋಡುವಳು. ಆ ಕುಟೀರದ ಸುತ್ತ ಆ ಉದ್ಯಾನ. ಆ ಉದ್ಯಾನದಲ್ಲಿ ಆ ಹೂವಿನ ಗಿಡಗಳು, ಮೇಲೆ ಪೂರ್ಣಚಂದ್ರ, ಆ ಹೂವಿನ ಗಿಡಗಳ ಮಧ್ಯೆ ಆ ಪೂರ್ಣಚಂದ್ರನ ತನಿ ಬೆಳಕಿನಲ್ಲಿ ತನ್ನಾ ಹೃದಯದ ಇಂದ್ರನಾಥ,—ಎಲ್ಲಾ ನೋಡುವಳು—ಒಮ್ಮಿಂದೊಮ್ಮೆ ಕಣ್ಣೀರಿನಿಂದ ಸರಳೆಯ ಮುಖವು ಪ್ಲಾವಿತವಾಗುವುದು.

ಮಂದಿರದ ನಿವಾಸಿಯರಲ್ಲೊಬ್ಬಳು ಮಾತ್ರ ಸರಳೆಯ ಮನೋಭಾವವನ್ನು ತಿಳಿದಿದ್ದಳು—ಕಮಲೆಯು ಸರಳೆಯನ್ನು ಒಮ್ಮೊಂದು ತಡವೆ ತನ್ನ ಸಂಗಡ ನಿಸ್ತಬ್ಧವಾಗಿದ್ದಾ ನದಿಯಕೂಲಕ್ಕಾಗಲೀ ಸ್ನಿಗ್ಧವಾಗಿದ್ದಾ ಛಾಯಾವೃಕ್ಷದ ತಲದಲ್ಲಾಗಲೀ ಕರೆದುಕೊಂಡು ಹೋಗುವಳು; ಅಲ್ಲಿ ತನ್ನ ಚಿಂತೆಯನ್ನು ಹೇಳಿ ಅದಕ್ಕವಳನ್ನು ಭಾಗಿಯನ್ನಾಗಿ ಮಾಡುವಳು. ಸರಳೆಯ ಕಣ್ಣೀರನ್ನೊರಸು

ಎಲೆಗಳ ಮರ್ಮರದ ಶಬ್ದವನ್ನು ಕೇಳುವಿಯಷ್ಟೆ. ಮಧ್ಯಾಹ್ನ ಆ ಮರದ ನೆರಳಿನಲ್ಲಿ ಕುಳಿತು ಆ ಮರ್ಮರದ ಶಬ್ದವನ್ನು ಕೇಳುತಿರುವೆನು. ಆಗೆನ್ನ ಹೃದಯವು ಶಾಂತಿರಸದಿಂದ ಪರಿಪೂರಿತವಾಗಿರುವುದು; ಆಕಾಶದಲ್ಲಿ ಶುಭ್ರವಾದಾ ಮೇಘಖಂಡಗಳೊಳಗಿನಿಂದ ಹೋಗುವ ಚಂದ್ರನು ಕ್ಷಣಕಾಲ ಮರೆಯಾಗಿದ್ದು ಪುನಃ ಪರಿಷ್ಕಾರವಾದ ನೀಲಗಗನಮಂಡಲದಲ್ಲಿ ಹೊರಗೆ ಹೊರಟು ತನ್ನ ಬೆಳಕನ್ನು ದಿಗಂತವಾಗಿ ಪಸರಿಸುವುದನ್ನು ನೋಡುವೆಯಲ್ಲವೆ, ನಾನು ಆ ಚಂದ್ರನನ್ನೂ ಆ ಆಕಾಶವನ್ನೂ ನೋಡುತ, ನಿರುಪಮ ಶಾಂತಿಯನ್ನು ಹೊಂದುತ್ತೇನೆ. ಅವುಗಳನ್ನೆಲ್ಲಾ ನೋಡಿ ನನ್ನ ಹೃದಯದಲ್ಲಿ ಅನಂತಭಾವವುದಯವಾಗಿ ಅದರಿಂದ ಸುಖಿಯಾಗುವೆನು; ಸರಳೆ! ನಾನು ದುಃಖಿನಿಯಲ್ಲ."

ಸರಳೆಯು ಕೇಳಿ ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ, "ಅಕ್ಕ! ನಿನ್ನ ಪೂರ್ವವೃತ್ತಾಂತವನ್ನು ತಿಳಿಯುವುದಕ್ಕೆ ಸಲುವಾಗಿ ನನಗೆ ಕುತೂಹಲವುಂಟಾಗಿದೆ" ಎಂದಳು.

ಕಮಲೆ—ಸರಳೆ! ನೀನೂ ಆ ವಿಚಾರವನ್ನು ಕುರಿತು ಪ್ರಶ್ನೆಯಂ ಮಾಡಿದಿಯಾ? ಆಶ್ರಮವಾಸಿಯರಿಗೆ ನಾನಾಪದನ್ನೂ ಹೇಳಲಿಲ್ಲ, ಆದರೆ, ತಂಗಿ! ನಿನ್ನಿಂದ ಮರೆಮಾಜುವುದೆನಗಾವದೂ ಇರದು; ನಾನು ನಿಜವಾಗಿ ಹೇಳುವೆನು. ನನ್ನ ಜೀವನವು ಅಪೂರ್ವವಾದೊಂದು ಮೋಹಜಾಲದಿಂದ ಜಡಿತವಾಗಿದೆ. ಅದನ್ನು ಭೇದಿಸಲೆನಗೆ ಸಾಧ್ಯವಿಲ್ಲ. ನನ್ನ ಪೂರ್ವವೃತ್ತಾಂತವೆನಗೆ ಸ್ವಲ್ಪವೂ ಸ್ಮರಣೆಯಲ್ಲಿಲ್ಲ.

ಸರಳೆ—(ಅಚ್ಚರಿಗೊಂಡು, ಪುನಃ) ಸ್ವಲ್ಪವೂ ನೆನವಿಲ್ಲವೆ? ಅಕ್ಕ ನಿಮ್ಮ ಮನೆಯಿರುವುದೆಲ್ಲಿ?

ಕಮಲೆ—ಪಶ್ಚಿಮದೇಶದಲ್ಲಿ; ಊರ ಹೆಸರು ನೆನವಿಲ್ಲ.

ಸರಳೆ—ನಿಮ್ಮ ತಂದೆಯ ಹೆಸರೇನು?

ಕಮಲೆ—ನಾನು ಚಿಕ್ಕಂದಿನಿಂದಲೂ ಅನಾಥೆ—

ಸರಳೆ—ನಿನ್ನ ಸ್ವಾಮಿಯ ಹೆಸರೇನು?

ಕಮಲೆ—ಹೆಸರು ನೆನವಿಲ್ಲ. ಕೇವಲ ಮಾತ್ರ ಆ ದೇವಮೂರ್ತಿಯು ಮನದಲ್ಲಿ ಜಾಗರಿತವಾಗಿದೆ.

ಸರಳೆ—ನೀನು ಅಕಾಲದಲ್ಲಿ ವಿತಂತುವಾದುದು ಹೇಗೆ?

ಕಮಲೆ—ಮಹಾವಿಪತ್ತಿನಲ್ಲಿ ಆತನನ್ನು ಹೋಗಲಾಡಿಸಿಕೊಂಡೆನು. ಬಳಿಕ ನನಗೆ ಭಯಂಕರವಾದ ರೋಗವು ಪ್ರಾಪ್ತವಾಯಿತು. ಅದು ಮೊದಲ್ಗೊಂಡು ನಾನೀ ಮಹೇಶ್ವರನ ಮಂದಿರದಲ್ಲಿ ಆಶ್ರಯವನ್ನು ಹೊಂದಿದೆನು.

ಕಮಲೆಯು ಸ್ವಲ್ಪ ಹೊತ್ತಾದ ಬಳಿಕ ಪುನಃ ಹೇಳತೊಡಗಿದಳು,— ನನಗಿಷ್ಟು ಮಾತ್ರ ನೆನಪಿದೆ—ರೋಗಪೀಡಿತೆಯಾಗಿ ಕೆಲವು ದಿನ ಜ್ಞಾನಶೂನ್ಯೆ

ಯಾಗಿದ್ದೆನು, ಮನದಲ್ಲಿ ಅತ್ಯಂತ ವೇದನೆಯನ್ನನುಭವಿಸುತಿದ್ದೆನು, ಆ ಯಾತನೆಯಿಂದ ಅಸ್ಥಿರೆಯಾಗುತಿದ್ದೆನು, ಆ ಆಲಸ್ಯದಲ್ಲಿ ಸ್ವಪ್ನವಾಗುವುದು, ಸ್ವಪ್ನದಲ್ಲಿ ಸ್ವಾಮಿಯ ದೇವಮೂರ್ತಿಯನ್ನು ನೋಡುತಿರುವೆನು. ಸೀಮಾತೀತವಾದ ನೀಲಾಕಾಶದಲ್ಲಿ ಚಂದ್ರಕರೋಜ್ವಲವಾದೊಂದು ಶುಭ್ರ ಮೇಘ ಖಂಡದ ಮೇಲೆ ಆ ದೇವಮೂರ್ತಿಯು ಕುಳಿತಂತಿರುವುದು.

ಕಮಲೆಯು ಮತ್ತೂ ಹೇಳಿದಳು,—ನಾನು ಆಲಸ್ಯದಲ್ಲಿದ್ದಾಗ ನಾನು ಬದುಕುವುದಿಲ್ಲವೆಂದು ಎಲ್ಲರೂ ಹೇಳುವರು. ತಂದೆ ಚಂದ್ರಶೇಖರನಾಗ ತೀರ್ಥ ಯಾತ್ರೆಯಂ ಮಾಡುತಿದ್ದವನು ಅಲ್ಲಿಗೆ ಬಂದನು, ಬಂದವನು ದಯೆಗೈದು ನನ್ನ ಶುಶ್ರೂಷೆಯಂ ಮಾಡಿದನು—ನಿರಾಶ್ರಯೆಯಾದ ಗಂಡನಿಲ್ಲದವಳಿಗೆ ಆಶ್ರಯ ವನ್ನು ಕೊಟ್ಟು, ತನ್ನ ದೋಣಿಯಲ್ಲಿ ಕುಳ್ಳಿರಿಸಿಕೊಂಡನು, ಆಗಲೂ ನನ್ನ ರೋಗವು ಪ್ರಬಲವಾಗಿದ್ದಿತು—ಗ್ರಾಮದವರೆಲ್ಲರೂ ನಾನು ದೋಣಿಯಲ್ಲಿಯೇ ಸಾಯುವೆನೆಂದು ಸ್ಥಿರಮಾಡಿಕೊಂಡಿದ್ದರು—ಅನೇಕ ದಿನಗಳು ನಾವು ಜಲ ಮಾರ್ಗವಾಗಿ ಬಂದೆವು—ಮೈಗೆ ಒಂಟಿಬಂದಾ ನದಿಯ ಸ್ವಾಸ್ಥ್ಯಜನಕ ವಾಯು ವಿನಿಂದಲೂ ತಂದೆಯ ಶುಶ್ರೂಷೆಯಿಂದಲೂ ನಾನು ಪುನಃ ಆರೋಗ್ಯವನ್ನು ಹೊಂದಿದೆನು. ಬಳಿಕ ಕೆಲವು ದಿನಗಳಾದಮೇಲೆ ದೋಣಿಯು ಈ ಮಂದಿರದ ಘಾಟಿಗೆ ಬಂದು ಮುಟ್ಟಿತು—ಅದು ಮೊದಲ್ಗೊಂಡು ನಾನು ತಂದೆಯ ಮನೆ ಯಲ್ಲಿದ್ದೇನೆ.

ಕೇಳುತಿದ್ದಹಾಗೆ ಸರಳೆಯ ಕಣ್ಣುಗಳಲ್ಲಿ ನೀರು ತುಂಬಿತು—ಅವಳು ಕಮ ಲೆಯ ಬಳಿ ಸರಿದುಬಂದು ಅವಳ ಕೈಯನ್ನು ಹಿಡಿದುಕೊಂಡು, " ಅಕ್ಕ! ಮುಂದೆ ನಾನೆನಗೆ ಸಲುವಾಗಿ ವ್ಯಸನಪಡುವುದಿಲ್ಲ, ನಿನ್ನ ದುಃಖಪರಂಪರೆಯ ವೃತ್ತಾಂತ ವನ್ನು ಕೇಳಿ ನಾನೆನ್ನ ದುಃಖವನ್ನು ಮರೆತೆನು " ಎಂದಳು.

ಈ ಪ್ರಕಾರ ಅವರಿಬ್ಬರೂ ಮಾತನಾಡುತಿದ್ದರು—ಈ ಮಧ್ಯೆ ಹಿಂದಲಿಂ ದೊಬ್ಬಳು ಒಂದು ಕೈಯಿಂದ ಸರಳೆಯ ಕಣ್ಣುಗಳನ್ನು ಭದ್ರವಾಗಿ ಮುಚ್ಚಿ ಹಿಡಿದುಕೊಂಡು, " ನಾನಾರು? ಹೇಳು, ನೋಡೋಣ " ಎಂದಳು.

ಸರಳೆಗೆ ಸ್ವರವು ಗೊತ್ತಾಯಿತು. ಆದರೆ ಹಠಾತ್ತಾಗಿ ಹೆಸರು ನೆನವಿಗೆ ಬರಲಿಲ್ಲ; ವನಗ್ರಾಮವಾಸಿನಿಯರ ಹೆಸರನ್ನು ಒಂದೊಂದಾಗಿ ಹೇಳತೊಡ ಗಿದಳು—

" ನಿಸ್ತಾರಿಣಿ "—ಕಣ್ಣುಮುಚ್ಚಿದ್ದ ಕೈಯನ್ನು ತೆಗೆಯಲಿಲ್ಲ,

" ಮನೋಮೋಹಿನಿ "—ಕೈಬಿಡಲಿಲ್ಲ.

" ಯೋಗೇಂದ್ರಮೋಹಿನಿ "—ಆಗಲೂ ಸರಿಯಾದ ಹೆಸರಲ್ಲ.

" ತಾರೆ "—

" ನಿನ್ನ ತಲೆ! ಅಷ್ಟರೊಳಗೆ ನನ್ನನ್ನು ಮರೆತೆಯಾ? ಇನ್ನೂ ಮದುವೆ

ಯಾಗಿಲ್ಲ, ಧಾರೆಯನೀರು ಇನ್ನೂ ನಿಲ್ಲಿಸೋಂಕಿಲ್ಲ, ಅದಾದರೆ ಮತ್ತೇನಾಗುವುದೋ!" ಎಂದು ಮುಂತಾಗಿ ಹೇಳುತ ಸರಳೆಯು ಪ್ರಿಯಸಖಿಯಾದ ಅಮಲೆಯು ಅವಳೆದುರಿಗೆ ಬಂದು ನಿಂತಳು.

ಸರಳೆಯು ಆಶ್ಚರ್ಯಕ್ಕೆ ಪಾರವಿಲ್ಲ. "ಅಮಲೆ! ನೀನಿಲ್ಲಿಗೆ ಬಂದುದಾವಾಗ?" ಎಂದು ಹೇಳುತ್ತ ಬಾಷ್ಪವಾರಿ ಪೂರ್ಣಲೋಚನೆಯಾಗಿ ಸರಳೆಯು ಅಮಲೆಯನ್ನು ಆಲಿಂಗನೆ ಮಾಡಿಕೊಂಡು ಅವಳ ವಕ್ಷದಲ್ಲಿ ತನ್ನ ತಲೆಯನ್ನಿರಿಸಿದಳು. ಅಮಲೆಯು ಗೆಳತಿಯನ್ನು ಕಂಡು ಬಹಳ ಕಾಲವಾಗಿದ್ದುದರಿಂದ ತನ್ನಾ ಪ್ರೇಮಪುತ್ತಲಿಗೆ ಹೃದಯದಲ್ಲಿ ಸ್ಥಳವನ್ನು ಕೊಟ್ಟಳು—ಅವರೀರ್ವರ ಕಣ್ಣುಗಳಿಂದಲೂ ಕಂಬನಿಯೊರತೆಗಳು ಹೊರಟು ಹರಿದುವು.

ಅಮಲೆಯು, ಸ್ವಲ್ಪಹೊತ್ತು ತದ್ದಂಮಾಗಿದ್ದು ಬಳಿಕ, "ಈ ಎರಡು ಪ್ರಹರದ ರಾತ್ರಿಯಲ್ಲಿ ಈ ಕತ್ತಲಲ್ಲಿ ಇಲ್ಲಿ ಕುಳಿತಿರುವಿಯಾ? ನಾನು ನಿನ್ನನ್ನು ಎಷ್ಟೊಂದು ಹುಡುಕಿದೆನೋ!" ಎಂದಳು.

ಸರಳೆ—ಕಮಲೆಯ ಸಂಗಡ ಇಲ್ಲಿಗೆ ಬಂದೆನು—ಮಾತನಾಡುತಿದ್ದ ಹಾಗೆ ಹೊತ್ತಾಯಿತು—ನೀನಿಂದು ಬಂದುದೋ?

ಅಮಲೆ—ನಾನಿಂದು ಬಂದುದು, ನಿನ್ನನ್ನು ನೋಡಬೇಕೆಂದು ಅನೇಕ ತಡವೆ ಪ್ರಯತ್ನಪಟ್ಟೆನು. "ವೃದ್ಧಸ್ವಾಮಿಯು" ನನ್ನನು ಬಿಟ್ಟಿರುವನೆ? ಇಂದು ಏನೇನನ್ನೋ ಹೇಳಿ ಬಂದೆನು.

ರಾತ್ರಿ ಎರಡು ಪ್ರಹರಗಳ ಸಮಯದಲ್ಲಿ ಮೂವರೂ ಆಶ್ರಮಕ್ಕೆ ಹಿಂದಿರುಗಿ ಬಂದರು.

---

## ಹದಿನೆಂಟನೆಯ ಪರಿಚ್ಛೇದ

### ಇಚ್ಛಾಪುರದ ಜಮೀನುದಾರ

But I have woes of other kind,
Troubles and sorrows more severe,
Give me to ease my tortured mind,
Lend to my woes a patient ear.
*Crabbe.*

ಚಂದ್ರಶೇಖರನೂ ಶಿಖಂಡಿವಾಹನನೂ ಹೊರತು ಆ ಗ್ರಾಮದಲ್ಲಿ ಮತ್ತಾರೂ ಮಹಾಶ್ವೇತೆಯ ನಿಜವಾದ ಪರಿಚಯವನ್ನರಿಯರು. ಅವರೂ ಅವಳ ಪರಿಚಯವನ್ನು ಮತ್ತಾರಿಗೂ ಹೇಳುವುದಿಲ್ಲವೆಂದೊಪ್ಪಿದ್ದರು.

ಮಂದಿರದಲ್ಲಿ ಶಾಂತರಾಗಿಯೂ ದ್ವೇಷವಿದ್ವೇಷ ಶೂನ್ಯರಾಗಿಯೂ ಇದ್ದಾ ನಿವಾಸಿಗಳೊಂದಿಗೆ ಏಕತ್ರ ವಾಸಮಾಡುತಿದ್ದು ಮಹಾಶ್ವೇತೆಯ ಅಂತಃಕರಣಗಳೂ ತಕ್ಕಮಟ್ಟಿಗೆ ಶಾಂತವಾಗುತ ಬಂದಿದ್ದುವು. ಆದರೆ ಅವಳಾ ವಯಸ್ಸಿನಲ್ಲಿ

ಸ್ವಭಾವದ ಪರಿವರ್ತನೆಯೆಂದಿಗೂ ಆಗತಕ್ಕುದಲ್ಲ— ಮಹಾಶ್ವೇತೆಯ ವಿಜಾತೀಯವಾದ ಸ್ವಾಭಿಮಾನವೂ ಕಡುಹಗೆಯುಳ್ಳ ಜಿಘಾಂಸೆಯೂ ಮೊದಲಿನಂತೆ ಮನದಲ್ಲಿ ನೆಲೆಗೊಂಡಿದ್ದುವು. ಅವಳು ಸ್ಥಿರಪ್ರತಿಜ್ಞೆಯುಳ್ಳವಳಾಗಿ ಮೊದಲಿನಂತೆ ಪ್ರತಿ ರಾತ್ರಿ ವೈರನಿರ್ಯಾತನೆಗೆ ಸಲುವಾಗಿ ಶಿವಪೂಜೆಯನ್ನು ಮಾಡುತ್ತಿರುವಳು.

ಚಂದ್ರಶೇಖರನ ಮನೆಗೆಂದು ದೊಡ್ಡಮನುಷ್ಯನೊಬ್ಬನು ಅತಿಥಿಯಾಗಿ ಬಂದಿದ್ದನು. ಅವನಿಗೆ ಔತನವಾದುದರಿಂದ ಅನೇಕರು ಊಟಕ್ಕೆ ಬಂದಿದ್ದರು. ಊಟವಾದ ಬಳಿಕ ಎಲ್ಲರೂ ಒಟ್ಟಿಗೆ ಕುಳಿತಿದ್ದರು. ಮನೆಯಲ್ಲಿ ಮಧ್ಯಸ್ಥಳದಲ್ಲಿ ಚಂದ್ರಶೇಖರನು ಕುಳಿತಿದ್ದನು. ಅವನಿಗೆ ಐವತ್ತು ವರ್ಷಕ್ಕೆ ಮೇಲಾಗಬಹುದು. ಆದರೆ ಪ್ರತಿನಿತ್ಯವೂ ಶಾಂತಿದಾಯಕವಾದ ದೇವಕಾರ್ಯವನ್ನು ನಿರ್ವಹಿಸೋಣದರಿಂದಲೋ ಅಥವಾ ಮಾನಸಿಕವಾದ ಶಾಂತಗುಣದಿಂದಲೋ ಅವನಾ ಪ್ರಶಸ್ತವಾದ ಲಲಾಟದಲ್ಲಿ ವಾರ್ಧಕ್ಯದ ಕುರುಹು ಒಂದಾದರೂ ಕಣ್ಗೊಳಿಸುತಿರಲಿಲ್ಲ. ಕಣ್ಣುಗಳು ಜ್ಯೋತಿಃಪೂರ್ಣವಾಗಿದ್ದುವು. ಸಮಸ್ತ ಶರೀರವು ತೇಜಃಪೂರ್ಣವಾಗಿದ್ದಿತು. ಆ ಶರೀರದ ಮೇಲೆ ಶುಭ್ರ ಯಜ್ಞೋಪವೀತವು ವಿಲಂಬಿತವಾಗಿ ವಿರಾಜಿಸುತಿದ್ದಿತು. ಅವನಿಗೆ ಬಲದ ಪಾರ್ಶ್ವದಲ್ಲಿ ಅಂದು ಅತಿಥಿಯಾಗಿ ಬಂದಿದ್ದ ದೊಡ್ಡ ಮನುಷ್ಯನು ಕುಳಿತಿದ್ದನು; ಅವನಿಗೂ ಚಂದ್ರಶೇಖರನ ವಯಸ್ಸು, ಆದರೆ ಸಂಸಾರದ ಚಿಂತೆಯಿಂದಲೂ ಪಾರ್ಥಿವ ದುಃಖದಿಂದಲೂ ಅವನ ಶರೀರವು ಶೀರ್ಣವಾಗಿದ್ದಿತು, ಮಸ್ತಕದಲ್ಲಿ ಹೆಚ್ಚು ಕೂದಲು ಬಿಳ್ಪಾಗಿದ್ದಿತು, ಹುಬ್ಬುಗಳಲ್ಲಿಯೂ ಒಂದೆರಡು ಕೂದಲುಗಳು ಬಿಳ್ಪಡರಿದ್ದುವು, ಕಣ್ಣುಗಳಲ್ಲಿ ಕಾಂತಿಯಿಲ್ಲ, ಅವನಾ ವಿಶಾಲವಾಗಿದ್ದ ಶರೀರದಲ್ಲಿ ಶಕ್ತಿಯಿಲ್ಲ— ಅವರೀರ್ವರನ್ನೂ ನೋಡಿದರೆ ಸಂಸಾರದ ಹಾಗೂ ಸಂಸಾರದ ಚಿಂತೆಯ ಅಕಿಂಚಿತ್ಕಾರತೆಯೂ ಪುಣ್ಯಾಬಲದ ಮಹಿಮೆಯೂ ಸ್ಪಷ್ಟವಾಗಿ ಪ್ರತೀಯಮಾನವಾಗುವುವು. ಆ ದೊಡ್ಡಮನುಷ್ಯನಾದ ಅತಿಥಿಯು ಪಾಠಕರಿಗೆ ಶುದ್ಧವಾಗಿ ಅಪರಿಚಿತನಲ್ಲ; ಅವನು ಇಚ್ಛಾಪುರದ ಜಮೀನುದಾರ ನಗೇಂದ್ರನಾಥನಾಗಿದ್ದನು.

ಅವರಿಬ್ಬರ ಪಾರ್ಶ್ವಗಳಲ್ಲಿಯೂ ಅನೇಕ ಮಂದಿರದ ನಿವಾಸಿಗಳು ಕುಳಿತಿದ್ದರು. ಚಂದ್ರಶೇಖರನಿಗೆ ಹಿಂದೆ ಸ್ವಲ್ಪ ದೂರ ಈಷದಂಧಕಾರದಲ್ಲಿ ಮಹಾಶ್ವೇತೆಯು ಮುಖದಮೇಲೆ ಅವಗುಂಠನವನ್ನು ಎಳೆದುಕೊಂಡು ಕುಳಿತಿದ್ದಳು, ಅವಳಿಗೆ ಸ್ವಲ್ಪ ದೂರದಲ್ಲಿ ಶಿಖಂಡಿವಾಹನನು ಕುಳಿತಿದ್ದವನು, ಮೆಲ್ಲ ಮೆಲ್ಲನೆ ಅವಳೊಡನೆ ಮಾತನಾಡುತ್ತ ಒಮ್ಮೊಮ್ಮೆ ನಗೇಂದ್ರನಾಥನಕಡೆ ನೋಡುವನು. ಚಂದ್ರಶೇಖರನಿಗೆ ಎಡದ ಭಾಗಕ್ಕೆ ಸಮೀಪದಲ್ಲಿ ಕಮಲೆಯು ವಿನೀತಭಾವದಿಂದ ಕುಳಿತು ಚಿಂತಾಯುಕ್ತೆಯಾಗಿದ್ದಳು. ಕುಟೀರದಲ್ಲೊತ್ತಟ್ಟು ಅಮಲೆಯೂ ಸರಳೆಯೂ ಕುಳಿತಿದ್ದರು. ಇಂದು ಅವರ ಆನಂದಕ್ಕೆ ಪಾರವಿಲ್ಲ. ಅವರ ಮಾತು

ಪೂರೈಸುವಂತಿರಲಿಲ್ಲ. ಅವರಾ ಕೆಂದರಳಿನಂತಿದ್ದ ಚಿಗುತುರ್ಟಿಗಳಲ್ಲಿ ಮುದ್ದು ನಗುವು ಒಣಗಲು ಅವಕಾಶವಿರಲಿಲ್ಲ—ಕುಟೀರದಲ್ಲಿ ಬೇರೊತ್ತಿಟ್ಟು ವಿಸ್ತಾರಿಣಿ, ಮನೋಮೋಹಿನಿ, ಯೋಗೇಂದ್ರಮೋಹಿನಿ, ತಾರಾಸುಂದರಿ ಮುಂತಾದ ಬ್ರಾಹ್ಮಣ ಕನ್ನೆಯರು ಕುಳಿತು ರಹಸ್ಯಾಮೋದಗಳನ್ನು ಮಾಡುತ ಒಂದೊಂದು ತಡವೆ ನಿಬ್ಬೆರಗಾಗಿ ಚಂದ್ರಶೇಖರ ನಗೇಂದ್ರ ಇವರ ಮಾತುಗಳನ್ನು ಕೇಳುವರು.

ನಗೇಂದ್ರನಾಥನು ನಿಟ್ಟುಸಿರನ್ನು ಬಿಟ್ಟು ಚಂದ್ರಶೇಖರನನ್ನು ಕುರಿತು, "ಮಹಾತ್ಮರೆ! ನಾನು ತಮ್ಮ ವಿಸ್ತಾರವಾದ ಮಹೇಶ್ವರ ಮಂದಿರವನ್ನು ನೋಡಿ ವಿಶೇಷವಾಗಿ ಪ್ರೀತನಾದೆನು—ಮೋಹಮಯವಾದ ಸಂಸಾರವನ್ನು ತೊರೆದು ತಮ್ಮಂತೆ ಈ ಧರ್ಮಮಾರ್ಗವನ್ನು ಅವಲಂಬಿಸಿದ್ದರೆ ಈ ವಾರ್ಧಕ್ಯ ದಲ್ಲಿ ನಾನೀ ಅಕೂಲವಾದ ದುಃಖಸಾಗರದಲ್ಲಿ ಬೀಳುತಿರಲಿಲ್ಲ"ವೆಂದನು. ಅದಕ್ಕೆ ಉತ್ತರವಾಗಿ ಚಂದ್ರಶೇಖರನು, "ಮಹಾಶಯ! ಕೇವಲ ಮಂದಿರದಲ್ಲಿ ದ್ದರೆ, ಪುಣ್ಯಕಾರ್ಯವಾಗುವುದೆ? ಸಂಸಾರದಲ್ಲಿದ್ದು ಪುಣ್ಯಕಾರ್ಯವನ್ನು ಮಾಡಲಾಗದೆ? ಶಾಸ್ತ್ರದಲ್ಲಿ ಹೇಳುವುದೇನೆಂದರೆ, ಸತ್ಯದಿಂದಲೂ ಪರೋಪಕಾರ ದಿಂದಲೂ ಉಂಟಾಗುವ ಪುಣ್ಯವು ಯಾಗಯಜ್ಞಗಳಿಂದುಂಟಾಗವು. ಆವ ಜಮಾನು ದಾರನು ಪರೋಪಕಾರಕ್ಕೆ ಸಲುವಾಗಿಯೂ ಪ್ರಜಾ ವಾತ್ಸಲ್ಯಕ್ಕೆ ಸಲುವಾ ಗಿಯೂ ಸರ್ವತ್ರ ಸಮಾದೃತನಾಗಿರುವನೋ ಅಂತಹವನು ಮಂದಿರದ ವಾಸವ ನ್ನೆಳಸುವುದು ಚಿತವೆ?" ಎಂದನು.

ನಗೇಂದ್ರ—ಮಹಾಶಯ! ತಾವೆನಗೆ ಅಶೇಷ ಸಮ್ಮಾನ ಮಾಡೋಣಾ ಗುತ್ತದೆ, ನಾನು ಆ ಸಮ್ಮಾನ ಮರ್ಯಾದೆಗಳಿಗೆ ಯೋಗ್ಯನಲ್ಲ; ಹಾಗೆ ಯೋಗ್ಯ ನಾಗಿದ್ದರೆ ನಾನಿಂದು ನನ್ನ ಪಾಪ ಪ್ರಶಮನಾರ್ಥವಾಗಿ ಮಹಾತ್ಮರಾದ ಚಂದ್ರ ಶೇಖರರ ಬಳಿ ಸಾರಿಬರುತಿರಲಿಲ್ಲ.

ಚಂದ್ರ—ಈ ಪ್ರಪಂಚದಲ್ಲಿ ಸಹಸ್ರ ಗುಣಗಳಿದ್ದರೂ ಮಹಾ ಪಾಪಿಯಲ್ಲ ದವನಾರು ಉಂಟು? ತಾನು ಪಾಪವನ್ನು ಮಾಡಿದವನಲ್ಲವೆಂದು ಹೇಳುವವ ನಾರಿರುವನು? ತಾನು ನಿಷ್ಕಳಂಕನೆಂತಲೂ ನಿರಪರಾಧಿಯೆಂತಲೂ ಹೇಳಬಲ್ಲವ ನಾರಿರುವನು?

ಅವರೀರ್ವರು ಬಹಳ ಹೊತ್ತಿನತನಕ ಹೀಗೆ ಮಾತನಾಡುತಿದ್ದರು. ಬಳಿಕ ನಗೇಂದ್ರನಾಥನು ತಾನು ಬಂದ ಕಾರಣವನ್ನು ಹೇಳತೊಡಗಿದನು.

———

# ಹತ್ತೊಂಭತ್ತನೆಯ ಪರಿಚ್ಛೇದ

## ಜಮೀನುದಾರನ ಪೂರ್ವ ವೃತ್ತಾಂತ

And let me if I may not find
A friend to help, find one to hear. *Crabbe*

ನಗೇಂದ್ರನಾಥನು ಹೇಳತೊಡಗಿದನು :—ಮಹಾತ್ಮರೆ! ನನ್ನಂತೆ ದುಃಖಿಗಳು ಮತ್ತಾರೂ ಇಲ್ಲ. ನನ್ನ ದುಃಖದ ವೃತ್ತಾಂತವನ್ನು ಕೇಳೋಣಾಗಲಿ.

ನನ್ನ ಸಹಧರ್ಮಿಣಿಯು ನನಗೆ ಹೇಳುತಿದ್ದಳೇನಂದರೆ, ತಾನು ಹುಟ್ಟಿದ ದಿನ ಆಕಾಶದಲ್ಲಿ ಅಪೂರ್ವ ತಿಥಿ ನಕ್ಷತ್ರಗಳು ಸೇರಿದ್ದುವೆಂತಲೂ ಬ್ರಾಹ್ಮಣ ಪಂಡಿತರಾದ ದೈವಜ್ಞರು ಅದನ್ನು ಗುಣಿಸಿ, ಕನ್ಯಾಶಿಶುವು ಘೋರ ಉನ್ಮಾದಿನಿಯಾಗುವುದೆಂದು ಹೇಳಿದ್ದರೆಂತಲೂ ಹೇಳಿದ್ದಳು. ಅದು ತಪ್ಪು; ನನ್ನ ಸಹಧರ್ಮಿಣಿಯು ಉನ್ಮಾದಿನಿಯಾಗಲಿಲ್ಲ, ಆದರೆ ಅವಳ ಕೆಲವು ಮನೋವೃತ್ತಿಗಳು ಅತಿಶಯ ವೇಗವಾಗಿದ್ದುವು. ಅದಕ್ಕೆ ಸಲುವಾಗಿ ನಾನವಳನ್ನು ಹುಚ್ಚಿಯೆಂದು ಹೇಳುತ್ತಿರುವೆನು—ಸ್ನೇಹಮಯಿಯಾದಾ ಹುಚ್ಚಿಯು ಕಾಲಧರ್ಮವಾಗಿ ಈಗ್ಗೆ ಹನ್ನೆರಡು ವರ್ಷಗಳಾದುವು.

ಆ ಹುಚ್ಚಿಯ ಹೊಟ್ಟೆಯಲ್ಲೆನಗೆ ಇಬ್ಬರು ಗಂಡುಮಕ್ಕಳಾದರು. ಅವರ ಗರ್ಭಧಾರಿಣಿಯಂತೆ ಅವರೂ ಹುಚ್ಚರು, ಹಿರಿಯನು ಚಿಂತಿಸುವುದರಲ್ಲಿ ಹುಚ್ಚಿನವನು, ಕಿರಿಯ ಕೆಲಸ ಕಾರ್ಯಗಳಲ್ಲಿ ಹುಚ್ಚಿನವನು. ಅವರೀರ್ವರೂ ನನ್ನೆರಡು ಕಣ್ಣುಗಳಿಗೆ ತಾರೆಗಳಂತಿದ್ದರು—ಅವರೀಗ ಎಲ್ಲಿ—ಹಾ! ದಾರುಣವಿಧಿಯೆ! ವಾರ್ಧಕ್ಯದಲ್ಲೆನ್ನ ಹಣೆಯಲ್ಲಿದನ್ನು ಬರೆದೆಯಾ? ನನ್ನಾ ಎರಡು ಕಣ್ಣುಗಳೂ ಹೋದುವು; ನಾನು ಕುರುಡನಾಗಿದ್ದೇನೆ. ನನ್ನಾ ಎರಡು ರತ್ನಗಳನ್ನೂ ಕಳೆದುಕೊಂಡು ನಾನೀಗ ಕಂಗಾಲಿಯಾಗಿದ್ದೇನೆ.

ಆ ದುಃಖ ವಚನಗಳನ್ನು ಕೇಳಿ ಅಲ್ಲಿದ್ದವರೆಲ್ಲರ ಮನಸ್ಸೂ ದ್ರವೀಭೂತವಾಯಿತು—ಸ್ವಲ್ಪ ಹೊತ್ತು ಸುಮ್ಮನಿದ್ದು ನಗೇಂದ್ರನು ಹೇಳತೊಡಗಿದನು,—ನನ್ನ ಹಿರಿಯಮಗನನ್ನು ಚಿಕ್ಕವನಾಗಿದ್ದಾಗಲೇ ಹುಲಿಯು ಕೊಂಡೊಯ್ಯಿತು; ಆ ಪುತ್ರಶೋಕದಿಂದ ಅವನಾ ತಾಯಿಯು ಕಾಲಕ್ಕೆ ತುತ್ತಾದಳು. ಕಿರಿಯ ಸುರೇಂದ್ರನಾಥನ ಮುಖವನ್ನು ನೋಡುತ ಆ ಶೋಕವನ್ನು ಸಹಿಸಿಕೊಳ್ಳುತಿದ್ದೆನು. ಆಹಾ! ಅಂತಹ ವೀರಪುತ್ರನನ್ನು ಆರೂ ಆವಾಗಲೂ ಪಡೆಯಲಿಲ್ಲ; ದಯಾ ಧರ್ಮಗಳಲ್ಲಿಯೂ, ವಿದ್ಯಾಲೋಚನೆಯಲ್ಲಿಯೂ, ಬಲವಿಕ್ರಮಗಳಲ್ಲಿಯೂ ಸುರೇಂದ್ರನಂತಾರಿದ್ದರು! ಹುಡುಗನು ನವೀನ ವಯಸ್ಸಿನಲ್ಲಿಯೇ ಸಿಂಹಬಲವನ್ನು ತಾಳಿದ್ದನು, ಮಲ್ಲಯುದ್ಧದಲ್ಲಿ ಜಟ್ಟಿಗಳನ್ನು ಸೋಲಿಸುವನು, ಬಾಹುಬಲದಿಂದ ಎಲ್ಲರನ್ನೂ ಅಚ್ಚರಿಗೊಳಿಸುವನು, ಕುದುರೆ ಹತ್ತುವುದರಲ್ಲಿ ಅವನಿಗೆ ಸಮಕಕ್ಷರು ದೇಶದಲ್ಲಾರನ್ನೂ ನೋಡಿಲ್ಲ. ಅವನನ್ನು ನೋಡಿದವರು ದಯೆ

ಯಲ್ಲಿ ದಾತಾ ಕರ್ಣನೆಂತಲೂ ಬಲವಿಕ್ರಮಗಳಲ್ಲಿ ಭೀಮಾವತಾರನೆಂತಲೂ ಹೇಳು ವರು, ಹುಡುಗನು ಚಿಕ್ಕಂದಿನಲ್ಲಿಯೇ ರಾಜಾ ಸಮರಸಿಂಹನ ಬಳಿ ಕುಳಿತು ಯುದ್ಧದ ಸಮಾಚಾರಗಳನ್ನು ಕುರಿತು ಕೇಳಲು ಉತ್ಸುಕನಾಗುವನು, ಕೇಳು ತಿದ್ದಾಗ ಹುಡುಗನ ಮುಖವು ಗಂಭೀರವಾಗುವುದು, ಕಣ್ಣುಗಳು ಪ್ರಜ್ವಲಿತ ವಾಗುವುವು—ಹುಡುಗನು ಸಮರಸಿಂಹನ ಖಡ್ಗವನ್ನು ತೆಗೆದುಕೊಳ್ಳುವನು, ತೆಗೆದುಕೊಂಡು ಅದನ್ನೆದೆಗೆ ಆನಿಸಿ ಹಿಡಿದು ಯುದ್ಧಕ್ಕೆ ಹೋಗುತ್ತೇನೆಂದು ಪ್ರತಿಜ್ಞೆಯಂ ಮಾಡುವನು; ರಾಜಾ ಸಮರಸಿಂಹನು ಅಶ್ರುಪೂರ್ಣ ಲೋಚನ ನಾಗಿ ಹುಡುಗನನ್ನು ಮುದ್ದಿಟ್ಟುಕೊಳ್ಳುವನು, ಸಮರಸಿಂಹನು ಹುಡುಗನನ್ನು ಮುದ್ದಿಟ್ಟುಕೊಳ್ಳುವನು, ಸಮರಸಿಂಹನು ಹುಡುಗನನ್ನು ಆಗಿಂದಾಗ ಸಂಗಡ ಯುದ್ಧಕ್ಷೇತ್ರಕ್ಕೆ ಕರೆದುಕೊಂಡು ಹೋಗುವನು—ಸಮರಸಿಂಹನು, "ಪರಾನರು ಬಂಗಾಳಿಗಳನ್ನು ಭೀರುಸ್ವಭಾವದವರೆಂದು ಹೇಳಿ ಎಕ್ಕರಿಸಿ ಹಾಸ್ಯ ಮಾಡುವರು, ಆದರೂ ಆ ಬಂಗಾಳಿಗಳಲ್ಲಿ ವೀರಪುರುಷರು ಹುಟ್ಟಿರುವರು" ಎಂದು ಹೇಳು ವನು; ಮತ್ತು ಹುಡುಗನನ್ನು ಕುರಿತು "ಸುರೇಂದ್ರನಾಥ! ನಾನು ಸತ್ತರೆ, ನೀನೆನ್ನ ಕತ್ತಿಯನ್ನು ತೆಗೆದುಕೊಳ್ಳುವೆ. ನಿನ್ನ ಕೈಯಲ್ಲಾ ಖಡ್ಗವು ಅವಮಾನವಂ ಹೊಂದದು" ಎಂದು ಹೇಳುವನು. ಇಂದಾ ಸುರೇಂದ್ರನೆಲ್ಲಿ! ವಿಧಾತನೆ! ಇಂದು ಮತ್ತಾರಿರುವರು? ನಾನಂತಹವರ ಮುಖವನ್ನು ನೋಡಿ ಸುರೇಂದ್ರನ ವಿಚ್ಛೇದವನ್ನು ಸಹಿಸಲಾಪೆನು?

ವೃದ್ಧನು ಒಂದೆರಡು ಕಂಬನಿಗಳನ್ನು ಬಿಟ್ಟನು. ಚಂದ್ರಶೇಖರನು ಶೋಕಾ ರ್ತನಾಗಿ, "ಸುರೇಂದ್ರನಾಥನಿಗೆ ಅಮಂಗಳವೇನಾದರೂ ಉಂಟಾದ ಸಮಾಚಾರ ವನ್ನು ಕೇಳಿದಿರಾ?" ಎಂದು ಪ್ರಶ್ನೆಯಂ ಮಾಡಿದನು.

ನಗೇಂದ್ರ—ಅಂತಹ ಸಮಾಚಾರವು ಬಂದಿದ್ದರೆ, ನಾನು ಇದುವರೆಗೂ ಬದುಕಿರುತಿರಲಿಲ್ಲ.

ಚಂದ್ರ—ಹಾಗಾದರೆ ಅಷ್ಟೊಂದು ಚಿಂತೆಯೇಕೆ? ಸುರೇಂದ್ರನು ಕೆಲವು ಕಾಲ ವಿದೇಶಕ್ಕೆ ಹೋಗಿರುವನು, ದೇವರ ದಯೆಯಿಂದ ಸುರಕ್ಷಿತನಾಗಿ ಹಿಂದಿ ರುಗಿ ಬರುವನು.

ನಗೇಂದ್ರ—ತಾವು ಹಾಗೆ ಆಶೀರ್ವದಿಸೋಣಾಗಲಿ—ಆದರೆ ನಾನು ನಿನ್ನಿನ ರಾತ್ರಿ ಒಂದು ಸ್ವಪ್ನವನ್ನು ಕಂಡೆನು, ಅದಕ್ಕೆ ಸಲುವಾಗಿ ವ್ಯಾಕುಲನಾಗಿದ್ದೇನೆ, ಅದಕ್ಕೆ ಸಲುವಾಗಿ ತಮ್ಮ ಬಳಿ ಬಂದೆನು, ಕನಸ್ಸಿನಲ್ಲಿ ನನ್ನ ಮಗನನ್ನು ಅಗಾಧ ವಾದೊಂದು ತರಂಗರಾಶಿಯಲ್ಲಿ ಬಿದ್ದಿದ್ದಂತೆಯೂ ಅದರಲ್ಲವನು ಮುಳುಗಿ ಹೋಗಿದ್ದಂತೆಯೂ ಕಂಡೆನು. ಪ್ರಭುವೇ! ಆ ಸ್ವಪ್ನಕ್ಕೆ ಅರ್ಥವನ್ನು ಹೇಳೋ ಣಾಗಲಿ. ಅಮಂಗಳವೇನಾದರೂ ಉಂಟಾಗಿದ್ದರೆ ನಾನಿಲ್ಲಿಯೇ ಪ್ರಾಣವನ್ನು ಬಿಡುವೆನು.

ಚಂದ್ರ—ಶಾಂತರಾಗಿರಿ, ಭಗವಂತನು ತಮ್ಮ ವೀರಪುತ್ರನನ್ನು ರಕ್ಷಿಸುವನು; ಪುಣ್ಯಾತ್ಮರಾದ ಪ್ರಜಾವತ್ಸಲರಾದ ಜಮೀನುದಾರರನ್ನು ವೃದ್ಧ ವಯಸ್ಸಿನಲ್ಲಿ ಪುತ್ರಹೀನರನ್ನಾಗಿ ಮಾಡನು.

ನಗೇಂದ್ರನಾಥನು ಸಜಲ ನಯನನಾಗಿ,—"ಪ್ರಭುವೆ! ನನ್ನನ್ನು ಪುಣ್ಯಾತ್ಮನೆಂದು ಹೇಳಲಾಗದು, ನಾನು ಬಹು ಪಾಪಗಳಿಂದ ಕಳಂಕಿತನಾದವನು. ತಮಗೆ ಇಷ್ಟವಾದರೆ, ನನ್ನಲ್ಲಿ ತಮ್ಮ ಅನುಗ್ರಹವಿದ್ದರೆ, ನನ್ನ ಪಾಪದ ವೃತ್ತಾಂತವನ್ನು ಕೇಳಿರೋಣಾಗಲಿ. ಬಳಿಕ ಅದಕ್ಕೆ ಉಪಾಯವಿಧಾನವಂ ಮಾಡೋಣಾಗಲಿ.

ಸುರೇಂದ್ರನಾಥನಿಗೆ ಹನ್ನೆರಡು ವರ್ಷವಾಗಿದ್ದಾಗ ನಾನವನನ್ನು ಸಂಗಡ ಕರೆದುಕೊಂಡು ಸಮರಸಿಂಹನನ್ನು ನೋಡುವುದಕ್ಕೆ ಹೋಗಿದ್ದೆನು—ರಾಜಾ ಸಮರಸಿಂಹನು ವಂಗದೇಶದ ಕಾಯಸ್ಥ ಜಮೀನುದಾರರಿಗೆ ಶಿರೋರತ್ನವಾಗಿದ್ದನೆಂದು ತಾವು ತಿಳಿದಿರೋಣಾಗಿದೆ; ನಾನು ಸಮರಸಿಂಹನೊಂದಿಗೆ ಮಾತನಾಡುತಿದ್ದೆನು; ನಮ್ಮ ಪಾರ್ಶ್ವದಲ್ಲಿ ಸುರೇಂದ್ರನಾಥನೂ ರಾಜಾ ಸಮರಸಿಂಹನಿಗೆ ಏಕಮಾತ್ರ ಸಂತಾನವಾಗಿದ್ದ ಅವನ ಮಗಳೂ ಆಡುತಿದ್ದರು. ಆಡುತಿದ್ದಾಗ ಹುಡುಗಿಯು ಅಲ್ಲಿದ್ದೊಂದು ಹೂವಿನ ಮಾಲೆಯನ್ನು ತಂದು ಸುರೇಂದ್ರನ ಕೊರಳಿಗೆ ಹಾಕಿದಳು. ರಾಜಾ ಸಮರಸಿಂಹನು ಮಗಳನ್ನು ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತಿದ್ದವನು, ಮಗಳು ಮಾಡುತಿದ್ದಾ ಕೆಲಸವನ್ನು ನೋಡಿ ಆನಂದದಿಂದವನ ಕಣ್ಣುಗಳಿಂದ ಪುಳಕ ಜಲವು ಸುರಿಯಿತು. ಅವನು ನನ್ನನ್ನು ಕುರಿತು, "ನಗೇಂದ್ರನಾಥ! ಅನೇಕ ರಾಜಪುತ್ರರಿಗೆ ನನ್ನಾ ಮಗಳನ್ನು ಕೊಡಲು ಬಂದು ಕೇಳಿದರು; ಆದರೆ ಅವಳು ಆರನ್ನು ವರಿಸುವಳೋ ಅಂತಹವನಿಗೆ ಅವಳನ್ನು ಕೊಟ್ಟು ಮದುವೆಮಾಡುವೆನು" ಎಂದು ಹೇಳಿದನು. ಅದನ್ನು ಕೇಳಿ ಆಗೆನ್ನ ಆನಂದಕ್ಕೆ ಪಾರವಿರಲಿಲ್ಲ—ವಂಗ ಚೂಡಾಮಣಿ ರಾಜಾ ಸಮರಸಿಂಹನು ತನ್ನೇಕಮಾತ್ರ ಕನ್ನೆಯನ್ನು ಸಾಮಾನ್ಯ ಜಮೀನುದಾರನಾದೆನ್ನ ಮಗನಿಗೆ ಕೊಡುವನೆಂದು ಮನವು ಹಿಗ್ಗಿದವನಾದೆನು. ನಾನಂದೇ ಅದಕೊಪ್ಪಿಕೊಂಡೆನು—ನಾನೆನ್ನಾ ಒಪ್ಪಿತಕ್ಕೆ ತಪ್ಪಿದೆನು.

ಮಹಾಶ್ವೇತೆಯು ತನ್ನ ಅವಕುಂಠನದೊಳಗಿನಿಂದ ತೀವ್ರಕಟಾಕ್ಷವನ್ನು ಬೀರುತಿದ್ದಳು, ಅವಳ ಮೈ ಕಂಟಕಿತವಾಯಿತು. ಅವಳು ನಗೇಂದ್ರನಾಥನ ಬಾಯಿಂದಾ ಮಾತನ್ನು ಕೇಳಲು ಅಲ್ಲಿ ಕುಳಿತಿದ್ದಳು.

ನಗೇಂದ್ರನಾಥನು ಪುನಃ ಹೇಳತೊಡಗಿದನು—ನಾನೆನ್ನಾ ಒಪ್ಪಿತಕ್ಕೆ ತಪ್ಪಿದೆನು—ಸಮರಸಿಂಹನ ಮರಣಾನಂತರ, ನಿರಾಶ್ರಯೆಯಾದವನ ಮಡದಿಯ ಮಗಳನ್ನು ನನ್ನ ಮಗನಿಗೆ ತಂದುಕೊಳ್ಳಲು ಸಮ್ಮತನಾಗಲಿಲ್ಲ; ಬೇರೆ ಸಂಬಂಧವನ್ನು ಗೊತ್ತುಮಾಡಿಕೊಂಡೆನು; ವಂಗದೇಶದಲ್ಲಿ ಭಾಗ್ಯವಂತರಾದ ಜಮೀನು

ದಾರರಿಗೆ ಕಡಿಮೆಯಿಲ್ಲ; ಇಚ್ಛಾಪುರದ ಜಮಿಾನುದಾರನೊಂದಿಗೆ ಸಂಬಂಧವನ್ನು ಬೆಳೆಯಿಸಲು ಇಷ್ಟವಿಲ್ಲದವರು ಅವರಲ್ಲೊಬ್ಬನೂ ಇಲ್ಲ—ಕೂಡಲೇ ಯೋಗ್ಯೆಯಾದೊಬ್ಬ ಪಾತ್ರಿಯು ದೊರೆತಳು. ಸಮರಸಿಂಹನೊಂದಿಗೆ ನಾನು ಮಾಡಿಕೊಂಡಿದ್ದ ಅಂಗೀಕಾರವನ್ನು ನಾನು ಭಂಗಮಾಡಿದರೂ, ಧರ್ಮಪರಾಯಣನಾದೆನ್ನ ಮಗನು ಅದಕ್ಕೊಪ್ಪಲಿಲ್ಲ—ಅವನೊಂದು ದಿನ ನನ್ನಲ್ಲಿಗೆ ಬಂದು, "ತಂದೆಯೆ! ತಮಗಾವಾಗಲೂ ನಾನಾವ ವಿಷಯದಲ್ಲಿಯೂ ತಪ್ಪು ಅಪ್ಪಣೆಗೆ ವಿರೋಧವಾಗಿ ಆಚರಿಸಿದವನಲ್ಲ, ಆದರೆ ಒಂದು ವಿಷಯದಲ್ಲಿ ಮಾತ್ರ ನನ್ನನ್ನು ಕ್ಷಮಿಸಬೇಕಾಗಬೇಕು, ತಾವು ಸಮರಸಿಂಹನಲ್ಲಿ ಮಾಡಿಕೊಂಡ ಅಂಗೀಕಾರವನ್ನು ಭಂಗಮಾಡಲು ನಾನೊಪ್ಪೆನು" ಎಂದು ಹೇಳಿದನು. ಅವನಾ ಯಥಾರ್ಥವಾದ ಮಾತನ್ನು ಕೇಳಿ ನಾನು ಕೋಪಗೊಂಡವನಾಗಿ ಹೊಸದಾಗಿ ಏರ್ಪಟ್ಟಿದ್ದ ಕನ್ನೆಯನ್ನು ಅವನಿಗೆ ಮದುವೆಮಾಡಬೇಕೆಂದು ಸ್ಥಿರಮಾಡಿದೆನು, ಬಲಪೂರ್ವಕವಾಗಿ ಆ ಸಂಬಂಧವನ್ನು ಬಳೆಯಿಸಬೇಕೆಂದು ಉಪಕ್ರಮಿಸಿದೆನು. ಆದರೆ ನನ್ನ ಮಗನ ಮಾತು ಉಳಿದಂತಾಯಿತು. ಅವನು ಏಕಾಂತವಾಗಿ ಮನೆಯನ್ನು ಬಿಟ್ಟು ಪಲಾಯನವಾಗಿ ಹೊರಟುಹೋದನು—ಅಂದಿನಿಂದ ನಾನವನನ್ನು ನೋಡಿಲ್ಲ.

ನಗೇಂದ್ರನು ಪುನಃ ಹೇಳತೊಡಗಿದನು,—ನಾನೆನ್ನ ಒಪ್ಪಿತಕ್ಕೆ ತಪ್ಪಿದವನಾದೆನು, ಅದಕ್ಕೆ ಸಲುವಾಗಿ ನನ್ನೀ ವಾರ್ಧಕ್ಯದಲ್ಲಿ ನನಗೀ ಯಾತನೆ; ನನ್ನ ವಯಸ್ಸಿನಲ್ಲಿ ಅಶ್ವನೀಕುಮಾರರಂತಿದ್ದೆನ್ನ ಇಬ್ಬರು ಪುತ್ರರು ನನ್ನ ಜಮಿಾನುದಾರಿಯ ಭಾರವನ್ನು ವಹಿಸಿಕೊಳ್ಳಲು ಎಲ್ಲಿರುವರು? ನನ್ನೀ ವಯಸಿನಲ್ಲೆನಗೆ ಶುಶ್ರೂಷೆಯಂ ಮಾಡುವುದಕ್ಕೆ ಸೊಸೆಯರೀರ್ವರು ಎಲ್ಲಿರುವರು? ನನಗೆ ಮಕ್ಕಳಿಲ್ಲ. ಸೊಸೆಯರಿಲ್ಲ, ಸ್ನೇಹಮಯಿಯಾದ ಸಹಧರ್ಮಿಣಿಯಿಲ್ಲ. ಅಗಾಧವಾದ ಸಮುದ್ರದಲ್ಲಿ ಮುಳುಗಿರುವೆನು—ಪ್ರಭು! ನನ್ನಂತೆ ಹತಭಾಗ್ಯನು ಈ ಮೂರು ಲೋಕಗಳಲ್ಲಿಲ್ಲ.

ಅಷ್ಟೊಂದು ವೃತ್ತಾಂತವನ್ನು ಸಾಂಗವಾಗಿ ಹೇಳಿ ಮುಗಿಸಿ ವೃದ್ಧನು ಎರಡು ಕೈಗಳಿಂದಲೂ ಮುಖವನ್ನು ಮುಚ್ಚಿಕೊಂಡು ಉಚ್ಚಸ್ವರದಿಂದ ರೋದನ ಮಾಡತೊಡಗಿದನು—ಆ ರೋದನವನ್ನು ಕೇಳಿ ಎಲ್ಲರ ಹೃದಯವೂ ಕರಗಿತು—ಚಂದ್ರಶೇಖರನು ಬಹಳವಾಗಿ ಸಮಾಧಾನಗೊಳಿಸಿದ ಬಳಿಕ ವೃದ್ಧನು ಶಾಂತನಾದನು.

ಬಳಿಕ ಶಿಖಂಡಿವಾಹನನು ನಗೇಂದ್ರನಾಥನನ್ನು ಕುರಿತು, "ತಮ್ಮ ಪ್ರತಿಜ್ಞಾಭಂಗವು ಅನ್ಯಾಯವಾದ ಕಾರ್ಯವಾಯಿತೆಂದು ತಿಳಿದಿದ್ದರೆ, ತಾವಾ ಪ್ರತಿಜ್ಞೆಯನ್ನು ನೆರವೇರಿಸಲು ಪ್ರಯತ್ನಮಾಡೋಣಾಗಲಿ" ಎಂದು ಹೇಳಿದನು.

ನಗೇಂದ್ರ—ಶಿಖಂಡಿವಾಹನ! ನಾನೆನ್ನ ಪ್ರತಿಜ್ಞೆಯನ್ನು ನೆರವೇರಿಸುವೆನು;

ರಾಜಾ ಸಮರಸಿಂಹನ ಅನಾಥೆಯಾದಾ ಮಗಳನ್ನು ಕರೆತಂದುಬಿಡು. ಅವಳನ್ನು ಸುರೇಂದ್ರನಿಗೆ ತಂದುಕೊಂಡು ಮದುವೆಯನ್ನು ಮಾಡುವೆನು—ನನಗೀಗ ಮೊದಲಿನಾ ಗರ್ವವಿಲ್ಲ. ಪುನಃ ನನ್ನಾ ಪ್ರತಿಜ್ಞೆಯಂ ಭಂಗಮಾಡುವೆನಾದರೆ ನಾನೆನ್ನಾ ಮಗನ ಮುಖವನ್ನು ಪುನಃ ನೋಡದಂತಾಗಲಿ—ಅದಕ್ಕಿಂತ ಹೆಚ್ಚಾದ ಅಭಿಶಾಪವನ್ನು ನಾನರಿಯೆನು.

ಶಿಖಂಡಿವಾಹನನು ಅದಕ್ಕೆ ಉತ್ತರವನ್ನು ಹೇಳದೆ, ಪುನಃ ಮಹಾಶ್ವೇತೆಯೊಂದಿಗೆ ಮಾತನಾಡತೊಡಗಿದನು. ಅವರವರು ಮಾತನಾಡುತಿದ್ದುದಾವ ವಿಚಾರವಾದುದೆಂಬುದನ್ನು ಪಾಠಕಮಹಾಶಯರು ತಿಳಿದುಕೊಳ್ಳಬಲ್ಲರು.

ಶಿಖಂಡಿವಾಹನನು ಹೇಳುತಿದ್ದನೇನಂದರೆ, "ತಾಯಿ! ವಿಳಂಬವೇಕೆ? ತಮ್ಮ ಪರಿಚಯವನ್ನು ಹೇಳಬಹುದಷ್ಟೆ?"

ಮಹಾಶ್ವೇತೆ— ದೇವರು ನನ್ನಾ ಪೂರ್ವಸ್ಥಿತಿಯನ್ನೆನಗೆ ಕೊಡದಹೊರತು ಈ ಜನ್ಮದಲ್ಲೆನ್ನ ಪರಿಚಯವನ್ನು ಮತ್ತಾರಿಗೂ ಹೇಳೆನು; ಈ ಜನ್ಮದಲ್ಲೆನ್ನ ಮಗಳಿಗೆ ಮದುವೆಯೇ ಬೇಡ.

ಶಿಖಂಡಿ—ಅದೇಕೆ?

ಮಹಾಶ್ವೇತೆ-ಪರರಿಂದ ಅನುಗ್ರಹವನ್ನು ಪಡೆಯುವುದು ನನ್ನ ಸ್ವಾಮಿಯ ಪದ್ಧತಿಯಾಗಿರಲಿಲ್ಲ; ಆತನು ಪರರಿಗೆ ಅನುಗ್ರಹವಂ ಮಾಡುತಿದ್ದನು, ಇತರರ ಅನುಗ್ರಹವನ್ನು ಗ್ರಹಣಮಾಡಿದವನಲ್ಲ.

ಶಿಖಂಡಿ—ಹಾಗಿದ್ದರೆ, ಪ್ರತಿಜ್ಞೆಯಂ ನೆರವೇರಿಸುವ ವಿಚಾರವನ್ನು ಕುರಿತು ನಗೇಂದ್ರನನ್ನು ಪ್ರಶ್ನೆಮಾಡೆಂದು ಹೇಳೋಣಾಯಿತೇಕೆ?

ಮಹಾಶ್ವೇತೆ—ಸವಿಸ್ಮೃಸ್ಥಿತಿಯಲ್ಲಿ ಅವನಾ ಪ್ರತಿಜ್ಞೆಯಂ ನೆರವೇರಿಸಲು ಇಷ್ಟವುಳ್ಳವನಾಗಿರುವನೆ, ಇಲ್ಲವೆ ಎಂಬುದನ್ನು ತಿಳಿಯುವುದಕ್ಕೆ ಸಲುವಾಗಿ—ನನಗೆ ಸಮ್ಮತವಿಲ್ಲ.

---

## ಇಪ್ಪತ್ತನೆಯ ಪರಿಚ್ಛೇದ

### ವನಗ್ರಾಮವನ್ನು ಬಿಟ್ಟುದುದು

All prevailing foe!
I curse thee! let a sufferer's curse
Clasp thee, his torturer, like remorse. *Shelly.*

ಕಾಟೇರಕ್ಕೆ ಬಂದಿದ್ದವರಲ್ಲಿ ಪ್ರಾಯಶಃ ಎಲ್ಲರೂ ಒಬ್ಬೊಬ್ಬರಾಗಿ ಅಲ್ಲಿಂದೆದ್ದು ಹೋದರು. ಬ್ರಾಹ್ಮಣಪತ್ನಿಯರೂ ಬ್ರಾಹ್ಮಣಕನ್ನೆಯರೂ ತಮ್ಮ ತಮ್ಮ ಮನೆಗೆ ಹೊರಟುಹೋದರು. ಮಹಾಶ್ವೇತೆಯು ಅಲ್ಲಿಯೇ ಕುಳಿತಿದ್ದಳು. ಅಮಲೆಯು ತನ್ನ ಪ್ರಿಯಸಖಿಯ ತಲೆಯನ್ನು ತನ್ನ ಹೃದಯದಲ್ಲಿ ಧಾರಣೆಯಂ

ಮಾಡಿಕೊಂಡು ಕುಳಿತಿದ್ದಳು. ಅಮಲೆಯು ಅಷ್ಟು ಹೊತ್ತಿನ ತನಕ ಅಲ್ಲೇಕೆ ಕುಳಿತಿದ್ದಳೆಂಬುದನ್ನು ತಿಳಿಯಲು ಪಾಠಕಮಹಾಶಯರಿಗೆ ಇಷ್ಟವಿರಬಹುದಲ್ಲವೆ? ಅಮಲೆಯು ತನ್ನ ಮನದಲ್ಲಿ ಬಗೆ ಬಗೆಯಾಗಿ ಬಗೆಗೊಳ್ಳುತಿದ್ದಳು—'' ಜಮೀನು ದಾರ ಮಹಾಶಯನ ಮಗನು ತಂದೆಯು ಹೇಳಿದ ಹೆಣ್ಣನ್ನು ಮದುವೆ ಮಾಡಿ ಕೊಳ್ಳಲು ಇಷ್ಟವಿಲ್ಲದೆ ತಂದೆಯ ಮನೆಯನ್ನು ಬಿಟ್ಟು ಹೊರಟುಹೋದನು— ಹರಿ! ಹರಿ! ಇಂದ್ರನಾಥನು ಆ ಜಮೀನುದಾರನ ಮಗನಾಗಿರಬೇಕು, ಹಾಗಿಲ್ಲ ದಿದ್ದರೆ, ನಾನು ಕಾಯಸ್ಥ ಜಾತಿಯ ಹೆಂಗಸಲ್ಲ! ಮನವೆ! ಸ್ಥಿರವಾಗು! ತಂದೆಯು ಆರನ್ನು ಮದುವೆಮಾಡಿಕೊಳ್ಳಬೇಕೆಂದು ಹೇಳುವನೋ ಮಗನು ಅಂತಹವಳನ್ನು ಮದುವೆಯಾಗಲು ಸಮ್ಮತಿಸದೆ ಸಮರಸಿಂಹನ ಮಗಳನ್ನು ಮದುವೆಯಾಗುವೆನೆಂದು ಹೇಳಿದನು. ಸಮರಸಿಂಹನ ಮಡದಿಯು ಈಗ ಛದ್ಮ ವೇಷದಲ್ಲಿ ಅಜ್ಞಾತವಾಸದಲ್ಲಿದ್ದಾಳೆ, ಮಗಳಿಗೆ ಮದುವೆಯನ್ನು ಮಾಡಬೇಕೆಂ ತಲೂ ವ್ಯಸ್ತೆಯಾಗಿದ್ದಾಳೆ—ಹರಿ! ಹರಿ! ನನ್ನ ಸಖಿಯು ಸಮರಸಿಂಹನ ಮಗಳೆ? ಮಹಾಶ್ವೇತೆಯನ್ನು ನೋಡಿದರೂ ರಾಜರಾಣಿಯೆಂದು ಬೋಧೆಯಾಗುತ್ತದೆ. ಸಾಮಾನ್ಯ ಕಾಯಸ್ಥ ಜಾತಿಯ ಅಮ್ಮಗಳಂತೆ ತೋರುವುದಿಲ್ಲ. ಅವಳಾರ ಸಂಗಡಲೂ ಹೆಚ್ಚು ಮಾತನಾಡುವುದಿಲ್ಲ, ಪ್ರತ್ಯಹವೂ ಶಿವಪೂಜೆಯನ್ನು ಮಾಡು ತ್ತಾಳೆ—ಅವಳಾ ವೃದ್ಧವಯಸ್ಸಿನಲ್ಲಿಯೂ ಮುಖದಲ್ಲಿ ಸ್ವರ್ಗೀಯ ಮಹಿಮೆಯು ಕಣ್ಗೊಳಿಸುತಿದೆ—ಸರಳೆಯೊ! ಹುಡುಗಿಯೆನ್ನ ವಕ್ಷದಲ್ಲಿ ನಿದ್ರೆಯಿಂದ ಅಭಿಭೂತೆ, ಅವಳ ಮನಸ್ಸು ಅವಳಿಗಿಂತ ಹೆಚ್ಚಾಗಿ ನಿದ್ರಿತವಾಗಿರಬೇಕು, ತಾನು ರಾಜನ ಮಗಳೆಂತಲೂ ಅರಿಯಳು! ನಾನು ರಾಜಕುಮಾರಿಯೊಂದಿಗೆ ಸಂಗಾತಿಯಾಗಲು ಸಾಹಸಗೊಂಡಿರುವೆನೆ? ರಾಜಕುಮಾರಿಯ ಪಾದಗಳ ಧೂಳಿಯಿಂದ ರುದ್ರಪುರವೂ ವನಗ್ರಾಮವೂ ಪವಿತ್ರವಾಗಿರುವುದೆ? ದೇವರೆ! ನೀನೇ ಬಲ್ಲೆ! ನನಗಾವದೂ ಗೊತ್ತಾಗುವುದಿಲ್ಲ''—ಅಮಲೆಯು ಈಪರಿ ಚಿಂತೆಯಿಂದ ನಿದ್ರೆಯನ್ನು ಮರೆತಳು.

ಜಮೀನುದಾರ ನಗೇಂದ್ರನಾಥನು ಮಲಗುವುದಕ್ಕೆ ಶಯನಗೃಹಕ್ಕೆ ಹೋದನು. ಸ್ನೇಹಮಯಿಯಾದ ಕಮಲೆಯು ಶೋಕಾರ್ತನಾದಾ ವೃದ್ಧ ಜಮೀನುದಾರನಿಗೆ ಅನೇಕವಾಗಿ ಸೇವೆ ಶುಶ್ರೂಷೆಗಳನ್ನು ಮಾಡಿದಳು. ಇಂದು ಕಮಲೆಯೂ ಸರಳೆಯೂ ಇಬ್ಬರೂ ಸೇರಿ ಸ್ವಂತವಾಗಿ ಅಡಿಗೆಯನ್ನು ಮಾಡಿ ಸ್ವಜಾತಿಯವನಾದ ಅತಿಥಿಯಾಗಿ ಬಂದಿದ್ದ ಜಮೀನುದಾರನಿಗೆ ಔತಣವಂ ಮಾಡಿಸಿದರು. ಅವನ ಹಾಸಿಗೆಯನ್ನು ಹಾಸಿದರು. ಜಮೀನುದಾರನಿಗೆ ಬಹು ವಿಧವಾಗಿ ಸೇವೆಯನ್ನು ಮಾಡಿದರು. ಜಮೀನುದಾರನು ಶಾಂತಮುಖಿಯರಾದಾ ಕುಮಾರಿಯರ ಸೇವೆಯಿಂದ ಸಂತುಷ್ಟನಾಗಿ, ಸಜಲನಯನನಾಗಿ, '' ತಾಯಿ ಕಮಲೆ! ನೀನೂ ಆ ಬಾಲೆ ಸರಳೆಯೂ ಮನದಂಡಲೆಯಿಂದ ಮನನೊಂದಿರುವ ಮುದುಕನಿಗೆ ಸಲುವಾಗಿ ನಮಸ್ಕರಿಸಿ ಮನಮುಟ್ಟಿ ಮಾಡಿದ ಸೇವೆ ಶುಶ್ರೂಷೆ

ಗಳನ್ನು ಮೊದಲವನೆಂದೂ ಕಂಡವನಲ್ಲ, ನಾನು ನಿರ್ಭಾಗ್ಯನಾಗದಿದ್ದರೆ, ನಿಮ್ಮಂತಿದ್ದ ಇಬ್ಬರು ಸೊಸೆಯರು ನಿಮ್ಮಂತೆ ಇಂದೆನ್ನ ಸೇವೆಯಂ ಮಾಡುತಿದ್ದರು. ನಿಮ್ಮಂತಹವರೂ ಶಾಂತರಾಗಿ ಚಲುವೆಯರಾಗಿದ್ದಿಬ್ಬರು ಸೊಸೆಯರು ನನ್ನ ಮನೆಯನ್ನು ಬೆಳಗುತಿದ್ದರು! ಆದರೆ ಬ್ರಹ್ಮನು ನನ್ನ ಹಣೆಯಲ್ಲಿ ಅಂತಹ ಸುಖವನ್ನು ಬರೆದಿಲ್ಲ—ಕಾರ್ತಿಕೆಯರಂತೆ ಈರ್ವರು ಪುತ್ರರೂ ಲಕ್ಷ್ಮಿಯಂತೆ ಈರ್ವರು ಸೊಸೆಯರೂ ಬಂದೆನ್ನ ಮನೆಯನ್ನು ತುಂಬಿದ ಮನೆಯಾಗಿ ಮಾಡುವರೆ? ತಾಯಿಗಳಿರಾ! ನಾನು ಬಹಳವಾಗಿ ನೊಂದಿದೇನೆ, ಈ ಗ್ರಾಮದಂತೆ ಶಾಂತಿಪೂರ್ಣವಾದ ಸ್ಥಳವನ್ನು ನಾನೆಲ್ಲಿಯೂ ನೋಡಿಲ್ಲ. ನಾನು ಅನೇಕ ಕಾಯಸ್ಥರ ಸಂಸಾರಗಳನ್ನು ನೋಡಿದ್ದೇನೆ; ಆದರೆ ನಿಮ್ಮಂತೆ ಸ್ನೇಹಮಯಿಯರಾಗಿ ಸರ್ವಗುಣಸಂಪನ್ನೆಯರಾದ ಕನ್ಯೆಯರನ್ನು ನೋಡಿಲ್ಲ"ವೆಂದು ಹೇಳಿದನು.

ಕಮಲೆಯು ಮಲಗುವುದಕ್ಕೆ ಹೊರಟುಹೋದಳು. ಹೊರಗಣ ಕೋಣೆಯಲ್ಲಿ ಮಹಾಶ್ವೇತೆಯು ಸರಳೆಯನಿಟ್ಟುಕೊಂಡು ಕುಳಿತಿದ್ದಳು. ಕೂಡಲೆ ಮಲಗುವ ಮನೆಗೆ ಹೋಗಬೇಕೆಂದಿದ್ದಳು—ಆ ಸಮಯದಲ್ಲಿ ದಾಸಿಯ ವೇಷದಲ್ಲೊಬ್ಬ ಹೆಂಗಸು ಬಂದು ಮಹಾಶ್ವೇತೆಯ ಕಿವಿಯಲ್ಲಿ, "ರಾಣಿತಾಯಿಗಳೇ! ಒಮ್ಮೆ ಇತ್ತ ಬರೋಣಾಗಲಿ" ಎಂದಳು.

ಮಹಾಶ್ವೇತೆಯು ವಿಸ್ಮಿತೆಯಾದಳು! ಆ ಗ್ರಾಮದಲ್ಲಿ ಅವಳನ್ನು "ರಾಣಿತಾಯಿ" ಎಂದು ಗುರುತಿಸಿದವರಾರು? ದಾಸಿಯು ಪುನಃ, "ರಾಣಿತಾಯಿ! ನನ್ನ ಗುರುತಿಲ್ಲವೆ? ನಾನು ತಮ್ಮ ಪುರಾತನ ದಾಸಿ" ಎಂದಳು.

ಮಹಾಶ್ವೇತೆಯು ಅವಳನ್ನು ಗುರುತಿಸಿದಳು; ಅವಳು ಚತುರ್ವೇಷ್ಟಿತ ದುರ್ಗದಲ್ಲಿದ್ದೊಬ್ಬ ಪುರಾತನ ದಾಸಿಯಾಗಿದ್ದಳು—ಮಹಾಶ್ವೇತೆಯು ಅಚ್ಚರಿಗೊಂಡು, "ಇದೇನೆ! ಇಷ್ಟುದಿನಗಳ ಬಳಿಕ ನೀನೆಲ್ಲಿಂದ ಬಂದೆ? ನಾವು ಈ ಗ್ರಾಮದಲ್ಲಿದ್ದುದು ಗೊತ್ತಾದ ಬಗೆ ಹೇಗೆ? ಬಂದುದೇಕೆ?" ಎಂದು ವಿಚಾರ ಮಾಡಿದಳು.

ದಾಸಿ—ತಾವು ಚತುರ್ವೇಷ್ಟಿತ ದುರ್ಗದಿಂದ ಹೊರಟುಬಂದ ಬಳಿಕ ತಮ್ಮ ಮಾವಂದಿರ ಮನೆಯವರು ತಮ್ಮನ್ನು ಹುಡುಕಿಕೊಂಡು ಬಂದರು. ಸಣ್ಣ ಕೂಸು, ಸರಳೆಗೆ ಸಲುವಾಗಿಯೂ ತಮಗೆ ಸಲುವಾಗಿಯೂ ಬಹಳ ಪೇಚಾಡಿದರು. ಆ ಸಮಾಚಾರವನ್ನೆಲ್ಲಾ ಕಡೆಗೆ ಹೇಳುವೆನು. ನಾನೂ ಬಹಳವಾಗಿ ಹುಡುಕಿಕೊಂಡು ಇಲ್ಲಿಗೆ ಬಂದ ಬಳಿಕ ತಾವಿಲ್ಲಿರುವುದು ಗೊತ್ತಾಯಿತು. ಸರಳೆಯ ಸೋದರ ಅತ್ತೆಯು ಅಣ್ಣನ ಮಗಳ ಮುಖವನ್ನು ನೋಡಲು ದೇಶದೇಶ ಅಲೆದಳು. ಅದನ್ನು ಎಷ್ಟೆಂದು ಹೇಳಲಿ? ಕಡೆಗೆ ರುದ್ರಪುರಕ್ಕೆ ಹೋದಳು. ಅಲ್ಲಿಂದ ದೋಣಿಯನ್ನು ಮಾಡಿಕೊಂಡು ಇಲ್ಲಿಗೆ ಬಂದಿದ್ದಾಳೆ—ಇಲ್ಲಿಗೆ ಬರಲು ಅವಳಿಗೆ ಭಯ; ರಾಣಿತಾಯಿಯು ಒತ್ತಡವೆ ದೋಣಿಯಲ್ಲಿ ಅವಳನ್ನು ನೋಡಿ ಬಂದರೆ ಎಷ್ಟೋ ಸಂತುಷ್ಟೆಯಾಗುವಳು.

ಹಿಂದಿನ ವೃತ್ತಾಂತವು ನೆನಪಿಗೆ ಬಂದು ಮಹಾಶ್ವೇತೆಯ ಪಾಷಾಣ ಹೃದಯವೂ ಕರಗಿ, ಆವಳು ಕಣ್ಣೀರನ್ನು ಸುರಿಸಿದಳು. ಕಡೆಗೆ ಕಣ್ಣೀರನ್ನೊರಸಿ ಕೊಂಡು ಸರಳೆಯನ್ನು ಸಂಗಡ ಕರೆದುಕೊಂಡು ದಾಸಿಯೊಡನೆ ನದಿಯ ಘಾಟಿಯ ಕಡೆಗೆ ಹೊರಟುಹೋದಳು.

ಘಾಟಿಯು ಅಲ್ಲಿಗೆ ಸಮೀಪ—ಘಾಟಿಗೆ ಬರುತಲೆ ದಾಸಿಯು ಒಂದು ದೋಣಿಯನ್ನು ತೋರಿದಳು. ದೋಣಿಯು ಬಹಳ ಕ್ಷಿಪ್ರಗಾಮಿಯಾದುದು, ಹತ್ತು ಹನ್ನೆರಡುಮಂದಿ ಹುಟ್ಟುಹೊಡಿಗರು ಹುಟ್ಟುಗಳನ್ನು ಹಿಡಿದು ನಿಂತಿದ್ದರು. ದೋಣಿಯ ಒಳಗಿನಿಂದ ವೃದ್ಧೆಯಾದೊಬ್ಬ ಹೆಂಗಸು ಮಹಾಶ್ವೇತೆಯನ್ನು ಬರುವಂತೆ ಕೈಸನ್ನೆ ಮಾಡಿದಳು. ಮಹಾಶ್ವೇತೆಯು ಕೂಡಲೆ ಸರಳೆಯೊಂದಿಗೆ ದೋಣಿಗೆ ಹತ್ತಿದಳು. ಆ ಮುಹೂರ್ತದಲ್ಲಿ ದೋಣಿಯು ಅಲ್ಲಿಂದ ಹೊರಟಿತು. ದಾಸಿಯು ದೋಣಿಗೆ ಹತ್ತದೆ ಬೇರೆಕಡೆ ಹೋಗಿ ಅದೃಶ್ಯೆಯಾದಳು. ದೋಣಿಯಲ್ಲಿದ್ದ ಮುದಿಹೆಂಗಸು ಸರಳೆಯ ಸೋದರ ಅತ್ತೆಯಲ್ಲ. ಶಕುನಿಯ ಗುಪ್ತಚರೆ! ಮಹಾಶ್ವೇತೆಯೂ ಅವಳ ಮಗಳೂ ಅಂದು ಸತೀಶಚಂದ್ರನ ಬಂದಿಯರಾದರು!

---

## ಇಪ್ಪತ್ತೊಂದನೆಯ ಪರಿಚ್ಛೇದ

### ಕಾರಾವಾಸ

The pale stars of the morn
Shine on a misery, dire to the borne.
Dost thou faint? *Shelly*

ಪ್ರಾತಃಕಾಲದ ಸ್ವರ್ಣವರ್ಣದ ಸೂರ್ಯಕಿರಣಗಳು ಚತುರ್ವೇಷ್ಟಿತ ದುರ್ಗದ (ಈಗದಕ್ಕೆ "ಚೌಬೇಡ" ಎಂದು ಹೆಸರು) ಸೊಬಗನ್ನು ವೃದ್ಧಿಗೊಳಿಸುತಿದ್ದುವು; ಗೋಡೆ, ಕಂಭ, ಗವಾಕ್ಷ, ಕಕ್ಷ ಮುಂತಾದುವೆಲ್ಲಾ ತಳತಳಗುಟ್ಟುತಿದ್ದುವು. ದುರ್ಗದ ತಳದೇಶದಲ್ಲಿ ಶಾಂತವಾಗಿ ಹರಿಯುತಿದ್ದ ಯಮುನೆಯ ಮೇಲೆ ಕಿರಣಗಳು ಬಿದ್ದು ಚಂಚಲವಾಗುತಿದ್ದುವು; ಪ್ರಕಾಂಡವಾದಾ ದುರ್ಗದ ಬೆಳಗೊಂಡಿದ್ದ ಛಾಯೆಯು ನದಿಯಲ್ಲಿ ಪ್ರತಿಫಲಿತವಾಗುತಿದ್ದಿತು; ನದಿಯ ವಕ್ಷದ ಮೇಲೆ ಒಂದೆರಡು ತರಿಗಳು ತೇಲುತಿದ್ದುವು; ತುಹಿನಾಗಮದ (ಚಳಿಗಾಲದ) ಪ್ರಾತಃಕಾಲದ ತಣ್ಣೆಲರು, ತೆಂಬಲುಗಳಲ್ಲಿದ್ದ (ಕಾವಲುಗಳಲ್ಲಿದ್ದ) ತೃಣಗಳ ತುದಿಯಲ್ಲಿ ಕುಳಿತು ತರಪಿನ ಮಣಿಗಳಂತೆ ತಳಕುತಿದ್ದ ತುಂತುರುವಣಿಗಳನ್ನು ತಡಹಾಯ್ದು ತನುವೇರಿ ತನಿ (ಹೆಚ್ಚು) ತಣ್ಪೊಂಡು ತರಂಗತರಂಗವಾಗಿ ಬೀಸುತಿದ್ದಿತು; ಹಾಗೂ ನದಿಯಲ್ಲಿ ಮಿಂದು ತುಂಬಿದ ಕೊಡವನ್ನು ತಲೆಯ ಮೇಲೆ ಕೊಂಡೊಯ್ವ ತರುಳೆಯರ ತನುವನ್ನು ಪುಲಕಿಸಿ ಕಂಪಿಸುವುದು; ಒಕ್ಕಲುತನ

ದವರು ತಮ್ಮ ತಮ್ಮ ದನಕರುಗಳನ್ನು ತಿಂಬಲುಗಳಲ್ಲಿ ತರುಮುತ್ತ ನಿಂತು ನಿಂತು ಆನಂದದಿಂದ ಗಾನಮಾಡುವರು, ಪಕ್ಷಿಕುಲವು ತರುಣ ಅರುಣ ಕಿರಣದಲ್ಲಿ ಪುಲಕಿತವಾಗಿ ಆ ಗಾನದೊಂದಿಗೆ ತಮ್ಮ ಕೊರಳನ್ನು ಸೇರಿಸುತಿದ್ದುವು. ಜಗತ್ತೆಲ್ಲಾ ಆಲೋಕಮಯವಾಗಿಯೂ ಆನಂದಮಯವಾಗಿಯೂ ಇದ್ದಿತು.

ಪ್ರಕಾಂಡವಾದಾ ದುರ್ಗದ ನಿಮ್ನತಲದಲ್ಲೊಂದು ನಿಭೃತವಾಗಿದ್ದೊಂದು ಕೋಣೆಯಲ್ಲಿ ಹೀನಕಾಂತಿಯುಳ್ಳೊಂದು ಪ್ರಣಿತೆಯ ಬೆಳಕಿನಲ್ಲಿ ಮಹಾಶ್ವೇತೆಯೂ ಸರಳೆಯೂ ಮಲಗಿದ್ದರು; ಶಕುನಿಯ ಚರರಿಂದವರು ಅಲ್ಲಿಗೆ ತರಲ್ಪಟ್ಟು ದುರ್ಗದಲ್ಲಿ ಬಂದಿಯರಾಗಿದ್ದರು.

ಸರಳೆಯು ನಿದ್ರಿತೆ; ತಾಯಿಯ ತೊಡೆಯಮೇಲೆ ಮಗುವಿನಂತೆ ಮಹಾಶ್ವೇತೆಯ ಮಗ್ಗುಲಲ್ಲಿ ಮಲಗಿದ್ದಳು, ರಾತ್ರಿಯೆಲ್ಲಾ ಎಚ್ಚರವಾಗಿದ್ದು ಬಳಿಕ ನಿದ್ದೆಹೋಗುತಿದ್ದಳು—ಸರಳೆಯ ಶರೀರವು ಕ್ಷೀಣಿಸಿದ್ದಿತು, ಕಣ್ಣುಗಳು ಗುಂಡಿಗಿಳಿದಿದ್ದುವು, ಮುಖದಲ್ಲಿ ಮೊದಲಿನಂತೆ ಪ್ರಫುಲ್ಲತೆ ಅಥವಾ ಆ ಬಾಲಿಕಾಭಾವ ವಿಲ್ಲ; ಸರಳೆಯು ಈಗಾ ಬಾಲಿಕೆಯಲ್ಲ–ಒಮ್ಮೆಂದೊಮ್ಮೆ ಅಕೂಲವಾದ ಶೋಕಸಾಗರದಲ್ಲಿ ಬಿದ್ದು ಬಾಲಿಕಾ ಸುಲಭ ಸುಖಸ್ವಪ್ನದಿಂದೆಚ್ಚರಗೊಂಡಿದ್ದಳು.

ಸರಳೆಯ ಮಗ್ಗುಲಲ್ಲಿ ಮಹಾಶ್ವೇತೆಯು ನಿದ್ರೆಯಿಲ್ಲದೆ ಮಲಗಿದ್ದಾಳೆ—ಅವಳ ಮುಖದ ಭಾವವು ವರ್ಣನಾತೀತವಾಗಿದ್ದಿತು, ಅದು ಭಯದ ಭಾವವಲ್ಲ, ದುಃಖದ ಭಾವವಲ್ಲ, ಕೇವಲ ಚಿಂತೆಯ ಭಾವವೂ ಅಲ್ಲ—ಕಣ್ಣುಗಳು ಜ್ವಲಿಸುತಿದ್ದುವು, ಸೂಕ್ಷ್ಮವಾಗಿದ್ದವಳಾ ಮಧುರಾಧರದ ಮೇಲೆ ಹಲ್ಲು ಕುಳಿತು ಅದ ಮುತ್ತ ಹಲ್ಲುಮುಡಿ ಕಚ್ಚುವಂತಿದ್ದಿತು, ಅವಳಾ ಮುಖಮಂಡಲದಲ್ಲಿ ಉನ್ಮತ್ತತೆಯ ಕುರುಹುಗಳು ತೋರುತಿದ್ದುವು, ಹಣೆಯಲ್ಲಿ ನರವುಬ್ಬಿ ಹುರಿಗೊಂಡಂತಿದ್ದಿತು. ಹೃದಯವು ಪೂರ್ವಸ್ಮೃತಿಯಿಂದಲೂ ಚಿಂತಾತರಂಗದಿಂದಲೂ ಹೊಯ್ದಾಡುವಂತಿದ್ದಿತು.

ಸ್ವಲ್ಪಹೊತ್ತಿನಲ್ಲಿ ಸರಳೆಯು ಎಚ್ಚರಗೊಂಡಳು; ಎಚ್ಚರಗೊಂಡೆದ್ದವಳು ತಾಯಿಯ ಮುಖವನ್ನು ನೋಡಿ, "ಅಮ್ಮಾ! ರಾತ್ರಿಯೆಲ್ಲಾ ನಿನಗೆ ನಿದ್ರೆಯಿಲ್ಲವೆ?" ಎಂದಳು.

ಮಹಾಶ್ವೇತೆಯು ಅದಕ್ಕೆ ಮಾತನಾಡಲಿಲ್ಲ. ಸರಳೆಯು ಪುನಃ "ಅಮ್ಮಾ! ನಿನಗೆ ಸಲುವಾಗಿ ನಿನ್ನಿನ ರಾತ್ರಿ ತಂದಿಟ್ಟಿದ್ದ ಅನ್ನವು ಇಟ್ಟಿದ್ದಂತಿದೆ; ಮುಟ್ಟಿಲ್ಲ" ವೆಂದಳು.

ಮಹಾಶ್ವೇತೆ—ಊಟದಲ್ಲಿನಗೆ ರುಚಿಯಿಲ್ಲ.

ಸರಳೆ—ಊಟವಿಲ್ಲದಿದ್ದರೆ ಶರೀರವೆಷ್ಟುದಿನ ಉಳಿದಿರುವುದು?

ಮಹಾಶ್ವೇತೆ—ಮಗು! ಇನ್ನು ಶರೀರವಿದ್ದೇನಾಗಬೇಕು? ದೇವರು ದಯೆಗೈದು ಇದಕ್ಕೆಮೊದಲೇ ಸಾಕುಮಾಡಿದ್ದರೆ ನಿನ್ನನ್ನೀ ಅವಸ್ಥೆಯಲ್ಲಿನೋಡುತ್ತಿರಲಿಲ್ಲ.

ಸರಳೆ—ಅಮ್ಮಾ! ನೀನಿಲ್ಲದಿದ್ದರೆ ನಾನಾರ ಮುಖವನ್ನು ನೋಡುತಿರಲಿ? ನೀನೆನ್ನನ್ನು ಬಿಟ್ಟುಹೋದರೆ ಪ್ರಪಂಚದಲ್ಲಿ ಮತ್ತಾರೆನಗಿರುವವರು?

ಮಹಾಶ್ವೇತೆ—(ಸಜಲನಯನೆಯಾಗಿ) ಇಲ್ಲ, ತಾಯಿ! ಈ ನಿರ್ಭಾಗ್ಯೆಗೆ ಹೋಗಲಿನ್ನೂ ಕಾಲವು ಬಂದಿಲ್ಲ—

ಹೀಗೆ ಅವರವರು ಮಾತನಾಡುತಿದ್ದಾಗ ಕೋಣೆಯ ಬಾಗಿಲು ತೆರೆಯಲ್ಪಟ್ಟಿತು—ಮಹಾಶ್ವೇತೆಯು ಬಾಗಿಲಕಡೆ ತಿರುಗಿ ನೋಡಿದಳು; ನಿರುಪಮೆಯಾದ ಸುಂದರಿಯೊಬ್ಬಳು ಬಾಗಿಲ ಬಳಿ ನಿಂತಿದ್ದಳು—ನಿಂತಿದ್ದಾ ಸುಂದರಿಯು ವಿಮಲೆಯೆಂದು ಹೇಳಬೇಕಾದ ಆವಶ್ಯಕವಿಲ್ಲ.

ವಿಮಲೆಯು ಅಲ್ಲಿನ ಸ್ಥಿತಿಯನ್ನು ಕಂಡು ಅವಳ ಹೃದಯವು ಒತ್ತ್ರಡವೆಗೇವೇ ದುಃಖದಿಂದ ಅಧೀರವಾಯಿತು. ಪೂರ್ವರಾತ್ರಿ ಬಡಿಸಿಟ್ಟಿದ್ದ ಅನ್ನವನ್ನು ಮುಟ್ಟಿರಲಿಲ್ಲ. ವೃದ್ಧೆ ಮಹಾಶ್ವೇತೆಯು ಉನ್ಮತ್ತೆಯಂತಿದ್ದಳು, ಅವಳ ಪಾರ್ಶ್ವದಲ್ಲಿ ಸರಳೆಯು ಕುಳಿತು ನೀರವವಾಗಿ ರೋದನಮಾಡುತಿದ್ದಳು.

ವಿಮಲೆಯು ಕಣ್ಣೀರನ್ನೊರಸಿಕೊಂಡು, ಮಹಾಶ್ವೇತೆಯನ್ನು ಕುರಿತು, "ತಾಯಿ! ತಮ್ಮ ಕಷ್ಟವನ್ನು ನೋಡಿ, ನನ್ನ ಹೃದಯವು ವಿದೀರ್ಣವಾಗುತ್ತಿದೆ. ತಾವು ಹೊರಗೆ ದಯಮಾಡಿಸೋಣಾಗಲಿ" ಎಂದಳು.

ರಮಣಿಯ ಕಂಠದಿಂದ ಹೊರಟ ಕರುಣಾಸೂಚಕವಾದಾ ಮಾತುಗಳನ್ನು ಕೇಳಿ, ಮಹಾಶ್ವೇತೆಯು, "ನೀನಾರು ಎಂದು ವಿಚಾರಿಸಿದಳು. ವಿಮಲೆಯು ಅದಕ್ಕೆ ಉತ್ತರವಾಗಿ, "ನಾನೀ ದುರ್ಗಾಧಿಪತಿಯಾದ ಸತೀಶಚಂದ್ರನ ಮಗಳು, ನನ್ನ ಹೆಸರು ವಿಮಲೆ" ಎಂದು ಹೇಳಿದಳು.

ಮಹಾಶ್ವೇತೆಯು ಕೋಪದಿಂದ ಮೈನಡುಗಿದವಳಾದಳು—ಸ್ವಲ್ಪಹೊತ್ತು ಸುಮ್ಮನಿದ್ದು ಬಳಿಕ, "ನಿಮ್ಮ ತಂದೆಗೆ ಹೇಳು, ತಾಯಿ! ನಾವು ಹೆಚ್ಚುದಿನಗಳಿರಲಾರೆವು, ಇರುವತನಕ ನಾವು ನಿರ್ಜನವಾಗಿರುವೆಡೆ ಇರುವಂತೆ ಮಾಡಲಿ, ನೀವಾರೂ ಬಂದು ನಮ್ಮನ್ನು ಬೇಸರಗೊಳಿಸದಿರಿ" ಎಂದಳು.

ಬೇರೆ ಸಮಯವಾಗಿದ್ದರೆ ಅಭಿಮಾನಿನಿ ವಿಮಲೆಯು ಅಂತಹ ಪ್ರತ್ಯುತ್ತರವನ್ನು ಕೇಳಿ ಕೋಪಗೊಳುತಿದ್ದಳು; ಆದರೆ ಬಂದಿಯರ ಅವಸ್ಥೆಯಂ ಕಂಡು ಅವಳ ಹೃದಯದಲ್ಲಿ ಕ್ರೋಧದ ಲೇಶವೂ ಉದಯವಾಗಲಿಲ್ಲ; ಅವಳು ಮೆಲ್ಲ ಮೆಲ್ಲನೆ, "ನಮ್ಮ ತಂದೆಯ ಮೇಲೆ ಸುಳ್ಳು ದೋಷಾರೋಪಣೆಯಂ ಮಾಡೋಣಾಗುತ್ತದೆ, ಆತನೀ ವಿಚಾರದಲ್ಲಿ ಎಳ್ಳಷ್ಟು ಅರಿತವನಲ್ಲ; ನಿಮ್ಮನ್ನು ಬೇಸರಗೊಳಿಸಲು ನಾನು ಬಂದವಳಲ್ಲ; ಅಸಹ್ಯವಾದೀ ಕೋಣೆಯಿಂದ ತಮ್ಮನ್ನು ಬೇರೇ ಕಡೆ ಕರೆದುಕೊಂಡು ಹೋಗಲು ಬಂದೆನು" ಎಂದಳು.

ಮಹಾಶ್ವೇತೆ—(ಶನೈಃ) ಬಂದಿಯಾದವರು ಇಂತಹ ಸ್ಥಳದಲ್ಲಿರುವುದೇ ಒಳ್ಳೆಯದು, ಆರ ಕಾಲಿಗೆ ಬೇಡಿಯೋ ಅಂತಹ ಬೇಡಿಯು ಬಂಗಾರದ ಬೇಡಿಯಾ

ಗದೆ ಕಬ್ಬಿಣದ ಬೇಡಿಯಾಗಿರುವುದೇ ಉಪಯುಕ್ತವಾದುದು—ಹೋಗೆ, ಮಗು ! ನಿರ್ಭಾಗ್ಯೆಯರ ಕಷ್ಟವನ್ನು ಕಂಡು ಅಪಹಾಸ್ಯಮಾಡಬೇಡ.

ವಿಮಲೆ—(ಸಜಲನಯನೆಯಾಗಿ) ತಾಯಿಗಳೆ ! ನಾನು ತಮ್ಮನ್ನು ಉಪಹಾಸ ಮಾಡುವುದಕ್ಕೆ ಬಂದವಳಲ್ಲವೆಂಬುದು ಭಗವಂತನು ಬಲ್ಲನು.

ವಿಮಲೆಯು ಮತ್ತೂ ಹೇಳುತಿದ್ದಳು, ಆದರೆ ಮಹಾಶ್ವೇತೆಯು ತೀವ್ರ ಸ್ವರದಿಂದ, "ಭಗವಂತನ ಹೆಸರನ್ನೆತ್ತಬೇಡ—ನಿಮ್ಮ ತಂದೆ ಯಾವಾಗಲೂ ದೇವರ ಹೆಸರನ್ನೆತ್ತಿದವನಲ್ಲ. ಆ ವಂಶದವರೂ ಆ ಹೆಸರನ್ನು ಹೇಳಿ ಅದನ್ನು ಅಪವಿತ್ರ ವಾಗಿ ಮಾಡದಿರಲಿ" ಎಂದಳು.

ವಿಮಲೆ—(ಗಂಭೀರ ಕಂಠದಲ್ಲಿ) ತಾಯಿ ! ನಮ್ಮನ್ನು ತಾವು ಅನ್ಯಾಯವಾಗಿ ತಿರಸ್ಕರಿಸೋಣಾಗುತ್ತದೆ ; ತಾವು ಹೇಗೆ ನಿರ್ಭಾಗ್ಯರೋ, ನಾನೂ ಹಾಗೆ ನಿರ್ಭಾಗ್ಯೆ ; ನಿರ್ಭಾಗ್ಯೆಯರಿಗೆ ಜಗದೀಶ್ವರನ ಹೆಸರನ್ನು ಬಿಟ್ಟರೆ ಮತ್ತಾವದಿರುವುದು ? ಮರಣಕಾಲದ ಪರ್ಯಂತವೂ ಆ ನಾಮವನ್ನೇ ಸ್ಮರಿಸುತ್ತಿರುವೆನು—ದುಃಖಪರಿಪೂರ್ಣವಾದ ಇಹಸಂಸಾರದಲ್ಲೀ ನಿರ್ಭಾಗ್ಯೆಗೆ ಆ ನಾಮವೊಂದೇ ಅವಲಂಬನ, ಆ ನಾಮವು ಏಕಮಾತ್ರ ಸುಖವಾಗಿರುವುದು.

ಪವಿತ್ರವಾದಾ ಮಾತುಗಳನ್ನು ಕೇಳಿ ಮಹಾಶ್ವೇತೆಯ ಕೋಪವು ಅಳಿಸಿ ಹೋಯಿತು—ವಿಮಲೆಯ ಈಶ್ವರಭಕ್ತಿಯನ್ನು ಕಂಡು ಮಹಾಶ್ವೇತೆಯು ಅವಳನ್ನೊಂದೇ ದೃಷ್ಟಿಯಿಂದ ನೋಡತೊಡಗಿದಳು. ದೇವಕನ್ಯೆಯಂತೆ ಉನ್ನತ ಪ್ರಕೃತಿಯುಳ್ಳ ರಮಣೀರತ್ನವು ಕಣ್ಗೊಳಿಸುತಿದ್ದಳು. ಅವಳ ಕಣ್ಣುಗಳಲ್ಲಿ ನೀರು ತುಂಬಿದ್ದಿತು, ಮುಖದಲ್ಲಿ ಸ್ವರ್ಗೀಯ ಪ್ರೇಮ, ಹಾಗೂ ಈಶ್ವರನಲ್ಲಿ ಭಕ್ತಿಯು ಹೊರತು ಮತ್ತಾವದೂ ಕಾಣುತಿರಲಿಲ್ಲ.

ಮಹಾಶ್ವೇತೆ—(ಮೆಲ್ಲಮೆಲ್ಲನೆ) ವಿಮಲೆ ! ಕ್ಷಮಿಸು, ತಿಳಿಯದೆ ತಿರಸ್ಕರಿಸಿದೆನು ; ದುಃಖದಲ್ಲಿ ವಿವೇಚನೆಯ ಶಕ್ತಿಯು ಲೋಪವಾಗುವುದು—

ವಿಮಲೆಯು ಮಹಾಶ್ವೇತೆಯನ್ನು ಮುಂದೆ ಮಾತನಾಡಗೊಡಿಸದೆ, ಅವಳ ಹತ್ತಿರ ಬಂದು ಅವಳ ಕೈಯನ್ನು ಹಿಡಿದುಕೊಂಡು, "ತಾಯಿ ! ಕ್ಷಮಾಪ್ರಾರ್ಥನೆಗೆ ಕಾರಣವೇನೂ ಇಲ್ಲ, ತಾವು ದುಃಖಿಯರು, ನಾನೂ ಅಲ್ಪದುಃಖಿನಿಯಲ್ಲ, ನನ್ನ ಅವಸ್ಥೆಯನ್ನು ತಿಳಿದರೆ ತಾವೂ ನನ್ನಲ್ಲಿ ದಯೆಯನ್ನು ತೋರುವಿರಿ" ಎಂದಳು.

ಮಹಾಶ್ವೇತೆಯು ವಿಮಲೆಯ ಕೈಯನ್ನು ಹಿಡಿದಿದ್ದಳು. ಅವರೀರ್ವರೂ ಅಳುವುದಕ್ಕೆ ತೊಡಗಿದರು. ಹತಭಾಗಿನಿ ಸರಳೆಯೂ ರೋದನಕ್ಕೆ ತೊಡಗಿದಳು. ಬಹಳ ಹೊತ್ತಾದ ಬಳಿಕ ಮಹಾಶ್ವೇತೆಯು, "ವಿಮಲೆ ! ನಿನ್ನ ದುಃಖವನ್ನು ನಾನು ತಿಳಿದೆನು—ಪಿತನ ಪಾಪಕಾರ್ಯವನ್ನು ನೋಡಿ ಧರ್ಮಪರಾಯಣೆಯಾದ ಮಗಳ ಹೃದಯವು ವಿದೀರ್ಣವಾಗದಿರುವುದೆ ?" ಎಂದಳು.

ವಿಮಲೆ—ತಾಯೆ ! ತಮಗಿನ್ನೂ ಭ್ರಾಂತಿಯು ಹೋಗಿಲ್ಲ—ತಾವು ಹೇಗೆ

ನಿರ್ಭಾಗ್ಯರೋ ನನ್ನ ತಂದೆಯು ಹಾಗೆ ನಿರ್ಭಾಗ್ಯನು. ಅವನ ಜೀವನ ಮರಣ ಗಳು ಈಗಲೂ ಸ್ಥಿರವಿಲ್ಲ—ತಮಗೂ ನನಗೂ ಕಷ್ಟವನ್ನು ಕೊಟ್ಟಿರುವ ಪಾಮ ರನೇ ತಂದೆಯನ್ನೂ ತೊಂದರೆಯಲ್ಲಿ ತಂದಿಟ್ಟಿದ್ದಾನೆ, ತಂದೆಯ ಮರಣವನ್ನೂ ಸಂಕಲ್ಪಿಸಿರುವನೆಂದು ಆಶಂಕೆಯುಳ್ಳವಳಾಗಿದ್ದೇನೆ.

ಮಹಾಶ್ವೇತೆಯು ಆಶ್ಚರಿಗೊಂಡು ಸತೀಶಚಂದ್ರನು ಹೊರತು, ಇದರಲ್ಲಿ ಮತ್ತಾರಿರುವರು? ಎಂದು ಭಾವಿಸಿಕೊಂಡಳು.

ವಿಮಲೆ—ಮೇಲೆ ದಯಮಾಡಿಸೋಣಾಗಲಿ, ವೃತ್ತಾಂತವನ್ನೆಲ್ಲಾ ತಮಗೆ ವಿಜ್ಞಾಪಿಸುವೆನು.

ಮೂವರೂ ಅಸಹ್ಯವಾದಾ ಕೋಣೆಯಿಂದ ಹೊರಗಾದರು—ವಿಮಲೆಯು ಸರಳೆಯನ್ನು ತನ್ನ ತಂಗಿಯಂತೆ ಭಾವನೆಮಾಡಿದಳು—ಎಲ್ಲರಿಗೂ ಊಟವಾದ ಬಳಿಕ ವಿಮಲೆಯು ಶಕುನಿಗೆ ಸಂಬಂಧವಾದ ವೃತ್ತಾಂತವನ್ನೆಲ್ಲಾ ಮಹಾಶ್ವೇತೆಗೆ ತಿಳಿಯಹೇಳಿದಳು.

---

## ಇಪ್ಪತ್ತೆರಡನೆಯ ಪರಿಚ್ಛೇದ

### ಇದು ಸ್ವಪ್ನವಲ್ಲ—ಪೂರ್ವಸ್ಮೃತಿ

Wall of my Sires, if ye could speak,
If ye could have a tongue,
Save by the owlet's awful shriek
Or ravens' uncouth song,
Fain would ask of days gone by,
And o'er each tale would heave a sigh. *F. C. Dutt*

ಪ್ರಪಂಚದಲ್ಲೊಂದು ಪ್ರಕಾರದ ಜನರಿರುವರು. ಅವರ ಮುಖವನ್ನು ನೋಡಿದ ಮಾತ್ರವೇ ನಿರ್ದಯರಾದವರ ಹೃದಯದಲ್ಲಿ ದಯೆಯು ಹುಟ್ಟುವುದು. ನಿಷ್ಪ್ರೇಮರಾದವರ ಹೃದಯದಲ್ಲಿ ಪ್ರೇಮೋದ್ರೇಕವಾಗುವುದು. ಎಲ್ಲರ ಹೃದಯ ದಲ್ಲೂ ಸ್ನೇಹೋದ್ರೇಕವಾಗುವುದು. ಅಂತಹ ಮುಖದ ಭಾವವು ಕೇವಲ ಸೌಂದರ್ಯವಲ್ಲ. ಏಕೆಂದರೆ, ಸೌಂದರ್ಯವು ಎಲ್ಲರ ಹೃದಯವನ್ನೂ ಸಮಾನ ರೂಪವಾಗಿ ಆಕರ್ಷಣೆ ಮಾಡದು; ಕೆಲವು ಸೌಂದರ್ಯ, ಕೆಲವು ಬಾಲೆಯರ ಲಜ್ಜೆ, ಕೆಲವು ಮಾಯಡಾಳ (Elegance), ಕೆಲವು ಅಮಾಯಿಕತೆ, ಕೆಲವು ನಿಷ್ಕಾ ಪಟ್ಯ, ಕೆಲವು ಬಾಲೆಯರ ನಿರ್ದೋಷಿತೆ, ಒಂದೊಂದು ಮುಖದ ಸರಳತೆ ನಮ್ರತೆ ಗಳನ್ನು ನೋಡಿದರೆ, ಅಂತಹವರನ್ನು ಪ್ರೀತಿಸಬೇಕೆಂದು ಇಷ್ಟವಾಗುತ್ತದೆ. ಅವರ ಸಂತೋಷಾರ್ಥವಾಗಿ ಜಗತ್ತಿನ ಸಂಸಾರವನ್ನು ತೊರೆದು ಅವರ ಸುಖ ಸಾಧನಕ್ಕೆ ಸಲುವಾಗಿ ಪ್ರಾಣವನ್ನು ಕೊಡಬೇಕೆನ್ನಿಸುತ್ತದೆ. ಸರಳೆಯು ಅಂತಹ ಪರಮ ಸುಂದರಿಯಲ್ಲ. ಆದರೆ ಅವಳ ಮುಖದಲ್ಲೊಂದು ಅನಿರ್ವಚನೀಯ

ಭಾವವಿದ್ದಿತು. ಹೃದಯವೂ ಮುಖವೂ ಪರಸ್ಪರ ಅವಿಕಲ ಪ್ರತಿಕೃತಿಯಾಗಿದ್ದುವು. ಆದುದರಿಂದ ಸ್ವಲ್ಪಹೊತ್ತಿನಲ್ಲಿಯೇ ವಿಮಲೆಯು ಅವಳನ್ನು ತನ್ನ ತಂಗಿಯೆಂದು ಪ್ರೀತಿಸಿದ್ದುದೇನೂ ಆಶ್ಚರ್ಯವಲ್ಲ.

ಮತ್ತೊಂದು ಪ್ರಕಾರದ ಆಕೃತಿಗಳುಂಟು. ಅಂತಹವರನ್ನು ನಿರುಪಮ ಸೌಂದರ್ಯದಿಂದಲಂಕರಿಸುವುದಕ್ಕೆ ಸಲುವಾಗಿ ಪ್ರಕೃತಿಯು ತನ್ನ ಭಾಂಡಾರವನೆಲ್ಲಾ ಬರಿದುಮಾಡಿರುವಳು. ಜ್ಯೋತಿಃಪೂರ್ಣವಾದಾ ಮುಖಮಂಡಲ, ಜ್ಯೋತಿಃಪೂರ್ಣವಾದಾ ಕಣ್ಣುಗಳು, ಸೂಕ್ಷ್ಮವಾದಾ ಅಧರೋಷ್ಠಗಳು, ಉನ್ನತವಾದಾ ಲಲಾಟ, ತೂಲಿಕೆಯಿಂದ ತಿದ್ದಲ್ಪಟ್ಟಿದ್ದಂತಿರುವ ಸೂಕ್ಷ್ಮವಾದಾ ಹುಬ್ಬುಗಳು. ತನು ಅಂಗ ಸುಘಟಿತ ದೀರ್ಘಾವಯವ ಇವುಗಳನ್ನು ನೋಡಿದರೆ ಹೃದಯದಲ್ಲಿ ಪ್ರೇಮೋದ್ರೇಕವಾಗುವುದಕ್ಕೆ ಮೊದಲು ಭಕ್ತಿಯು ಹುಟ್ಟುವುದು. ಉಜ್ವಲವಾದಾ ಕಣ್ಣುಗಳಲ್ಲಿಯೂ ಉನ್ನತವಾದಾ ಪ್ರಶಸ್ತ ಲಲಾಟದಲ್ಲಿಯೂ ಹೃದಯದ ಉನ್ನತಭಾವವು ತೋರುವುದು, ಹಾಗೂ ಹೃದಯದ ದೃಢ ಪ್ರತಿಜ್ಞೆಯೂ ಕಣ್ಗೊಳಿಸುವುದು. ವಿಮಲೆಯ ಸೌಂದರ್ಯವು ಹಾಗಿದ್ದಿತು. ಅವಳ ಹೃದಯವೂ ಮುಖದ ಅವಿಕಲ ಪ್ರತಿಕೃತಿಯಾಗಿದ್ದಿತು—ಅಂತಹ ದೇವಿಯ ಅವಯವಗಳನ್ನು ಕಂಡು ಸರಳೆಯು ಅವಳನ್ನು ತನ್ನ ಅಕ್ಕನೆಂದು ಭಕ್ತಿಯಿಂದ ಭಾವನೆಮಾಡಿದುದು ಆಶ್ಚರ್ಯವಲ್ಲ.

ಸರಳೆಯ ಹೃದಯದ ದುಃಖವನ್ನು ದೂರಮಾಡುವುದಕ್ಕೆ ಸಲುವಾಗಿ ವಿಮಲೆಯು ಅವಳನ್ನು ದುರ್ಗದ ನಾಲ್ಕುಕಡೆ ತೋರಲು ಕರೆದುಕೊಂಡು ಹೋದಳು. ಮೊದಲು ದುರ್ಗಕ್ಕೆ ಹಿಂದಿದ್ದ ಉದ್ಯಾನಕ್ಕೆ ಕರೆದುಕೊಂಡು ಹೋದಳು. ಅಲ್ಲಿ ಮಾವಿನಮರದ ದಟ್ಟವಾದ ನೆರಳಿನಿಂದ ಹಗಲು ಎರಡು ಘಂಟೆಯಲ್ಲಿಯೇ ಸಂಜೆಯಂತೆ ತಂಗೊಳ್ಳು ಸ್ನಿಗ್ಧವಾಗಿರುವುದು. ಅವರಿಬ್ಬರೂ ಅಲ್ಲಿ ಸ್ವಲ್ಪ ಹೊತ್ತು ಕುಳಿತಿದ್ದರು. ಅಲ್ಲೆರಡನೆಯ ಪ್ರಹರದ ಮೃದುವಾದ ಗಾಳಿಯಿಂದ ಸಣ್ಣಾ ಸಣ್ಣಾ ಎಲೆಗಳ ಮರ್ಮರದ ಶಬ್ದವು ಕೇಳುವುದು. ಮಧ್ಯೆ ಮಧ್ಯೆ ಕೌಶಕದ ಹಕ್ಕಿಯು ಮೃದುವಾದ ಅಪರಿಸ್ಫುಟ ಶಬ್ದವು ಕೇಳುವುದು. ಅದರಿಂದ ಹೃದಯವು ಮೋಹಿತವಾಗಿ ಶಾಂತಿಯಿಂದ ಪರಿಪೂರ್ಣವಾಗುವುದು.

ಅವರೀರ್ವರೂ ಉದ್ಯಾನದಿಂದ ಸರೋವರದ ಬಳಿ ಹೋದರು. ಅದರ ಜಲರಾಶಿಯು ವಿಸ್ತೀರ್ಣವಾಗಿ ತನ್ನ ಸ್ಥಿರವಾದ ವಕ್ಷದಲ್ಲಿ ಆಮ್ರವೃಕ್ಷಗಳ ಛಾಯೆಯನ್ನು ಧಾರಣೆಮಾಡಿದ್ದಿತು. ಅವರಿಬ್ಬರೂ ಬಹಳ ಹೊತ್ತಿನತನಕ ಸರೋವರದ ಮೇಲೆ ಕುಳಿತಿದ್ದರು. ಪ್ರಕೃತಿಯ ಸ್ವಭಾವವಾದ ನಿಸ್ತಬ್ಧತೆಯಿಂದ ಅವರ ಹೃದಯವೂ ನಿಸ್ತಬ್ಧವಾಯಿತು. ವಿಮಲೆಯು ಮಧ್ಯೆ ಮಧ್ಯೆ ಒಂದೆರಡು ಮಾತನಾಡುವಳು, ಸರಳೆಯ ಬಾಯಲ್ಲಿ ಮಾತಿಲ್ಲ, ನಿಸ್ತಬ್ಧವಾಗಿ ವಿಮಲೆಯ ಮಾತುಗಳನ್ನು ಕೇಳುತಿರುವಳು.

ಹೊತ್ತು ಮುಳುಗುವುದಕ್ಕೆ ಬಹಳ ಹೊತ್ತಿಗೆ ಮೊದಲು ಘನಛಾಯಾನ್ವಿತವಾಗಿದ್ದ ಆಮ್ರವೇಷ್ಟಿತ ಸರೋವರದಲ್ಲಿ ಕತ್ತಲಾಗುತ ಬಂದಿತು. ವಿಮಲೆಯು ತನ್ನ ಗೆಳತಿಯ ಅಂತಃಕರಣದಲ್ಲಿಯೂ ದುಃಖತಿಮಿರವು ಘನೀಭೂತವಾಗುತಿದ್ದಿತೆಂದು ತಿಳಿದಳು.

ವಿಮಲೆಯು ಅತಿ ಸ್ನೇಹದಿಂದ ಸರಳೆಯ ಬಳಿ ಸರಿದು ಕುಳಿತು ಅವಳ ಕೈಯನ್ನು ತನ್ನ ಕೈಯಿಂದ ಹಿಡಿದುಕೊಂಡು, "ಸರಳೆ! ನಿನ್ನ ಮನದಲ್ಲೇನೋ ಒಂದು ದುಃಖವುದಯವಾದಂತಿದೆಯಲ್ಲವೆ? ನನ್ನಲ್ಲದನ್ನು ಮರೆಮಾಜಲೇಕೆ?" ಎಂದಳು.

ಸರಳೆ—ನಿನ್ನಲ್ಲಿ ಮರೆಮಾಜಲೇಕೆ? ನಿಜ, ನನ್ನ ಮನಸ್ಸಿನಲ್ಲಿ ಹೇಗೇಗೋ ಆಗುತ್ತಿದೆ, ನಿಜವನ್ನು ಹೇಳುತ್ತೇನೆ, ಕೇಳು, ಅದಾವದರಿಂದಾ ದುಃಖವೋ ಅದೆನಗೆ ಗೊತ್ತಾಗುವುದಿಲ್ಲ.

ವಿಮಲೆ—ಹಾಗಾದರೆ ಆವುದನ್ನಾದರೂ ಕುರಿತು ಚಿಂತಿಸುತ್ತಿರುವಿಯಾ?

ಸರಳೆ—ಗೊತ್ತಿಲ್ಲ. ಆವದರ ಚಿಂತೆಯೂ ಇಲ್ಲ, ಒಂದೊಂದು ತಡವೆ ಮನಸ್ಸಿನಲ್ಲಿ ಹೇಗೇಗೋ ಆಗುತ್ತಿದೆ.

ಸರಳೆಯು ನಿಜವಾದುದನ್ನೇ ಹೇಳುತಿದ್ದಳು; ಅವಳ ಮನಸ್ಸು ಆವುದಕ್ಕೆ ಸಲುವಾಗಿ ಚಂಚಲವಾಗುತಿದ್ದಿತೋ ಅದನ್ನವಳು ಅರಿಯಳು.

ಸಾಯಂಕಾಲವಾಯಿತು. ವಿಮಲೆಯೂ ಸರಳೆಯೂ ಉದ್ಯಾನದಿಂದ ದುರ್ಗದೊಳಗೆ ಬಂದರು—ಅಲ್ಲಿಗೆ ಬಂದು, ವಿಮಲೆಯು ಸರಳೆಯನ್ನು ಕೊಟಡಿಯಿಂದ ಕೊಟಡಿಗೆ ಕರೆದುಕೊಂಡುಹೋಗಿ ಬೆಲೆಯುಳ್ಳ ನಾನಾರೂಪವಾದ ಅಪೂರ್ವ ಪದಾರ್ಥಗಳನ್ನವಳಿಗೆ ತೋರತೊಡಗಿದಳು—ತಾನು ಮಲಗುವ ಶಯನಾಗಾರಕ್ಕೆ ಕರೆತಂದಳು, ಅಲ್ಲೊಂದು ಮಯನಾ ಹಕ್ಕಿಯು ಪಂಜರದಲ್ಲಿದ್ದಿತು. ಅದು ಮಾತನಾಡಬಲ್ಲದು.

ವಿಮಲೆಯು ಸರಳೆಯನ್ನದಕ್ಕೆ ತೋರಿ, "ಹೇಳು, ನೋಡೋಣ, ಅವಳಾರು?" ಎಂದಳು. ಹಕ್ಕಿಯೂ, "ಅವಳಾರು?" ಎಂದಿತು—

ವಿಮಲೆ—ನೀನು ಹೇಳದಿದ್ದರೆ ನಾನೇಕೆ ಹೇಳಲಿ?

ಹಕ್ಕಿ—ನಾನೇಕೆ ಹೇಳಲಿ?

ವಿಮಲೆ—ಹಾಗಾದರೆ, ನೀನವಳನ್ನರಿಯೆ?

ಹಕ್ಕಿ—ನೀನವಳನ್ನರಿಯೆ?

ವಿಮಲೆ—ಹೇಳು, ನೋಡೋಣ, ಸರಳೆಯು ಹೊರಗಣ ಹೆಣ್ಣೋ, ಮನೆಯ ಹೆಣ್ಣೋ?

ಹಕ್ಕಿ—ಮನೆಯ ಹೆಣ್ಣೋ.

ವಿಮಲೆ—ನೀನು ಹೇಳಲಾರೆ, ದೂರಿರು, ಬಾಂದಿ!

ಹಕ್ಕಿ—ದೂರಿರು, ಬಾಂದಿ!

ಹಕ್ಕಿಯ ಮಾತನ್ನು ಕೇಳಿ, ಸರಳೆಯು ವಿಸ್ಮಿತೆಯಾಗಿ, ಮನಸ್ಸಿನಲ್ಲಿ ತಾನು ಅದೇ ಮನೆಯ ಹೆಣ್ಣೇ ಎಂದು ಭಾವಿಸಿಕೊಂಡಳು.

ಹಕ್ಕಿಯ ವಿದ್ಯೆಯು ಎಷ್ಟರವುಟ್ಟಿನದೆಂಬುದನ್ನು ವಿಮಲೆಯು ತಿಳಿದಿದ್ದಳು. ಹಕ್ಕಿಯು ಆರಾದರೂ ಹೇಳಿದ ಮಾತುಗಳಲ್ಲಿ ಕಡೆಯ ಎರಡು ಮಾತುಗಳನ್ನು ಮಾತ್ರ ಪುನರುಕ್ತಿಯಾಗಿ ಉಚ್ಚರಿಸಬಲ್ಲದುದಾಗಿದ್ದಿತು.

ಬಳಿಕ ವಿಮಲೆಯು ಸರಳೆಯನ್ನು ಮತ್ತೊಂದು ಕೋಣೆಗೆ ಕರೆದುಕೊಂಡು ಹೋದಳು. ಆ ಕೋಣೆಯನ್ನು ನೋಡಿದೊಡನೆ ಸರಳೆಯ ದುಃಖವು ಇಮ್ಮಡಿಯಾಯಿತು. ಅವಳೊಮ್ಮಿಂದೊಮ್ಮೆ ಅನ್ಯಮನಸ್ಕಳಾಗಿ ಯೋಚಿಸತೊಡಗಿದಳು. ವಿಮಲೆಯು ಸ್ನೇಹಭರಿತೆಯಾಗಿ, "ಬಾ ಚಿಂತೆಯೇಕೆ?" ಎಂದಳು.

ಸರಳೆ—ನನ್ನ ಮನಸ್ಸಿನಲ್ಲಿ ಪುನಃ ಹೇಗೋ ಆಗುತ್ತದೆ, ಏನೋ ಸ್ವಪ್ನವನ್ನು ಕಂಡಂತಾಗುತ್ತದೆ—ನಮ್ಮ ಅಮ್ಮನೆಲ್ಲಿ?

ವಿಮಲೆಯು ಸರಳೆಯ ಮುಖವನ್ನು ದೃಷ್ಟಿಸಿ ನೋಡಿದಳು. ಸರಳೆಯ ಕಣ್ಣುಗಳಲ್ಲಿ ನೀರು ತುಂಬಿದ್ದಿತು. ವಿಮಲೆಯು ಪುನಃ ಮಾತಿಲ್ಲದೆ ಸರಳೆಯನ್ನು ಅವಳ ತಾಯಿಯ ಬಳಿ ಕೊಂಡೊಯ್ದಳು. ಸರಳೆಯು ಬೇಗನೆ ಹೋಗಿ ಅಶ್ರುಪೂರ್ಣನಯನೆಯಾಗಿ ತಾಯಿಯ ವಕ್ಷದಲ್ಲಿ ತಲೆಯನ್ನು ಬಚ್ಚಿಟ್ಟುಕೊಂಡಳು.

ಮಹಾಶ್ವೇತೆಯು ಔತ್ಸುಕ್ಯದಿಂದಲೂ ಸ್ನೇಹದಿಂದಲೂ ಮಗಳನ್ನು ಕುರಿತು "ಮಗು! ಏನಾಯಿತೆ?" ಎಂದು ವಿಚಾರಿಸಿದಳು.

ಸರಳೆ—ಅಮ್ಮಾ! ನನಗಾವದೂ ಗೊತ್ತಾಗುವುದಿಲ್ಲ. ಈ ಮನೆಯಲ್ಲೇನು ಇರುವುದೋ ಅದನ್ನು ಹೇಳಲಾರೆನು. ನಾನು ಹಗಲೆಲ್ಲಾ ಎಚ್ಚರಗೊಂಡಿದ್ದು ಕನಸನ್ನು ಕಾಣುವಂತಿದೆ. ಇಲ್ಲಿರುವದನ್ನೆಲ್ಲಾ ನಾನು ನೋಡಿ ಕಂಡಂತಿವೆ, ಒಂದು ಕೋಣೆಗೆ ಹೋದೆನು, ಅಲ್ಲೊಂದು ದೇವಮೂರ್ತಿಯನ್ನು ಕಂಡಂತಾಯಿತು, ಅಮ್ಮಾ! ನಾನು ಭ್ರಾಂತೆ. ಒಮ್ಮಿಂದೊಮ್ಮೆ ಆ ಮೂರ್ತಿಯನ್ನು ತಂದೆಯೆಂದು ಭಾವಿಸಿಕೊಂಡೆನು! ನಾನು ಮರೆವುಗೊಂಡಿದ್ದೇನೆಯೆ? ಅಥವಾ ಕನಸನ್ನು ಕಾಣುತ್ತಿರುವೆನೆ?

ಮಹಾಶ್ವೇತೆಯು ಪುನಃ ಹೆಚ್ಚು ಕೇಳಬೇಕಾಗಿರಲಿಲ್ಲ. ಉಚ್ಚಸ್ವರದಿಂದ ರೋದನಕ್ಕೆ ತೊಡಗಿದಳು. ಜ್ಞಾನವಿಲ್ಲದ ಹುಡುಗಿಯ ಮಾತಿನಿಂದ ಅವಳ ಹೃದಯವು ವಿದೀರ್ಣವಾಗುತಿದ್ದಿತು.

ಶೋಕದ ಪ್ರಥಮ ವೇಗವು ಕಡಿಮೆಯಾದ ಬಳಿಕ ಮಹಾಶ್ವೇತೆಯು ಮಗಳನ್ನು ಪುನಃ ಆಲಿಂಗನೆಯಂ ಮಾಡಿಕೊಂಡು ಹೇಳತೊಡಗಿದಳು—ಸರಳೆ! ಅದು ಕನಸಲ್ಲ, ಪೂರ್ವದ ಸ್ಮೃತಿಯು ನಿನ್ನ ಮನದಲ್ಲಿ ಜಾಗರಿತವಾಗುತ್ತಿದೆ,

ಇದುವರೆಗೂ ನೀನು ಮರೆತಿದ್ದೆಯೆಂದು ತಿಳಿದು ನಾನು ನಿನಗೆ ಹೇಳದೆ ಮರೆಮಾಚಿದ್ದ ವಿಷಯವು ನಿನ್ನ ಮನಸ್ಸಿನಲ್ಲೀಗ ತಾನಾಗಿ ಜಾಗರಿತವಾಗುತ್ತ ತಲೆದೋರುತಿದೆ; ಮುಂದೆ ನಾನದನ್ನು ನಿನ್ನಿಂದ ಮರೆಮಾಚೆನು.

ಹೀಗೆಂದು ಹೇಳಿ ಮಹಾಶ್ವೇತೆಯು ವಿಚಾರವನ್ನೆಲ್ಲಾ ಆದ್ಯೋಪಾಂತವಾಗಿ ಸರಳೆಗೆ ತಿಳಿಯಹೇಳಿದಳು; ಸರಳೆಯ ಜನ್ಮವಿಷಯ, ರಾಜಾ ಸಮರಸಿಂಹನ ಸಮ್ಮಾನ ಗೌರವಗಳ ವಿಷಯ, ಅವನು ಅನ್ಯಾಯವಾಗಿ ಮರಣವಾದ ವಿಷಯ, ಬಳಿಕ ತಾನು ಪಲಾಯನವಾಗಿ ಛದ್ಮವೇಷದಲ್ಲಿ ಅಜ್ಞಾತವಾಸದಲ್ಲಿದ್ದ ವಿಷಯ—ಇವೇ ಮುಂತಾದ ವಿಷಯಗಳನೆಲ್ಲಾ ಹುಡುಗಿಗೆ ವಿವರಿಸಿ ಹೇಳಿದಳು. ಆ ವಿಷಯಗಳೆಲ್ಲವೂ ಕೇಳುತಿದ್ದಹಾಗೆ ಮೊದಲು ಮೊದಲು ಸರಳೆಗೆ ಸ್ವಪ್ನದಂತೆ ತೋರತೊಡಗಿದುವು, ಆದರೆ ಕ್ರಮೇಣ ಅವಳಾ ಮೋಹಜಾಲವು ಅಂತರಿತವಾಗಿ ಒಂದೆರಡು ಮಾತುಗಳು ನೆನೆವಿಗೆ ಬಂದುವು; ಮನೆ, ಮುಂಬಾಗಿಲು, ಕಂಭ, ಕೋಣೆ ಇವುಗಳನ್ನು ನೋಡಿ ನೋಡಿ ಪೂರ್ವದ ವಿಷಯಗಳು ನೆನವಿಗೆ ಬರತೊಡಗಿದುವು.

ಮಹಾಶ್ವೇತೆಯ ಕಬ್ಬಿಣದಂತಿದ್ದ ಕೆಚ್ಚೆದೆಯೂ ಕರಗಿ, ತಾಯಿ ಮಗಳಿಬ್ಬರೂ ಪರಸ್ಪರ ಆಲಿಂಗನೆಮಾಡಿಕೊಂಡು ನೀರವವಾಗಿ ರೋದನ ಮಾಡತೊಡಗಿದರು.

ವಿಮಲೆಯು ಪಾರ್ಶ್ವದಲ್ಲಿ ಕುಳಿತು ಗಭೀರ ಚಿಂತೆಯಲ್ಲಿ ಮಗ್ನೆಯಾಗಿದ್ದಳು—ಅವಳ ಭ್ರೂಯುಗಳವು ಕುಂಚಿತವಾಗಿ ತುಟಿಯಮೇಲೆ ಹಲ್ಲೂರಿ, ಕೆಂಡ ಕೆಂಪೇರಿದ್ದವಳ ಕಣ್ಣುಗಳಿಂದ ಕೆಂಡದ ಕಿಡಿಗಳು ಸುರಿಯುತಿದ್ದುವು. ಅವಳಾ ಮನೋಭಾವವನ್ನು ಪಾಠಕಮಹಾಶಯರು ಅನಾಯಾಸವಾಗಿ ಅನುಭವಮಾಡುವರು—ಶಕುನಿಯು ಎಂತಹ ಪಾಮರನೆಂಬುದು, ತಂದೆಯನ್ನೆಷ್ಟೊಂದರವರೆಗೆ ಪಾಪಕಾರ್ಯದಲ್ಲಿ ಹೊಗರಿಸಿ ಲಿಪ್ತಮಾಡಿದ್ದನೆಂಬುದು, ಆವುದಕ್ಕೆ ಸಲುವಾಗಿ ಮಹಾಶ್ವೇತೆಯನ್ನು ಬಂದಿಯಾಗಿ ಮಾಡಿದ್ದನೆಂಬುದು ಇವೇ ಮುಂತಾದ ಚಿಂತೆಯು ಬಿರುಗಾಳಿಯಂತೆ ಅವಳ ಹೃದಯವನ್ನು ಬೀಸಿ ಹೊಡಿಯುತ ವ್ಯಥೆಗೊಳಿಸುತಿದ್ದಿತು.

ವಿಮಲೆಯು ಒಮ್ಮಿಂದೊಮ್ಮೆ ಆ ಚಿಂತಾಸ್ವಪ್ನದಿಂದ ಎಚ್ಚರಗೊಂಡವಳಾಗಿ ಗಂಭೀರವಾದ ಸ್ವರದಿಂದ, "ತಾಯಿ! ಪಾಮರನಾದಾ ಶಕುನಿಯ ಪಾಪಾಚರಣೆಯನ್ನು ನಾನೀಗ ತಿಳಿದೆನು. ಈ ಜಗತ್ಸಂಸಾರದಲ್ಲಿ ಅವನಂತಹ ಪಾತಕಿಯಿರನು, ನರಕದಲ್ಲಿಯೂ ಅವನಂತಹ ಕೀಟವಿರದು, ಆದರೆ ಮೇಲೆ ಭಗವಂತನಿರುವನು, ಆ ಭೀಷಣ ಪಾಪಕ್ಕೆ ಭೀಷಣ ಪ್ರಾಯಶ್ಚಿತ್ತ ಉಂಟು.

ಮಹಾಶ್ವೇತೆ—(ಗಂಭೀರವಾದಾ ಮಾತುಗಳನ್ನು ಕೇಳಿ)—ವತ್ಸೆ, ವಿಮಲೆ! ಭಗವಂತನಲ್ಲಿನಗೆ ಅಚಲಭಕ್ತಿಯುಂಟು, ಆದರೆ ಅವನ ಅಭಿಪ್ರಾಯವನ್ನೂ ಅವನ

ಲೀಲೆಗಳನ್ನೂ ನಾವು ಅರಿಯೆವು. ಇಲ್ಲದಿದ್ದರೆ, ಈ ಪ್ರಪಂಚದಲ್ಲಿ ಪಾಪಕ್ಕೆ ಜಯವಾಗಲೇಕೆ?

ವಿಮಲೆ—(ಮೊದಲಿನ ಸ್ವರದಲ್ಲಿ) ನನ್ನ ವಿನತಿಯನ್ನು ಅವಧಾರಣೆ ಮಾಡೋಣಾಗಲಿ; ಪಾಪಕ್ಕೆ ಜಯವೆಂಬುದು ಕ್ಷಣಸ್ಥಾಯಿಮಾತ್ರ, ಪಾಪಕ್ಕೆ ತಕ್ಕ ಭೀಷಣವಾದ ಪ್ರಾಯಶ್ಚಿತ್ತಕ್ಕೆ ವಿಳಂಬವಿರದು. ಆ ಪಾಮರನ ಮೃತ್ಯುವಿಗೆ ಉಪಾಯವು ತಾನಾಗಿಯೇ ಒದುಹುವಂತಿದೆ, ತಮ್ಮ ಸ್ವಾಮಿಯ ಮರಣಕ್ಕೆ ಪ್ರತಿಕ್ರಿಯೆಗೆ ವಿಳಂಬವಿಲ್ಲ.

---

## ಇಪ್ಪತ್ತುಮೂರನೆಯ ಪರಿಚ್ಛೇದ

### ಭಿಕಾರಿಣಿಯ ರಕ್ಷೆ

Has sorrow thy young days shaded
As clouds o'er the morning fleet?
Too fast have those young pays faded
That even in sorrow were sweet?
Does time with his cold wings wither
Each feeling that once was dear?
Come, child of misfortune! come hither,
I'll weep thee tear for tear!

*Moore.*

ಸಾಯಂಕಾಲವಾದ ಬಳಿಕ ಮಹಾಶ್ವೇತೆಯು ಪೂಜೆಗೆ ಸಲುವಾಗಿ ಯಮುನೆಯ ತೀರಕ್ಕೆ ಹೋದಳು. ಅದಕ್ಕೆ ಶಕುನಿಯು ಆಕ್ಷೇಪವಿರಲಿಲ್ಲ. ಆವ ದುರ್ಗದಲ್ಲಿ ಅವಳ ಯೌವನಾವಸ್ಥೆಯೂ ಅವಳ ಸುಖದ ದಿನಗಳೂ ಕಳೆದುಹೋಗಿದ್ದುವೋ, ಅವಳು ಎಲ್ಲಿ ರಾಜಕುಲಕ್ಕೆ ಚೂಡಾಮಣಿಯ ಸ್ವರೂಪವಾಗಿದ್ದು ಸಮರಸಿಂಹನಿಗೆ ರಾಜಮಹಿಷಿಯಾಗಿ ಕಾಲವನ್ನು ಕಳೆದಿದ್ದಳೋ ಇಂದಾ ದುರ್ಗದ ಪಾರ್ಶ್ವದಲ್ಲಿ ನಿರಾಶ್ರಯೆಯಾದಾ ಹೀನ ವಿಧವೆಯು ಬಂದಿಯಾಗಿ ಉಪಾಸನೆಯಂ ಮಾಡುತಿದ್ದಳು. ಮೊದಲು ದುರ್ಗದ ಪಾರ್ಶ್ವದಲ್ಲಿ ಕಲಕಲ ಶಬ್ದವಂ ಮಾಡುತ್ತ ಹರಿಯುತಿದ್ದ ತರಂಗಮಯವಾದ ಯಮುನೆಯು ಇಂದೂ ಸಿಟ್ಟಿನಿಂದ ಅಲ್ಲೋಲ ಕಲ್ಲೋಲವಾಗಿ ಮೋರೆ ಗಂಟುಹಾಕಿಕೊಂಡು ಹರಿಯುತಿದ್ದಿತು. ಅದರಲ್ಲಾವ ಪರಿವರ್ತನೆಯಿಲ್ಲ; ದೂರ ಹಳ್ಳಿಗಳಲ್ಲಿ ಕಾಣುತಿದ್ದ ಮರಗಳ ಗುಂಪು, ಪಾರ್ಶ್ವದಲ್ಲಿ ಕಾಣುತಿದ್ದ ಮಾವಿನತೋಪು, ದುರ್ಗದೆದುರಿಗೆ ಕಾಣುತಿದ್ದ ವಿಸ್ತಾರವಾದ ಹೊಲ, ಗದ್ದೆ, ಮೈದಾನಗಳು, ಮುಂತಾದವುಗಳಲ್ಲಾವ ಪರಿವರ್ತನೆಯೂ ಉಂಟಾಗಿರಲಿಲ್ಲ. ಆದರೆ ಮಹಾಶ್ವೇತೆಯ ಜೀವನದಲ್ಲಿ ಎಂತಹ ಪರಿವರ್ತನೆಗಳುಂಟಾಗಿದ್ದುವು! ಇಂದಾ ಪೂರ್ವ ಗೌರವವೆಲ್ಲಿ ಹೋಯಿತು? ಆ ದುರ್ಗಾಧಿಪತಿಯೆಲ್ಲಿ? ಆ ವೀರಶ್ರೇಷ್ಠನೆಲ್ಲಿ? ಬಿಸಿಲುಕಾಲದ ಪ್ರಬಲವಾದ ಗಾಳಿಯಿಂದ

ಕೊಂಡೊಯ್ದೊಸಿಯಲ್ಪಟ್ಟ ತರಗೆಲೆಯಂತೆ, ಸಮುದ್ರದ ತರಂಗ ಮಾಲೆಗಳಲ್ಲಿ ವಾರಿಬಿಂದುವು ಲೀನವಾಗುವಂತೆ, ಕಳೆದುಹೋದ ಕಾಲರೂಪವಾದ ಅನಂತಸಾಗರ ದಲ್ಲಿ ಪೂರ್ವದಾ ಗೌರವಾದಿಗಳು ಲೀನವಾಗಿ ಹೋದುವು.

ಇತ್ತಲಾಗಿ ವಿಮಲೆಯು ಸರಳೆಯನ್ನು ತನ್ನ ಕೋಣೆಗೆ ಕರೆದುಕೊಂಡು ಹೋಗಿ ಈರ್ವರೂ ಸೋದರಿಯರಂತೆ ಒಂದು ಹಾಸಿಗೆಯಲ್ಲಿ ಮಲಗಿದರು. ವಿಮ ಲೆಯು ಸರಳೆಯನ್ನು ನೋಡಿದ ಮೊದಲ್ಗೊಂಡು ಪ್ರೀತಿಸುತಿದ್ದಳು. ಆದರೆ ಶಕುನಿ ಹಾಗೂ ತನ್ನ ತಂದೆ ಇವರ ದುರಾಲೋಚನೆಯಿಂದ ಸರಳೆಯು ಅನಾಥೆ ಯಾಗಿದ್ದಳೆಂದು ತಿಳಿದ ಬಳಿಕ ಅವಳ ಪ್ರೀತಿವಿಶ್ವಾಸಗಳು ದಶಗುಣ ವೃದ್ಧಿ ಗೊಂಡುವು. ತಂದೆಯು ನಡೆಯಿಸಿದ ಘೋರ ಪಾಪವು ಪರಿಶೋಧವಾಗುವು ದಾಗಿದ್ದರೆ, ವಿಮಲೆಯು ತನ್ನ ಪ್ರಗಾಢ ಪ್ರೀತಿವಿಶ್ವಾಸಗಳಿಂದ ಮಹಾ ಶ್ವೇತೆಯನ್ನೂ ಸರಳೆಯನ್ನೂ ಉಪಚರಿಸಿ ಆದರಿಸಿ ಪ್ರತೀಕಾರವನ್ನು ಮಾಡತೊಡ ಗಿದಳು. ಅವರಿಬ್ಬರೂ ಏಕತ್ರ ಮಲಗಿಕೊಂಡು ಬಹಳಹೊತ್ತಿನಿಂದ ಮಾತನಾಡು ತಿದ್ದರು. ಇಬ್ಬರೂ ಅಲ್ಪವಯಸ್ಕರು, ಅವಿವಾಹಿತೆಯರು, ಅವರಿಬ್ಬರಿಗೂ ಸ್ವಲ್ಪ ಹೊತ್ತಿನಲ್ಲಿಯೇ ಪ್ರಗಾಢವಾದ ಪವಿತ್ರ ಪ್ರಣಯವು ಹುಟ್ಟಿತು.

ವಿಮಲೆಯು ಬಾರಿಬಾರಿಗೂ ತಾಯಿ ಮಗಳ ಅಜ್ಞಾತವಾಸದಲ್ಲಿ ಅವರು ಪಟ್ಟ ಕಷ್ಟವನ್ನು ಕುರಿತು ಕೇಳತೊಡಗಿದಳು, ಬಾರಿಬಾರಿಗೂ ಹಳ್ಳಿಯ ವಾಸವನ್ನು ಕುರಿತು ಕೇಳುವಳು. ಸರಳೆಯ ಬಾಯಿಂದ ಆ ವೃತ್ತಾಂತವನ್ನು ಕೇಳಿ ವಿಮ ಲೆಯ ಕಣ್ಣುಗಳಲ್ಲಿ ನೀರು ತುಂಬಿತು, ತನ್ನ ತಂದೆಯ ಪಾಪಕಾರ್ಯದಿಂದ ಅವಳ ಹೃದಯದಲ್ಲಿ ಮರ್ಮಾಂತಿಕ ವೇದನೆಯುಂಟಾಗುವುದು, ಶಕುನಿಯ ಹಂಚಿಕೆ ಒಳಸಂಚುಕೆಗಳನ್ನು ಕುರಿತು ಅವಳ ಶರೀರವು ಕೋಪದಿಂದ ಕಂಟಕಿತವಾಗುವುದು. ಸ್ನೇಹಪುರಸ್ಸರವಾಗಿ ಎರಡು ಬಾಹುಗಳಿಂದಲೂ ಸರಳೆಯನ್ನು ಆಲಿಂಗನಮಾಡಿ ಕೊಂಡು ಅವಳ ಬಾಯಿಂದಾ ಹಳ್ಳಿಗ್ರಾಮದ ವಾಸದ ವಿಚಾರವನ್ನೂ ಅವರು ಅನುಭವಿಸಿದಾ ದಾರಿದ್ರ್ಯದ ಕಷ್ಟದ ವಿವರವನ್ನೂ ಕೇಳಿ ಕಣ್ಣೀರಿನಿಂದ ಕಣ್ಣು ಗಳನ್ನೂ ಮುಖವನ್ನೂ ಕೂದಲನ್ನೂ ತೋಯಿಸುವಳು.

ವಿಮಲೆ—ನೀವು ರುದ್ರಪುರದಲ್ಲಿದ್ದಾಗ ನಿನಗಾರು ಗೆಳತಿಯರಿದ್ದರು ? ಒಕ್ಕಲ ತನದ ಹೆಂಗಸರು ನಿನಗೆ ಸಂಗಾತಿಗಳಾಗಿದ್ದರೆ?

ಸರಳೆ—ಅಮ್ಮನಾರ ಸಂಗಡಲೂ ಹೆಚ್ಚು ಮಾತನಾಡಳು. ಹಗಲೆಲ್ಲಾ ಚಿಂತೆ ಯಲ್ಲಿರುವಳು, ಸಾಯಂಕಾಲದಲ್ಲಿ ಉಪಾಸನೆಯಂ ಮಾಡುವಳು. ನನ್ನೊಡನೆ ಒಬ್ಬಿಬ್ಬರು ಗ್ರಾಮದ ಹೆಂಗಸರು ಮಾತನಾಡುವರು, ಅಮಲೆಯೆಂಬೊಬ್ಬ ಸಾಹು ಕಾರನ ಹೆಂಡತಿಯ ಸಂಗಡ ಹೆಚ್ಚುಹೊತ್ತು ಮಾತನಾಡುತಿದ್ದೆನು.

ವಿಮಲೆ—ಅವಳಾವ ಜಾತಿಯವಳು ?

ಸರಳೆ—ಜಾತಿಯಲ್ಲಿ ಕೈವರ್ತರ ಹೆಂಗಸು.

ವಿಮಲೆ—ಅವಳು ನಿನ್ನನ್ನು ಪ್ರೀತಿಸುತಿದ್ದಳೆ? ನಿನ್ನನ್ನು ಆದರಿಸುವಳೆ?

ಸರಳೆ—ನನ್ನ ತಾಯಿಯು ಹೊರತು ಮತ್ತಾರೂ ಅವಳಂತೆ ನನ್ನನ್ನು ಪ್ರೀತಿಸುತಿರಲಿಲ್ಲವೆಂದು ತೋರುತ್ತದೆ, ಅವಳ ಹೆಸರು ನೆನಪಿಗೆ ಬಂದರೆ ಕಣ್ಣು ಗಳಲ್ಲಿ ನೀರು ತುಂಬುತ್ತದೆ—

ವಿಮಲೆ—ಸರಳೆ! ನಿಮ್ಮ ವಿಚಾರದಲ್ಲಿ ನಡೆಯಿಸಿರುವ ಅನ್ಯಾಯವನ್ನು ಕುರಿತು ಹೇಳಿತೀರದು. ನನಗೆ ಸಾಧ್ಯವಿದ್ದರೆ, ನಾನಾದರೂ ಭಿಕಾರಿಣಿಯಾಗಿ ನಿಮ್ಮನ್ನು ನಿಮ್ಮ ಪೂರ್ವಾವಸ್ಥೆಯಲ್ಲಿಡುತಿದ್ದೆನು.

ಸರಳೆ—ನಾನು ನಿಜವನ್ನು ಹೇಳುತ್ತೇನೆ, ಹಳ್ಳಿಯ ವಾಸದಲ್ಲಿ ಆ ಅವಸ್ಥೆ ಯಲ್ಲಿ ನಮಗೆ ಸ್ವಲ್ಪವೂ ಕಷ್ಟವಿರಲಿಲ್ಲ; ಆದರೆ ತಾಯಿಯು ಮಾತ್ರ ರಾತ್ರಿ ಹಗಲು ಚಿಂತಿಸುತ್ತಿರುವಳು—ಅದಕ್ಕೆ ಸಲುವಾಗಿ ನನಗೆ ದುಃಖವಾಗುವುದು—ತಾಯಿ ಯನ್ನು ಸುಖವಾಗಿಡಬೇಕೆಂದೊಂದೇ ನನ್ನ ಭಿಕ್ಷೆಯಾಗಿರುವುದು—

ವಿಮಲೆ—ಸರಳೆ! ನನಗೂ ಅದೇ ಇಷ್ಟ, ನಿಮ್ಮ ತಾಯಿಯನ್ನು ಸುಖ ವಾಗಿಡಲು ಪ್ರಾಣವನ್ನೊಪ್ಪಿಸಬೇಕಾದರೂ ಅದಕ್ಕೂ ಸಿದ್ಧವಾಗಿದ್ದೇನೆ.

ಸರಳೆ—ಅದೇಕೆ? ನಿನಗೆ ಅಸಾಧ್ಯವಾದುದಾವದು? ನಿನಗಷ್ಟೊಂದು ಐಶ್ವರ್ಯ ಮಾನಸಂಭ್ರಮಗಳವೆ?

ವಿಮಲೆ—ಸರಳೆ! ನೀನೆನ್ನ ವಿಚಾರವನ್ನೆಲ್ಲಾ ಅರಿಯೆ. ನನ್ನ ವಿಚಾರ ವನ್ನೆಲ್ಲಾ ಅರಿತಿದ್ದರೆ ನಾನು ನಿಮಗಿಂತ ಸಹಸ್ರಪಾಲು ಹೆಚ್ಚು ನಿರ್ಭಾಗ್ಯೆಯೆಂದು ತಿಳಿಯುತಿದ್ದೆ—ಈ ಧನಮಾನಗಳಾವದೂ ನನ್ನವಲ್ಲ—

ಸರಳೆ—ಏಕೆ?

ವಿಮಲೆ—ಪಾಮರನಾದಾ ಶಕುನಿಯು ನಮ್ಮ ತಂದೆಯ ಪ್ರಾಣ ಸಂಹಾ ರವಂ ಮಾಡಿ ಈ ದುರ್ಗವನ್ನೂ ಜಮೀನುದಾರಿಯನ್ನೂ ಅಪಹರಿಸುವ ಪ್ರಯತ್ನ ಗಳನ್ನು ಜರಿಗಿಸುತಿದ್ದಾನೆ; ಅದನ್ನು ಬೆಳಿಗ್ಗೆ ಹೇಳಿದೆನಷ್ಟೆ, ಪಿತನ ಚಿಂತೆಯಿಂ ದೆನಗೆ ರಾತ್ರಿ ಹಗಲು ನಿದ್ರೆಯಿಲ್ಲವಾಗಿದೆ. ಆದರೆ ಅಷ್ಟೇ ದುಃಖವಲ್ಲ.

ಸರಳೆ—ಮತ್ತೇನು?

ವಿಮಲೆ—ಸರಳೆ! ನಿನ್ನಲ್ಲಿ ಮರೆಮಾಜುವದಾವುದೂ ಇಲ್ಲ, ಆ ಪಾಮರ ನಿಗೆ ನನ್ನನ್ನು ಮದುವೆ ಮಾಡಿಕೊಳ್ಳಬೇಕೆಂಬ ಆಸೆ. ಹಾಗೆ ಮಾಡಿಕೊಂಡರೆ ತಂದೆಯ ಮರಣಾನಂತರ ತಾನು ಅನಾಯಾಸವಾಗಿ ಅವನಿಗೆ ಉತ್ತರಾಧಿಕಾರಿಯಾಗಬಹು ದೆಂದು ಯೋಚಿಸಿಕೊಂಡಿದ್ದಾನೆ; ಹೇಳುವುದಕ್ಕೆನಗೆ ಲಜ್ಜೆಯಾಗುತ್ತದೆ, ಈಗ್ಗೆ ಕೆಲವು ದಿನಗಳಿಂದ ನನ್ನೊಂದಿಗೆ ನಿತ್ಯವೂ ಮದುವೆಯ ವಿಚಾರವನ್ನು ಹೇಳು ತಿದ್ದಾನೆ; ನಾನದಕ್ಕೊಪ್ಪದಿದ್ದರೆ ಬಲಪೂರ್ವಕವಾಗಿ ನನ್ನ ಪಾಣಿಗ್ರಹಣ ಮಾಡು ವುದಾಗಿ ಹೇಳುತಿದ್ದಾನೆ, ನಾಳಿನ ಬೆಳಿಗ್ಗೆ ನರಘಾತುಕನಾದಾ ಯಮನು ನನ್ನನ್ನು ನೋಡುವನು—ಸರಳೆ ನನಗಿಂತ ಹತಭಾಗಿನಿಯರು ಮತ್ತಾರು ಉಂಟು?

ಸರಳೆಯು ಆಶ್ಚರ್ಯಪಟ್ಟು, ಸ್ವಲ್ಪ ಹೊತ್ತಾದ ಬಳಿಕ, 'ಅದರಿಂದ ತಪ್ಪಿಸಿಕೊಂಡು ಉಳಿಯುವ ಬಗೆ ಹೇಗೆ?' ಎಂದಳು.

ವಿಮಲೆ—(ಅತಿಗಂಭೀರ ಸ್ವರದಿಂದ) ನಾಳಿನದಿನ ಜಗದೀಶ್ವರನೆನ್ನನ್ನು ಕಾಪಾಡುವನು, ಅವನ ಅನುಗ್ರಹದಿಂದ ನಾನುದ್ಧಾರವಾಗುವೆನೆಂಬ ಆಶೆಯುಳ್ಳವಳಾಗಿದ್ದೇನೆ. ಬಳಿಕ ರಾತ್ರಿಯಹೊತ್ತು ಪಿತನ ಬಳಿಗೆ ಪಲಾಯನವಾಗಿ ಹೋಗುವೆನು, ಅದಕ್ಕೂ ಏರ್ಪಾಡನ್ನು ಮಾಡಿಕೊಂಡಿದ್ದೇನೆ—ಬಳಿಕ ಆ ಪಾಮರನ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಾಗುವುದು, ಅದಕ್ಕೂ ಸುಳುವನ್ನು ಯೋಚಿಸಿಕೊಂಡಿರುವೆನು. ಭಗವಂತನೆ! ದುರೂಹವಾದೀ ಕಾರ್ಯದಲ್ಲಿ ಅಬಲೆಯಾದೆನಗೆ ಸಹಾಯವನ್ನು ಮಾಡು!

ಸರಳೆಯು ನಿಸ್ತಬ್ಧವಾಗಿದ್ದಳು—ವಿಮಲೆಯು ಪುನಃ ಹೇಳತೊಡಗಿದಳು:—

ಮೊದಲು ಮಾಂಗೀರಿಗೆ ಹೋಗಿ ಪಿತನನ್ನುಳಿಸಿಕೊಳ್ಳುವೆನು; ಆ ಪಾಪಿಗೆ ದಂಡವಿಧಾನಕ್ಕೆ ಪ್ರಯತ್ನಪಡುವೆನು; ಬಳಿಕ ಈ ದುರ್ಗವನ್ನು ಮಹಾಶ್ವೇತೆಗೊಪ್ಪಿಸಲು ಪಿತನನ್ನು ಬೇಡಿಕೊಳ್ಳುವೆನು. ನಾನೆನ್ನ ಪಿತನ ಅಂತಃಕರಣವನ್ನು ಬಲ್ಲೆನು, ಅವನು ಶಕುನಿಯ ದುರಾಲೋಚನೆಯಿಂದ ಬಿಡುಗಡೆಯಾದರೆ ನ್ಯಾಯವಾದ ಕೆಲಸವನ್ನು ಮಾಡಲು ಒಪ್ಪದಿರನು—ಮಾಂಗೀರಿನಲ್ಲೊಬ್ಬ ವೀರನಿರುವನು, ಅವನೆನಗೆ ಸಹಾಯವನ್ನು ಮಾಡುವನು. ಇಂದ್ರನಾಥ! ಸತ್ಯವನ್ನು ಪಾಲಿಸು.

'ಇಂದ್ರನಾಥ'ನೆಂಬ ಹೆಸರನ್ನು ಕೇಳಿ ಸರಳೆಯು ಚಮಕಿತೆಯಾದಳು, ಒಮ್ಮೆಂದೊಮ್ಮೆ ಅವಳ ಶರೀರವು ಕಂಪಿತವಾಯಿತು; ವಿಮಲೆಯು ಅದನ್ನು ಕಂಡು ವಿಸ್ಮಿತೆಯಾದಳು.

ವಿಮಲೆ—ಸರಳೆ! ನೀನೇಕೆ ಹಾಗೆ ನಡುಗಿ ಕಳವಳಗೊಳ್ಳುತ್ತಿ! ನಿನಗಾವದೋ ವೇದನೆಯುಂಟಾಗುವಂತಿದೆ—

ಸರಳೆಯು ಅದಕ್ಕೆ ಉತ್ತರವನ್ನು ಕೊಡಲು ಇಷ್ಟವಿಲ್ಲದೆ ಮುಖವನ್ನು ಮುಚ್ಚಿಕೊಂಡಳು; ಆದರೆ ಪುನಃಪುನಃ ಕೇಳಿದುದರಮೇಲೆ ಸರಳೆಯು, "ಇಂದ್ರನಾಥನೆಂಬೊಬ್ಬವನು ನಮಗೆ ಪರಿಚಿತನು; ಅವನೂ ಪಶ್ಚಿಮದೇಶಕ್ಕೆ ಹೋಗಿದ್ದಾನೆ" ಎಂದಳು.

ತೀಕ್ಷ್ಣಬುದ್ಧಿಯುಳ್ಳ ವಿಮಲೆಯಿಂದಾವ ಮಾತನ್ನೂ ಮುಚ್ಚುಮರೆಯಾಗದು; ಸರಳೆಯಿಂದ ಒಂದೊಂದು ಮಾತನ್ನಾಗಿ ಹೊರಪಡಿಸಿದಳು; ಇಂದ್ರನಾಥನು ಸರಳೆಯ ಹೃದಯೇಶ್ವರನೆಂತಲೂ ಅವನವಳ ಪ್ರಣಯಿನೆಂತಲೂ ಇಂದ್ರನಾಥನು ತಾಯಿ ಮಂಗಳ ಉದ್ಧಾರಕ್ಕೆ ಸಲವಾಗಿ ಪಶ್ಚಿಮಕ್ಕೆ ಹೋಗಿ ಮೂರು ತಿಂಗಳಾಯಿತೆಂತಲೂ ತಿಳಿದುಕೊಂಡಳು—ಹಾಗಾದರೆ, ವಿಮಲೆಯು ಅದೇ ಇಂದ್ರನಾಥನನ್ನು ಮಹೇಶ್ವರನ ಮಂದಿರದಲ್ಲಿ ನೋಡಿದ್ದಳೆ? ವಿಮಲೆಗೆ ಹೃತ್ಕಂಪವುಂಟಾಯಿತು, ಅವಳು ಮೆಲ್ಲಮೆಲ್ಲನೆ ಮತ್ತೊಂದು ಪ್ರಶ್ನೆಯನ್ನು ಮಾಡಿದಳು,

—ಸರಳೆ! ಆ ವೀರಶ್ರೇಷ್ಠನ ಮೈಯಲ್ಲೆಲ್ಲಾದರೂ ಅವದಾದರೂ ಕುರುಹು ಗಳನ್ನು ನೋಡಿದ್ದಿಯಾ? ಎಂದಳು.

ಸರಳೆ—ಅವನ ಎಡದ ಮುಂಗೈಯ ಮೇಲೆ ಅಚ್ಚಕಪ್ಪು ಮಚ್ಚೆಯಿದ್ದಿತು.

ವಿಮಲೆಯ ಮೈ ನಡುಗಿತು, ಇಂದ್ರನಾಥನ ಕೈಮೇಲೆ ಅವಳೂ ಆ ಮಚ್ಚೆ ಯನ್ನು ನೋಡಿದ್ದಳು.

ವಿಮಲೆಯು ಮುಂದೆ ಮಾತಿಲ್ಲದೆ ಮಗ್ಗುಲಾಗಿ ಮಲಗಿಕೊಂಡಳು. ಅವಳಿಗೆ ನಿದ್ರೆಯು ಬಂದಿತೆಂದು ತಿಳಿದು ಸರಳೆಯೂ ಮಲಗಿದಳು.

---

## ಇಪ್ಪತ್ತುನಾಲ್ಕನೆಯ ಪರಿಚ್ಛೇದ

### ವಿವಾಹದ ವರ ಕನ್ಯೆಯರು

'O ! do not tempt,' she said,
'O ! do not add to my distress,
I have tasted much of bitterness.'

* * * * *

But ah, fair maid thou plead'st in vain,
His heart is proof to prayers,
Albeit like darksome floods of rain
Thou shedst thy scalding tears. *S. L. Dutt.*

ರಾತ್ರಿಯು ಪ್ರಭಾತವಾಯಿತು. ಇಂದು ವಿಮಲೆಗೆ ಭಯಾನಕವಾದ ದುರ್ದಿನ, ಆದರೆ ವಿಮಲೆಯು ವಿಪತ್ತಿನಿಂದುದ್ಧಾರವಾಗಲು ಉಪಾಯವಂ ಕಲ್ಪಿಸಿಕೊಂಡಿದ್ದಳು. ಪ್ರಾತಃಕಾಲದಲ್ಲಿ ವಿಮಲೆಯು ತನ್ನ ಶಯನ ಮಂದಿರವನ್ನು ಬಿಟ್ಟು ಬೇರೊಂದು ಕೊಟಡಿಗೆ ಹೋಗಿ ಅಲ್ಲಿ ಉಪಾಸನೆಯಂ ಮಾಡತೊಡಗಿದಳು. ಬಹಳಹೊತ್ತಿನ ತನಕ ಉಪಾಸನೆಯಂ ಮಾಡುತ ಕುಳಿತಳು. ಅವಿಶ್ರಾಂತವಾದ ಅಶ್ರುಜಲವು ಅವಳ ಕಪೋಲವನ್ನು ತೋಯಿಸುತ ಹರಿಯು ತಿದ್ದಿತು.

ಉಪಾಸನೆಯನ್ನು ಮುಗಿಸಿಕೊಂಡು ವಿಮಲೆಯು ಹೊರಗೆ ಬಂದು ನೋಡಿದಳು, ಶಕುನಿಯು ಬಂದು ಅಲ್ಲಿ ಕಾದು ನಿಂತಿದ್ದನು—ಅವನನ್ನು ಕಂಡು ನಡುಗಿ ಅವಳ ಮೈಯ ರಕ್ತವು ಶುಷ್ಕವಾಯಿತು.

ಶಕುನಿಯು ಸ್ಥಿರಭಾವದಿಂದ ನಿಂತು ವಿಮಲೆಯನ್ನು ನೋಡಿದನು, ಬಹಳ ಹೊತ್ತು ನೋಡಿದನು.

ವಿಮಲೆಯೂ ನಿಷ್ಪಂದಭಾವದಿಂದ ನಿಂತು ನೆಲವನ್ನು ನೋಡುತಿದ್ದಳು. ಅವಳ ಹೃದಯವು ಭಯದಿಂದಲೂ ಕ್ರೋಧದಿಂದಲೂ ಜರ್ಜರೀಭೂತವಾಗಿ ದ್ದಿತು—ಕಡೆಗೆ ಅವಳು ಮೃದು ಸ್ವರದಿಂದ, "ಶಕುನಿ! ನಾನು ನಿರ್ಭಾಗ್ಯೆ,

ನನ್ನಂತಹ ಹತಭಾಗಿನಿಯರು ಮತ್ತಾರೂ ಇಲ್ಲ, ನನಗೆ ಪುನಃ ದುಃಖಗೊಳಿಸ ಬೇಡ, ಕ್ಷಮಿಸು" ಎಂದಳು.

ಆ ಮಾತಿಗೆ ಕಲ್ಲಾದರೂ ಕರಗುತಿದ್ದಿತು, ಶಕುನಿಯ ಹೃದಯವು ಕರಗ ಲಿಲ್ಲ. ಅವನು ಸ್ವಲ್ಪನಕ್ಕು, "ಇದಕ್ಕೆ ಸಲುವಾಗಿಯಲ್ಲವೆ? ಅವಕಾಶವಾಗ ಬೇಕೆಂದು ಕೇಳಿಕೊಂಡುದುದು?" ಎಂದನು.

ವಿಮಲೆ—ನೀನೆನಗೆ ಅವಕಾಶವಂ ಕೊಟ್ಟುದುದಕ್ಕಾಗಿ ನಿನಗೆ ಧನ್ಯ ವಾದವಂ ಮಾಡುವೆನು, ಆದರೆ ನನ್ನನ್ನು ಕ್ಷಮಿಸು, ನನ್ನ ಹೃದಯದಲ್ಲಿನ ಯಾತನೆಯನ್ನು ನೀನರಿಯೆ, ನನ್ನ ಹೃದಯವು ವಿದೀರ್ಣವಾಗುತ್ತಿದೆ; ಶಕುನಿ! ನನ್ನನ್ನು ಕ್ಷಮಿಸು.

ಶಕುನಿ—ಮದುವೆಯಾಗುವುದಕ್ಕೆ ಹೆಣ್ಣು ಹುಡುಗರು ಹೀಗೇವೇ ಹೇಳು ವರು, ಅತ್ತೆಯಮನೆಗೆ ಹೋಗುವ ಸಮಯದಲ್ಲಿ ಎಲ್ಲರೂ ಅಳುವರು, ಆದರೆ ಒಮ್ಮೆ ಹೋದರೆ ಪುನಃ ತೌರುಮನೆಗೆ ಬರಲೊಪ್ಪರು.

ವಿಮಲೆ—ಶಕುನಿ! ನನ್ನನ್ನು ಪರಿಹಾಸ್ಯ ಮಾಡಬೇಡ, ನನಗೆ ಮರ್ಮಾಂ ತಿಕವಾದ ವೇದನೆಯುಂಟಾಗಿದೆ, ನಿನ್ನ ಪರಿಹಾಸ್ಯವೆನಗೆ ಬೇಕಾಗಿಲ್ಲ.

ಶಕುನಿ—ನಾನು ಪರಿಹಾಸ್ಯಮಾಡುವುದಕ್ಕೆ ಬಂದವನಲ್ಲ; ನೀನು ಮಾಡಿದ ಪ್ರತಿಜ್ಞೆಯನ್ನು ನೆರವೇರಿಸುವೆಯೋ ಇಲ್ಲವೋ ಅದನ್ನು ಹೇಳು.

ವಿಮಲೆ—ನಾನಾವ ಪ್ರತಿಜ್ಞೆಯಂ ಮಾಡಿಲ್ಲ.

ಶಕುನಿ—ಪ್ರತಿಜ್ಞೆಯಂ ಮಾಡದಿದ್ದರೆ ಹೋಗಲಿ, ನನ್ನನ್ನು ಮದುವೆ ಮಾಡಿಕೊಳ್ಳುವೆಯೋ ಅಥವಾ ಇಲ್ಲವೋ?

ವಿಮಲೆ—ಪ್ರಾಣವಿರುವತನಕ ನಾನದಕ್ಕೆ ಸಮ್ಮತಿಸೆನು.

ಶಕುನಿ—ನನ್ನ ಮೇಲಿನ್ನು ತಪ್ಪಿಲ್ಲ. ಬಲಪ್ರಕಾಶಮಾಡುವುದು ಹೊರತು ಬೇರೆ ಉಪಾಯವಿಲ್ಲ.

ವಿಮಲೆ—ನನ್ನ ತಂದೆ ಇದ್ದರೆ ನೀನಾ ಮಾತುಗಳನ್ನು ಹೇಳುತಿರಲಿಲ್ಲ— ತಂದೆಯು ಊರಲ್ಲಿಲ್ಲದಾಗ, ನನ್ನ ರಕ್ಷಕರು ಇಲ್ಲದ ಸಮಯದಲ್ಲಿ, ನಿರಾಶ್ರಯೆ ಯಾದ ಅಬಲೆಯಮೇಲೆ ಅತ್ಯಾಚಾರವಂ ನಡೆಯಿಸುವುದು ಬ್ರಾಹ್ಮಣನಿಗೆ ಧರ್ಮವಲ್ಲ.

ಶಕುನಿ—ನಾನೊಬ್ಬ ಹುಡುಗಿಯ ಬಳಿ ಬ್ರಾಹ್ಮಣ ಧರ್ಮವನ್ನು ತಿಳಿಯಲು ಬಂದಿಲ್ಲ.

ವಿಮಲೆ—ಆದರೂ ನನ್ನ ಮಾತುಗಳನ್ನು ಯೋಚಿಸಿ ನೋಡು; ನನ್ನ ತಂದೆಯು ನಿನಗೆ ಎಷ್ಟು ವಿಧವಾಗಿ ಅನುಗ್ರಹವನ್ನು ಮಾಡಿಲ್ಲ? ನೀನು ಅನ್ನಕ್ಕೆ ಮಾರ್ಗವಿಲ್ಲದೆ ಕೇವಲ ದರಿದ್ರನಾಗಿದ್ದಾಗ ನಿನ್ನನ್ನು ಮನೆಯಲ್ಲಿಟ್ಟುಕೊಂಡು ಮಗನಂತೆ ಸಾಕಿ ಸಲಹಿದನು, ಈಗಲೂ ನಿನ್ನನ್ನು ಮಗನಂತೆ ನೋಡುತ್ತಿರುವನು.

ಅಂತಹವನ ಮಗಳಮೇಲೆ ಅತ್ಯಾಚಾರವನ್ನು ನಡೆಯಿಸುವುದು ನಿನಗೆ ವಿಧೇಯವಲ್ಲ.

ಶಕುನಿಯು ತನ್ನ ಪೂರ್ವದ ದಾರಿದ್ರ್ಯಾವಸ್ಥೆಯ ಮಾತನ್ನು ಕೇಳಿ ಕ್ರುದ್ಧನಾಗಿ, "ನಿನ್ನ ತಂದೆಯು ಸಹಸ್ರಾಪರಾಧಗಳನ್ನು ಮಾಡಿದ್ದರೂ ಅವನಿದುವರೆಗೆ ಪ್ರಾಣದಿಂದಿರುವುದು ನನ್ನ ಅನುಗ್ರಹದಿಂದಿದ್ದಾನೆಂದು ತಿಳಿ" ಎಂದನು.

ತಂದೆಯ ಮೇಲಣ ನಿಂದೆಯನ್ನು ಕೇಳಿ ವಿಮಲೆಯು ಕೋಪವನ್ನು ತಡೆಯಲಾರದವಳಾಗಿ ಆರಕ್ತನಯನೆಯಾಗಿ, "ನೀನೇ ನನ್ನ ತಂದೆಯ ಸರ್ವನಾಶವಂಗೈದವನು, ಪುನಃ ನೀನೇ ಅವನನ್ನು ತಿರಸ್ಕರಿಸುವಿಯಾ? ನೀನು ಭೃತ್ಯನ ವೇಷದಲ್ಲಿ ದುರ್ಗಕ್ಕೆ ಬಂದು ಸೇರಿದವನು ಈಗ ಪ್ರಭುವಾಗಲೆಳಸುವಿಯಾ? ಭೃತ್ಯನನ್ನು ಮದುವೆಯಾಗಲು ವಿಮಲೆಯು ಎಂದಿಗೂ ಒಪ್ಪಳು" ಎಂದಳು.

ಶಕುನಿ—ನೀನಾರ ಎದುರಿಗೆ ನಿಂತು ಮಾತನಾಡುವುದಾಗಿ ತಿಳಿದಿರುವೆ? ನಿನ್ನ ಜೀವವೂ ಮರಣವೂ ನಿನ್ನ ತಂದೆಯ ಜೀವನ ಮರಣಗಳೂ ನನ್ನ ಕೈಲಿವೆಯೆಂದು ಬಲ್ಲೆಯೋ?

ವಿಮಲೆ—ಬಲ್ಲೆನು; ಸತೀಶಚಂದ್ರನ ಮಗಳು ಸತೀಶಚಂದ್ರನ ಭೃತ್ಯನ ಸಂಗಡ ಮಾತನಾಡುತ್ತಾಳೆ, ಅಂದಾವ ಬ್ರಾಹ್ಮಣನ ಪುತ್ರನೆಂದು ಅನ್ನಕ್ಕೆ ಸಲುವಾಗಿ ತಂದೆಯ ಬಳಿ ಆಶ್ರಯವನ್ನು ಹೊಂದಿದನೋ ಆ ಮನುಷ್ಯನ ಸಂಗಡ ನಾನು ಮಾತನಾಡುತ್ತೇನೆ.

ವಿಮಲೆಯು ಸ್ವಭಾವತಃ ಮಾನಿನಿ, ತಂದೆಯ ನಿಂದೆಯನ್ನು ಕೇಳಿ ಅವಳ ಕ್ರೋಧಾನಲವು ಪ್ರಜ್ವಲವಾಗಿ ಎದ್ದಿತು, ಅವಳ ಕಣ್ಣುಗಳು ಪ್ರಜ್ವಲಿತವಾಗಿದ್ದುವು, ಹೆರಳು ಹಾಕದವಳ ಕೂದಲು ಅವಳ ಕಪೋಲದ ಮೇಲೂ ಉನ್ನತ ವಕ್ಷದಮೇಲೂ ಬಿದ್ದಿತು. ನೋಡಿದರೆ, ಉನ್ಮತ್ತೆಯಂತೆ ಕಾಣುವಳು. ಅಪೂರ್ವವಾದಾ ಆಕೃತಿಯನ್ನು ನೋಡಿ ಶಕುನಿಯೂ ಸ್ವಲ್ಪ ಭೀತನಾದನು, ಸ್ವಲ್ಪ ಹೊತ್ತು ನಿಸ್ತಬ್ಧನಾಗಿದ್ದನು. ಮುಹೂರ್ತದೊಳಗೆ ವಿಮಲೆಯು ಕೋಪವನ್ನು ಸಂವರಣಮಾಡಿಕೊಂಡು ಶಾಂತಿಯಾಗಿ ಮೆಲ್ಲಮೆಲ್ಲನೆ ಹೇಳಿದಳು:—

"ನನ್ನ ಕೋಪವು ಮಿಥ್ಯೆಯಾದುದು, ಶಕುನಿ! ನಾನು ನಿನ್ನ ಅಧೀನದಲ್ಲಿದ್ದೇನೆಂದು ಬಲ್ಲೆನು. ಕ್ರೋಧಾಂಧೆಯಾಗಿ ನಿನ್ನನ್ನು ತಿರಸ್ಕರಿಸಿದೆನು. ತಂದೆಯಮೇಲಿನ ನಿಂದೆಯನ್ನು ನಾನು ಸಹಿಸೆನು. ನನ್ನೆದುರಿಗೆ ತಂದೆಯನ್ನು ನಿಂದಿಸಬೇಡ."

ಶಕುನಿ—ನಾನು ನಿನ್ನ ತಂದೆಯನ್ನು ನಿಂದಿಸಲು ಬಂದವನಲ್ಲ; ನಿಮ್ಮ ತಂದೆಯು ನನಗೆ ತೋರಿರುವ ದಯೆಯನ್ನು ನಾನು ಮರೆತಿಲ್ಲ—ನಾನೀಗ ಆವ ಕೆಲಸವಾಗಿ ಬಂದಿರುವೆನೋ ಅದಕ್ಕೇನು ಉತ್ತರ?

ವಿಮಲೆ—ನಾನು ಪ್ರಾಣದಿಂದಿರುವತನಕ ನಿನ್ನನ್ನು ಮದುವೆಯಾಗೆನು.

ಶಕುನಿ—ನೀನು ಅತಿಶಯ ಬುದ್ಧಿಮತಿ, ವಿಮಲೆ! ನೀನೆನ್ನ ಹೃದಯದಲ್ಲಿ ದಯೆ, ಕೋಪ, ದುಃಖ ಮುಂತಾದ ನಾನಾವಿಧವಾದ ಪ್ರವೃತ್ತಿಗಳನ್ನು ಉತ್ತೇಜನಮಾಡಿ, ನನ್ನ ಇಷ್ಟಾರ್ಥವು ಕೈಗೂಡದಹಾಗೆ ಮಾಡಲು ಪ್ರಯತ್ನಿಸುವಂತಿದೆ—ವಿಮಲೆ! ನಿನ್ನಿಂದದಾಗದು—ನಾನಾವ ಕೆಲಸದಲ್ಲಿ ದೃಢವ್ರತನಾಗಿರುವೆನೋ ನನ್ನನ್ನಾ ಕೆಲಸದಿಂದ ನಿರಸ್ತಮಾಡಲು ಪ್ರಪಂಚದಲ್ಲಾವನಿಗೂ ಶಕ್ತಿಯಿರದು. ನೀನು ಹುಡುಗಿಯಾಗಿದ್ದು ಇಷ್ಟೊಂದುದಿನದ ತನಕ ನಿನ್ನನ್ನು ಮದುವೆಯಾಗಗೊಡಿಸದಿದ್ದುದಕ್ಕೆ ಸಲುವಾಗಿ ನಿನ್ನ ಬುದ್ಧಿಯನ್ನು ಬಹಳವಾಗಿ ಪ್ರಶಂಸಿಸಬೇಕಾಗಿದೆ. ಆದರೆ, ಮುಂದೆ ಹೆಚ್ಚು ದಿನ ಹಾಗೆ ಮಾಡಲಾರೆ—ಇಂದಿನವೇ ನಾನು ನಿನ್ನನ್ನು ಮದುವೆಯಾಗುವೆನು—ಅದಕ್ಕೆ ಎಲ್ಲವೂ ಸಿದ್ಧವಾಗಿವೆ—ನೀನದಕ್ಕೆ ಅಡ್ಡಿಮಾಡಿದರೆ—ಬಲಪ್ರಕಾಶವನ್ನು ಮಾಡುವೆನು, ಮತ್ತೇಕೆ ವ್ಯರ್ಥವಾಗಿ ಅಡ್ಡಿಮಾಡುವೆ? ಬಾ, ಇಬ್ಬರೂ ಕೆಳಗೆ ಹೋಗೋಣ.

ಆ ಮಾತುಗಳನ್ನು ಕೇಳಿ ವಿಮಲೆಯು ಕೂಡಲೇ ಜಾ ಸಹೋದವಳಂತಾದಳು—ಅವಳ ದೃಢವಾದ ಪ್ರತಿಜ್ಞೆಯೂ ಮುಹೂರ್ತಕಾಲದ ತನಕ ಅವಳನ್ನು ಬಿಟ್ಟಿದ್ದಂತೆ ತೋರಿತು—ಜ್ಞಾನವಿಲ್ಲದವಳಂತೆ ಅಳುತ, "ತಂದೆಯೆ! ಈ ವಿಪತ್ತಿನ ಸಮಯದಲ್ಲಿ ನೀನು ಸಹಾಯವನ್ನು ಮಾಡದೆ ಎಲ್ಲಿಗೆ ಹೋದೆ?" ಎಂದು ಹೇಳಿದಳು.

ಶಕುನಿ—ನಿನ್ನ ತಂದೆಯು ಮಾಂಗೀರಿನಲ್ಲಿದ್ದಾನೆ, ನೀನು ವ್ಯರ್ಥವಾಗಿ ಮೊರೆಯಿಡುತ್ತಿ.

ವಿಮಲೆ—ಹಾಗಿದ್ದರೆ ಜಗತ್ಪಿತನಾದ ಜಗದೀಶ್ವರನು ಸಹಾಯವನ್ನು ಮಾಡುವನು. ಹೀಗೆಂದು ಹೇಳಿ, ವಿಮಲೆಯು ಕೈಮುಗಿದುಕೊಂಡು ಉನ್ಮತ್ತೆಯಂತೆ ಆಕಾಶವನ್ನು ನೋಡತೊಡಗಿದಳು. ಕೇಶರಾಶಿಯಿಂದವಳ ವದನಮಂಡಲವು ಮುಚ್ಚಿಹೋಗಿದ್ದಿತು. ಉಡುಗೆಯು ಸಡಲಿ ವಿಶೃಂಖಲವಾಗಿದ್ದಿತು. ಕಣ್ಣುಗಳು ನೀರುತುಂಬಿ ಅಪಾರ್ಥಿವ ಜ್ಯೋತಿಯಿಂದ ಜ್ವಲಿಸುತ್ತಿದ್ದುವು–ಉನ್ಮತ್ತೆಯಂತೆ ಊರ್ಧ್ವದೃಷ್ಟಿಯುಳ್ಳವಳಾಗಿ, "ಜಗತ್ಪಿತನಾದ ಜಗದೀಶ್ವರ! ನೀನೆನಗೆ ಸಹಾಯಮಂ ಮಾಡು!" ಎಂದು ಪ್ರಾರ್ಥಿಸಿದಳು.

ಅವಳಾ ಆಕೃತಿಯನ್ನು ಕಂಡು ಶಕುನಿಯು ಪುನಃ ನಿಸ್ತಬ್ಧಭಾವದಿಂದ ನಿಂತವನು ಅವಳಾ ಅಪೂರ್ವ ಸೌಂದರ್ಯರಾಶಿಯನ್ನು ಎವೆಯಿಕ್ಕದೆ ನೋಡುತಿದ್ದನು—ವಿಮಲೆಯು ಮೆಲ್ಲಮೆಲ್ಲನೆ ಪುನಃ ಹೇಳುತ್ತಾಳೆ—"ಶಕುನಿ! ನೀನು ಜಗದೀಶ್ವರನಿಗೆ ಹೆದರು, ಈ ಪೃಥ್ವಿಯಲ್ಲಿ ನೀನು ಅಷ್ಟೊಂದು ಪಾಪಕೃತ್ಯಗಳನ್ನು ನಡೆಯಿಸಿ ಕಡುಪಾಪಿಯಾಗಿರುವೆ, ಅದಕ್ಕೆ ಸಲುವಾಗಿ ಜಗದೀಶ್ವರನಿಗೆ ಹೆದರಬೇಕು; ನಾನವನ ಪವಿತ್ರವಾದ ಹೆಸರನ್ನು ಹೇಳಿ ಹೇಳುವೆನು, ನೀನೆನಗೆ ಸೋದರನಾಗಿರುವೆ, ನಾನು ನಿನಗೆ ತಾಯಿಯ ಸ್ವರೂಪವಾಗಿರುವೆನು—

ನೀನೆನಗೆ ಮಗನಂತಿರುವೆ, ನಾನು ನಿನಗೆ ತಾಯಿಯ ಸ್ವರೂಪವಾಗಿರುವೆನು— ನನ್ನನ್ನು ಮದುವೆಯಾಗಲೆಳಸಬೇಡ.''

ಜಗದೀಶ್ವರನ ಪವಿತ್ರವಾದ ಹೆಸರು ಆವ ಪಾಪಿಯ ಹೃದಯವನ್ನು ಕಂಪಿತ ಮಾಡದಿರುವುದು? ಶಕುನಿಯು ಹೆಚ್ಚು ತಡೆಯಲಾರದವನಾಗಿ, ''ಅಭಾಗಿನಿ! ನಿರ್ಬೋಧೆ! ನೀನೀಗ ನೋಡುವೆ, ಆರು ಬಂದು ನಿನಗೆ ಸಹಾಯವನ್ನು ಮಾಡುವರು! ಒಂದು ಘಂಟೆಯ ಹೊತ್ತು ವಿರಾಮವನ್ನು ಕೊಟ್ಟಿರುವೆನು. ಒಂದು ಘಂಟೆಯ ಹೊತ್ತಾದ ಬಳಿಕ, ನನ್ನ ಕೆಲಸವು ನಡೆದುಹೋಗುವುದು'' ಎಂದನು.

ವಿಮಲೆಯು ಒಂದು ಘಂಟೆಯ ಹೊತ್ತು ಒಬ್ಬಳೇ ಕುಳಿತು ಚಿಂತಿಸುತಿದ್ದಳು. ಅವಳ ಕಣ್ಣುಗಳಿಂದ ನೀರು ಹರಿದುಹೋಗುತಿದ್ದಿತು. ಆದರೆ ಆಗ ರೋದನಕ್ಕೆ ಸಮಯವಲ್ಲ. ಅವಳು ಮೊದಲೇ ಒಂದು ಉಪಾಯವನ್ನು ಏರ್ಪಡಿಸಿಟ್ಟಿದ್ದಳು. ಈಗದನ್ನೇ ಖಂಡಿತ ಮಾಡಿಕೊಂಡಳು.

ಒಂದು ಘಂಟೆಯ ಹೊತ್ತಾದ ಬಳಿಕ ಶಕುನಿಯು ಪುನಃ ಬಂದು ನಿಂತನು. ವಿಮಲೆಯು ಸ್ವಲ್ಪವೂ ಕೋಪವನ್ನು ತೋರದೆ ಸಮಾಧಾನದಿಂದ, ''ಶಕುನಿ! ನನ್ನ ಹಣೆಯಲ್ಲಿ ಬರೆದಿರುವಂತೆ ಆಗಬೇಕು, ನಿನ್ನ ಗೃಹಿಣಿಯಾಗಬೇಕೆಂದು ಹಣೆಯಲ್ಲಿದ್ದು ಭಗವಂತನು ನನ್ನನ್ನು ಸೃಷ್ಟಿಸಿದ್ದರೆ ಹಾಗೆ ಆಗಲೇಬೇಕು'' ಎಂದಳು.

ಶಕುನಿಯ ಮುಖದಲ್ಲಿ ಹಿಡಿಯಲಾರದಷ್ಟು ನಗುವು. ಅವನು ಆತುರದಿಂದ ಬಂದು ಅವಳ ಕೈಯನ್ನು ಹಿಡಿದುಕೊಂಡನು. ವಿಮಲೆಯು ಅಡ್ಡಿಮಾಡದೆ ''ಶಕುನಿ! ನನ್ನದೊಂದು ಪ್ರಾರ್ಥನೆಯುಂಟು. ನಾನು ತಂದೆಯ ರಕ್ಷಣೆಗೆ ನಲುವಾಗಿ ಒಂದು ವ್ರತವನ್ನು ಮಾಡುತಿರುವೆನು, ಆ ವ್ರತವು ಮುಗಿಯುವುದಕ್ಕೆ ಮೂರು ದಿನಗಳು ಬೇಕು, ಆ ಮೂರು ದಿನಗಳ ತನಕ ಅವಕಾಶವನ್ನು ಕೊಡು, ಕೊಡುವುದಿಲ್ಲವೆಂದು ಹೇಳಬೇಡ. ಶಕುನಿ! ಆ ವ್ರತವನ್ನು ಉದ್ಯಾಪನೆ ಮಾಡದೆ, ನಾನು ಮದುವೆಯಾಗೆನು; ವರಂ ಆತ್ಮಘಾತಿನಿಯಾಗುವೆನು, ನೀನೆನ್ನನ್ನು ಹೊಂದಲಾರೆ'' ಎಂದು ಹೇಳಿದಳು.

ಶಕುನಿಯು ಸ್ವಲ್ಪ ಚಿಂತಿಸಿ, ಯತ್ನವಿಲ್ಲದೆ ಮೂರು ದಿನಗಳ ಅವಕಾಶವನ್ನು ಕೊಟ್ಟನು.

ತೀಕ್ಷ್ಣಬುದ್ಧಿಮತಿಯಾದಾ ವಿಮಲೆಯು ದುರ್ಗದಿಂದ ಪಲಾಯನವಾಗಿ ಹೋಗಲು ಮೊದಲೇ ಎಲ್ಲವನ್ನೂ ಸಿದ್ಧಪಡಿಸಿದ್ದಳು. ನಂಬುಗೆಯುಳ್ಳ ಪರಿಚಾರಿಕೆಯರ ಮೂಲಕವಾಗಿ ದುರ್ಗದಿಂದೊಂದು ಹರಿದಾರಿಯ ದೂರದಲ್ಲೊಂದು ದೋಣಿಯನ್ನು ಗೊತ್ತುಮಾಡಿ ಇಡಿಸಿದ್ದಳು. ನಡುರಾತ್ರಿಯಲ್ಲಿದ್ದು, ಮಹಾಶ್ವೇತೆಗೂ ಸರಳೆಗೂ ಬಹಳವಾಗಿ ಸಮಾಧಾನೋಕ್ತಿಗಳನ್ನು ಹೇಳಿ ಪರಿಚಾರಿಕೆ

ಮುಂತಾದ ಕೆಲವು ಅನುಚರರೊಡನೆ ಒಂದು ಹರಿದಾರಿಯು ಹಾದಿಯನ್ನು ನಡೆದುಕೊಂಡು ಹೋಗಿ ದೋಣಿಯನ್ನೇರಿದಳು! ದೋಣಿಯು ತತ್ಕ್ಷಣದಲ್ಲಿ ದಡವಂ ಬಿಟ್ಟು ಹೊರಟಿತು.

---

## ಇಪ್ಪತ್ತೈದನೆಯ ಪರಿಚ್ಛೇದ

### ನಿರ್ವಾಸನ

And shall my life in one sad tenor run,
And end in sorrow as it first begun. *Pope.*

ದೋಣಿಯು ತತ್ಕ್ಷಣದಲ್ಲಿ ಹೊರಟಿತು. ತಲೆಯ ಮೇಲೆ ನಿಶಿಯ ಆಕಾಶವು ನೀಲವಾಗಿಯೂ ನಿಸ್ತಬ್ಧವಾಗಿಯೂ ಕಣ್ಗೊಳಿಸುತಿದ್ದಿತು. ನಾಲ್ಕುದಿಕ್ಕುಗಳಲ್ಲಿ ಧಾನ್ಯಕ್ಷೇತ್ರಗಳೂ ಗ್ರಾಮಗಳೂ ನಿದ್ರಿತವಾಗಿ ನಿಸ್ತಬ್ಧವಾಗಿದ್ದುವು. ಅವುಗಳ ಮಧ್ಯೆ ಮಳೆಯಿಂದ ವೃದ್ಧಿಗೊಂಡು ವೇಗವಾಗಿ ಹರಿಯುತಿದ್ದ ಏಸ್ತೀರ್ಣ ನದಿಯ ವಕ್ಷದಮೇಲೆ ಕ್ಷಿಪ್ರಗಾಮಿಯಾದಾ ಚಿಕ್ಕ ದೋಣಿಯು ತೇಲುತ ಹೋಗುತಿದ್ದಿತು! ದೋಣಿಯಲ್ಲಿ ದೀಪವೊಂದಾದರೂ ಇಲ್ಲ. ಆವ ಶಬ್ದವೂ ಇಲ್ಲ. ನೈಶಾಕಾಶ ಹಾಗೂ ಜಗತ್ತಿನಂತೆ ಅಂಧಕಾರಮಯವಾಗಿ ಶಬ್ದಶೂನ್ಯವಾಗಿದ್ದಿತು.

ಆಕಾಶವು ಅಂಧಕಾರಮಯ. ದೃಷ್ಟಿಯು ಹೋದಷ್ಟು ದೂರವೂ ಮುಂದುಗಡೆಯೂ ಹಿಂದುಗಡೆಯೂ ನದಿಯ ನೀರು ನೆರೆದುಹೋಗುತಿದ್ದಿತು. ರಾಶಿ ರಾಶಿ ಮೇಘಗಳು ನೀಲವಾಗಿದ್ದಾ ನೀರಿನಲ್ಲಿ ಪ್ರತಿಫಲಿತವಾಗುತಿದ್ದುವು. ಸ್ವಲ್ಪ ಸ್ವಲ್ಪ ಗಾಳಿಯಿಂದ ನದಿಯ ನೀರು ಉಚ್ಛ್ವಸಿತವಾಗುತಿದ್ದಿತು. ತರಂಗಮಾಲೆ ಮತ್ತು ನೊರೆಯ ರಾಶಿಯ ಮಧ್ಯದಲ್ಲಿ ನೌಕವು ಕಲಕಲ ಶಬ್ದದಿಂದ ಹೋಗುತಿದ್ದಿತು. ನದಿಯ ಎರಡು ಕಡೆಯ ದಡಗಳಲ್ಲಿಯೂ ಆಮ್ರಕಾನನಗಳು ನಿಶಾಚರರ ಶ್ರೇಣಿಯಂತೆ ನಿಬಿಡವಾದಾ ಅಂಧಕಾರದಲ್ಲಿ ನಿಂತು ಗಾಳಿಯಿಂದ ಗಂಭೀರ ಶಬ್ದವಂ ಮಾಡುತಿದ್ದುವು. ಬಿಳುಪಾದ ತಣ್ಣುಳಿಲು ಸ್ವಲ್ಪ ಸ್ವಲ್ಪ ವಿಸ್ತೃತವಾಗಿ ಅಲ್ಲಲ್ಲಿ ಹರಡಿದ್ದಂತೆ ತೋರುವುದು. ಆಕಾಶದಲ್ಲೊಂದೆರಡು ನಕ್ಷತ್ರಗಳು ಮಿನುಗುತಿದ್ದುವು, ಮೇಘಗಳು ಕ್ರಮಾಗತವಾಗಿ ಏರುತಿದ್ದುವು, ಕಪ್ಪಾದ ಮೇಘವು ಕಪ್ಪಾದ ಮೇಘದಮೇಲೆ ಕುಳಿತು ಪಶ್ಚಿಮದಿಕ್ಕಿನಲ್ಲಿ ರಾಶೀಕೃತವಾಗುತಿದ್ದಿತು. ನೌಕವು ಕಲ ಕಲ ಶಬ್ದದಿಂದ ಹೋಗುತಿದ್ದಿತು.

ವಿಮಲೆಯು ದೋಣಿಯ ಹಿಂದುಗಡೆ ಕುಳಿತು ಚತುರ್ವೇಷ್ಟಿತ ದುರ್ಗವನ್ನು ನೋಡುತಿದ್ದಳು. ಅವಳ ಹೃದಯದಲ್ಲಿ ಉಂಟಾಗುತಿದ್ದಾ ಚಿಂತೆಗಳ ಪರಂಪರೆಯನ್ನು ಕುರಿತು ಹೇಳಬಲ್ಲವರಾರು? ಆರು ವರ್ಷಗಳ ಕಾಲ ಅವಳಾ

ದುರ್ಗದಲ್ಲಿ ವಾಸವಾಗಿದ್ದಳು, ಸ್ನೇಹಮಯಿಯಾದ ತಾಯಿಯು ಆ ದುರ್ಗದಲ್ಲಿ ಕಾಲವಾದಳು, ಅವಳ ಬಾಲ್ಯಕಾಲದಿಂದಾ ದುರ್ಗದಲ್ಲಿ ಯೌವನ ಕಾಲವನ್ನು ಹೊಂದಿದ್ದಳು, ಇಂದಾ ದುರ್ಗವನ್ನು ಬಿಟ್ಟು ಅನಂತವಾದ ಸಂಸಾರಸಾಗರದಲ್ಲಿ ಧುಮುಕಿದಳು—ಆ ಸಾಗರಕ್ಕೆ ಕೂಲವುಂಟೆ? ವಿಮಲೆಗೆ ಆ ಕೂಲವು ಸಿಗುವುದೆ? ಆಶ್ರಯವಿಲ್ಲದಾ ರಮಣಿಗೆ ತಂದೆಯು ಪುನಃ ಸಿಗುವನೆ? ಅವಳು ಮಹಾ ಶ್ರೇಣಿಯನ್ನೂ ಸರಳೆಯನ್ನೂ ಉದ್ಧಾರಮಾಡಬಲ್ಲಳೆ? ಪಾಪಾಚಾರಿಯಾದಾ ಶಕುನಿಗೆ ದಂಡವಿಧಾನವಂ ಮಾಡಬಲ್ಲಳೆ?

ಆರು ಬಹಳಕಾಲದವರೆಗೆ ದೇಶತ್ಯಾಗಿಯಾಗಿ ಹೊರಟು ಚಲಯಾನವಾದ ಪೋತವನ್ನೇರಿ ಜನ್ಮಭೂಮಿಯ ಕಡೆ ಸತೃಷ್ಣ ನಯನಗಳಿಂದ ನೋಡಿರುವನೋ, ಪ್ರಪಂಚದಲ್ಲಿ ಸುಖದಾಯಕವಾದ ಪ್ರಿಯಪದಾರ್ಥಗಳನ್ನೂ ಪ್ರಿಯಜನರನ್ನೂ ಬಿಟ್ಟು ಬೀಳ್ಗೊಂಡು ಸಜಲನಯನನಾಗಿ ಹೋಗಿರುವನೋ, ಅಲ್ಪವಯಸ್ಸಿನಲ್ಲಿ ಸಹಾಯ ಹೀನನಾಗಿ ಬಂಧುವಿಹೀನನಾಗಿ ಪ್ರವಾಸಿಯಾಗಿ ಅನಂತ ಸಂಸಾರ ಸಾಗರದಲ್ಲಿ ಧುಮುಕಿರುವನೋ ಅಂತಹವನು ಆ ರಾತ್ರಿ ವಿಮಲೆಯ ಘೋರವಾದ ದುಃಖವನ್ನೂ ಘೋರವಾದಾ ಚಿಂತೆಯ ವೇಗವನ್ನೂ ಅನುಭವಮಾಡಬಲ್ಲನು. ವಿಮಲೆಯು ಏಕಾಂಗಿಯಾಗಿ ನೌಕದ ಹಿಂದುಗಡೆ ಕುಳಿತು ಗಭೀರ ಅಂಧಕಾರ ಮಯವಾದಾ ರಾತ್ರಿ ಚತುರ್ವೇಷ್ಟಿತ ದುರ್ಗದ ಕಡೆ ನೋಡುತಿದ್ದಳು. ಅವಳಾ ನೀರಿನ ಕಲ ಕಲ ಶಬ್ದವನ್ನು ಕೇಳುತಿರಲಿಲ್ಲ. ಆಮ್ರಾಕಾನನದ ಗಂಭೀರ ಶಬ್ದ ವನ್ನು ಕೇಳುತಿರಲಿಲ್ಲ. ಆ ತರಂಗರಾಶಿ ಮತ್ತು ನೊರೆಯ ರಾಶಿಯ ಕೇಳಿಯನ್ನು ನೋಡುತಿರಲಿಲ್ಲ. ಘೋರವಾದಾ ಮೇಘಗಳ ವೈಭವಾಡಂಬರಗಳನ್ನು ನೋಡು ತಿರಲಿಲ್ಲ. ಕೇವಲ ಚತುರ್ವೇಷ್ಟಿತ ದುರ್ಗವನ್ನು ನೋಡುತಿದ್ದಳು, ಹಾಗೂ ಅನಂತವಾದ ಭಾವನೆಗಳನ್ನು ಭಾವಿಸಿಕೊಳ್ಳುತಿದ್ದಳು; ಆ ಭಾವನೆಗಳಿಗೆ ಅಂತ ವಿಲ್ಲ. ಆಕಾಶವು ಹೇಗೆ ಅನಂತವೋ ನದಿಯ ಪ್ರವಾಹವು ಹೇಗೆ ತಡೆಯಿಲ್ಲದೆ ಅವಾರಿತವಾದುದೋ ಅವಳ ಚಿಂತೆಯೂ ಹಾಗೆ ಅನಂತವಾಗಿ ತಡೆಯಿಲ್ಲದೆ ಅವಾರಿತವಾಗಿದ್ದಿತು. ಬಗ ಬಗೆಯಾಗಿ ಬಗೆಗೊಳ್ಳುತ ವಿಮಲೆಗೆ ನಾಲ್ಕೂ ದಿಕ್ಕು ಗಳು ಶೂನ್ಯವಾಗಿ ಕಂಡುವು. ಸ್ವಭಾವತಃ ಅವಳ ವೀರಾಂತಃಕರಣಗಳು ದ್ರವೀ ಭೂತವಾದುವು. ನೋಡುತ ನೋಡುತ ದುರ್ಗವು ಕಣ್ಣಿಗೆ ಮರೆಯಾದ ಬಳಿಕ ಕೇವಲ ದುರ್ಭೇದ್ಯವಾದ ತಿಮಿರರಾಶಿಯನ್ನು ನೋಡಿದಳು, ಆಗವಳು ಕೈಗಳಿಂದ ಮುಖವನ್ನು ಮುಚ್ಚಿಕೊಂಡು ದರವಿಗಳಿತವಾಗಿ ಕಣ್ಣೀರನ್ನು ಸುರಿಸಿದಳು. ಆ ಕಣ್ಣೀರು ಅವಳ ಬೆರಳುಗಳ ಮಧ್ಯದಿಂದ ಹರಿದು ಬಾಹುಗಳನ್ನೂ ವಕ್ಷಸ್ಥಳ ವನ್ನೂ ತೋಯಿಸಿತು—ಶ್ರಾಂತೆಯಾಗಿ ನಿದ್ರಿತೆಯಾದಳು.

ವಿಮಲೆಯು ನಿರಾಪದವಾಗಿ ಮಾಂಗೀರಿಗೆ ತಲಪಿದಳೆಂಬುದನ್ನು ಪಾಠಕ ಮಹಾಶಯರು ಬಲ್ಲರು.

# ಇಪ್ಪತ್ತಾರನೆಯ ಪರಿಚ್ಛೇದ

## ಅಪೂರ್ವ ವ್ಯೂಹ

Yet though thick the shafts as snow,
Though charging knights like whirlwinds go,
Though billmen ply their ghastly blow,
Unbroken was the ring.

The stubborn spearsmen still made good
Their impenetrable wood,
Each stepping where his comrade stood,
The moment that he fell *Scott.*

ಶತ್ರುಗಳು ಪಾಳಯ ಸಹಿತವಾಗಿ ಮಾಂಗೀರಿಗೆ ಸಮೀಪದಲ್ಲಿ ಪಾಳೆಯವನ್ನು ಮಾಡಿಕೊಂಡು ಕುಳಿತಿದ್ದರು. ಟೋಡರಮಲ್ಲನು ಅಸಾಧಾರಣವಾದ ಯುದ್ಧಕೌಶಲದಿಂದ ದುರ್ಗವನ್ನು ಶತ್ರುಗಳಿಗೆ ಅವಕಾಶವಂ ಕೊಡದೆ ಪೊಲವರಂಗೊಳ್ಳುತಿದ್ದನು. ಇಂದ್ರನಾಥನು ದಿನ ದಿನವೂ ಹೆಚ್ಚು ಖ್ಯಾತಿಯನ್ನು ಪಡೆಯುತಿದ್ದನು; ಸಮಯವು ಸರಿ ಸೊಗಸಾಗಿದ್ದರೆ, ತನ್ನ ಐನೂರು ಮಂದಿ ಅಶ್ವಾರೋಹಿಗಳನ್ನು ಕೊಂಡೊಯ್ದು ಶತ್ರುಗಳ ಮೇಲೆ ಬಿದ್ದು ಅವರ ಸಮಸ್ತವನ್ನೂ ಸಲಂಗೊಳ್ಳುವನು. ಅಲ್ಪಸಂಖ್ಯೆಯ ಶತ್ರುಗಳಿದ್ದೆಡೆಯ ಸುದ್ದಿಯನ್ನು ಕೇಳಿದರೆ ಮಹಾರಾಜನ ಅಪ್ಪಣೆಯಂ ಪಡೆದು ಹೋಗಿ ಅವರನ್ನು ಕಿಕ್ಕಿರಿದಡರ್ದು ಧ್ವಂಸ ಮಾಡುವನು; ಶತ್ರುಗಳು ಹೆಚ್ಚು ಸಂಖ್ಯೆಯ ದಳದವರೆಂದು ಸುಳಿವು ಕಂಡರೆ ಅವರು ಬರುವುದಕ್ಕೆ ಮೊದಲು ಹೋಗಿ ದುರ್ಗದೊಳಗೆ ಸೇರಿಕೊಳ್ಳುವನು. ಶತ್ರುಗಳು ಹೀಗೆ ಬಾರಿಬಾರಿಗೂ ಹತ್ತೊತ್ತಲ್ಪಟ್ಟವರಾಗಿ ಹಾನಿಗೊಂಡು ವ್ಯತಿವ್ಯಸ್ತರಾದರು. ದುರ್ಗವಾಸಿಗಳು ಹೊಸ ಸೇನಾಪತಿಯ ಹೂಣಿತೆಯನ್ನೂ ರಣಕೌಶಲವನ್ನೂ ಕಂಡು, ಧನ್ಯ, ಧುರಧೀರನೆಂದು ಅವನಿಗೆ ಧನ್ಯವಾದವಂ ಮಾಡುವರು. ಹೀಗೆ ಇಂದ್ರನಾಥನ ಶೌರ್ಯ ಪರಾಕ್ರಮಗಳ ವಾಹಿನಿಯು ಸರ್ವತ್ರ ಹರಡಿಕೊಂಡಿತು.

ಶತ್ರುಗಳು ಭಾಗಲಪುರದಿಂದ ಮುಂದುವರಿದು ಮಾಂಗೀರಿಗೆ ಹತ್ತಿರ ಬಂದೊಂದು ಶಿಬಿರವನ್ನು ಸ್ಥಾಪಿಸಿದರು. ಒಂದು ದಿನ ಹೊತ್ತು ಮುಳುಗುವ ಸಮಯದಲ್ಲಿ ರಾಜಾ ಟೋಡರಮಲ್ಲನು ಶತ್ರುಗಳ ಶಿಬಿರವನ್ನು ನೋಡುವುದಕ್ಕೆ ಸಲುವಾಗಿ ದುರ್ಗದ ಕೋಟೆಯ ಗೋಡೆಯಮೇಲೇರಿ ದುರ್ಗದಿಂದ ಅರ್ಧಹರಿದಾರಿಯ ದೂರ ಹೋಗಿದ್ದನು. ಅಲ್ಲಿಗೆ ಶತ್ರುಗಳ ಶಿಬಿರವು ದೂರವಾಗಿದ್ದುದರಿಂದ ಭಯಕ್ಕೆ ಕಾರಣವಿರಲಿಲ್ಲ. ಅದಲ್ಲದೆ ಮಹಾರಾಜನು ವೇಷವನ್ನು ಬದಲಾಯಿಸಿಕೊಂಡು ಹೋಗಿದ್ದನು. ಸಂಗಡ ಐವತ್ತು ಮಂದಿ ಘೋಳಾಯ್ತರಿದ್ದರು. ಅವರು ಅಲ್ಲಲ್ಲಿ ಠಳಾಯಿಸುತಿದ್ದರು. ಟೋಡರಮಲ್ಲನು ಒಂದೇ ದೃಷ್ಟಿಯಿಂದ

ಶತ್ರುಗಳನ್ನು ನೋಡುತಿದ್ದನು, ಒಮ್ಮಿಂದೊಮ್ಮೆ ದೂರದಲ್ಲೊಂದು ಶಬ್ದವಾಯಿತು. ಎಲ್ಲರೂ ವಿಸ್ಮಿತರಾಗಿ ನೋಡಿದರು. ದೂರದಲ್ಲಿ ಧೂಳಿಯ ರಾಶಿಯು ಕಣ್ಣೊಳಿಸಿತು. ಒಬ್ಬ ಅಶ್ವಾರೋಹಿಯು ರಾಜನಿದ್ದೆಡೆ ವಾಯುವೇಗದಿಂದ ಬರುತಿದ್ದನು. ನೋಡಿದರೆ, ಕುದುರೆಯು ಭೂಮಿಯನ್ನು ಸ್ಪರ್ಶಮಾಡುವಂತೆ ಕಾಣುತಿರಲಿಲ್ಲ. ನಿಮಿಷದೊಳಗೆ ಅವನು ಹತ್ತಿರ ಬಂದನು, ಅವನು ಮಹಾರಾಜನ ಸೈನಿಕನಾಗಿದ್ದನು. ರಾಜನ ಸಮ್ಮುಖಕ್ಕೆ ಬಂದು ಕುದುರೆಯಿಂದಿಳಿದು ನಿಂತನು. ಕುದುರೆಯು ಅತಿ ವೇಗದಿಂದ ಬಂದಿದ್ದುದರಿಂದ ಆರೋಹಿಯು ಇಳಿದೊಡನೆಯೇ ಅದು ನೆಲದಮೇಲೆ ಬಿದ್ದು ನಾಲ್ಕಾರು ತಡವೆ ಕೂಗಿ ಕಾಲುಗಳನ್ನು ಅಂತರಕ್ಕೆ ನೀಡಿ ಪ್ರಾಣವನ್ನು ಬಿಟ್ಟಿತು.

ಕುದುರೆಯ ಕಡೆ ನೋಡಲಾರಿಗೂ ಅವಕಾಶವಿರಲಿಲ್ಲ. ಸೈನಿಕನು ಪ್ರಣಾಮಂಗೈದು ಭೀತಚಿತ್ತನಾಗಿ ಅರುಹಿದನು—"ಮಹಾರಾಜ! ನಮ್ಮ ಶಿಬಿರದಲ್ಲಿ ವಿದ್ರೋಹೋನ್ಮುಖರಾದ ಸೈನ್ಯದವರಿಂದ, ಮಹಾರಾಜರವರು ಇಂದು ಸಾಯಂಕಾಲ ದುರ್ಗದ ಪ್ರಾಚೀರದ ಹೊರಗೆ ಬರುವರೆಂದು ಶತ್ರುಗಳು ತಿಳಿದವರಾಗಿ, ಅರ್ಧ ಹರಿದಾರಿಯ ದೂರದಲ್ಲಿ ಎರಡು ಸಾವಿರ ಅಶ್ವಾರೋಹಿಗಳು ಕಾದು ನಿಂತಿದ್ದವರು, ಈಗ ಇತ್ತಕಡೆ ಬರುವವರಾಗಿದ್ದಾರೆ" ಸೈನಿಕನು ಅಷ್ಟೊಂದು ಹೇಳಿ ಶ್ರಾಂತಿಯಿಂದ ನೆಲದಮೇಲೆ ಬಿದ್ದನು.

ಮಹಾರಾಜನ ಅನುಚರರು ಮರಿವೆಗೊಂಡವರಂತೆ ಭಯದಿಂದ ಜ್ಞಾನಶೂನ್ಯರಾದರು. ರಾಜಾ ಟೋಡರಮಲ್ಲನು, "ನೀವೂ ಅಶ್ವಾರೋಹಿಗಳಾಗಿರುವಿರಿ, ದುರ್ಗದ ಕಡೆ ಕುದುರೆಗಳನ್ನು ದೌಡುಬಿಟ್ಟುಕೊಂಡು ಹೋಗಿರಿ. ಶತ್ರುಗಳು ಬರುವುದಕ್ಕೆ ಮೊದಲೇ ದುರ್ಗದೊಳಗೆ ಹೋಗಬಲ್ಲಿರಿ" ಎಂದು ಹೇಳಿದನು. ಅಪ್ಪಣೆಯ ಪ್ರಕಾರ ಎಲ್ಲರೂ ಕುದುರೆಗಳನ್ನು ದುರ್ಗಾಭಿಮುಖವಾಗಿ ಓಡಿಸತೊಡಗಿದರು—

ಪ್ರತ್ಯುತ್ಪನ್ನಮತಿಯುಳ್ಳ ಇಂದ್ರನಾಥನು ದೂರದಿಂದ ಧೂಳಿಯನ್ನು ನೋಡಿ ತನ್ನ ರಣಭೇರಿಯನ್ನು ಹೊಡೆಸಿದನು. ಅವನ ಐನೂರು ಕುದುರೆಗಳು ಆಮ್ರಕಾನನದಲ್ಲೊತ್ತಟ್ಟು ಏನೋ ಕಾರಣದಿಂದ ಇಡಲ್ಪಟ್ಟಿದ್ದುವು. ಭೇರಿಯ ಶಬ್ದವನ್ನು ಕೇಳಿದೊಡನೆ ಅಶ್ವಾರೋಹಿಗಳು ಬಂದು ಸೇರಿಕೊಂಡರು. ಬಳಿಕ ಇಂದ್ರನಾಥನು, "ಮಹಾರಾಜ! ಅಪ್ಪಣೆಯಾದರೆ, ನನ್ನ ಐನೂರು ಕುದುರೆಗಳನ್ನು ತೆಗೆದುಕೊಂಡು ಹೋಗಿ ಶತ್ರುಗಳನ್ನಡರ್ಧ ಮಾರ್ಗದಲ್ಲೇ ತಡೆದು ನಿಲ್ಲಿಸಿರುವೆನು, ಅಷ್ಟರೊಳಗೆ ತಾವು ಸ್ವಚ್ಛಂದವಾಗಿ ದುರ್ಗದೊಳಗೆ ದಯಮಾಡಬಹುದು" ಎಂದನು.

ರಾಜಾ—(ಗಂಭೀರ ಸ್ವರದಿಂದ) ಮಗು! ಯುದ್ಧಕ್ಕೆ ಸಮಯವು ಬಂದಾಗ ಟೋಡರಮಲ್ಲನಾವಾಗಲೂ ಪಲಾಯನತತ್ಪರನಾಗನು. ವ್ಯರ್ಥವಾಗಿ ಪ್ರಾಣವನ್ನು ನಷ್ಟಮಾಡುವುದು ಯುದ್ಧವಲ್ಲ, ನರಹತ್ಯೆ ಮಾತ್ರವಾಗುವುದು.

ಎಲ್ಲರೂ ದುರ್ಗದ ಬಳಿ ಬಂದರು. ದುರ್ಗಕ್ಕೆ ಸುತ್ತ ಕಂದಕ ; ಕಂದಕದ ಮೇಲಿದ್ದ ಸೇತುವೆಯು ಮುರಿದುಹೋಗಿದ್ದುದನ್ನು ಕಂಡು ಎಲ್ಲರೂ ವಿಸ್ಮಿತರಾಗಿ ಭೀತರಾದರು. ಶತ್ರುಗಳಿಗೆ ಗೋಪ್ಯವಾಗಿ ಸುದ್ದಿಯನ್ನು ಕೊಟ್ಟ ಸರಾಧಮನೇ ಸೇತುವೆಯನ್ನೊಡೆದಿದ್ದನು ; ಆದುದರಿಂದ ಕುದುರೆ ರಾಹುತರು ದುರ್ಗದೊಳಗೆ ಹೋಗಲು ಉಪಾಯವಿಲ್ಲವಾಯಿತು.

ಅಶ್ವಾರೋಹಿಗಳು ಈಸಿಕೊಂಡು ಕಂದಕವನ್ನು ಹಾಯ್ದುಹೋಗಬಹುದೆಂದು ಪ್ರಸ್ತಾವವು ಬಂದಿತು. ರಾಜನು ಶತ್ರುಗಳ ಕಡೆ ಕೈತೋರಿ, "ನೀವು ಈಸಿಹೋಗುವುದರೊಳಗೆ ಶತ್ರುಗಳು ಬಂದಿರುವರು, ಆಗ ಕಾಪುರುಷರಂತೆ ಶತ್ರುಗಳಿಂದೆಲ್ಲರೂ ಆಹತರಾಗಿ ನೀರಿನಲ್ಲಿ ಮುಣುಗಿಹೋಗುವಿರಿ, ವೀರರಂತೆ ಕೆಲಸವನ್ನು ಮಾಡಿರಿ, ಶತ್ರುಗಳೊಂದಿಗೆ ಯುದ್ಧವನ್ನು ಮಾಡಿರಿ, ಇಂದ್ರನಾಥ! ಶತ್ರುಗಳನ್ನು ಅಡರಿಕೊಂಡು ಹೋಗು" ಎಂದನು.

"ಭೃತ್ಯನು ಸಾಧ್ಯವಾಗುವವರೆಗೂ ಕೆಲಸವನ್ನು ಮಾಡುವನು" ಎಂದು ಹೇಳಿ ಇಂದ್ರನಾಥನು ವ್ಯೂಹವನ್ನು ಕಟ್ಟುವುದರಲ್ಲಿ ತತ್ಪರನಾದನು. ವ್ಯೂಹವನ್ನು ಅರ್ಧಚಂದ್ರಾಕೃತಿಯಾಗಿ ಐದು ಶ್ರೇಣಿಯಾಗಿ ವಿಂಗಡಿಸಿದನು, ಒಂದೊಂದು ಶ್ರೇಣಿಗೆ ನೂರುನೂರು ಕುದುರೆ ರಾಹುತರು, ಮೊದಲ ಶ್ರೇಣಿಗೆ ಹಿಂದುಗಡೆ ಎರಡನೆಯ ಶ್ರೇಣಿಯುವರು ನಿಲ್ಲಬೇಕು, ಅದಕ್ಕೆ ಹಿಂದೆ ಮೂರನೆಯ ಶ್ರೇಣಿ, ಹೀಗೆ ತನ್ನ ಐನೂರು ಮಂದಿ ಅಶ್ವಾರೋಹಿಗಳನ್ನು ಐದು ಶ್ರೇಣಿಗಳಾಗಿ ವಿಂಗಡಿಸಿದನು. ಯುದ್ಧದಲ್ಲಿ ಮೊದಲನೆಯುವರು ಪರಿಶ್ರಾಂತರಾದರೆ ಎರಡನೆಯುವರು ಮುಂದು ವರಿದು ಯುದ್ಧವನ್ನು ಮಾಡತಕ್ಕುದು, ಅವರಾದ ಬಳಿಕ ಅವರಿಗೆ ಹಿಂದಿದ್ದವರು ಮುಂದುವರಿದು ಬರಬೇಕು. ಹೀಗೆ ಕ್ರಮಾನ್ವಯವಾಗಿ ಪ್ರತಿಶ್ರೇಣಿಯುವರೂ ತಮಗೆ ಹಿಂದಿದ್ದವರಿಗೆ ಸ್ಥಳವನ್ನು ಕೊಡುತ ಹಿಂದಕ್ಕೆ ಸರಿದು ನಿಲ್ಲುತಿದ್ದರೆ ಯುದ್ಧಕ್ಕೆ ವಿರತಿಯಿಲ್ಲದೆ ಪ್ರತಿ ಶ್ರೇಣಿಯುವರಿಗೂ ವಿಶ್ರಮಿಸಿಕೊಂಡು ಯುದ್ಧವನ್ನು ಮಾಡುತ್ತಿರುವುದಕ್ಕೆ ಅವಕಾಶವಾಗುವುದಲ್ಲದೆ ತಮ್ಮೆದುರಿಗಿರುವ ಶತ್ರುಗಳನ್ನಡರ್ದು ಅವರ ಆಕ್ರಮಣವು ರುದ್ಧವಾಗುವುದು. ಹಿಂದುಗಡೆ ಕಂದಕದಲ್ಲಿ ನೀರು ಇದ್ದುದರಿಂದ ಅತ್ತಕಡೆಯಿಂದ ಶತ್ರುಗಳು ಬಂದು ಮೇಲೆ ಬೀಳುವುದಕ್ಕೆ ಸಂಭವವಿಲ್ಲ—ಈ ಮಧ್ಯೆ ಕಂದಕದ ಬಳಿ ಇದ್ದ ನಾಲ್ಕಾರು ಮರಗಳನ್ನು ಕಡಿದು ಸೇತುವೆಯನ್ನು ಕಟ್ಟುತಲೂ ಇರಬಹುದು. ಇಂದ್ರನಾಥನು ಹೀಗೆ ಏರ್ಪಾಡನ್ನು ಮಾಡಿದನು. ಅಷ್ಟರೊಳಗೆ ಶತ್ರುಗಳು ಬಂದುಬಿಟ್ಟರು ; ಇಂದ್ರನಾಥನ ಹೃದಯವು ಉತ್ಸಾಹದಿಂದ ಪರಿಪೂರ್ಣವಾಯಿತು.

ಈಗ್ಗೆ ಮೂರು ನಾಲ್ಕು ತಿಂಗಳುಗಳಿಂದ ಮಾಂಗೀರನಗರವು ಮುತ್ತಿಗೆ ಬಿದ್ದು ಸೈನ್ಯವು ಚಿಕ್ಕಚಿಕ್ಕ ದಳವಾಗಿ ಆಗಿಂದಾಗ ಅಲ್ಲಲ್ಲಿ ಚದರಿ ಹಾನು ಯುದ್ಧಗಳಾಗುತಿದ್ದುವು. ಆದರೆ ಇಂದು ಉಭಯಪಕ್ಷದವರೂ ಮುಖಾಮುಖಿಯಾಗಿ

ಕೈಗೆ ಕೈ ಕಲೆತು ಭೀಷಣ ಸಾಹಸದಿಂದ ಯುದ್ಧಮಾಡತೊಡಗಿದಂತೆ ಹಿಂದೆಂದೂ ನಡೆದಿರಲಿಲ್ಲ. ವ್ಯೂಹವನ್ನು ಭೇದಮಾಡಿದರೇನೇ ಟೋಡರಮಲ್ಲನು ಬಂದಿಯಾಗುವನೆಂದು ತಿಳಿದವರಾಗಿ ಶತ್ರುಗಳು ಸಮುದ್ರದ ಅಲೆಗಳಂತೆ ಬಾರಿಬಾರಿಗೂ ಭೀಷಣ ಆಕ್ರಮಣವಂ ಮಾಡತೊಡಗಿದರು. ಆದರೆ ಆ ವ್ಯೂಹವು ಕದಲುವಂತಿರಲಿಲ್ಲ, ಪರ್ವತಶಿಖರದಂತೆ ಬಾರಿಬಾರಿಗೂ ಶತ್ರುದಳದ ತರಂಗಮಾಲೆಗಳು ದೂರ ಎಸೆಯಲ್ಪಡುತಿದ್ದುವು , ಶತ್ರುಗಳು ಹೆಚ್ಚು ಸಂಖ್ಯೆಯುಳ್ಳವರೆಂಬುದರ ಮೇಲೆ ಅವರಿಗಷ್ಟೊಂದು ಪ್ರಯೋಜನಕರವಾಗಿರಲಿಲ್ಲ; ಏಕೆಂದರೆ, ಇಂದ್ರನಾಥನು ಕಟ್ಟಿದ್ದ ವ್ಯೂಹದ ಆಯುಕಟ್ಟಿನಿಂದ ಶತ್ರುಗಳು ಒತ್ತಡವೆಗೆ ನೂರು ಮಂದಿಗಿಂತ ಹೆಚ್ಚು ಮಂದಿ ಘೋಳಾಯ್ತರು ಬಂದು ವ್ಯೂಹವನ್ನು ಆಕ್ರಮಣಮಾಡಲು ಅನುಕೂಲವಾಗದು. ಅದಲ್ಲದೆ ಕಿರಿದಾಗಿದ್ದಾ ಸ್ಥಳದಲ್ಲಿ ಎರಡುಸಾವಿರದ ಸೈನ್ಯವು ಒಮ್ಮೆಗೆ ಬರಲು ಅವಕಾಶವಿರಲಿಲ್ಲ; ಆದರೂ ಶತ್ರುಗಳು ಬಂದು ಬಾರಿಬಾರಿಗೂ ಸಿಂಹಗರ್ಜನೆಯಂ ಮಾಡುತ ಸಿಂಹವಿಕ್ರಮಂವಂ ತೋರುತ ವೀರಮದದಿಂದ ಉನ್ಮತ್ತರಾಗಿ ಬಾರಿಬಾರಿಗೂ ಬೊಬ್ಬೆ ಹಚ್ಚಿ ಬಂದು ಕಟ್ಟಾಗಿದ್ದಾ ವ್ಯೂಹಭಂಗಮಾಡಲು ಪ್ರಯತ್ನಪಡುತಿದ್ದರು. ಇಂದ್ರನಾಥನ ಸೈನ್ಯದವರೂ ಸಾಹಸದಲ್ಲಿ ಅವರಿಗೆ ಕಡಿಮೆಯಾಗಿರಲಿಲ್ಲ. ಇಂದವರು ಸ್ವಯಂ ಟೋಡರಮಲ್ಲನಿಂದ ಚಾಲಿತರಾಗಿ ಅವರ ಉಲ್ಲಾಸಕ್ಕೂ ಉತ್ಸಾಹಕ್ಕೂ ಪಾರವಿರಲಿಲ್ಲ. ಇಂದ್ರನಾಥನು ಅಂಬಿನ ವೇಗದಿಂದ ವ್ಯೂಹಕ್ಕೆ ಅತ್ತ ಇತ್ತ ಸರ್ವತ್ರ ಕುದುರೆಯನ್ನು ದೌಡಾಯಿಸುತ್ತ, ಶತ್ರುಗಳ ಕೈ ಮೇಲಾದೆಡೆ ಹೋಗಿ ಅವರನ್ನಡದುರ್ ಹೊಡೆಯುವನು. ಮಧ್ಯೆ ಮಧ್ಯೆ ತನ್ನ ಸೈನ್ಯದವರಿಗೆ ಹುರಿತುಂಬಿಸುವುದಕ್ಕೆ ಸಲುವಾಗಿ ಉಚ್ಚಸ್ವರದಿಂದ '' ಇಂದು ಸ್ವಯಂ ಮಹಾರಾಜರವರೇ ನಿಮ್ಮ ಯುದ್ಧವನ್ನು ನೋಡುತ್ತಿರುವರು. ಇಂದು ಮಹಾರಾಜರವರ ಪ್ರಾಣರಕ್ಷಣೆಯ ಭಾರವು ನಿಮ್ಮ ಕೈಲಿದೆ. ಇಂದು ದಿಲ್ಲೀಶ್ವರನ ಗೌರವ, ಹೆಸರು, ಯಶಸ್ಸುಗಳನ್ನು ಕಾಪಾಡಿರಿ '' ಎಂದು ಹೇಳುವನು. ಆ ಉತ್ಸಾಹ ವಚನಗಳನ್ನು ಕೇಳಿ ಅವನ ಸೈನ್ಯದವರು ಉಲ್ಲಾಸದಿಂದ ಪರಿಪೂರ್ಣರಾಗಿ ಸಿಂಹನಾದವಂ ಮಾಡತೊಡಗಿದರು. ಅವರಾ ಭೈರವ ಗರ್ಜನೆಯಿಂದ ಆಕಾಶವೇ ಭಿನ್ನವಾಗಿ ಶತ್ರುಗಳ ಹೃದಯವು ನಡುಗಿತು.

ಆದರೂ ಎರಡು ಸಾವಿರದ ಸೈನ್ಯದೊಂದಿಗೆ ಐನೂರು ಮಂದಿ ಸೈನಿಕರು ಯುದ್ಧವಂ ಮಾಡುವುದು ಸಂಭವಿಸತಕ್ಕುದಲ್ಲ. ಇಂದ್ರನಾಥನ ಸೈನ್ಯದವರಲ್ಲೊಬ್ಬೊಬ್ಬನಾಗಿ ಹತನಾಗಿ ಹೋಗುತ ಬಂದನು ; ಶತ್ರುಗಳ ಪಕ್ಷದಲ್ಲಿಯೂ ಅನೇಕರು ಹತ ಆಹತರಾದರು, ಆದರೆ ಎರಡು ಸಾವಿರದಲ್ಲಿ ಇನ್ನೂರು ಮುನ್ನೂರು ಮಂದಿ ಹೋದ ಮಾತ್ರಕ್ಕೆ ಯುದ್ಧಕ್ಕೆ ಅನನುಕೂಲವಾಗದು. ರಾಜಾ ಟೋಡರಮಲ್ಲನು ಅದನ್ನು ಕಂಡು ಚಿಂತಿತನಾದನು ; ಒಮ್ಮೆ ಇಂದ್ರನಾಥನನ್ನು ಒತ್ತಟ್ಟಿಗೆ ಕರೆದು, '' ಇಂದ್ರನಾಥ ! ನೀನು ನಿನ್ನ ಸೈನಿಕರಿಗೆ ರಣಶಿಕ್ಷಣವನ್ನು

ಕೊಟ್ಟಿರುವ ರೀತಿಯನ್ನು ನೋಡಿ ಚಮತ್ಕೃತನಾದೆನು. ಆದರೆ ಸೈನಿಕರಲ್ಲಿ ಅನೇಕರು ಹತ ಆಹತರಾಗಿರುವುದನ್ನು ನೋಡಿ ಉಳಿದಿರುವವರು ರಣಭಂಗ ಮಾಡುವರೆಂದು ಹೆದರಿಕೆಯುಂಟಾಗಿದೆ '' ಎಂದು ಹೇಳಿದನು.

ಇಂದ್ರನಾಥನಿಗೆ ಮುಖದಲ್ಲಿ ಕೆಂಬಣ್ಣವೇರಿ, ಅವನು ಪ್ರತ್ಯುತ್ತರವಾಗಿ ''ಮಹಾರಾಜ! ನನ್ನ ಸೈನಿಕರಿಗೆ ಎದುರಿಗೆ ನಿಂತು ಸಮ್ಮುಖ ಯುದ್ಧವನ್ನು ಮಾಡಲು ಹೇಳಿಕೊಟ್ಟಿರುವೆನು, ರಣವನ್ನು ಭಂಗಮಾಡಿ ಓಡಿಹೋಗುವುದನ್ನು ಕಲಿಸಿಲ್ಲ; ಕಡೆಗೆ ಒಬ್ಬ ರಾಹುತನು ಪ್ರಾಣದಿಂದಿರುವತನಕ ಸಮ್ಮುಖ ಯುದ್ಧವು ನಡೆಯುತಿರುವುದು '' ಎಂದು ಅರಿಕೆಮಾಡಿದನು.

ಸಂಧ್ಯೆಯ ಛಾಯೆಯು ಕ್ರಮ ಕ್ರಮವಾಗಿ ಯುದ್ಧಕ್ಷೇತ್ರವನ್ನು ಆವರಿಸ ತೊಡಗಿತು, ಆದರೂ ಚಮತ್ಕಾರವಾದಾ ವ್ಯೂಹವು ಭಂಗವಾಗಲಿಲ್ಲ! ಒಬ್ಬ ಅಶ್ವಾರೋಹಿಯು ಹತನಾದೊಡನೆ ಮತ್ತೊಬ್ಬ ಅಶ್ವಾರೋಹಿಯು ಬಂದು ಅವನ ಸ್ಥಳದಲ್ಲಿ ನಿಲ್ಲುವನು! ಅವನು ಹತನಾದರೆ ಮತ್ತೊಬ್ಬನು ಬಂದು ನಿಲ್ಲುವನು; ಶ್ರೇಣಿಯು ಕ್ಷೀಣವಾದ ಹಾಗೆಲ್ಲಾ ಸೈನಿಕರ ಉತ್ಸಾಹೋಲ್ಲಾಸಗಳು ವೃದ್ಧಿಗೊಳ್ಳುತಿದ್ದುವು. ಅವನ ಸೈನಿಕರು ಪಲಾಯನವೆಂಬ ಮಾತನ್ನರಿಯರೆಂದು ಇಂದ್ರನಾಥನು ಹೇಳಿದುದು ಯಥಾರ್ಥವಾದುದು. ಶತ್ರುಗಳು ಹತಾಶರಾಗಿ ಭೀಷಣ ಗರ್ಜನೆಯಂ ಮಾಡುತ ಒತ್ತಡವೆ ಕಡೆಯ ಆಕ್ರಮಣವಂ ಮಾಡಿದರು. ಎರಡು ಸಾವಿರದ ಅಶ್ವಾರೋಹಿಗಳಾ ಭೀಷಣ ಗರ್ಜನೆಯು ನಾಲ್ಕುಕಡೆ ಒಂದು ಹರಿದಾರಿಯ ತನಕ ಕೇಳಿತು. ಎರಡು ಸಾವಿರದ ಕುದುರೆಗಳ ಏಕ ಕಾಲದ ಪದವಿಕ್ಷೇಪದಿಂದ ಮೇದಿನಿಯು ಕಂಪಿತವಾಯಿತು. ಆದರೆ ಆ ಶಬ್ದ ದಿಂದಾಗಲೀ ಆ ಪದವಿಕ್ಷೇಪದಿಂದಾಗಲೀ ಇಂದ್ರನಾಥನ ವ್ಯೂಹವು ಕದಲಲಿಲ್ಲ, ಕಂಪಿತವಾಗಲಿಲ್ಲ. ಯುದ್ಧವು ಸಾಂಗವಾಯಿತು, ಅಪೂರ್ವವಾದಾ ವ್ಯೂಹವು ಭಂಗವಾಗಲಿಲ್ಲ.

ಕಡೆಗೆ ಸೇತುವೆಯು ನಿರ್ಮಿತವಾಯಿತು. ರಾಜನು ಕಂದಕವನ್ನು ಪಾರಾಗಿ ದುರ್ಗದೊಳಗೆ ಹೋದನು. ರಾಜನು ನಿರಾಪದವಾಗಿ ಪಾರಾಗಿ ಹೋದನೆಂದು ಕೇಳಿ ಇಂದ್ರನಾಥನ ಸೈನಿಕರು ಒಮ್ಮೆಗೆ ಸಿಂಹಗರ್ಜನೆಯಂ ಮಾಡಿದರು. ಆ ಗರ್ಜನೆಯು ಶತ್ರುಗಳ ಶಿಬಿರವನ್ನು ಮುಟ್ಟಿತು. ಶತ್ರುಗಳಾವ ದಕ್ಕೆ ಸಲುವಾಗಿ ಎರಡು ಸಾವಿರದ ಸೈನ್ಯವನ್ನು ಒಟ್ಟೈಸಿ ಕಳುಹಿದ್ದರೋ ಅವರಾ ಉದ್ದೇಶವು ವ್ಯರ್ಥವಾಯಿತು.

ಆಕ್ರಮಣ ಮಾಡಬಂದವರು ಭಗ್ನೋದ್ಯಮರಾಗಿ ಗದ್ದಲವಿಲ್ಲದೆ ತಮ್ಮ ಶಿಬಿರಾಭಿಮುಖವಾಗಿ ಹೊರಟರು. ರಾಜಾ ಟೋಡರಮಲ್ಲನು ಸೇತುವೆಯನ್ನು ಪಾರಾಗಿ ಹೋಗುವತನಕ ಇಂದ್ರನಾಥನು ಒಂದೇ ದೃಷ್ಟಿಯಿಂದ ಅವನನ್ನು ನೋಡುತಿದ್ದನು, ರಾಜನು ನಿರಾಪದವಾಗಿ ದುರ್ಗದೊಳಗೆ ಪ್ರವೇಶವಾದನೆಂದು

ತಿಳಿದ ಬಳಿಕ ಇಂದ್ರನಾಥನು ತನ್ನ ಕುದುರೆಯಿಂದ ಇಳಿಯುವ ಪ್ರಯತ್ನವನ್ನು ಮಾಡಿದನು. ಆದರೆ ಒಮ್ಮಿಂದೊಮ್ಮೆ ಕೆಳಗೆ ಬಿದ್ದುಬಿಟ್ಟನು, ಪುನಃ ಏಳಲಾರದೆ ಹೋದನು, ಅವನ ಸೈನಿಕರು ಅವನನ್ನೆಬ್ಬಿಸಲು ಪ್ರಯತ್ನಪಟ್ಟರು. ಶತ್ರುಗಳ ಭಲ್ಲೆಯಿಂದ ಅವನ ವಕ್ಷವು ಬಿದ್ಧವಾಗಿ ಅವನ ಮೈಯೆಲ್ಲಾ ರಕ್ತದಿಂದ ತೋಯ್ದುಹೋಗಿದ್ದಿತು. ಬಲವು ಕುಗ್ಗಿ ಮೂರ್ಛೆಗೊಂಡು ನೆಲದಮೇಲೆ ಬಿದ್ದುಬಿಟ್ಟನು.

ಇಂದ್ರನಾಥನ ಸೈನಿಕರಲ್ಲನೇಕರು ಸೇತುವೆಯನ್ನು ಪಾರಾಗಿ ಹೊರಟುಹೋಗಿದ್ದರು. ಶತ್ರುಗಳು ಹೊರಟುಹೋಗುತಿದ್ದಾಗ ಇಂದ್ರನಾಥನು ಆಹತನಾಗಿ ಬಿದ್ದಿದ್ದುದನ್ನು ಕಂಡು ಉಲ್ಲಾಸದಿಂದ ಚೀತ್ಕಾರಮಾಡುತ ಅವನನ್ನೆತ್ತಿಕೊಂಡು ತಮ್ಮ ಶಿಬಿರಾಭಿಮುಖವಾಗಿ ಹೊರಟುಹೋದರು. ಇಂದ್ರನಾಥನು ಬಂದಿಯಾದನು.

---

## ಇಪ್ಪತ್ತೇಳನೆಯ ಪರಿಚ್ಛೇದ

### ಬಂದಿ

The soldier's hope, the patriot's zeal,
Foi ever dimmed, for evei crossed,
Oh ! who shall say what heroes feel,
When all but life and honor's lost,
The last sad hour of freedom's dream,
And valor's task moved slowly by,
While mute they watched till morning's beam,
Should rise and give them light to die,
There's yet a world where souls are free,
Where tyrants taint not nature's bliss,
If death that world's bright opening be,
Oh ! who would live a slave in this ?

*Moore*

ಶತ್ರುಗಳು ಇಂದ್ರನಾಥನನ್ನು ಅಚೇತನಾವಸ್ಥೆಯಲ್ಲಿ ಬಂದಿಯಾಗಿ ಶಿಬಿರಕ್ಕೆ ಕೊಂಡೊಯ್ದರು. ಬಹಳ ಹೊತ್ತಾದ ಬಳಿಕ ಇಂದ್ರನಾಥನು ಮೂರ್ಛೆಯಿಂದೆಚ್ಚರಗೊಂಡನು.

ಇಂದ್ರನಾಥನು ಎಚ್ಚರಗೊಂಡು ನೋಡಿದನು, ಅವನಿಗೆ ಸುತ್ತ ಶತ್ರುಗಳು ಕುಳಿತಿದ್ದರು. ಅವನೆದುರಿಗೆ ಎತ್ತರವಾಗಿದ್ದೊಂದು ಗದ್ದಿಗೆಯಮೇಲೆ ಮಾಸು ಏಸಾಯು ಕುಳಿತಿದ್ದನು, ಅವನಿಗೆ ಉಭಯ ಪಾರ್ಶ್ವಗಳಲ್ಲಿ ಮಹಾಮಾನ್ಯರಾದ ಉಮ್ರಾಗಳೂ ಮಂತ್ರಿಗಳೂ ಕುಳಿತಿದ್ದರು. ಅವರಲ್ಲಿ ಟೋಡರಮಲ್ಲನಿಗೆ ವಿದ್ರೋಹಿಗಳಾಗಿದ್ದ ಸೇನಾಪತಿ ತರ್ಖನನೂ ಹುಮಾಯುನನೂ ಇದ್ದುದನ್ನು ಇಂದ್ರನಾಥನು ನೋಡಿದನು. ಇಂದ್ರನಾಥನಿಗೆ ಹಿಂದುಗಡೆ ಕುಠಾರಹಸ್ತನಾಗಿ

ಜಲ್ಲಾದನು (ಗಲ್ಲಿಗೆ ಹಾಕುವವ ಅಥವಾ ಪ್ರಾಣದಂಡನೆಯಾಗಿರುವ ಮನುಷ್ಯನ ಶಿರಶ್ಛೇದನ ಮಾಡುವವನು) ನಿಂತಿದ್ದನು. ಅವನು ಕಣ್ಣುರೆಪ್ಪೆ ಮುಚ್ಚದೆ ತನ್ನ ಪ್ರಭುವಿನ ಕಡೆ ನೋಡುತಿದ್ದನು, ಪ್ರಭುವಿನ ಆಜ್ಞೆ ಅಥವಾ ಇಂಗಿತ ಮಾತ್ರದಿಂದ ಬಂದಿಯ ಶಿರಶ್ಛೇದನ ಮಾಡಲು ಸಿದ್ಧವಾಗಿದ್ದನು. ಇಂದ್ರನಾಥನು ಸ್ವಲ್ಪವೂ ಭೀತನಾಗ ಲಿಲ್ಲ; ಮಾನುವಿಸಾಯನ್ನು ತೀವ್ರದೃಷ್ಟಿಯಿಂದ ನೋಡುತಿದ್ದನು.

ಮಾನುವಿಸಾಯು ಇಂದ್ರನಾಥನಿಗೆ ಎಚ್ಚರವಾದುದನ್ನು ಕಂಡು ಗಂಭೀರ ಸ್ವರದಿಂದ "ಹಿಂದು! ನೀನು ವೀರ ಪುರುಷನು, ಆದರೆ ವಿದ್ರೋಹಾಚರಣೆಯಂ ನಡೆಯಿಸಿರುತ್ತೀ, ವಿದ್ರೋಹಾಚರಣೆಗೆ ದಂಡನೆಯು ಶಿರಶ್ಛೇದನ" ಎಂದನು.

ಇಂದ್ರನಾಥನು—(ಭೀಷಣ ಸ್ವರದಿಂದ) ಯೋದ್ಧನು ಮರಣಕ್ಕೆ ಅಂಜನು, ನಿಮ್ಮ ಇಷ್ಟವಿದ್ದಂತೆ ಮಾಡೋಣಾಗಲಿ, ನಾನು ವಿದ್ರೋಹಾಚರಣೆಯಂ ಮಾಡಿದವನಲ್ಲ.

ಮಾನುವಿಸಾಯು ಇಂದ್ರನಾಥನ ಉಗ್ರಭಾವವನ್ನು ಕಂಡು ಸ್ವಲ್ಪವೂ ಕುಪಿತ ನಾಗದೆ, "ನೀನು ಟೋಡರಮಲ್ಲನ ಸಂಗಡ ಸೇರಿಕೊಂಡು ವಂಗದೇಶದ ಜಹ ಗೀರದಾರರ ಸಂಗಡ ಯುದ್ಧವನ್ನು ಮಾಡುವುದು ವಿದ್ರೋಹಾಚರಣೆಯಲ್ಲವೆ?" ಎಂದನು.

ಇಂದ್ರನಾಥನು ಪುನಃ ಗರ್ವದಿಂದ, "ವಂಗದೇಶದ ಅಧೀಶ್ವರನು ಸಮಸ್ತ ಭಾರತವರ್ಷಕ್ಕೂ ಅಧೀಶ್ವರನಾಗಿರುವ ಅಕ್ಬರಷಹನಿಗೆ ಸಲುವಾಗಿ ವಿದ್ರೋಹಿಗ ಳಾಗಿರುವ ಜಹಗೀರುದಾರರೊಂದಿಗೆ ಯುದ್ಧವನ್ನು ಮಾಡುತಿದ್ದೇನೆ" ಎಂದನು.

ಅಲ್ಲಿದ್ದವರೆಲ್ಲರೂ ಇಂದ್ರನಾಥನು ತನ್ನ ಮರಣವನ್ನು ತಾನೇ ಉಂಟುಮಾಡಿ ಕೊಳ್ಳುತಿದ್ದನೆಂತಲೂ ಮಾನುವಿಸಾಯು ಅವನ ಶಿರಶ್ಛೇದನೆಗೆ ಆದೇಕ್ಷಣದಲ್ಲಿ ಅಪ್ಪಣೆಯನ್ನು ಮಾಡುವನೆಂತಲೂ ಯೋಚಿಸಿಕೊಂಡರು. ಆದರೆ ಮಹಾನುಭಾವ ನಾದಾ ಮಾನುವಿಸಾಯು, ಅಸಹಾಯನಾಗಿದ್ದಾ ಹಿಂದುವಿನ ನಿರ್ಭೀಕತೆಯನ್ನು ಕಂಡು ಕುಪಿತನಾಗದೆ, ಕೇವಲ ಆಹ್ಲಾದಿತನಾದನು. ಅವನು ಧೀರಭಾವದಿಂದ, "ವೀರ! ನಿನ್ನ ಉಗ್ರತೆಯನ್ನು ಕ್ಷಮಿಸಿರುವೆನು, ನಿನ್ನ ವೀರತ್ವವನ್ನು ನೋಡಿ ಆನಂದಿತನಾದೆನು, ಆದರೆ ನೀನು ವಂಗದೇಶದ ಜಹಗೀರುದಾರರನ್ನು ವಿದ್ರೋಹಿ ಗಳೆಂದು ಹೇಳಬೇಡ. ನಾವು ಮೊಗಲ ಸಂತಾನರು, ನಾವು ವಂಗವಿಜೇತರು, ನಮ್ಮ ಬಾಹುಬಲದಿಂದೀ ದೇಶವು ಜಯಿಸಲ್ಪಟ್ಟಿತು, ನಾವು ಈ ದೇಶಕ್ಕೆ ಪ್ರಕೃತ ರಾಜರು" ಎಂದು ಹೇಳಿದನು.

ಇಂದ್ರನಾಥ—(ಮೊದಲಿನಂತೆ ಗರ್ವದಿಂದ) ತಾವು ವಂಗದೇಶವನ್ನು ಜಯಿಸಿ ದವರೆಂದು ನಾನು ಅನಂಗೀಕಾರಮಾಡುವುದಿಲ್ಲ. ಆದರೆ ಸಮ್ರಾಟನಾದ ಅಕ್ಬರನ ಪ್ರತಾಪದಿಂದ ನೀವಾ ಜಯವನ್ನು ಹೊಂದಿರುವಿರಿ, ಆ ಸಮ್ರಾಟನಿಗೆ ವಿರೋಧ ವಾಗಿ ಯುದ್ಧವನ್ನು ಮಾಡಿ ವಿದ್ರೋಹಾಚರಣೆಯನ್ನು ನಡೆಯಿಸಿ ಸುಂದರ

ವಾದಾ ವಂಗದೇಶವನ್ನು ಅನ್ಯಾಯವಾಗಿ ರಕ್ತಪ್ರವಾಹದಲ್ಲಿ ತೇಲುವಂತೆ ಮಾಡುವಿರಿ.

ಮಾಸುಮಿಾ—ಇಂದ್ರನಾಥ! ನೀನು ಹಿಂದು, ಹಿಂದುಗಳಾಗಿ ನೀವು ವಿಧಿಯ ನಿರ್ಬಂಧದಮೇಲೆ ನಿರ್ಭರರಾಗಿದ್ದುಕೊಂಡು ನಿಶ್ಚೇಷ್ಟರಾಗಿರಿ, 'ಸಾಹಸಿಗಳಾದ ಮೊಗಲರು ದೇಹದಲ್ಲಿ ಪ್ರಾಣವಿರುವತನಕ ನಿಶ್ಚೇಷ್ಟವಾಗಿರರು, ಸ್ವಾಧೀನತೆಯನ್ನು ಅವರೊಪ್ಪುವವರಲ್ಲ.

ಇಂದ್ರನಾಥ—ಪಠಾನರೂ ಅದೇ ಮಾತನ್ನೇ ಹೇಳುತಿದ್ದರು, ಈಗಾ ಪಠಾನ ರಾಜ್ಯವೆಲ್ಲಿ! ದಿಲ್ಲಿಯ ಸಮ್ರಾಟನಿಗೆ ವಿರುದ್ಧವಾಗಿ ನೀವು ಯುದ್ಧವನ್ನು ಮಾಡುವುದು ವ್ಯರ್ಥ, ವೃಥಾ ವಂಗದೇಶವನ್ನು ರಕ್ತಸ್ರೋತದಲ್ಲಿ ಪ್ಲಾವಿತ ಮಾಡುತ್ತೀರಿ.

ಮಾಸುಮಿಾ—ಹಿಂದು! ನಿನ್ನ ಜೀವನ ಮರಣಗಳೆನ್ನ ಕೈಯಲ್ಲಿರುವುವು, ನೀನೆನ್ನ ಸಮಕ್ಷಮದಲ್ಲಿ ಅಂತಹ ಮಾತನ್ನು ಹೇಳುವುದಕ್ಕೆ ನಿನಗೆಷ್ಟು ಧೈರ್ಯ? ನಿನಗೆ ಪ್ರಾಣದಮೇಲೆ ಆಶೆಯಿಲ್ಲವೆ?

ಇಂದ್ರನಾಥ—ನನಗೆ ಪ್ರಾಣದಮೇಲೆ ಬಹಳವಾಗಿ ಆಶೆಯುಂಟು, ಆದರೆ ನಿಮ್ಮ ಕೈಗೆ ಸಿಕ್ಕಾಗಲೇ ನನ್ನಾಪ್ರಾಣದಮೇಲಣ ಆಶೆಯನ್ನು ಬಿಟ್ಟೆನು.

ಮಾಸುಮಿಾ—ಏಕೆ?

ಇಂದ್ರನಾಥ—ಸಾಹಸಿಯಾದ ಪುರುಷನು ಶತ್ರುವನ್ನು ಕ್ಷಮಿಸುವನು, ತನ್ನ ಪಕ್ಷದಲ್ಲಿ ಜಯವು ನಿಶ್ಚಯವೆಂದು ತಿಳಿದಿರುವಾತನು ಶತ್ರುವನ್ನು ಕ್ಷಮಿಸಲಾಪನು. ಆದರೆ ಸ್ವಂತ ಜಯದಲ್ಲಿ ಸಂಶಯವುಳ್ಳವನು ಶತ್ರುವನೆಂದಿಗೂ ಕ್ಷಮಿಸನು.

ಬಹಳಹೊತ್ತು ಮಾತನಾಡಿ ಇಂದ್ರನಾಥನ ಬಲಹೀನವಾಗಿದ್ದ ಶರೀರವು ಕ್ರಮಶಃ ಅವಸನ್ನವಾಗುತಿದ್ದಿತು; ಅದರಿಂದವನ ಹೃದಯದ ಘಾಯದಿಂದ ಪುನಃ ರಕ್ತವು ಹೊರಡುವುದಕ್ಕೆ ಪ್ರಾರಂಭವಾಯಿತು.

ಮಾಸುಮಿಾ—(ಕ್ರೋಧಾಂಧನಾಗಿ) ಪಾಮರ! ಕೌಶಲ ವಾಕ್ಯಗಳಿಂದ ಕ್ಷಮೆಯನ್ನು ಹೊಂದುವ ಪ್ರತ್ಯಾಶೆಯುಳ್ಳವನಾಗಬೇಡ.

ಇಂದ್ರನಾಥ—(ಮೊದಲಿನಂತೆ ಗರ್ವದಿಂದ) ನಾನಾವ ಪ್ರತ್ಯಾಶೆಯನ್ನೂ ಹಚ್ಚಿಕೊಂಡಿಲ್ಲ, ಜಲ್ಲಾದನು ಬೇಗನೆ ತನ್ನ ಕೆಲಸವನ್ನು ಪೂರೈಸಲೆಂಬೊಂದೇ ಪ್ರತ್ಯಾಶೆಯುಳ್ಳವನಾಗಿದ್ದೇನೆ.

ಆದರೆ ಜಲ್ಲಾದನು ಅವನಾ ಭೀಷಣವಾದ ಕೆಲಸವನ್ನು ಮಾಡಬೇಕಾಗಿಲ್ಲ; ಇಂದ್ರನಾಥನ ಘಾಯದಿಂದ ರಕ್ತಸ್ರಾವವು ಕ್ರಮವಾಗಿ ಹೆಚ್ಚುತ ಬಂದು ಅವನ ಶರೀರವು ಬೇಗನೆ ಅವಸನ್ನವಾಗಿ ಪುನಃ ಚೇತನ ಹೋದವನಾಗಿ ನೆಲದಮೇಲೆ ಬಿದ್ದನು.

ಮಾನುಷನ ಹೃದಯವು ಸ್ವಭಾವತಃ ನಿಷ್ಠುರವಾದುದಲ್ಲ. ಆಹತನಾಗಿ ಬಲವಿಲ್ಲದೆ ಚೇತನಹೋದವನ ಶಿರಚ್ಛೇದನವಂ ಮಾಡಲು ಅವನು ಅಪ್ಪಣೆಯನ್ನು ಮಾಡಲಿಲ್ಲ—ಇಂದ್ರನಾಥನನ್ನು ಕಾರಾಗಾರಕ್ಕೆ ಕೊಂಡೊಯ್ಯಬೇಕೆಂದು ಅಪ್ಪಣೆ ಮಾಡಿದನು.

ಇಂದ್ರನಾಥನು ಕಾರಾಗಾರಕ್ಕೊಯ್ಯಲ್ಪಟ್ಟನು.

---

## ಇಪ್ಪತ್ತೆಂಟನೆಯ ಪರಿಚ್ಛೇದ

## ರಮಣಿಯ ವೀರತ್ವ

The midnight passed, and to the massy door
  A light step came-it paused-it moved once more
Slow turns the grating bolt and sullen key—
  'Tis as his heart foreboded—that fair she!

*Byron*

ಅತಿ ಕಿರಿದಾಗಿದ್ದೊಂದು ಕತ್ತಲೆಯ ಸೆರೆಮನೆಯಲ್ಲೊಬ್ಬ ವೀರಪುರುಷನು ಹುಲ್ಲಿನ ಹಾಸಿಗೆಯ ಮೇಲೆ ಮಲಗಿರುವನು. ಆ ಸೆರೆಮನೆಯಲ್ಲೊಂದು ಮೇಲಿನ ಬೆಳಕಂಡಿಯಿಂದ ಬೆಳಗಿನ ಪೂಬಿಸಿಲು ಬರುತಿದ್ದಿತು. ಆ ಅಂಧಕಾರದ ರಾಶಿಯಲ್ಲಿ ಆ ಬಿಸಿಲ ಕೋಲು ಸ್ಪಷ್ಟವಾಗಿ ಕಾಣುತಿದ್ದಿತು. ಅಸಂಖ್ಯವಾದ ಅಣುಗಳೂ ಅಣುವಿನಷ್ಟು ಸಣ್ಣದಾದ ಪತಂಗಗಳೂ ಆ ಬಿಸಿಲ ರೇಖೆಯಲ್ಲಿ ಆಡುತಿದ್ದುವು, ಕುಣಿಯುತಿದ್ದುವು, ಮೇಲೆ ಹೋಗುವುವು, ಕೆಳಗೆ ಬೀಳುವುವು, ಒತ್ತಡವೆ ಬಿಸಲಲ್ಲಿ ಕಾಣುವುವು, ಒತ್ತಡವೆ ಕತ್ತಲಲ್ಲಿ ಲೀನವಾಗುವುವು, ಒಂದೆರಡು ಸಣ್ಣಸಣ್ಣ ಹಕ್ಕಿಗಳು ಬಂದು ಬೆಳಕಂಡಿಯಲ್ಲಿ ಕುಳಿತುಕೊಳ್ಳುವುವು, ಪುನಃ ಹಾರಿ ಹೋಗುವುವು. ಅವು ಬಂದಿಯಲ್ಲ, ರೆಕ್ಕೆಯನ್ನು ಬಿಚ್ಚಿಕೊಂಡು ಮರದಿಂದ ಮರಕ್ಕೆ ಹಾರಿಹೋಗಿ ಕೊಂಬೆಗಳಮೇಲೆ ಕೂಡ್ರುವುವು, ಅಲ್ಲಲ್ಲಿ ಸಂಚರಿಸುವುವು, ಜಗತ್ಸಂಸಾರದಲ್ಲಿಯೂ ಆಕಾಶಮಂಡಲದಲ್ಲಿಯೂ ಭ್ರಮಣಮಾಡುವುವು. ವೀರಪುರುಷನಾ ತೃಣಶಯ್ಯೆಯಲ್ಲಿ ಶಯನಮಾಡಿಕೊಂಡು ಬೆಳಕಂಡಿಯ ಕಡೆ ಒಂದೇ ದೃಷ್ಟಿಯಿಂದ ನೋಡುತಿದ್ದನು. ಅಂಧಕಾರದಲ್ಲಿರುವ ಲತಾಪಲ್ಲವವು ಬಾಹುಗಳನ್ನು ವಿಸ್ತರಿಸಿ ಬೆಳಕಿನ ಕಡೆ ತಿರುಗಿರುವಂತೆ ಬಂದಿಯ ಕಣ್ಣುಗಳು ಬೆಳಕಂಡಿಯ ಕಡೆ ತಿರುಗಿದ್ದುವು. ಬಂದಿಯು ಚಿಂತಿಸುತಿದ್ದುದೇನು? ಬಿಸಿಲ ರೇಖೆಯಲ್ಲಿ ಅಣ್ವಾದಿಗಳ ಆಟವನ್ನು ನೋಡುತಿದ್ದನೆ? ಬೆಳಕಂಡಿಯಿಂದ ಬಂದು ಕುಳಿತ ಹಕ್ಕಿಗಳು ಪುನಃ ಪಕ್ಷಗಳನ್ನು ವಿಸ್ತರಿಸಿಕೊಂಡು ಹಾರಿಹೋಗುವುದನ್ನು ಕಂಡು ಅವುಗಳೊಂದಿಗೆ ತಾನೂ ತನ್ನ ಮಾನಸಪಕ್ಷವನ್ನು ವಿಸ್ತರಿಸಿಕೊಂಡು ಸುಂದರವಾದ ಜಗತ್ಸಂಸಾರದಲ್ಲಿಯೂ ಅನಂತವಾದಾ ನೀಲಾಕಾಶದಲ್ಲಿಯೂ ವಿಹರಿಸುತಿದ್ದನೆ?

ಇಂದ್ರುನಾಥನದಾವದನ್ನೂ ಕುರಿತು ಚಿಂತಿಸುತಿರಲಿಲ್ಲ. ಅವನ ಹೃದಯ ದಲ್ಲಿ ಬೇರೆ ಚಿಂತೆಯು ಉದ್ರೇಕವಾಗಿದ್ದಿತು. ಇಂದ್ರುನಾಥನು ಯೋದ್ಧನು, ಯೋದ್ಧನಿಗೆ ಮರಣದ ಭಯವಿಲ್ಲ. ಆದರೆ ಅವನು ಸತ್ತರೆ ಇತರರಿಗೆ ಕ್ಲೇಶ ವುಂಟಾಗುವುದೆಂಬ ಚಿಂತೆಯಿಂದ ಅಸ್ಥಿರನಾಗಿದ್ದನು. ಅವನ ತಂದೆಯಾದ ಪುಣ್ಯಾತ್ಮ ನಗೇಂದ್ರುನಾಥನು ವಾರ್ಧಕ್ಯದಲ್ಲಿ ಏಕಮಾತ್ರ ಮಗನ ಮರಣದ ವಾರ್ತೆಯನ್ನು ಕೇಳಿದರೆ ಪ್ರಾಣವಂ ಬಿಡುವನು. ನಗೇಂದ್ರನಾಥನಿಗೆ ಮತ್ತಾರೂ ಇಲ್ಲ, ಹೆಂಡತಿ ಯಿಲ್ಲ, ಮಗಳಿಲ್ಲ, ಬೇರೆ ಮಗನಿಲ್ಲ, ವೃದ್ಧನು ಏಕಮಾತ್ರ ಪುತ್ರನನ್ನು ನೋಡಿ ಕೊಂಡು ಜೀವನಧಾರಣೆಯಂ ಮಾಡುತಿದ್ದನು, ಅಂತಹ ಮಗನ ಮರಣದ ವಾರ್ತೆ ಯನ್ನು ಕೇಳಿದರೆ ನಗೇಂದ್ರುನಾಥನ ಗೃಹವು ಶೂನ್ಯವಾಗಿ ವೃದ್ಧನು ಪ್ರಾಣತ್ಯಾಗ ವನ್ನು ಮಾಡುವನು.

ಮತ್ತೂ ಆ ಅರಿಯದ ಹುಡುಗಿ ಪ್ರೇಮವಿಹ್ವಲೆಯಾದಾ ಸರಳೆ, ಸಹಾಯ ಹೀನೆಯೂ ಸಂಪತ್ತಿಹೀನೆಯೂ ಕುಟೀರವಾಸಿನಿಯೂ ಆದಾ ಸರಳೆ, ಅವಳ ಗತಿ ಯೇನಾಗುವುದು? ಇಂದ್ರುನಾಥನು ಏಳನೆಯ ಪೂರ್ಣಿಮೆಯೊಳಗೆ ಹಿಂದಿರುಗಿ ಬರುವುದಾಗಿ ಹೇಳಿದ್ದನು. ಏಳು ಪೂರ್ಣಿಮೆಗಳು ಕಳೆದುಹೋಗುವುವು, ಹುಡು ಗಿಯು ಆಶಾನೇತ್ರದಿಂದ ಎದುರುನೋಡುತ್ತ ಕಡೆಗೆ ಕಣ್ಣುಗಳನ್ನು ಮುಚ್ಚಿ ಕೊಳ್ಳುವಳು, ಜೀವನದ ಅಭಾವದಿಂದ ಪರಿಸ್ಫುಟವಾಗದ ಹೂವಿನಂತೆ ಮಾತಿಲ್ಲದೆ ಮೌನವಾಗಿ ಅಕಾಲದಲ್ಲಿ ಒಣಗಿಹೋಗುವಳು; ಚಿಂತಿಸಿ ಚಿಂತಿಸಿ ಇಂದ್ರುನಾಥನ ತಲೆಯು ತಿರಿಗತೊಡಗಿತು, ಕಣ್ಣುಗಳು ದೃಷ್ಟಿಶೂನ್ಯವಾದುವು, ಆಗವನು, "ಭಗವಂತ! ನಿನಗೆ ಇಷ್ಟವಿದ್ದಂತೆ ಮಾಡು, ವಿಧಿಯ ನಿರ್ಬಂಧದಿಂದ ಆಗುವುದು ಆಗಲಿ, ಆ ಚಿಂತೆಯ ಯಾತನೆಯನ್ನು ನಾನು ಹೆಚ್ಚು ಸಹಿಸಲಾರೆನು" ಎಂದೆಂದು ಕೊಂಡನು.

ಶತ್ರುಗಳಮಧ್ಯದಲ್ಲಿ ಇಂದ್ರುನಾಥನಾ ರೋಗದಲ್ಲಿ ಅವನಿಗೆ ಶುಶ್ರೂಷೆಯನ್ನು ಮಾಡುವವರಾರೂ ಇರಲಿಲ್ಲ. ಸೆರೆಮನೆಯ ಬಾಗಿಲಲ್ಲಿ ಕಾವಲವನು ಖಡ್ಗಹಸ್ತ ನಾಗಿ ನಿಶ್ಶಬ್ದವಾಗಿ ರಾತ್ರಿ ಹಗಲು ನಿಂತಿರುವನು. ಹಗಲು ಕಳೆದು ಸಂಧೆಯ ಸಮಯದಲ್ಲೊಬ್ಬ ಬ್ರಾಹ್ಮಣನು ನಿಶ್ಶಬ್ದವಾಗಿ ಬಂದು ಆಹಾರ ಪದಾರ್ಥಗಳನ್ನು ತಂದಿಡುವನು, ಊಟವಾದ ಬಳಿಕ ಒಬ್ಬ ದಾಸಿಯು ನಿಶ್ಶಬ್ದವಾಗಿ ಬಂದು ಊಟ ಮಾಡಿದ ಸ್ಥಳವನ್ನು ಪರಿಷ್ಕರಿಸಿ ಹೊರಟುಹೋಗುವಳು. ಅವರಿಬ್ಬರು ಹೊರತು ಸೆರೆಮನೆಗೆ ಮತ್ತಾರೂ ಬರುತಿರಲಿಲ್ಲ. ಅಂತಹ ಶತ್ರು ಶಿಬಿರದಲ್ಲಿಯೂ ಇಂದ್ರು ನಾಥನಿಗೊಬ್ಬ ಬಂಧುವಿದ್ದುದು ಅವನ ಅದೃಷ್ಟವಿಶೇಷವೆಂದು ಹೇಳಬೇಕು, ಸಂಧ್ಯೆಯ ಸಮಯದಲ್ಲಿ ಬಂದು ಸೆರೆಮನೆಯನ್ನು ಗುಡಿಸಿ ಪರಿಷ್ಕರಿಸುತಿದ್ದಾ ಹೆಂಗಸು ಇಂದ್ರುನಾಥನ ದುಃಖದಲ್ಲಿ ಯಥಾರ್ಥ ದುಃಖಿನಿಯಾಗಿದ್ದಳು. ಅವಳು ಪ್ರತ್ಯಹವೂ ನಿಶ್ಶಬ್ದವಾಗಿ ಬಂದು ಕೆಲಸವನ್ನು ಮಾಡಿ ನಿಶ್ಶಬ್ದವಾಗಿ

ಹೊರಟು ಹೋಗುತಿದ್ದಳೇನೋ! ನಿಜ; ಆದರೆ ಆ ವೀರನ ದುಃಖವಂ ನೋಡಿ ಅಂತರಾಳದಲ್ಲಿ ಕಂಬನಿಗಳನ್ನು ಸುರಿಸುವಳು. ನಿರ್ದಯರಾದಾ ಶತ್ರುಗಳು ಬಂದಿಯಾದವನಿಗೆ ಬಹಳ ಕಷ್ಟವನ್ನು ಕೊಡುತಿದ್ದರು. ಮಲಗುವುದಕ್ಕೆ ಸಲುವಾಗಿ ಸ್ವಲ್ಪ ಹುಲ್ಲನ್ನು ಮಾತ್ರ ಹಾಕಿರುವರು. ಆ ದಾಸಿಯು ಇಂದ್ರನಾಥನಿಗೆ ಸಲುವಾಗಿ ತನ್ನ ಸ್ವಂತ ಬಟ್ಟೆಯನ್ನಾ ಹುಲ್ಲಿನ ಮೇಲೆ ಹಾಸಿ ಹೊರಟುಹೋಗುವಳು. ಶತ್ರುಗಳು ಇಂದ್ರನಾಥನಿಗೆ ಹಗಲು ಒತ್ತಡವೆ ಮಾತ್ರ ಸ್ವಲ್ಪ ಅಪಕೃಷ್ಟ ಆಹಾರವನ್ನು ಕೊಡುವರು, ದಾಸಿಯು ತಾನು ಅನಾಹಾರಿಯಾಗಿದ್ದು ನಾನಾವಿಧ ಪಥ್ಯಕಾರಿಯಾದ ಪದಾರ್ಥಗಳನ್ನು ತಂದು ಕೊಡುವಳು. ಶತ್ರುಗಳು ಇಂದ್ರನಾಥನಿಗೆ ಚಿಕಿತ್ಸೆಯನ್ನು ಮಾಡಿಸುತ್ತಿರಲಿಲ್ಲ— ದಾಸಿಯು ಅವನಾ ಘಾಯಗಳನ್ನು ತೊಳೆದು ಪುನಃ ಪರಿಷ್ಕಾರವಾದ ಬಟ್ಟೆಯಿಂ ದವುಗಳನ್ನು ಕಟ್ಟುವಳು, ಹಾಗೂ ಸರಿಯಾದ ಔಷಧಗಳನ್ನು ತಂದುಕೊಡುವಳು. ಆ ಕರುಣಾ ಜಲಸೇಚನೆಯಿಂದ ಇಂದ್ರನಾಥನ ಘಾಯಗಳು ಮಾಗತೊಡಗಿ ದುವು, ಅವನು ದಿನೇ ದಿನೇ ಆರೋಗ್ಯವನ್ನು ಹೊಂದುತಿದ್ದನು. ಇಂದ್ರನಾಥನು ಪ್ರಾಯಶಃ ತನ್ನ ಯೋಚನೆಯಲ್ಲಿ ವ್ಯಸ್ತವಾಗಿರುವನು. ಆದರೂ ದಾಸಿಯ ಪ್ರೀತಿ ಪುರಸ್ಸರವಾದ ಪರಾಮರ್ಶೆಯನ್ನು ಕಂಡು ಮುಗ್ಧನಾಗುವನು. ಸೆರೆಮನೆಯ ಕತ್ತಲಲ್ಲಾ ದಾಸಿಯನ್ನು ಚೆನ್ನಾಗಿ ನೋಡಲಾಗುತಿರಲಿಲ್ಲ, ಮಾತನಾಡಹೋದರೆ ದಾಸಿಯು ಕಾವಲವನ ಕಡೆಗೆ ಕೈತೋರಿ ಸುಮ್ಮನಿರಲು ಸಂಕೇತಮಾಡುವಳು. ಇಂದ್ರನಾಥನು ಸುಮ್ಮನಾಗಿ ಪುನಃ ತನ್ನ ಚಿಂತೆಯಿಂದ ಅಭಿಭೂತನಾಗುವನು.

ಕಾವಲವರು ದಾಸಿಯ ಸ್ವಾಭಾವಿಕವಾದವಳ ಮಮತೆ ಪರಾಮರ್ಶಗಳನ್ನು ನೋಡಿ ಅವಳನ್ನು ಎಕ್ಕಿಸಿ, "ಎಲೈ ಬೀಬಿ! ನಿನ್ನನ್ನಾ ಹಿಂದುವು ಮದುವೆ ಮಾಡಿಕೊಳ್ಳುವನೆ?" ಎಂದು ಎಕ್ಕತಾಳಿ ಮಾಡುವರು. ಅಂತಹ ಅವರ ಉಪ ಹಾಸದಿಂದ ದಾಸಿಯು ವಿರಕ್ತೆಯಾಗಳು, ನಮ್ರಭಾವದಿಂದ ಪ್ರತ್ಯುತ್ತರವನ್ನು ಹೇಳುವಳು. ಆಗಿಂದಾಗ ಅವರಿಗೆ ಸುರೆಯನ್ನು ತಂದುಕೊಡುವಳು; ಅದು ಕಾರಣ ಕಾವಲವರು ದಾಸಿಯನ್ನು ಕಂಡರೆ ಸಂತುಷ್ಟರಾಗಿರುವರು. ರಾತ್ರಿ ಯೆಲ್ಲಾ ನಿಂತು ಕಾವಲು ಕಾಯುವ ಕಾವಲವರು ಹಗಲುಹೊತ್ತು ನವಪ್ರಸ್ಫುಟಿತ ಪದ್ಮದಂತೆ ಸುಂದರಿಯಾಗಿದ್ದಾ ದಾಸಿಯನ್ನು ಕುರಿತು ಭಾವಿಸಿಕೊಳ್ಳುವರು. ನಿಂತಿದ್ದಹಾಗೆ ನಿದ್ರೆಯು ಹತ್ತಿದರೆ ಪಾನದಾಯಕಿಯಾದವಳ ಪಾತ್ರೆಯ ಕನಸು ಕಾಣುವರು.

ಅಂದು ರಾತ್ರಿ ಕಾವಲು ಕಾಯುವ ಇಬ್ಬರು ಕಾವಲವರಿಗೆ ಸುರೆಯನ್ನು ತಂದುಕೊಡುವುದಾಗಿ ಒಪ್ಪಿಕೊಂಡಿದ್ದಳು. ರಾತ್ರಿ ಒಂದು ಪ್ರಹರವಾಗಿದ್ದಿತು. ದಾಸಿಯು ಸುರೆಯನ್ನು ತಂದಳು—ಅದನ್ನು ಕಂಡು ಕಾವಲವರಿಬ್ಬರೂ ಆಹ್ಲಾದಿತ ರಾದರು. ಕ್ರಮವಾಗಿ ಸುರೆಯು ತಲೆಗೇರಿತು. ರಾತ್ರಿ ಎರಡನೆಯ ಜಾಮದೊಳಗೆ

ಕಾವಲವರಿಬ್ಬರೂ ಮತ್ತೇರಿ ಮರೆವೆಗೊಂಡವರಾಗಿ ಮಲಗಿದ್ದರು. ಅವರಿಗೆ ಪುನಃ ಪಾನಪಾತ್ರೆಯ ಕನಸು ಬೀಳುತಿದ್ದಿತು. ದಾಸಿಯು ಸೆರೆಯ ಮನೆಯೊಳಗೆ ಹೋದಳು.

ಸೆರೆಮನೆಯೊಳಗೆ ವೀರಪುರುಷನು ತೃಣಶಯ್ಯೆಯಮೇಲೆ ನಿದ್ರಿತನಾಗಿದ್ದನು. ಇಂದ್ರನಾಥನ ಲಲಾಟವು ಪರಿಷ್ಕಾರವಾಗಿದ್ದಿತು, ಓಷ್ಠದಲ್ಲಿ ನಗುವಿನ ಚಿಹ್ನೆ—ಆ ದುಃಖಸಾಗರದಲ್ಲಿ ಸುಖಸ್ವಪ್ನವನ್ನು ಕಂಡನೆ? ಅಂದು ಪೂರ್ಣಿಮೆ ಎಂದೂ, ಅಂದು ಯುದ್ಧದಲ್ಲಿ ತಾನು ಜಯವನ್ನು ಹೊಂದಿದನೆಂದೂ, ಜಯವನ್ನು ಹೊಂದಿ ರುದ್ರಪುರಕ್ಕೆ ಹೋದಂತೆಯೂ ಬಹಳ ಕಾಲವಾದ ಬಳಿಕ ತನ್ನ ಹೃದಯದ ಸರಳೆಯನ್ನು ಹೊಂದಿ ಅವಳಿಗೆ ತನ್ನ ಹೃದಯದಲ್ಲಿ ಸ್ಥಾನವನ್ನು ಕೊಟ್ಟಂತೆಯೂ, ಅವಳ ಪುಲಕಜಲದಿಂದ ತನ್ನ ವಕ್ಷಸ್ಥಳವು ತೊಯ್ದಂತೆಯೂ ಕನಸು ಕಂಡನು. ಒಮ್ಮಿಂದೊಮ್ಮೆ ಅವನಿಗೆ ನಿದ್ರಾಭಂಗವಾಯಿತು. ಕಣ್ತೆರದು ನೋಡಿದನು, ಅವನ ತೃಣಶಯ್ಯೆಯ ಪಾರ್ಶ್ವದಲ್ಲಿ ನಿಜವಾಗಿಯೂ ಹೆಂಗಸೊಬ್ಬಳು ಕುಳಿತು ಅಳುತಿದ್ದಳು—ಕಾರಾಗಾರದಾ ದಾಸಿಯು ನಿಶ್ಶಬ್ದವಾಗಿ ಕುಳಿತು ದರವಿಗಳಿತವಾಗಿ ಅಶ್ರುಧಾರೆಯನ್ನು ಬಿಡುತಿದ್ದಳು.

ಇಂದ್ರನಾಥನು ಸಡುಗಿ ನಿಲುಕೂದಲುಳ್ಳವನಾದನು. ದಾಸಿಯ ದಯೆ ಮಮತೆಗಳನ್ನು ನೋಡಿ ಅವನ ಹೃದಯವು ದ್ರವೀಭೂತವಾಯಿತು–ಕಣ್ಣೀರನ್ನು ತಡೆಯಲಾರದವನಾದನು. ಬಳಿಕ ಅವಳನ್ನು ಕುರಿತು, "ಈ ನಿರ್ಭಾಗ್ಯನ ದುಃಖದಲ್ಲಿ ನೀನೇಕೆ ದುಃಖಿಯಾಗುವೆ? ನನಗಿನ್ನು ಪ್ರಾಣದ ಆಸೆಯಿಲ್ಲ, ಪರಮೇಶ್ವರನು ನಿನ್ನನ್ನು ಸುಖಿಯಾಗಿ ಮಾಡಲಿ" ಎಂದನು.

ದಾಸಿಯು ಉತ್ತರವನ್ನು ಕೊಡಲಿಲ್ಲ, ನೀರವವಾಗಿ ಅಳುತೊಡಗಿದಳು. ಇಂದ್ರನಾಥನು ಪುನಃ, "ನನ್ನೀ ಕಷ್ಟಕಾಲದಲ್ಲಿ ನೀನೆನಗೆ ಮಮತೆಯನ್ನು ತೋರಿದೆ, ಅದಕ್ಕೆ ಸಲುವಾಗಿ ಜಗದೀಶ್ವರನು ನಿನ್ನನ್ನು ಸುಖವಾಗಿಡುವನು—ನಿನಗೇನಾದರೂ ಪುರಸ್ಕಾರವನ್ನು ಕೊಡೋಣವೆಂದರೆ ನನ್ನ ಬಳಿ ಈಗೇನೂ ಇಲ್ಲ. ನಾನು ಬಂದಿ, ಬಂಗಾರದೀ ಉಂಗುರವನ್ನು ತೆಗೆದುಕೊ, ನನ್ನೀ ಕಷ್ಟದೆಸೆಯಲ್ಲಿ ನನಗೆ ಬಹಳವಾಗಿ ಶುಶ್ರೂಷೆಯಂ ಮಾಡಿ ಆದರಿಸಿದೆ. ನಾಳಿನದಿನ ಮುಸಲ್ಮಾನರಿಂದ ನನ್ನ ಮರಣವಾದ ಬಳಿಕ ನನ್ನಾ ಉಂಗುರವನ್ನು ನೋಡುತ ಒಮ್ಮೊಮ್ಮೆ ನನ್ನನ್ನು ಸ್ಮರಿಸಿಕೊಂಡಿರು" ಎಂದು ಹೇಳಿದನು.

ದಾಸಿಯು ಬಹಳ ಹೊತ್ತಿನವರೆಗೂ ಏನನ್ನೂ ಹೇಳದೆ ಅಧೋವದನೆಯಾಗಿದ್ದವಳು ಕಣ್ಣೀರನ್ನು ಬಿಡುತಿದ್ದಳು; ಕಡೆಗೆ ಕೈನೀಡಿ ಆ ಉಂಗುರವನ್ನು ತೆಗೆದುಕೊಂಡು, ಮಾತನಾಡದೆ ಅದನ್ನು ತನ್ನ ಕಂಠದಲ್ಲಿದ್ದ ಕಂಠಮಾಲೆಗೆ ಕಟ್ಟಿಕೊಂಡಳು. ಸ್ವಲ್ಪ ಹೊತ್ತಾದ ಬಳಿಕ ಕಣ್ಣೀರನ್ನೊರಸಿಕೊಂಡು ಅಸ್ಫುಟಸ್ವರದಿಂದ, "ಸೈನಿಕವರ! ನೀನೆನ್ನ ವಿಚಾರದಲ್ಲಿ ಸಂತುಷ್ಟನಾದೆ, ನನ್ನ ವಿಚಾರ

ದಲ್ಲಿ ಸದಯನಾದೆ, ಅದಕ್ಕೆ ಗುರುತಾಗಿ ಈ ಉಂಗುರವನ್ನು ತೆಗೆದುಕೊಂಡೆನು, ಅದಕ್ಕೆ ಗುರುತಾಗಿ ನನ್ನ ಆಜೀವನವೂ ಅದನ್ನು ಧಾರಣೆಮಾಡುತ್ತಿರುವೆನು; ಸೇನಾಪತಿ ಇಂದ್ರನಾಥನು ದಾಸಿಯನ್ನು ಮರೆತಿದ್ದಾನೆ!" ಎಂದು ಹೇಳಿದಳು.

ಕೋಕಿಲವಿನಿಂದಿತವಾದಾ ಸ್ವರವನ್ನು ಕೇಳಿ ಇಂದ್ರನಾಥನು ಚಮಕಿತನಾದವನು, ಒಮ್ಮೆಗೆ ಹಾಸಿಗೆಯ ಮೇಲೆ ಎದ್ದು ಕುಳಿತನು. ವನಗ್ರಾಮದ ಮಹೇಶ್ವರನ ಮಂದಿರದಲ್ಲೊಮ್ಮೆ ಆ ಸ್ವರವನ್ನು ಕೇಳಿದ್ದನು, ಗಂಗಾನದಿಯ ವಕ್ಷದ ಮೇಲೆ ಆ ಸ್ವರವನ್ನು ಮತ್ತೊಮ್ಮೆ ಕೇಳಿದ್ದನು—ಗಂಗೆಯಲ್ಲಿ ಜಲಮಗ್ನನಾಗುವ ಸಮಯದಲ್ಲಿ ಇಂದ್ರನಾಥನನ್ನುದ್ಧಾರಮಾಡಿದಾ ಹೆಂಗಸು, ಅದೇ ವಿಮಲೆಯು ದಾಸಿಯ ವೇಷವನ್ನು ತಾಳ್ದು ಶತ್ರುಗಳ ಶಿಬಿರದಿಂದ ಇಂದ್ರನಾಥನನ್ನುದ್ಧಾರ ಮಾಡಲು ಬಂದಿದ್ದಾಳೆ!

ಚಿಂತೆಯು ತರಂಗಮಾಲೆಗಳಂತೆ ಇಂದ್ರನಾಥನ ಹೃದಯದಲ್ಲಿ ಉಧಲಿತವಾಗತೊಡಗಿತು, ಅವನ ಹೃದಯವು ಉಬ್ಬಿತು, ಕಣ್ಣುಗಳೆರಡೂ ನೀರಿನಿಂದ ತುಂಬಿದುವು—ಕಡೆಗೆ ವಿಮಲೆಯ ಕೈಗಳನ್ನು ಹಿಡಿದುಕೊಂಡು ಕರುಣ ಕಂಠದಿಂದ ಹೇಳಿದನು—"ಮಾನುಷಿಯೋ ಅಥವಾ ದೇವಿಯೋ! ನೀನಾರೆಂಬುದನ್ನು ನಾನರಿಯೆನು, ಆದರೆ ಆಪತ್ಕಾಲದಲ್ಲಿ ನೀನೆನಗೆ ಚಿರಸಹಾಯಕಳು! ವಿಪತ್ಪೂರ್ಣವಾದೀ ಶತ್ರುಶಿಬಿರಕ್ಕೆ ನನ್ನುದ್ಧಾರಾರ್ಥವಾಗಿ ನೀನೊಬ್ಬಳೇ ಬಂದಿರುವಿಯಾ? ನಿನ್ನನ್ನು ದಾಸಿಯೆಂದು ತಿಳಿದು ನಿನ್ನ ಸಂಗಡ ಮಾತನಾಡಿದೆನೇ? ನೀನೆನ್ನ ಜೀವದಾನವಂ ಮಾಡಿದೆಯೆಂದು ತುಚ್ಛವಾದಾ ಅರ್ಥಪುರಸ್ಕಾರವನ್ನು ನಿನಗೆ ಕೊಡಹೋದೆನೆ? ನನ್ನಾ ಸಕಲಾಪರಾಧಗಳನ್ನೂ ದಯೆಗೈದು ಕ್ಷಮಿಸುವಿಯಾ?"

ಇಂದ್ರನಾಥನಮಾತುಗಳನ್ನು ಕೇಳಿ ವಿಮಲೆಯ ಕಿವಿಯಲ್ಲಿ ಸೊದೆಯು ಹೊಯ್ದಂತಾಯಿತು, ಇಂದ್ರನಾಥನ ಹಸ್ತದ ಸಂಸ್ಪರ್ಶದಿಂದವಳ ಮೈ ನಡುಗಿತು, ಗಾತ್ರವು ಕಂಟಕಿತವಾಯಿತು! ಆದರೆ ವಿಮಲೆಯು ಪ್ರತ್ಯುತ್ಪನ್ನಮತಿ; ಧಿಟ್ಟಳು; ಪ್ರಯತ್ನದಿಂದ ಆತ್ಮಸಂಯಮವಂ ಮಾಡಿಕೊಂಡು, ಮೆಲ್ಲಮೆಲ್ಲನೆ ಇಂದ್ರನಾಥನ ಕೈಯಿಂದ ತನ್ನ ಕೈಯನ್ನು ಸರಿಸಿಕೊಂಡು, ಧೀರಸ್ವರದಿಂದ ಹೇಳತೊಡಗಿದಳು—"ನಿನ್ನ ಅಪರಾಧವಾವದೂ ಇಲ್ಲ, ನಾನು ದಾಸಿಯ ವೇಷದಲ್ಲಿ ಬಂದಿದ್ದೇನೆ, ನೀನೆನ್ನನ್ನು ದಾಸಿಯೆಂದು ತಿಳಿದು ಯಥೇಷ್ಟ ಸೌಜನ್ಯವನ್ನು ತೋರಿರುವೆ, ನೀನೆನಗೆ ಕೊಟ್ಟಿರುವ ಪುರಸ್ಕಾರವನ್ನು ಆಜೀವನವೂ ನನ್ನ ಹೃದಯದಲ್ಲಿ ಧಾರಣೆ ಮಾಡುವೆನು, ಇಂದು ನೀನು ತೋರಿದಾ ಸ್ನೇಹವು ಆಜೀವನವೂ ನನ್ನ ಸ್ಮರಣೆಯಲ್ಲಿರುವುದು, ಆದರೆ ಈಗಾ ಮಾತುಗಳನ್ನೆಲ್ಲಾ ಹೇಳುವುದಕ್ಕೆ ಸಮಯವಲ್ಲ, ಬೇರೆ ಸಂಗತಿಯನ್ನು ಕುರಿತು ಹೇಳಲು ನಿನ್ನ ಬಳಿ ಬಂದಿರುವೆನು, ನಿನ್ನ ಉದ್ಧಾರಕ್ಕೆ ಸಲುವಾಗಿ ಉಪಾಯವನ್ನು ಯೋಚಿಸಿಕೊಂಡು

ಬಂದಿದ್ದೇನೆ, ನೀನೀ ಹೆಂಗಸಿನ ಉಡುಗೆಯನ್ನುಟ್ಟು ಹೊರಟುಹೋಗು, ಕಾರಾಗಾರದ ಕಾವಲವರು ಚೈತನ್ಯ ಶೂನ್ಯರಾಗಿ ಬಿದ್ದಿದ್ದಾರೆ, ಕಾರಾಗಾರದ ಹೊರಗೆ ಸೈನಿಕರಾರಾದರೂ ಕೇಳಿದರೆ, 'ನಾನು ಭಿಕಾರಿಣಿ ದಾಸಿ'ಯೆಂದು ಹೇಳಿ ಹೊರಟುಹೋಗು."

ಇಂದ್ರನಾಥನಾ ಮಾತುಗಳನ್ನು ಕೇಳಿ ಸ್ತಂಭಿತನಾದನು; ವಿಮಲೆಯ ಸಾಹಸವನ್ನೂ ಸ್ಥಿರಸಂಕಲ್ಪವನ್ನೂ ನೋಡಿ ವಿಸ್ಮಿತನಾದನು. ಆದರೆ ಕ್ಷಣ ಮಾತ್ರ ಚಿಂತಿಸಿ, ಬಳಿಕ, "ದೇವಿ ಕ್ಷಮಿಸು, ನಾನು ನಿನ್ನನ್ನು ವಿಪತ್ತಿನಲ್ಲಿ ಬಿಟ್ಟು ಪಲಾಯನವಾಗಲು ಇಷ್ಟವುಳ್ಳವನಾಗಿಲ್ಲ, ನೀನೆನ್ನನ್ನು ಈ ರೀತಿಯಾಗಿ ಉದ್ಧಾರ ಮಾಡಿದೆಯೆಂದು ತಿಳಿದರೆ ನೃಶಂಸರಾದಾ ಶತ್ರುಗಳು ನಿನ್ನನ್ನೊವ್ಮ್ಮೆಗೇವೇ ವಧೆ ಮಾಡುವರು" ಎಂದನು.

ವಿಮಲೆ—ನನಗೆ ಸಲುವಾಗಿ ಚಿಂತಿಸಬೇಡ, ನನ್ನುದ್ಧಾರಕ್ಕೆ ಉಪಾಯ ವುಂಟು, ನಾನುದ್ಧಾರವಾಗದಿದ್ದರೂ ಹೆಚ್ಚು ಹಾನಿಯುಂಟಾಗದು, ನನಗೆ ಸಲುವಾಗಿ ಚಿಂತಿಸುವವರೂ, ನನಗೆ ಸಲುವಾಗಿ ಶೋಕಿಸುವವರೂ ಪ್ರಪಂಚದಲ್ಲಿ ಹೆಚ್ಚು ಮಂದಿಯಿಲ್ಲ, ಅನಂತವಾದ ಸಾಗರದಲ್ಲೊಂದು ಬಿಂದು ಜಲವು ಲೀನವಾಗಿ ಹೋಗುವಂತೆ ಜಗತ್ಸಂಸಾರದಲ್ಲೊಬ್ಬ ಹತಭಾಗಿನಿಯ ಮರಣವು ಅಶ್ರುತವಾಗಿ ಅಲಕ್ಷಿತವಾಗಿರುವುದು. ನೀನು ಯಶಸ್ವಿ, ಕ್ಷಮತಾಶಾಲಿ, ವೀರಪುರುಷನು, ನೀನು ಸುಖವಾಗಿದ್ದರೆ ಅನೇಕರು ಸುಖಿಗಳಾಗಿರುವರು.

ಇಂದ್ರನಾಥನು ವಿಮಲೆಯನ್ನು ಕುರಿತು ತೀವ್ರದೃಷ್ಟಿಯಿಂದ ನೋಡ ತೊಡಗಿ, ಕಡೆಗೆ ಧೀರಭಾವದಿಂದ, "ದೇವಿ! ನೀನೆನ್ನ ಉದ್ಧಾರಾರ್ಥವಾಗಿ ಯತ್ನಪರಿಯಾಗಿರುವುದಕ್ಕೆ ಸಲುವಾಗಿ ಆಜನ್ಮಕಾಲವೂ ನಿನಗೆ ಬಾಧ್ಯನಾದೆನು; ಆದರೆ ನಿನ್ನನೀ ಸ್ಥಳದಲ್ಲಿಟ್ಟು ನಾನು ಕಾರಾಗಾರವನ್ನು ಬಿಟ್ಟುಹೋಗೆನು, ಉಪರೋಧದಿಂದ ಒತ್ತಾಯ ಮಾಡಬೇಡ"ವೆಂದನು.

ಈ ತಡವೆ ವಿಮಲೆಯು ಪರಾಸ್ತೆಯಾದಳು. ಅನೇಕವಾಗಿ ಅನುನಯದಿಂದ ಅನುರೋಧನೆ ಮಾಡಿದಳು, ಅನೇಕ ಕಾರಣಗಳನ್ನು ತೋರಿದಳು, ಆವದರಿಂದಲೂ ಆ ವೀರಪುರುಷನ ಪ್ರತಿಜ್ಞೆಯನ್ನು ವಿಚಲಿತಮಾಡಲಾಗದೆ ಹೋದಳು. ಇಂದ್ರನಾಥನು ಒಂದೇ ಉತ್ತರವನ್ನು ಹೇಳುವನು—"ಆರೆನಗೆ ಒತ್ತಡವೆ ಪ್ರಾಣದಾನವಂ ಮಾಡಿ ಪುನಃ ಈ ಕಷ್ಟಕ್ಕೊಳಗಾಗಲೆಳಸುವಳೋ ಅಂತಹವಳನ್ನು ವಿಪದ್ಗ್ರಸ್ತೆಯನ್ನಾಗಿ ಮಾಡಿ ನಾನು ಉದ್ಧಾರವಾಗಬೇಕೆಂದು ಪ್ರಾರ್ಥಿಸತಕ್ಕವನಲ್ಲ. ಅಂತಹ ಉದ್ಧಾರದಿಂದ, ಅಂತಹ ಜೀವನದಿಂದೆನಗೆ ಕೆಲಸವಿಲ್ಲ."

ವಿಮಲೆ—(ಅತಿ ಕಷ್ಟದಿಂದ) ವೀರಪುರುಷ! ನಿನಗೆ ಗೊತ್ತಿರದು, ನಿನ್ನ ಪ್ರೇಮಾಕಾಂಕ್ಷಿಣಿ ಸರಳೆಯು ಈಗ ಚತುರ್ವೇಷ್ಟಿತ ದುರ್ಗದಲ್ಲಿ ಆಬದ್ಧೆಯಾಗಿ ಬಂದಿಯಾಗಿರುವಳು, ಕೂಡಲೇ ನೀನು ಹೋಗಿ ಅವಳನ್ನುದ್ಧಾರಮಾಡದಿದ್ದರೆ

ಪಾಮರನಾದಾ ಶಕುನಿಯು ಅವಳನ್ನು ತನ್ನ ಭೃತ್ಯನೊಬ್ಬನಿಗೆ ಕೊಟ್ಟು ಮದುವೆ ಮಾಡಬೇಕೆಂದಿದ್ದಾನೆ!

ಇಂದ್ರನಾಥನು ಒಮ್ಮಿಂದೊಮ್ಮೆ ವಜ್ರಾಹತನಾದವನಂತೆ ನಿಷ್ಪಂದನಾಗಿದ್ದನು. ಅವನ ಸಮಸ್ತ ಶರೀರವೂ ಕಂಪಿತವಾಯಿತು. ಲಲಾಟದಲ್ಲಿ ಸ್ವೇದಬಿಂದುಗಳು ಹೊರಟುವು. ವಿಮಲೆಯು ವೃತ್ತಾಂತವನೆಲ್ಲ ಹೇಳಿದಳು. ಇಂದ್ರನಾಥನು ಮಾತಿಲ್ಲದೆ ಕೇಳಿದನು. ಹಸ್ತದಮೇಲೆ ಲಲಾಟವನ್ನಿಟ್ಟು ಅಧೋವದನನಾಗಿ ನೀರವವಾಗಿದ್ದನು, ತಲೆಯ ನರಗಳು ಉಬ್ಬಿದ್ದುವು, ಕಣ್ಣುಗಳಿಂದ ಕೆಂಡಗಳೊಗಿಯುತಿದ್ದುವು.

ಬಹಳ ಹೊತ್ತಾದ ಬಳಿಕ ಇಂದ್ರನಾಥನು ತಲೆಯನ್ನೆತ್ತಿ, "ಭದ್ರೆ! ನಿನ್ನ ಮಾತೇವೇ ಉಳಿದಂತಾಯಿತು, ನಾನು ಪಲಾಯನ ಮಾಡುವೆನು, ಆದರೆ ನೀನೊಂದು ಪ್ರತಿಜ್ಞೆಯಂ ಮಾಡಬೇಕು" ಎಂದನು.

ವಿಮಲೆ—ಏನು ಪ್ರತಿಜ್ಞೆ?

ಇಂದ್ರನಾಥ—ನಾಳಿಸರಿಸ ನಿನ್ನ ಉದ್ಧಾರವಾಗದಿದ್ದರೆ ನೃಶಂಸರಾದಾ ಶತ್ರುಗಳು ನಿನ್ನ ವಧೆಗೆ ಅಪ್ಪಣೆ ಮಾಡಿದರೆ ನೀನು ಮಾಸುವಿನ ಬಳಿ ಮೂರು ದಿನಗಳ ತನಕ ಅವಕಾಶವನ್ನು ಕೊಡಬೇಕೆಂದು ಬೇಡಿಕೊಳ್ಳಬೇಕು, ಹಾಗೆಂದು ಪ್ರತಿಜ್ಞೆಯಂ ಮಾಡು! ನಾನವನ ಸ್ವಭಾವವನ್ನು ಬಲ್ಲೆನು, ಅಬಲೆಯಾದವಳು ಹಾಗೆ ಬೇಡಿಕೊಂಡರೆ ಅವನು ಅಸಂಗೀಕಾರ ಮಾಡನು, ಮೂರು ದಿನಗಳಲಿ ಅನೇಕ ಘಟನೆಗಳು ಸಂಘಟಿತವಾಗಬಹುದು.

ವಿಮಲೆಯು ಹಾಗೆ ಮಾಡುವುದಾಗಿ ಒಪ್ಪಿಕೊಂಡಳು.

ಬಳಿಕ ವಿಮಲೆಯು ಇಂದ್ರನಾಥನಿಗೆ ಸ್ತ್ರೀವೇಷದಿಂದಲಂಕರಿಸಿದಳು. ಇಂದ್ರನಾಥನು ಹೊಸದಾದ ತನ್ನಾರೂಪವನ್ನು ನೋಡಿಕೊಂಡು ನಕ್ಕನು, ಪುನಃ ವಿಮಲೆಯನ್ನು ನೋಡಿದನು. ಉದ್ವೇಗದಿಂದ ವಿಮಲೆಯ ಕೈಗಳನ್ನು ಹಿಡಿದುಕೊಂಡು "ಭದ್ರೆ! ಎರಡುತಡವೆ ನೀನೆನ್ನ ಪ್ರಾಣವನ್ನು ಕಾಪಾಡಿದೆ, ಜಗದೀಶ್ವರನು ನಿನಗೆ ಸಹಾಯವಾಗಲಿ, ನಾನೀ ಋಣವನ್ನು ತೀರಿಸಲು ಪ್ರಯತ್ನಪಡುವೆನು." ಈ ಮಾತುಗಳನ್ನು ಹೇಳುತಿದ್ದಾಗ ಇಂದ್ರನಾಥನ ಉಷ್ಣವಾದ ನಿಶ್ವಾಸದ ಗಾಳಿಯು ವಿಮಲೆಯ ಬಾಹುಲತೆಗೆ ಸೋಂಕಿತು, ಅವನ ತುಟಿಗಳು ಅವಳ ಕರಪಲ್ಲವವನ್ನು ಸ್ಪರ್ಶಮಾಡಿದುವು—ಗಾಳಿಯಿಂದ ಹೊಡೆಯಲ್ಪಟ್ಟ ಮರದೆಲೆಯಂತೆ ವಿಮಲೆಯ ಗಾತ್ರವು ನಡುಗಿತು, ಶರೀರವು ಅವಸನ್ನವಾಯಿತು. ಮುಹೂರ್ತದೊಳಗೆ ಇಂದ್ರನಾಥನು ಅದೃಶ್ಯನಾದನು. ವಿಮಲೆಯು ಮುಖದ ಮೇಲಣ ಬೆಮರ್ನೀರನ್ನೊರಸಿಕೊಂಡು ಅಂಧಕಾರಮಯವಾದಾ ಕುಟೀರದಲ್ಲಿ ಕುಳಿತುಬಿಟ್ಟಳು—ನೈಶಜಗತ್ತು ದುರ್ಭೇದ್ಯವಾದ ಅಂಧಕಾರದಿಂದ ಮುಚ್ಚಲ್ಪಟ್ಟಿದ್ದಿತು, ವಿಮಲಿನಾರಿಯ ಹೃದಯವೂ ದುರ್ಭೇದ್ಯ ಅಂಧಕಾರದಿಂದ ಮುಚ್ಚಲ್ಪಟ್ಟಿದ್ದಿತು.

## ಇಪ್ಪತ್ತೊಂಭತ್ತನೆಯ ಪರಿಚ್ಛೇದ

### ಪುರುಷನ ವೀರತ್ವ

Heard ye the din of battle bray,
Lance to lance and horse to horse. *Grey.*

ಇಂದ್ರನಾಥನನ್ನು ಒಮ್ಮಿಂದೊಮ್ಮೆ ತಮ್ಮ ಶಿಬಿರದಲ್ಲಿ ನೋಡಿ ಅವನ ಸೈನಿಕರ ವಿಸ್ಮಯಕ್ಕೂ ಆಹ್ಲಾದಕ್ಕೂ ಪಾರವಿರಲಿಲ್ಲ. ಆದರೆ ಇಂದ್ರನಾಥನು ಗಂಭೀರಸ್ವರದಿಂದ, "ನನ್ನನ್ನಾರೂ ಆವ ಪ್ರಶ್ನೆಯನ್ನೂ ಮಾಡಬೇಡಿರಿ, ನನ್ನ ದಳದ ಅಶ್ವಾರೋಹಿಗಳು ಅಸ್ತ್ರಶಸ್ತ್ರಗಳನ್ನು ತೆಗೆದು ಸಿದ್ಧರಾಗಿರಿ, ಈ ನಿಮಿಷದಲ್ಲಿ ಶತ್ರುಗಳ ಶಿಬಿರವನ್ನು ಆಕ್ರಮಣ ಮಾಡುವೆನು" ಎಂದು ಹೇಳಿದನು.

ಸೈನ್ಯದವರು ವಿಸ್ಮಯಾಪನ್ನರಾದರು, ಆದರೆ ಅವರಾರೂ ಆವ ವಿಚಾರವನ್ನೂ ಕುರಿತು ಪ್ರಶ್ನೆಮಾಡದೆ, ಅಪ್ಪಣೆಯ ಪ್ರಕಾರ ರಣಸಜ್ಜದಿಂದ ಸಜ್ಜಾದರು—ಅವರು ಸಜ್ಜಾಗುವುದರೊಳಗೆ ಇಂದ್ರನಾಥನು ಭಗವಂತನನ್ನು ಧ್ಯಾನಿಸಿದನು; ದಂಡವತು ಪ್ರಣಿಪಾತನಾಗಿ, "ಭಗವಂತ! ಇಂದಿನಂತೆ ಅಸಮ ಸಾಹಸದ ಕಾರ್ಯದಲ್ಲಿ ನಾನಾವಾಗಲೂ ಲಿಪ್ತನಾಗಿರಲಿಲ್ಲ, ನೀನಿಂದು ಪ್ರಸನ್ನನಾಗಿ ನನಗೆ ಜಯವುಂಟಾಗುವಂತೆ ಮಾಡು, ನನಗೆ ಉಪಕಾರಿಣಿಯಾದವಳನ್ನುದ್ಧಾರಮಾಡಿದ ಬಳಿಕ ನಾನು ಹತನಾದರೂ ಹಾನಿಯಾಗದು" ಎಂದು ಪ್ರಾರ್ಥಿಸಿದನು.

ರಾತ್ರಿ ಮೂರನೆಯ ಜಾಮವಾಗಿದ್ದಿತು. ಚಂದ್ರನು ಅಸ್ತನಾಗಿದ್ದನು. ಪ್ರಪಂಚವೆಲ್ಲಾ ಕಡುಕತ್ತಲಾಗಿದ್ದಿತು. ಆಕಾಶದಲ್ಲೊಂದೆರಡು ನಕ್ಷತ್ರಗಳು ಕಾಣುತಿದ್ದುವು, ಆದರೆ ಪುನಃ ಮೇಘರಾಶಿಯು ಕವಿತು ಕೆತ್ತಬಲ್ಗತ್ತಲು ಕಡು ಮುಕ್ಕಾಗುವುದು. ಮಧ್ಯೆಮಧ್ಯೆ ಗೂಗೆಯ ಶಬ್ದವು ಕೇಳುವುದು, ಹತ್ತಿರವಿದ್ದ ಗಂಗೆಯ ಕಲ್ಲೋಲದ ಶಬ್ದವು ಶ್ರುತಿಗೋಚರವಾಗುವುದು. ಗಭೀರವಾದಾ ಗೌಗತ್ತಲಲ್ಲಿ ಇಂದ್ರನಾಥನ ಸೇನೆಯು ನಿಶ್ಶಬ್ದವಾಗಿ ಶತ್ರು ಶಿಬಿರಾಭಿಮುಖವಾಗಿ ಹೊರಟಿತು.

ಸ್ವಲ್ಪ ದೂರ ಹೋಗುವುದರಲ್ಲಿ ಒಂದು ಬೆಳಕು ಕಂಡಿತು. ಆ ಬೆಳಕು ಒಮ್ಮೆ ಕಾಣುವುದು, ಒಮ್ಮೆ ಅಳಿಸಿಹೋದಂತಾಗುವುದು. ಇಂದ್ರನಾಥನು ಅಲ್ಲಿ ನಿಂತು ದೂತನೊಬ್ಬನನ್ನು ಮುಂದಾಗಿ ಕಳುಹಿದನು. ದೂತನು ನಿಶ್ಶಬ್ದವಾಗಿ ಹೋಗಿ ನಿಶ್ಶಬ್ದವಾಗಿ ಹಿಂದಿರುಗಿ ಬಂದವನು "ಶತ್ರುಗಳ ಕಾವಲವರು ನಾಲ್ಕುಮಂದಿ ಅಲ್ಲಿ ಕಾವಲು ಕಾಯುತ್ತಿರುವರು" ಎಂದು ಹೇಳಿದನು. ಇಂದ್ರನಾಥನು ಹತ್ತುಮಂದಿ ತೀರಂದಾಜರನ್ನು (ಬಿಲ್ಲುಗಾರರನ್ನು) ಕರೆದು ಮುಂದೆ ಹೋಗಬೇಕೆಂತಲೂ ಅಲ್ಲಿ ಕಾವಲುಕಾಯುವ ನಾಲ್ಕುಮಂದಿಯಲ್ಲೊಬ್ಬನು ಪ್ರಾಣದಿಂದುಳಿದುಕೊಂಡರೂ ಅವನು ಪಲಾಯನವಾಗಿ ಹೋಗಿ ಅಪರ ಪಾಳಯದಲ್ಲಿ

ಸುದ್ದಿಯನ್ನು ಕೊಟ್ಟು ಅಲ್ಲಿಂದ ಶತ್ರುಗಳು ಬಂದು ಅವರು ಹತ್ತುಮಂದಿಯನ್ನೂ ವಧೆಮಾಡುವರೆಂದೂ ಅದಕ್ಕೆ ಅವಕಾಶವನ್ನು ಕೊಡಕೂಡದೆಂದೂ ಹೇಳಿ ಅಪ್ಪಣೆ ಮಾಡಿ ಕಳುಹಿದನು. ಹತ್ತುಮಂದಿ ತೀರಂದಾಜರು ಮೆಲ್ಲಮೆಲ್ಲನೆ ಮುಂದುವರಿದು ಹೋಗಿ ಮುಹೂರ್ತದೊಳಗೆ ನಾಲ್ಕುಮಂದಿ ಕಾವಲುಕಾಯುವವರನ್ನು ಭೂತಲ ಶಾಯಿಯರನ್ನಾಗಿ ಮಾಡಿದರು. ಇಂದ್ರನಾಥನ ಸೇನೆಯು ಮುಂದುವರಿದು ಹೋಗತೊಡಗಿತು.

ಮುಂದೆಯೂ ನಾಲ್ಕಾರು ಸ್ಥಳಗಳಲ್ಲಿದ್ದ ಕಾವಲುಗಾರರು ಅದೇ ಮಾದರಿಯಾಗಿ ತೀರಂದಾಜರ ಅಂಬಿಗೆ ಬಿದ್ದು ಮಡಿದರು. ಸ್ವಲ್ಪದರಲ್ಲಿಯೇ ಇಂದ್ರನಾಥನ ಸೈನಿಕರು ಶತ್ರುಗಳ ಕಂದಕದ ಬಳಿ ಹೋದರು. ಇಂದ್ರನಾಥನ ಅಪ್ಪಣೆಯ ಪ್ರಕಾರ ಸೈನಿಕರು ಕಂದಕವನ್ನು ದಾಟಿದರು.

ಕಂದಕದ ಆಚೆ ಇದ್ದ ಮುಸಲ್ಮಾನರು ಒಮ್ಮಿಂದೊಮ್ಮೆ ಶತ್ರುಗಳನ್ನು ನೋಡಿ ರಣಸಜ್ಜಾಗಲು ತೊಡಗಿದರು. ಆದರೆ ಅವರು ಸಜ್ಜಾಗುವುದಕ್ಕೆ ಮೊದಲೇ ಇಂದ್ರನಾಥನ ಸೈನ್ಯದವರು ಕಂದಕವನ್ನು ದಾಟಿಹೋಗಿ ಅವರನ್ನು ಛಿನ್ನಭಿನ್ನವಾಗಿ ದೂರ ಓಡಿಸಿದರು. ಇಂದ್ರನಾಥನು ಕಂದಕವನ್ನು ಕಾವಲು ಕಾಯುವುದಕ್ಕೆ ಸೈನ್ಯವನ್ನು ಅಲ್ಲಿರಿಸಿ, ಸಂಗಡ ಐವತ್ತುಮಂದಿ ಸೈನಿಕರನ್ನು ಕರೆದುಕೊಂಡು ಊರ್ಧ್ವಶ್ವಾಸದಿಂದ ಕಾರಾಗಾರದ ಕಡೆಗೆ ದೌಡಾಯಿಸಿಕೊಂಡು ಹೋದನು.

ಕಾರಾಗಾರದ ಬಾಗಿಲ ಹೊರಗಡೆ ಕೆಲವು ಸೈನಿಕರು ಕಾವಲಾಗಿದ್ದವರು, ಇಂದ್ರನಾಥನು ಕಾರಾಗಾರದಲ್ಲಿ ಆಗಲೂ ಬದ್ಧನಾಗಿದ್ದನೆಂದು ತಿಳಿದಿದ್ದರು; ಒಮ್ಮಿಂದೊಮ್ಮೆ ಇಂದ್ರನಾಥನ ವಜ್ರನಾದವನ್ನು ಕೇಳಿ, ಇಂದ್ರನಾಥನು ಸೆರೆಮನೆಯ ಬಾಗಿಲನ್ನು ಆಕ್ರಾಂತಮಾಡಿದುದನ್ನು ಕಂಡು ವೇಗವಾಗಿ ಓಡಿಹೋದರು. ಬಾಗಿಲಲ್ಲಿ ಇಂದ್ರನಾಥನು ಮೊದಲು ನೋಡಿದ್ದ ಕಾವಲವರಿಬ್ಬರೂ ಆಗಲೂ ಸುರೆಯಿಂದ ಮತ್ತೇರಿದವರಾಗಿ ಅಚೇತನರಾಗಿ ಬಿದ್ದಿದ್ದರು. ಅವರ ಒಳಿ ದೀಪವುರಿಯುತಿದ್ದಿತು. ಇಂದ್ರನಾಥನಾ ದೀಪವನ್ನು ಕೈಯಲ್ಲಿ ತೆಗೆದುಕೊಂಡು ಮನೆಯೊಳಗೆ ಹೋಗಿ ನೋಡಿದನು; ಕತ್ತಲಮಯವಾಗಿದ್ದಾ ಮನೆಯಲ್ಲಿ ಹುಲ್ಲಿನಮೇಲೆ ವಿಮಲೆಯು ಶಾಂತದೇಹಲತೆಯು ಲಂಬಾಯಮಾನವಾಗಿ ಬಿದ್ದಿದ್ದಿತು, ಕಣ್ಣುಗಳು ಮುಚ್ಚಿದ್ದುವು. ನಿಶ್ವಾಸಪ್ರಶ್ವಾಸಗಳಿಂದ ಅವಳ ವಕ್ಷವು ಮೆಲ್ಲಮೆಲ್ಲನೆ ಉಬ್ಬುವುದು, ತಗ್ಗುವುದು.

ಇಂದ್ರನಾಥನು ಒಂದು ಮುಹೂರ್ತಕಾಲ ಸಜಲನಯನನಾಗಿ ದೇವರನ್ನು ಧ್ಯಾನಿಸಿ ವಂದಿಸಿದನು. ಬಳಿಕ ಒಂದು ನಿಮಿಷದಲ್ಲಿ ಶೀರ್ಣವಾಗಿದ್ದಾ ದೇಹಲತೆಯನ್ನು ಆ ತೃಣದ ಶಯ್ಯೆಯಿಂದೆತ್ತಿಕೊಂಡು ಬಾಗಿಲ ಹೊರಗೆ ಬಂದನು—ಸ್ವಲ್ಪ ಹೊತ್ತಿನಲ್ಲಿಯೇ ವಿಮಲೆಯು ಎಚ್ಚರಗೊಂಡು ಇಂದ್ರನಾಥನನ್ನು ಗುರುತಿಸಿ,

"ಸೇನಾಪತಿ ಇಂದ್ರನಾಥನು ನನ್ನುದ್ಧಾರಾರ್ಥವಾಗಿ ಬಂದನೆ? ಭಗವಂತನು ನಿನ್ನನ್ನು ಕಾಪಾಡಲಿ, ನಾನು ಮರಣವನ್ನು ನಿಶ್ಚೈಸಿಕೊಂಡಿದ್ದೆನು, ಮರಣ ಕಾಲದಲ್ಲಿ ತಂದೆಯನ್ನು ನೋಡಲಿಲ್ಲವೆಂಬ ಕೊರತೆಯಿಂದ ಕ್ಲೇಶಪಡುತಿದ್ದೆನು, ಸೇನಾಪತಿ! ನನ್ನನ್ನುದ್ಧಾರಮಾಡು, ಮತ್ತೊಮ್ಮೆ ಹೋಗಿ ತಂದೆಯನ್ನು ನೋಡುವೆನು" ಎಂದಳು.

ಕಾತರವಾಗಿದ್ದಾ ಸ್ವರವನ್ನು ಕೇಳಿ ಇಂದ್ರನಾಥನ ಕಣ್ಣುಗಳಲ್ಲಿ ನೀರು ತುಂಬಿತು, ಆದರೆ ಪ್ರತ್ಯುತ್ತರವನ್ನು ಕೊಡಲು ಅವಕಾಶವಿಲ್ಲ. ಇಂದ್ರನಾಥನು ಕುದುರೆಯನ್ನೇರಿದನು, ಕ್ಷೀಣವಾಗಿದ್ದಾ ವಿಮಲೆಯನ್ನು ಮಗುವನ್ನೆತ್ತಿ ಕೊಂಡಂತೆ ಎತ್ತಿ ತನ್ನ ಹಿಂದೆ ಕುಳ್ಳಿರಿಸಿಕೊಂಡನು. ಅವಳು ಬಿದ್ದುಹೋಗದ ಹಾಗೆ ತನ್ನ ನಡುಕಟ್ಟನ್ನು ಬಿಚ್ಚಿ ಅದರಿಂದವಳನ್ನು ತನ್ನ ಮೈಗೆ ಭದ್ರವಾಗಿ ಕಟ್ಟಿಕೊಂಡನು.

ಇಂದ್ರನಾಥನು ಕಂದಕವನ್ನು ಕಾಯುವುದಕ್ಕೆ ಇಟ್ಟಿದ್ದ ತನ್ನ ಸೈನಿಕರಿದ್ದ ಬಳಿ ಬಂದನು. ನಾಲ್ಕು ಕಡೆಗಳಲ್ಲಿ ಕಾಮರ್ಗಿಲೆದ್ದಂತೆ ಪ್ರಾಯಶಃ ಮೂರು ನಾಲ್ಕು ಸಾವಿರದ ಸಂಖ್ಯೆಯುಳ್ಳ ಶತ್ರು ಸೈನಿಕರು ರಣಸಜ್ಜಾಗಿ ಬರುತಿದ್ದರು—ಇಂದ್ರನಾಥನು ಸೈನ್ಯಸಮೇತನಾಗಿ ದುರ್ಗಾಭಿಮುಖವಾಗಿ ವೇಗವಾಗಿ ದೌಡಾಯಿಸಿಕೊಂಡು ಹೋದನು. ಶತ್ರು ಸೈನಿಕರು ಸಮೀಪ ಬರುವುದರೊಳಗೆ ಮಾಂಗೀರಿಗೆ ತಲಪಿದನು.

ಶಿಬಿರವು ಸರ್ವತ್ರ ಜಯಜಯ ಶಬ್ದದಿಂದ ಪರಿಪೂರಿತವಾಯಿತು—ಇಂದ್ರನಾಥನು ಸೆರೆಯಿಂದ ಬಿಡುಗಡೆಯಾದನೆಂದೂ, ಹೋಗಿ ಶತ್ರುಗಳನ್ನು ಹೊಡೆದು ಬಂದನೆಂದೂ ಅವನು ಇನೂರು ಘೋಳಾಯ್ತುರೊಡನೆ ಹೋಗಿ ಕಂದಕವನ್ನು ದಾಟಿ ಶತ್ರು ಶಿಬಿರದಲ್ಲಿ ಸರ್ವನಾಶಮಾಡಿ ಬಂದನೆಂದೂ ಸುದ್ದಿಯು ಹರಡಿ ಮೊಗಲ ಸೈನಿಕರು ಉಲ್ಲಾಸದಿಂದ ಉನ್ಮತ್ತಪ್ರಾಯರಾದರು. ಟೋಡರಮಲ್ಲನು ಪ್ರೀತನಾಗಿ ಇಂದ್ರನಾಥನನ್ನು ಆದರದಿಂದಾಲಿಂಗನೆಯಂ ಮಾಡಿಕೊಂಡನು; ಇಂದ್ರನಾಥನು ಬಿಡುಗಡೆಯಾದ ಬಗೆಯನ್ನು ಕುರಿತು ವಿಚಾರಮಾಡಲಾರಿಗೂ ಅವಕಾಶವಿಲ್ಲ.

ಕೇವಲ ಕೆಲವರು ಸೈನಿಕರು ಹೊರತು ವಿಮಲೆಯ ವಿಚಾರವನ್ನು ಮತ್ತಾರೂ ಅರಿಯರು. ವಿಮಲೆಯು ಅಂದು ರಾತ್ರಿಯೇ ತಂದೆಯ ಮನೆಗೆ ಹೊರಟುಹೋದಳು.

## ಮೂವತ್ತನೆಯ ಪರಿಚ್ಛೇದ

## **ಪಾಪಕ್ಕೆ ಪ್ರಾಯಶ್ಚಿತ್ತ**

Out ! Out ! Brief candle !

*Shakespeare.*

ಹಿಂದಿನ ಪರಿಚ್ಛೇದದಲ್ಲಿ ಹೇಳಿದ ಘಟನೆಯು ಸಂಘಟಿತವಾಗಿ ಮೂರು ನಾಲ್ಕು ದಿನಗಳಾದ ಬಳಿಕ ಒಂದುದಿನ ಸಾಯಂಕಾಲದ ಸಮಯದಲ್ಲಿ ರಾಜಾ ಟೋಡರಮಲ್ಲನೂ ಇಂದ್ರನಾಥನೂ ದುರ್ಗದ ಪ್ರಾಚೀರದಮೇಲೆ ಪದಚಾರಣ ಮಾಡುತಿದ್ದರು. ಅವರವರು ಬಹಳ ಹೊತ್ತಿನ ತನಕ ಮಾತನಾಡುತಿದ್ದರು.

ರಾಜಾ—ಇಂದ್ರನಾಥ! ಯುದ್ಧದಲ್ಲಿ ಕೇವಲ ಸಾಹಸಮಾತ್ರವೇ ಸಾಲದು, ರಣ ಕೌಶಲವೂ ಬೇಕು.

ಇಂದ್ರನಾಥ—ಆದರೆ ತಾವು ಯೋಚಿಸುವುದರಲ್ಲಿ, ನಾವು ದುರ್ಗವನ್ನು ಬಿಟ್ಟು ಹೊರಗೆ ಸಮ್ಮುಖ ರಣದಲ್ಲಿ ಪ್ರವೃತ್ತರಾದರೆ ಪರಾಸ್ತರಾಗುವೆವೆಂದು ತಿಳಿಯೋಣಾಗಿದೆಯೆ ?

ರಾಜ—ಯುದ್ಧವನ್ನು ಮಾಡಿದರೆ ಪರಾಸ್ತರಾಗೆವು, ಆದರೆ ಎಷ್ಟುಮಂದಿ ಯುದ್ಧವನ್ನು ಮಾಡುವರು ?

ಇಂದ್ರನಾಥ—ಮಹಾರಾಜ! ಹಾಗಾದರೆ, ನಾವು ಎಷ್ಟು ಕಾಲದವರೆಗೆ ದರ್ಗುದಲ್ಲೀ ಅವಸ್ಥಿಯುಲ್ಲಿರಬೇಕು ?

ರಾಜ—ಹಾಗೆ ಹೆಚ್ಚು ದಿನಗಳಿರಬೇಕಾಗುವುದಿಲ್ಲ. ಅಲ್ಲಿ ನೋಡು, ಒಂದು ಪಾಲ್ಕಿಯು ಬರುವುದು ಕಾಣುವುದಲ್ಲವೆ? ಅದರಲ್ಲಿ ಬರುವವನು ಈಗಲೇ ಬಂದು, ಸ್ವಲ್ಪ ದಿನಗಳಲ್ಲಿಯೇ ಶತ್ರುವಿನಾಶವಾಗುವುದೆಂದೂ ನಾವು ಯುದ್ಧವಿಲ್ಲದೆ ಜಯವನ್ನು ಹೊಂದುವೆವೆಂತಲೂ ಸುದ್ದಿಯನ್ನು ತರುವನು.

ಇಂದ್ರನಾಥ—ತಮ್ಮ ಯುದ್ಧಕೌಶಲವು ಜಗದ್ವಿಖ್ಯಾತವಾಗಿದೆ, ಆದರೆ ತಾವು ಭವಿಷ್ಯವನ್ನೂ ಹೇಳುವವರೆಂದು ನಾನು ತಿಳಿದಿರಲಿಲ್ಲ.

ಪಾಲ್ಕಿಯು ಹತ್ತಿರ ಬಂದಿತು, ಅದರೊಳಗಿನಿಂದ ದಿವಾನಜಿ ಸತೀಶಚಂದ್ರನು ಹೊರಗೆ ಇಳಿದು ಬಂದನು. ಇಂದ್ರನಾಥನು ಅವನನ್ನು ಕಂಡು ಮತ್ತೂ ಹೆಚ್ಚು ಆಶ್ಚರಿಗೊಂಡನು.

ಸತೀಶಚಂದ್ರನಿಗೂ ರಾಜಾ ಟೋಡರಮಲ್ಲನಿಗೂ ನಡೆದ ಸಂಭಾಷಣೆಯ ವಿಸ್ತಾರ ವಿವರಣೆಯು ಆವಶ್ಯಕವಿಲ್ಲ. ಟೋಡರಮಲ್ಲನು ಸತೀಶಚಂದ್ರನನ್ನು ವಂಗದೇಶದ ಮುಖ್ಯ ಮುಖ್ಯರಾದ ಜಮೀನುದಾರರ ಬಳಿ ಕಳುಹಿದ್ದನು. ಸತೀಶಚಂದ್ರನು ಕಾರ್ಯದಕ್ಷನು, ವಾಕ್ಪಟು, ಹಾಗೂ ಬುದ್ಧಿವಂತನು. ಅವನಾ ಜಮೀನುದಾರರ ಬಳಿ ಹೋಗಿ ಅವರಿಗೆ ನಾನಾ ವಿಧವಾಗಿ ಹೇಳಿ ಅನೇಕ

ಕಾರಣಗಳನ್ನು ತೋರಿ ಒಬ್ಬೊಬ್ಬನನ್ನಾಗಿ ಶತ್ರುಪಕ್ಷವನ್ನು ಬಿಟ್ಟು ಸಮ್ರಾಜನ ಪಕ್ಷವನ್ನವಲಂಬಿಸುವಹಾಗೆ ಮಾಡಿಕೊಂಡು ಬಂದಿದ್ದನು. "ಅಕ್ಬರಷಹನು ಹಿಂದೂಗಳಿಗೆ ಪರಮ ಬಂಧು; ಹಿಂದೂಗಳಮೇಲೆ ಹಾಕಿದ್ದ ಅನ್ಯಾಯವಾದ ತೆರಿಗೆಗಳನ್ನು ತೆಗೆದು ಹಾಕಿದನು; ಹಿಂದೂಗಳ ಶಾಸ್ತ್ರಾಲೋಚನೆಯಂ ಮಾಡುವನು; ಹಿಂದೂ ರಮಣಿಯನ್ನು ಮದುವೆಮಾಡಿಕೊಂಡಿರುವನು; ಹಿಂದೂಗಳ ಆಚಾರವ್ಯವಹಾರಗಳನ್ನು ಕೆಲವು ಅಂಶ ಅವಲಂಬಿಸಿರುವನು; ವಂಗದೇಶಕ್ಕೆ ಹಿಂದೂ ಸೇನಾಪತಿಯನ್ನೂ ಹಿಂದೂ ಶಾಸನಕರ್ತನನ್ನೂ ಕಳುಹುತ್ತಿರುವನು; ವಿಜಯಲಕ್ಷ್ಮಿಯು ಸ್ವಯಂ ಆ ಸೇನಾಪತಿಯರ ಛಾಯಾಸ್ವರೂಪವಾಗಿರುವಳು; ಅವನು ವಂಗದೇಶವನ್ನು ಎರಡು ತಡವೆ ಜಯಿಸಿದ್ದನು; ಪುನಃ ಜಯಿಸುವನು; ಜಯಿಸಿದರೆ ವಿದ್ರೋಹಿಗಳಾಗಿದ್ದ ಜಮೀನುದಾರರನ್ನು ಶಿಕ್ಷಿಸುವನು; ಈಗ ಜಮೀನುದಾರರು ಟೋಡರಮಲ್ಲನಿಗೆ ಸಹಾಯವನ್ನು ಮಾಡಿದರೆ ಆ ಮಹಾತ್ಮನು ಅವರ ಉಪಕಾರವನ್ನೆಂದಿಗೂ ಮರೆಯನು" ಎಂದು ಮುಂತಾಗಿ ನಾನಾ ಪ್ರಕಾರವಾದ ಪ್ರಲೋಭನಗಳನ್ನೂ ಭಯವನ್ನೂ ತೋರಿ ಸತೀಶಚಂದ್ರನು ಅನೇಕ ಜಮೀನುದಾರರನ್ನು ಬಾದಷಹನ ಪಕ್ಷಾವಲಂಬಿಗಳನ್ನಾಗಿ ಮಾಡಿಕೊಂಡು ಬಂದಿದ್ದನು. ಆ ಜಮೀನುದಾರರು ಶತ್ರುಪಕ್ಷದವರಿಗೆ ಮುಂದೆ ಆಹಾರ ಸಾಮಗ್ರಿಯನ್ನು ಕಳುಹುವುದಿಲ್ಲವೆಂದೊಪ್ಪಿಕೊಂಡಿದ್ದರು. ಅದುಕಾರಣ ಶತ್ರುಗಳು ಆಹಾರಾಭಾವದಿಂದ ನಾಲ್ಕಾರು ದಿನಗಳಲ್ಲಿ ರಣವನ್ನು ಭಂಗಮಾಡಿ ಭಾಗಲಪುರವನ್ನು ಬಿಟ್ಟು ದಿಕ್ಕು ದಿಕ್ಕಿಗೆ ಚದರಿಹೋಗುವರೆಂಬುದಕ್ಕೆ ಸಂದೇಹ ವಿರಲಿಲ್ಲ.

ರಾಜಾ ಟೋಡರಮಲ್ಲನು ಸತೀಶಚಂದ್ರನಿಗೆ ಬಹಳ ಸಮ್ಮಾನಪುರಸ್ಸರವಾಗಿ ಬೀಳ್ಕೊಟ್ಟು ಕಳುಹಿದನು; ಬಳಿಕ ಇಂದ್ರನಾಥನನ್ನು ಕುರಿತು, "ಇಂದ್ರನಾಥ! ನಾನು ಹೇಳಿದುದು ನಿಜವಾಯಿತೆ?" ಎಂದನು.

ಇಂದ್ರನಾಥ—ಮಹಾರಾಜ! ತಾವು ಯುದ್ಧದಲ್ಲಿ ಹೇಗೆ ಅಜೇಯರೋ ಕೌಶಲದಲ್ಲಿಯೂ ಹಾಗೆ ಅಸದೃಶರು! ಆದರೆ—

ರಾಜಾ—"ಆದರೆ" ಮತ್ತೇನು?

ಇಂದ್ರನಾಥ—ನಾನಾರಿಗೂ ವಿರೋಧವಾಗಿ ಮಾತನಾಡಲು ಇಷ್ಟವುಳ್ಳವನಾಗಿಲ್ಲ. ಆದರೆ ಸತೀಶಚಂದ್ರನು ಹೇಳುವುದನ್ನೆಲ್ಲಾ ತಾವು ನಂಬೋಣಾಗುತ್ತದೆಯೆ?

ರಾಜಾ—ತರುಣ ಸೇನಾಪತಿಯು ಟೋಡರಮಲ್ಲನಿಗೆ ರಾಜನೀತಿಯ ಶಿಕ್ಷಣವನ್ನು ಕೊಡಹೋಗುವನೆ? ಆರನ್ನು ನಂಬುಬೇಕೋ, ಆರನ್ನು ನಂಬದಿರಬೇಕೋ ಅದನ್ನು ನನಗಿಂತ ಇಂದ್ರನಾಥನು ಹೆಚ್ಚಾಗಿ ಬಲ್ಲನೆ?

ಇಂದ್ರನಾಥ—ಮಹಾರಾಜರು ನನ್ನ ಅಪರಾಧವನ್ನು ಮನಸ್ಸಿಗೆ ತಂದು

ಕೊಳ್ಳಕೂಡದು; ಆದರೆ ಆ ಸತೀಶಚಂದ್ರನ ವಿಚಾರದಲ್ಲಿ ತಾವು ತಿಳಿದಿರುವುದಕ್ಕಿಂತ ನಾನು ಹೆಚ್ಚು ತಿಳಿದಿರುವೆನು.

ರಾಜಾ—ಇಂದ್ರನಾಥನು ತಿಳಿದಿರುವಷ್ಟು ನಾನೂ ತಿಳಿದಿರುವೆನು; ಇಂದ್ರನಾಥನ ಮನಸ್ಸಿನಲ್ಲಿ ಈಗವನು ಚಿಂತಿಸುತ್ತಿರುವುದನ್ನು ನಾನು ಬಲ್ಲೆನು.

ಇಂದ್ರನಾಥನು ಆಶ್ಚರ್ಯದಿಂದ ಮಾತಿಲ್ಲದವನಾಗಿ ರಾಜನ ಮುಖವನ್ನು ನೋಡುತಿದ್ದನು; ರಾಜನು ಮೊದಲಿನಂತೆ ನಗುತ ನಗುತ, "ಆ ಸತೀಶಚಂದ್ರನು ರಾಜಾ ಸಮರಸಿಂಹನನ್ನು ಪ್ರಾಣದಿಂದ ವಧೆಮಾಡಿದವನು. ಇಂದ್ರನಾಥನದನ್ನೇ ಕುರಿತು ಮನದಲ್ಲಿ ಚಿಂತಿಸುತ್ತಿರುವನು" ಎಂದನು.

ಇಂದ್ರನಾಥನು ಆಶ್ಚರ್ಯದಿಂದ ಸಂಜ್ಞಾಶೂನ್ಯನಾದವನಂತೆ, "ಮಹಾ ರಾಜಾ! ಕ್ಷಮಿಸಬೇಕು, ತಾವು ಅಂತರ್ಯಾಮಿಗಳು" ಎಂದನು.

ರಾಜಾ—(ಗಂಭೀರ ಸ್ವರದಿಂದ) ಇಂದ್ರನಾಥ! ಭಗವಂತನೊಬ್ಬನೇ ಅಂತ ರ್ಯಾಮಿ; ಆದರೆ ದಿಲ್ಲೀಶ್ವರನ ಸೇನಾಪತಿಯು ನಾಲ್ಕೂಕಡೆ ಸಂಧಾನಮಾಡದೆ ಆವ ಕಾರ್ಯದಲ್ಲಿಯೂ ಪ್ರವೃತ್ತನಾಗನು. ಯುದ್ಧಕಾರ್ಯದಲ್ಲೆನ್ನ ಕೂದಲು ನರತುಹೋಗಿದೆ, ದೇವರ ಅನುಗ್ರಹದಿಂದ ಯುದ್ಧಕೌಶಲವನ್ನು ಸ್ವಲ್ಪಮಟ್ಟಿಗೆ ತಿಳಿದುಕೊಂಡಿದ್ದೇನೆ.

ಇಂದ್ರನಾಥನು ಕ್ಷಣೈಕ ಮೌನದಿಂದಿದ್ದು ಬಳಿಕ, "ಮಹಾರಾಜ! ಹಾಗಾದರೆ, ತಾವು ಸಮರಸಿಂಹನು ಖೂನಾದ ವಿಚಾರವನ್ನು ತಿಳಿದಿರೋ ಣಾಗಿದೆ?" ಎಂದನು.

ರಾಜಾ—(ಮೊದಲಿನಂತೆ) ಆ ಖೂನಿಯ ವಿಚಾರವನ್ನು ನಾನು ಬಲ್ಲೆನು, ಯಥಾಕಾಲದಲ್ಲಿ ಅದರ ವಿಚಾರಣೆಯನ್ನೂ ಮಾಡುವೆನು. ನನ್ನ ಮಗನನ್ನು ಖೂನುಮಾಡಿದರೆ ಹತ್ಯಾಕಾರಿಯನ್ನು ಕ್ಷಮಿಸುವೆನು, ಆದರೆ ರಾಜಾ ಸಮರ ಸಿಂಹನ ಹತ್ಯಾಕಾರಿಯನ್ನೆಂದಿಗೂ ಕ್ಷಮಿಸೆನು.

ಅಂದು ರಾತ್ರಿ ಮೊದಲ ಪ್ರಹರದಲ್ಲಿ ಸತೀಶಚಂದ್ರನು ಗಂಗಾತೀರದಲ್ಲಿ ಹವ ತೆಗೆದುಕೊಳ್ಳುತ್ತ ಅಡ್ಡಾಡುತಿದ್ದನು. ಇಂದವನು ರಾಜನಿಂದ ಸನ್ಮಾನ ವನ್ನು ಹೊಂದಿದ್ದನು, ಅವನ ಹೃದಯವು ಉಲ್ಲಾಸದಿಂದ ಪರಿಪೂರಿತವಾಗಿದ್ದಿತು, ಮಾಯಾವಿನಿಯಾದ ಆಶೆಯು ಅವನ ಕಿವಿಯಲ್ಲಿ ಹೇಳುತಿದ್ದಳೇನೆಂದರೆ— "ನೀನೊಮ್ಮೆ ಪಾಪಕ್ಕೆ ಸಲುವಾಗಿ ದಂಡಿಸಲ್ಪಡುವೆಯೆಂದು ಹೆದರುತಿದ್ದೆಯಲ್ಲವೆ? ಆ ಪಾಪವನ್ನು ಕಂಡವರಾರು? ದಂಡನೆಯೆಲ್ಲಿ? ಈಗಲೂ ದಿನೆದಿನೆ ನಿನಗೆ ಸನ್ಮಾನವು ವೃದ್ಧಿಯಾಗುತಿರಲಿ, ಪದವು ಹೆಚ್ಚುತ್ತಿರಲಿ." ಸೂರ್ಯಾಸ್ತವಾಗು ವುದಕ್ಕೆ ಮೊದಲಿಂದಲೂ ಕುಹಕಿನಿಯಾದಾ ಆಶೆಯು ಈ ಪ್ರಕಾರ ಅವನ ಕಿವಿ ಯಲ್ಲುಸುರುತಿದ್ದಳು, ಆ ಸೂರ್ಯದೇವನು ಪುನಃ ಉದಯವಾಗುವುದಕ್ಕೆ

ಮೊದಲೇವೇ, ಆಶೆಯು ಮಾಯಾವಿನಿಯೆಂತಲೂ ಕುಹಕಿನಿಯೆಂತಲೂ ಮಿಥ್ಯಾವಾದಿನಿಯೆಂತಲೂ ಸತೀಶಚಂದ್ರನು ತಿಳಿದನು.

ಬೆಳದಿಂಗಳಲ್ಲಿ ಸತೀಶಚಂದ್ರನು ಒಮ್ಮಿಂದೊಮ್ಮೆ ಒಬ್ಬ ಕಳ್ಳನನ್ನು ನೋಡಿದನು, ನೋಡುತಿದ್ದಹಾಗೆ ಕಳ್ಳನು ಕೈಯಲ್ಲಿ ಕತ್ತಿಯನ್ನು ಹಿಡಿದು ಸತೀಶಚಂದ್ರನಿಗೆದುರಾಗಿ ಓಡಿಬಂದನು, ಸತೀಶಚಂದ್ರನು ಓಡಿಹೋಗಲು ಪ್ರಯತ್ನಪಟ್ಟನು, ಆದರೆ ಅವನಾ ಪ್ರಯತ್ನವು ವ್ಯರ್ಥವಾಯಿತು, ಹತ್ಯಾಕಾರಿಯಾದಾ ಕಳ್ಳನು ಸತೀಶನನ್ನು ಕತ್ತಿಯಿಂದ ಹೊಡೆದನು. ಸತೀಶನ ಆಳುಗಳು ಓಡಿಬಂದು ಕಳ್ಳನನ್ನು ಖಡ್ಗದಿಂದ ಕಡಹೊಡದು ನೆಲಕ್ಕೆ ಕೆಡವಿದರು.

ಮೃತಪ್ರಾಯನಾದಾ ಕಳ್ಳನು, "ಸತೀಶಚಂದ್ರ! ನಿನ್ನ ಮರಣವು ಸನ್ನಿಹಿತವಾಯಿತು" ಎಂದನು.

ಸತೀಶ—ನರಾಧಮ! ದೇವರೇ ನನ್ನನ್ನು ರಕ್ಷಿಸಿದನು, ನಿನ್ನ ಹೊಡೆತದ ಘಾಯದಿಂದ ಸ್ವಲ್ಪಮಾತ್ರ ರಕ್ತವು ಬರುತ್ತಿದೆ.

ಕಳ್ಳ—ನನ್ನಾ ಆಘಾತದಿಂದ ನಿನ್ನ ಪ್ರಾಣವು ಹೋಗುವುದು, ನನ್ನ ಕತ್ತಿಯು ವಿಷಾಕ್ತವಾದುದು, ಪ್ರಭುವೆ! ನೀನೆನ್ನನ್ನು ಅರಿಯೆಯಾ?

ಸತೀಶನು ಕೂಡಲೇ ತನ್ನಾ ಪುರಾತನ ಭೃತ್ಯನನ್ನು ಗುರ್ತಿಸಿದನು. ಗುರ್ತಿಸಿ, "ನರಾಧಮ! ನಿನಗಾರು ಇಂತಹ ಪ್ರಭುಭಕ್ತಿಯನ್ನು ಕಲಿಸಿದರು?" ಎಂದನು.

ಭೃತ್ಯನು ಅತಿ ಕ್ಷೀಣವಾದ ಸ್ಖಲಿತ ಸ್ವರದಿಂದ, "ಪಾಪಿಷ್ಠನಾದಾ ಶಕುನಿ" ಎಂದನು.

ಸತೀಶಚಂದ್ರನದನ್ನು ಕೇಳಿ ಕ್ರೋಧದಿಂದ ಅಧೀರನಾಗಿ, "ನಾನೂ ಹಾಗೇವೇ ಇದಾ ಪಾಮರನ ಕೃತ್ಯವೆಂದು ತಿಳಿದಿದ್ದೆನು, ಪ್ರಪಂಚದಲ್ಲಿ ಅವನಂತಹ ಕಡುಪಾಪಿಯು ಬೇರೆ ಇರನು, ನರಕದಲ್ಲಿಯೂ ಇಲ್ಲ, ಆದರೆ ನೀನೆನಗೆ ಪುರಾತನ ಭೃತ್ಯನಾಗಿದ್ದು ನನ್ನನ್ನು ವಧಿಸಲು ಸಂಕಲ್ಪಿಸಿದಿಯಾ?" ಎಂದನು.

ಭೃತ್ಯ—(ಮತ್ತೂ ಕ್ಷೀಣಸ್ವರದಲ್ಲಿ) "ಶ—ಶ—ಶಕುನಿಯು ಅನೇಕ ಪ್ರಲೋಭಗಳನ್ನು ತೋರಿದನು, ಲೋಭದಲ್ಲಿ ಬಿದ್ದರೆ ಜ್ಞಾನವಿರದು, ಲೋಭದಲ್ಲಿ ಬಿದ್ದು ಪಾಪವನ್ನು ಮಾಡಿದೆನು, ಪ್ರಾಣವನ್ನು ಕಳೆದುಕೊಂಡೆನು."

ಪುನಃ ಮಾತು ಹೊರಡಲಿಲ್ಲ; ಅವನ ಶರೀರದಿಂದ ಪ್ರಾಣವು ಹೊರಗಾಯ್ತು, ತುಟಿಗಳು ನಡಗುತ್ತ ಕಡೆಗೆ ಸ್ಥಿರವಾದುವು, ಕಣ್ಣುಗಳೆರಡೂ ಆಕಾಶದ ಕಡೆ ನೋಡುತಿದ್ದುವು. ಬೆಳದಿಂಗಳ ಬೆಳಕಿನಲ್ಲಿ ಸತೀಶಚಂದ್ರನಾ ಮೃತ ದೇಹವಂ ನೋಡುತ, "ಭೃತ್ಯ! ನಿನಗಿಂತ ಹೆಚ್ಚು ಜ್ಞಾನಿಯಾದವನೂ ಲೋಭದಲ್ಲಿ ಬಿದ್ದು ಜ್ಞಾನವನ್ನು ಹೋಗಲಾಡಿಸಿಕೊಂಡನು, ನಿನಗಿಂತ ಹೆಚ್ಚು ಭೀಷಣ ಕೃತ್ಯವನ್ನು ನಡೆಯಿಸಿದ್ದಾನೆ, ನಿನ್ನಂತೆ ಪ್ರಾಣವನ್ನು ಬಿಡಲು ವಿಳಂಬವಿಲ್ಲ, ಪರಮೇಶ್ವರನು ನಿನ್ನನ್ನು ಕ್ಷಮಿಸಲಿ, ನನ್ನ ಪಾಪಕ್ಕೆ ಕ್ಷಮೆಯಿಲ್ಲ"ವೆಂದನು.

ಪ್ರಾತಃಕಾಲದಲ್ಲಿ ದಿವಾನಸಾಹೇಬ ಸತೀಶಚಂದ್ರನು ಮೃತ್ಯುಶಯ್ಯೆಯಲ್ಲಿ ಶಯನಮಾಡಿದ್ದನೆಂದು ರಾಜನಿಗೆ ಸುದ್ದಿಯು ಬಂದಿತು. ರಾಜನು ತಕ್ಷಣದಲ್ಲಿ ಸತೀಶನಿದ್ದ ಮನೆಗೆ ಹೋದನು, ಇಂದ್ರನಾಥನೂ ಅವನ ಸಂಗಡ ಹೋದನು.

ರಾಜನು ಹೋಗಿ ನೋಡಿದನು, ಸತೀಶಚಂದ್ರನು ಹಾಸಿಗೆಯಲ್ಲಿ ಮಲಗಿದ್ದನು, ಸುತ್ತ ಚಿಕಿತ್ಸಕರು ಕುಳಿತಿದ್ದರು, ಆದರೆ ಭೀಷಣವಾದ ವಿಷವು ಶರೀರಕ್ಕೆ ಸೇರಿದ್ದುದರಿಂದ ಪರಿತ್ರಾಣವು ತೋರಲಿಲ್ಲ; ರಾಜನಾ ಅದ್ಭುತ ಘಟನೆಗೆ ಕಾರಣವನ್ನು ವಿಚಾರಿಸಿದನು; ಪಾರ್ಶ್ವದಲ್ಲಿದ್ದ ಅನುಚರರು ಸಂಗತಿಗಳನ್ನೆಲ್ಲಾ ತಿಳಿಯ ಹೇಳಿದರು. ಬಳಿಕ ಸತೀಶಚಂದ್ರನು ಕ್ಷೀಣಿಸುತಿದ್ದ ಸ್ವರದಿಂದ, "ಮಹಾರಾಜ! ನಾನು ಪಾಪಿ, ಪಾಪಿಷ್ಠನನ್ನು ಕ್ಷಮಿಸು" ಎಂದನು.

ರಾಜನು ನಿಸ್ತಬ್ಧನಾಗಿದ್ದನು. ಸತೀಶಚಂದ್ರನು ಪುನಃ ಹೇಳಿದನು, "ನಾನು ಭೀಷಣವಾದ ದೋಷವನ್ನು ಮಾಡಿದ್ದೇನೆ, ನನ್ನಾ ಅಪರಾಧವನ್ನು ಕ್ಷಮಿಸು."

ಆದರೂ ರಾಜನು ಮಾತನಾಡಲಿಲ್ಲ. ಸತೀಶಚಂದ್ರನು ಮತ್ತೂ ಹೇಳತೊಡಗಿದನು,—"ಮಹಾರಾಜ! ನಾನು ನರಹತ್ಯಾಕಾರಿ; ಆದರೆ ಎಲ್ಲಾ ಅಪರಾಧಗಳಿಗೂ ಕ್ಷಮೆಯುಂಟು; ನನ್ನನ್ನು ಕ್ಷಮಿಸು, ನಾನು ನರಹತ್ಯಾಕಾರಿ, ಮೃತ್ಯುಶಯ್ಯೆಯಲ್ಲಿ ಕ್ಷಮೆಯನ್ನು ಬೇಡುತ್ತೇನೆ. ದಯೆಗೈದು ನನ್ನನ್ನು ಕ್ಷಮಿಸು." ಆ ಕಾತರ ಸ್ವರವನ್ನು ಕೇಳಿ ರಾಜನು ಹೆಚ್ಚು ಹೊತ್ತು ಮೌನವಾಗಿರಲಾರದವನಾಗಿ, "ರಾಜಾ ಸಮರಸಿಂಹನ ಹತ್ಯಾಕಾರಿಯನ್ನು ಕ್ಷಮಿಸುವೆನೆಂದು ನಾನು ಯೋಚಿಸಿರಲಿಲ್ಲ; ಆದರೆ ಜಗದೀಶ್ವರನು ನಿನಗೆ ಶಾಸ್ತಿಯನ್ನು ಕೊಟ್ಟಿದ್ದಾನೆ, ನಾನು ನಿನ್ನನ್ನು ಕ್ಷಮಿಸಿರುವೆನು, ನಿನ್ನ ಪ್ರಾಣವಿಯೋಗಕ್ಕೆ ಹೆಚ್ಚು ವಿಳಂಬವಿಲ್ಲ, ಭಗವನ್ನಾಮವನ್ನು ಸ್ಮರಿಸು, ಅವನು ದಯಾಸಾಗರನು, ಮರಣಕಾಲದಲ್ಲಿ ಪವಿತ್ರವಾದವನ ನಾಮಸ್ಮರಣೆಯುಂ ಮಾಡಿದರೆ ಜೀವನದ ಪಾಪವು ಖಂಡನವಾಗುವುದು" ಎಂದು ಹೇಳಿದನು.

ಸತೀಶಚಂದ್ರನು ಚಕಿತನಾಗಿ ಪುನಃ ರಾಜನನ್ನು ನೋಡಿ, "ಮಹಾರಾಜ! ಹಾಗಾದರೆ ನೀನು ಸಮರಸಿಂಹನ ಮರಣದ ಕಾರಣವನ್ನು ಸವಿಶೇಷವಾಗಿ ತಿಳಿದಿರುವೆಯಲ್ಲವೆ?" ಎಂದನು.

ರಾಜಾ—ತಿಳಿದಿದ್ದೇನೆ.

ಸತೀಶಚಂದ್ರನು ಅಚ್ಚರಿಗೊಂಡು ನಿಸ್ತಬ್ಧನಾದನು.

ಬಹಳ ಹೊತ್ತಿನತನಕ ಸುಮ್ಮನಿದ್ದು ಬಳಿಕ ಪುನಃ ಹೇಳತೊಡಗಿದನು,—"ಮಹಾರಾಜ! ನನ್ನದೊಂದು ನಿವೇದನವುಂಟು. ನಾನು ಪಾಪಿಯೇ ಅಹುದು. ಆದರೆ ಜನ್ಮಾವಧಿ ಪಾಪಿಯಾಗಿರಲಿಲ್ಲ, ಯೌವನದಲ್ಲೆನ್ನ ಜೀವನವು ಪವಿತ್ರವಾಗಿದ್ದಿತು. ಉಚ್ಚಮತಿಯಾಗಿ ಉಚ್ಚ ಆಶೆಯಿಂದ ಉಚ್ಚಪ್ರವೃತ್ತಿಯುಳ್ಳವನಾಗಿ

ದ್ದೆನು—ಲೋಭದಲ್ಲಿ—ಮಹಾ ಲೋಭದಲ್ಲಿ ಬಿದ್ದು ಅವೆಲ್ಲವೂ ಹೋದುವು; ಜೀವನವು ಪಾಪದಿಂದ ಕಲುಷಿತವಾಯಿತು. ಇಂದು ಪ್ರಾಣವನ್ನು ಕಳೆದು ಕೊಂಡೆನು."

ಸತೀಶಚಂದ್ರನ ಕ್ಷೀಣವಾಗಿದ್ದ ಸ್ವರವು ಹೆಚ್ಚು ಕ್ಷೀಣತರವಾಗುತ ಬಂದಿತು, ಬಾಯಿಂದ ಮಾತು ಹೊರಡಲಿಲ್ಲ—ರಾಜನು ಸ್ನೇಹಪುರಸ್ಸರವಾಗಿ ಅವನ ತುಟಿಗಳ ಮೇಲೆ ನಾಲ್ಕಾರು ಬೊಟ್ಟು ಹಾಲನ್ನು ಬೊಟ್ಟುಬೊಟ್ಟಾಗಿ ತೊಟಕಿಸಿದನು. ರಸಶೂನ್ಯವಾಗಿ ಒಣಗಿಹೋಗಿದ್ದಾ ತುಟಿಗಳು ಪುನಃ ಸಿಕ್ತ ವಾದುವು. ಸತೀಶನು ಪುನಃ ಹೇಳತೊಡಗಿದನು,—"ನಾನು ಪಾಪಿಯೇ ಅಹುದು, ಆದರೆ ನನಗಿಂತ ಘೋರತರವಾದ ಕಡುಪಾಪಿಯು ಮತ್ತೊಬ್ಬನಿದ್ದಾನೆ, ನನ್ನ ಭೃತ್ಯ ಶಕುನಿಯು ಯಥಾರ್ಥವಾಗಿ ಸಮರಸಿಂಹನನ್ನು ವಧೆಮಾಡಿದವನು, ಇಂದೂ ಅವನೆನ್ನನ್ನೂ ವಧೆಮಾಡಿದ್ದಾನೆ, ನೀನು ಅವನನ್ನು ವಿಚಾರಣೆ ಮಾಡ ಬೇಕು."

ಕ್ರೋಧದಿಂದ ರಾಜಾ ಟೋಡರಮಲ್ಲನ ಕಣ್ಣುಗಳು ಕೆಂಬಣ್ಣವ ತಾಳ್ದುವು. ಆದರೆ ಅವನಾ ಕೋಪವನ್ನು ತಡೆದು ಹೊರಗೆ ತೋರದೆ ಮೆಲ್ಲ ಮೆಲ್ಲನೆ, "ಚಿಂತೆ ಯಿಲ್ಲ, ಜಗದೀಶ್ವರನು ಪಾಪಿಯನ್ನು ದಂಡಿಸುವನು" ಎಂದನು.

ಪುನಃ ಎಲ್ಲರೂ ಬಹಳಹೊತ್ತಿನತನಕ ಮೌನವಾಗಿದ್ದರು. ಸತೀಶಚಂದ್ರನ ಆಯುಸ್ಸು ನಿಶ್ಶೇಷಿತವಾಗುತ ಬಂದಿತು, ಬಹಳ ಹೊತ್ತಾದ ಬಳಿಕ ಅಧಿಕತರ ಕ್ಷೀಣವಾದ ಕಾತರ ಸ್ವರದಿಂದ, "ಮಗಳು ನನಗೆ ಪ್ರಾಣವಾಗಿದ್ದೆನ್ನ ಮಗಳು ವಿಮಲೆ,—" ಎಂದು ಹೇಳುತಿದ್ದಾಗ ಮಾತು ನಿಂತಿತು.

ರಾಜನು ಪುನಃ ಬೆರಳಿನಿಂದ ತುಟಿಗಳಮೇಲೆ ಸ್ವಲ್ಪ ಹಾಲನ್ನು ಬಿಟ್ಟನು. ಸತೀಶನು ಸ್ವಲ್ಪ ತಡೆದು ಬಳಿಕ ಪುನಃ ಹೇಳಿದನು,—"ನಿರ್ಭಾಗ್ಯೆ ವಿಮಲೆ! ನಿನಗೆ ತಾಯಿಯು ಹೋದಳು, ಇಂದು ನೀನು ಪಿತೃಹೀನೆಯಾದೆ!" ಈ ಮಾತನ್ನು ಹೇಳುತಿದ್ದಾಗ ಪಾರ್ಶ್ವದ ಕೋಣೆಯಲ್ಲಿ ಹೃದಯವಿದಾರಕವಾದ ರಮಣಿಯ ಕಂಠದಿಂದ ಹೊರಟ ಕ್ರಂದನಧ್ವನಿಯು ಕೇಳಿತು, ಆ ಧ್ವನಿಯನ್ನು ಕೇಳಿ ಸತೀಶ ಚಂದ್ರನ ಸ್ಪಂದಹೀನವಾಗಿದ್ದ ಕಣ್ಣುಗಳಲ್ಲಿ ನೀರುತುಂಬಿತು. ಮುಹೂರ್ತ ದೊಳಗೆ ವಿಮಲೆಯು ವೇಗವಾಗಿ ಪಿತನ ಬಳಿ ಬಂದಳು. ಮನೆಯು ಜನರಿಂದ ಪರಿಪೂರ್ಣವಾಗಿದ್ದಿತು, ಆದರೆ ಅಂತಹ ಸಮಯದಲ್ಲಿ ಆ ಜ್ಞಾನವಾವ ರಮಣಿ ಗಿರುವುದು?

ಇಂದ್ರನಾಥನು ತನಗೆ ಪೂರ್ವಪರಿಚಿತೆಯಾಗಿದ್ದಾ ರಮಣಿಯು ಸತೀಶನ ಮಗಳು ವಿಮಲೆಯೆಂದು ತಿಳಿದು ವಿಸ್ಮಿತನಾದನು.

ವಿಮಲೆಯು ಪಿತನನ್ನು ಆಲಿಂಗನೆಮಾಡಿ ಅವನ ಕಾಲಿಗೆರಗಿದಳು. ಪವಿತ್ರ ವಾದಾ ಆಲಿಂಗನೆಯಿಂದ ಸತೀಶಚಂದ್ರನ ಹೃದಯವು ಉದ್ವೇಗಶೂನ್ಯವಾಯಿ

ತೆಂದು ತೋರುತ್ತದೆ, ಅವನ ಮುಖಮಂಡಲವು ಶಾಂತಭಾವವನ್ನು ತಾಳಿತು, ಕಣ್ಣುಗಳು ಸ್ಥಿರನಿದ್ರೆಯಿಂದ ಮುದ್ರಿತವಾದುವು.

ಬಳಿಕ ವಿಮಲೆಯು ಪಿತನಾ ಮೃತದೇಹವನ್ನು ಪುನಃಪುನಃ ಆಲಿಂಗನೆ ಮಾಡಿಕೊಂಡು ಉಚ್ಚಸ್ವರದಿಂದ ಅಳುತೊಡಗಿದಳು. ಇಂದು ವಿಮಲೆಯ ಕಣ್ಬೆಳಕು ಅಳಿಸಿಹೋಯಿತು, ಇಂದು ನಾಲ್ಕು ದಿಕ್ಕುಗಳಲ್ಲಿ ಕಗ್ಗತ್ತಲು ಕವಿತಿತು, ಇಂದವಳ ಹೃದಯವು ವಿದೀರ್ಣವಾಯಿತು, ಇಂದು ಜಗತ್ತು ಶೂನ್ಯವಾಯಿತು.

ಆ ದೃಶ್ಯವನ್ನು ನೋಡಿ ರಾಜನು ಕಣ್ಣುಗಳನ್ನು ಕೈಯಿಂದ ಮುಚ್ಚಿಕೊಂಡು ಮನೆಯಿಂದ ಹೊರಗೆ ಹೊರಟುಹೋದನು, ಇಂದ್ರನಾಥನು ಖಡ್ಗದ ಮೇಲೆ ಭಾರವನ್ನು ಬಿಟ್ಟುಕೊಂಡು ಹುಡುಗಿಯಂತೆ ಸಂತತ ನಯನಧಾರೆಯನ್ನು ಸುರಿಸುತಿದ್ದನು.

---

## ಮೂವತ್ತೊಂದನೆಯ ಪರಿಚ್ಛೇದ

## ಚತುರ್ವೇಷ್ಟಿತ ದುರ್ಗಕ್ಕೆ ಪ್ರತ್ಯಾಗಮನ

If after every tempest come such calms,
May the winds blow till they have wakend death.

*Shakespeare.*

ಇಂದು ಪೂರ್ಣಿಮಾ ತಿಥಿ, ಆದರೆ ಆಕಾಶವನ್ನು ನೋಡಿದರೆ ಇಂದು ಪೂರ್ಣಿಮಾತಿಥಿಯೆಂದು ಹೇಳಬಲ್ಲವರಾರು? ಗಭೀರವಾದ ಧೂಮ್ರವರ್ಣದ ಮೇಘರಾಶಿಯಿಂದ ಆಕಾಶವೆಲ್ಲ ಆವರಿತವಾಗಿದ್ದಿತು, ಜಗತ್ತು ಅಂಧಕಾರದಿಂದಾವರಿತವಾಗಿದೆ, ಮಧ್ಯೆ ಮಧ್ಯೆ ಮುಗಿಲ್ಪೆಳಗು ಭೀಷಣವಾದ ಬೆಳಕಿನಿಂದಾ ಅಂಧಕಾರವನ್ನು ಮುಹೂರ್ತ ಮಾತ್ರ ಉದ್ದೀಪ್ತಮಾಡುತ್ತದೆ, ಪುನಃ ಮೊದಲಿಗಿಂತ ಘೋರತರವಾಗಿ ಆ ಅಂಧಕಾರವು ಕಡುಮುಕ್ಕಾಗುತಿದೆ, ಮುಸಲಧಾರೆಯಾದ ಮಳೆಯಿಂದ ಗ್ರಾಮ, ಮಾರ್ಗ, ಘಾಟಿ ಮುಂತಾದುವೆಲ್ಲಾ ತೇಲಿಹೋಗುತಿವೆ, ನಿಮಿಷ ನಿಮಿಷಕ್ಕೂ ಮಳೆಯು ವೃದ್ಧಿಕೊಳ್ಳುವಂತಿದೆ. ಗಾಳಿಯು ನಿಂತುನಿಂತು ಅತಿಶಯ ಶಬ್ದವನ್ನು ಮಾಡುತ ಬೀಸುತಿದೆ, ಆ ಗಾಳಿಯ ಶಬ್ದದಲ್ಲಿ ಮಧ್ಯಮಧ್ಯೆ ಅನೇಕಕ್ಷಣ ಸ್ಥಾಯಿಯಾದ ಮೇಘದ ಗರ್ಜನೆಯು ಜಗತ್ತನ್ನೆಲ್ಲಾ ಗುಡುಗಿಸಿ ಕಂಪಿತಮಾಡುತಿದೆ.

ಅಂತಹ ಭಯಂಕರವಾದಾ ಗಾಳಿಯಲ್ಲಿ ಸರಳೆಯು ಚತುರ್ವೇಷ್ಟಿತ ದುರ್ಗದ ಕಗ್ಗತ್ತಲಾಗಿದ್ದಾ ಉದ್ಯಾನದ ಮಧ್ಯದಲ್ಲಿ ಜನಶೂನ್ಯವಾಗಿದ್ದೊಂದು ಕುಟೀರದೊಳಗೆ ಒಬ್ಬಳೇ ಕುಳಿತಿದ್ದಾಳೆ. ಅವಳಾವದಕ್ಕೆ ಸಲುವಾಗಿ ಹಾಗೆ ಕುಳಿತಿದ್ದಳು? ಬಾಲೆಯ ಹೃದಯದಲ್ಲಿ ಭಯವಿಲ್ಲವೆ? ಆ ಕತ್ತಲಲ್ಲಿ ಭಯಾವಹವಾದಾ ಮೇಘದ ಗರ್ಜನೆಯಲ್ಲಿ ಆ ಬಾಲೆಯ ಹೃದಯದಲ್ಲಿ ಭಯವಿಲ್ಲವೆ?

ಭಯವಿಲ್ಲ, ಈಗಾ ಸರಳೆಯ ಹೃದಯದಲ್ಲಿ ಭಯವೆಂಬುದು ಇಲ್ಲ. ಈಗಾ ಸರಳೆಯು ಆವದಕ್ಕೂ ಅಂಜುವುದಿಲ್ಲ. ಸುಖದ ಆಶೆಯೂ ಜೀವನದ ಆಶೆಯೂ ಅಂದು ಕೊನೆಗಂಡಿದ್ದುವು, ಆಶೆಯಿಲ್ಲದವರಿಗೆ ಭಯವಾವದರದು? ಸರಳೆಯು ಆಕಾಶದಲ್ಲಿ ಕ್ಷಣಕ್ಷಣವೂ ಕಣ್ಣುಗಳನ್ನು ಜಳಪಿಸುತಿದ್ದ ಭೀಷಣವಾದ ಮುಗಿಲ್ವೆಳಗನ್ನು ಸ್ಥಿರವಾದ ದೃಷ್ಟಿಯಿಂದ ನೋಡುತಿದ್ದಳು. ಬಳಿಕ ಭಯಾನಕವಾಗಿ ಕೇಳಿಬರುವ ಮೇಘದ ಗರ್ಜನೆಯನ್ನು ಸ್ಥಿರಚಿತ್ತದಿಂದ ಕೇಳುತಿದ್ದಳು. ಇಂದ್ರನಾಥನು ಹೊರಟುಹೋಗಿ ಇಂದಿಗೆ ಆರುತಿಂಗಳುಗಳಾದುವು, ಅವನು ಸರಳೆಯನ್ನು ಮರೆತನು, ಪಾಮರನಾದ ಶಕುನಿಯು ಸರಳೆಯನ್ನು ಬೇರೆ ಕೊಟ್ಟು ಮದುವೆಯಂ ಮಾಡಲು ಗೊತ್ತುಮಾಡಿದ್ದಾನೆ.

ಒತ್ತಡವೆ ಅವಳ ಬಾಲ್ಯಾವಸ್ಥೆಯು ನೆನವಿಗೆ ಬಂದಿತು; ಮಹಾಮಾನ್ಯನಾಗಿದ್ದ ಸಮರಸಿಂಹನ ಏಕಮಾತ್ರ ಕನ್ನೆಯು ವಿಸ್ತರವಾದಾ ಉದ್ಯಾನದಲ್ಲಿ ಓಡಾಡುತಿದ್ದಳು, ಪಿತನ ಭುಜದಮೇಲೆ ಹತ್ತಿ ಒಮ್ಮೊಂದು ಹಕ್ಕಿಯನ್ನು ಹಿಡಿಯುವುದಕ್ಕೆ ಹೋದಳು, ಹಕ್ಕಿಯು ಹಾರಿಹೋಯಿತು, ಅರಿಯದ ಮಗುವು ಅಳುವುದಕ್ಕೆ ತೊಡಗಿತು, ಆಗಾ ಅರಿಯದ ಹುಡುಗಿಯು ಜೀವನದ ಆಸೆ ಭರವಸೆಗಳೆಲ್ಲವೂ ಆ ಹಕ್ಕಿಯಂತೆ ಒಂದೊಂದಾಗಿ ಹಾರಿಹೋಗುವುದೆಂದು ಅರಿಯಳು.

ಬಳಿಕ ಆರುವರ್ಷಗಳ ಕಾಲವು ರುದ್ರಪುರದಲ್ಲಿ ಕಳೆಯಿತು, ದರಿದ್ರ ಹಳ್ಳಿಗ್ರಾಮದಲ್ಲಿ ದರಿದ್ರ ಕುಟೀರದಲ್ಲಿ ಆ ಆರು ವರ್ಷಗಳ ಕಾಲವನ್ನು ಕಳೆದಳು, ಆದರೆ ಧನದಲ್ಲಿಯೂ ಸುಖವಿಲ್ಲ, ದಾರಿದ್ರ್ಯದಲ್ಲಿಯೂ ದುಃಖವಿರದು. ಸರಳೆಯ ಅಂತಃಕರಣದಲ್ಲಿ ಆ ಆರು ವರ್ಷಗಳ ಕಾಲವು ಪರಮ ಸುಖವಾದ ಕಾಲವೆಂದು ಬೋಧೆಯಾಯಿತು. ತನ್ನ ಪ್ರಾಣದ ಸಖಿಯಾದಾ ಅಮಲೆ! ಅವಳನ್ನು ಪುನಃ ನೋಡುವಳೆ? ಪ್ರಾತಃಕಾಲದಲ್ಲಿ ಪ್ರತ್ಯಹವೂ ಅವಳೊಂದಿಗೆ ಹೋಗಿ ನದಿಯಿಂದ ನೀರನ್ನು ತರುವಳು; ಸಾಯಂಕಾಲದಲ್ಲಿ ಆ ಅಮಲೆಯೊಂದಿಗೆ ಕೊನೆಯಿಲ್ಲದ ಮನಮುಟ್ಟ ಮಾತು, ಸುಖದ ಸಮಯದಲ್ಲಿ ಅಮಲೆಯು ಹತ್ತಿರದಲ್ಲಿದ್ದರೆ ಸುಖವು ಇಮ್ಮಡಿಯಾಗುವುದು, ದುಃಖದ ಸಮಯದಲ್ಲಿ ಅಮಲೆಯ ಪ್ರಬೋಧ ವಾಕ್ಯಗಳು ದುಃಖವನ್ನು ಶಾಂತಿಮಾಡುವುವು. ಆ ಅಮಲೆಯು ಇಂದೆಲ್ಲಿ? ಹಕ್ಕಿಯಂತೆ ಹಾರಿಹೋದಳು!

ಬಳಿಕ ವನಗ್ರಾಮದ ಆಶ್ರಮನಿವಾಸಿನಿಯಾದಾ ಕಮಲೆ, ಅವಳು ಸರಳೆಯನ್ನು ಅನೇಕವಾಗಿ ಪ್ರೀತಿಸುತಿದ್ದಳು, ಮತ್ತೂ ಆ ದುರ್ಗದಲ್ಲಿದ್ದ ವಿಮಲೆ, ಅವಳೂ ಸರಳೆಯನ್ನು ಬಹಳವಾಗಿ ಆದರಿಸುತಿದ್ದಳು. ಅವರೆಲ್ಲರೂ ಈಗೆಲ್ಲಿ? ಅವರೂ ಆ ಹಕ್ಕಿಯಂತೆ ಹಾರಿಹೋದರೆ?

ಬಳಿಕ ಇಂದ್ರನಾಥ! ಆರುತಿಂಗಳುಗಳಿಂದಾವನ ಚಿಂತೆಯಲ್ಲಿ ಸರಳೆಯ ಹೃದಯವು ಪರಿಪೂರ್ಣವಾಗಿ ತುಂಬಿದ್ದಿತೋ, ಈಗ್ಗೆ ಆರುತಿಂಗಳುಗಳಿಂದಾರ

ಆಶೆಯಲ್ಲಿ ಸರಳೆಯು ಜೀವನ ಧಾರಣೆಯಂ ಮಾಡುತಿದ್ದಳೋ ಆ ಇಂದ್ರನಾಥನು ಈಗೆಲ್ಲಿ? ಬಾಲ್ಯಕಾಲದಲ್ಲಿ ಇಚ್ಛಾಮತಿ ನದಿಯ ತೀರದಲ್ಲಿ ಆವನ ಪಾರ್ಶ್ವದಲ್ಲಿ ಕುಳಿತು ಕಥೆಗಳನ್ನು ಕೇಳುತಿದ್ದಳೋ, ಕಥೆಯಂ ಕೇಳುತ ಹುಡುಗಿಯು ಪುನಃ ಆ ಮುಖವನ್ನು ನೋಡುತ್ತಿರುವಳೋ; ಯೌವನದ ಪ್ರಾರಂಭದಲ್ಲಿ ಆವ ಪ್ರೇಮಮಯನಾದವನ ಬಾಯಿಂದ ಹೊರಟ ಮಾತುಗಳನ್ನು ಸದಾ ಸರ್ವದಾ ಭಾವಿಸಿಕೊಂಡಿರುವಳೋ, ಭಾವಿಸಿಕೊಂಡು ಪುನಃ ಆವನ ಮುಖವನ್ನು ನೋಡಿ ಹೃದಯವನ್ನು ತಣ್ಗೊಳಿಸಿಕೊಳ್ಳುತಿದ್ದಳೋ, ಆ ಇಂದ್ರನಾಥನು ಇಂದೆಲ್ಲಿ? ರುದ್ರಪುರದ ಕುಟೀರದ ಪಾರ್ಶ್ವದಲ್ಲಿ ಬೆಳದಿಂಗಳಲ್ಲಿ ಇಂದ್ರನಾಥನು ಬೀಳ್ಕೊಂಡು ಹೋದನು, ಆ ಇಂದ್ರನಾಥನು ಇಂದೆಲ್ಲಿ? ಅಕಟಕಟಾ! ಅವನೂ ಪಕ್ಷವನ್ನು ವಿಸ್ತರಿಸಿಕೊಂಡು ಹಾರಿಹೋಗಿ ಅನಂತವಾದ ಸಂಸಾರಾಕಾಶದಲ್ಲಿ ವಿಚರಣಮಾಡುತಿದ್ದಾನೆ!!

ಸರಳೆಯು ಯೋಚಿಸಿ ಯೋಚಿಸಿ ಜ್ಞಾನಹೋದವಳಾದಳು, ತಲೆಯು ತಿರುಗಿದಂತಾಯಿತು, ಆದರೆ ಕಣ್ಣುಗಳಲ್ಲಿ ನೀರಿಲ್ಲ. ಬಾಲೆಯ ಹೃದಯದಲ್ಲಿ ಅಂದು ಉಂಟಾಗಿದ್ದ ಯಾತನೆಯು ಕಣ್ಣೀರಿನಿಂದ ನಿವಾರಣೆಯಾಗಲಿಲ್ಲ. ಜೀವನಲ್ಲಿ ಆಸೆಯಿರುವತನಕ ಜೀವನವು ಸಹನೀಯವಾಗಿರುವುದು, ಆದರೆ ಸರಳೆಯ ಹೃದಯದಲ್ಲಿದ್ದ ಆಶೆಗಳೆಲ್ಲವೂ ಒಂದೊಂದಾಗಿ ತಿರೋಹಿತವಾಗಿದ್ದುವು, ಪ್ರಪಂಚವು ಅವಳಿಗೆ ಶೂನ್ಯವಾಗಿದ್ದಿತು, ಸಂಸಾರವು ತಮೋಮಯವಾಗಿದ್ದಿತು, ಒಂದೊಂದಾಗಿ ನಾಟ್ಯಶಾಲೆಯ ದೀಪಗಳು ನಿರ್ವಾಣವಾಗಿ ಹೋದುವು, ಸರಳೆಯು ಮೆಲ್ಲಮೆಲ್ಲನೆ ಆ ನಾಟ್ಯಶಾಲೆಯನ್ನು ಬಿಟ್ಟುಹೋಗಬೇಕೆಂಬ ಆಶೆಯಿಂದ ಅಲ್ಲಿ ಕುಳಿತಿದ್ದಳು.

ಆದರೆ ನಮ್ಮ ಸುಖಸೌಭಾಗ್ಯದ ಮಧ್ಯೆ ಅನೇಕ ಸಮಯಗಳಲ್ಲಿ ವಿಪತ್ತುಂಟಾಗುವುದು, ಮತ್ತೂ ನೈರಾಶ್ಯದ ಮಧ್ಯದಲ್ಲಿಯೂ ಆಶೆಯ ಸಂಚಾರವುಂಟಾಗುವುದು, ಸರಳೆಗೆ ಆವದೋ ಒಂದು ಶಬ್ದವಾದಂತೆ ಬೋಧೆಯಾಯಿತು, ಅವಳು ಕುಟೀರವನ್ನು ಬಿಟ್ಟು ಹೊರಗೆ ಬಂದು ನೋಡಿದಳು, ಆದರೆ ನಿಬಿಡವಾಗಿದ್ದಾ ಅಂಧಕಾರದಲ್ಲಿ ಆವದೂ ಕಾಣದು. ಬೇರೆ ದಿನವಾಗಿದ್ದರೆ ಸರಳೆಯು ಹೆದರುತಿದ್ದಳು, ಆದರೆ ಅಂದು ಹುಡುಗಿಯ ಹೃದಯದಲ್ಲಿ ಭಯದ ಲವಲೇಶವಿರಲಿಲ್ಲ.

ಆ ಸಮಯದಲ್ಲಿ ಉಜ್ವಲವಾದೊಂದು ಮಿಂಚು ಮಿನುಗಿತು. ಆ ಬೆಳಕಿನಲ್ಲಿ ಸರಳೆಯು ತನ್ನೆದುರಿಗೆ ಏನನ್ನು ನೋಡಿದಳು? ಸರಳೆಯೆದುರಿಗೆ, ಹತ್ತು ಅಡಿಗಳ ದೂರದಲ್ಲಿ ಒಬ್ಬ ಮನುಷ್ಯನ ಆಕೃತಿ! ದೀರ್ಘವಾದ ಆಕೃತಿ, ದೀರ್ಘವಾದ ಬಾಹು, ಉನ್ನತವಾಗಿದ್ದಾ ಲಲಾಟದ ಮೇಲೆ ಯೋದ್ಧನ ಉಷ್ಣೀಷ, ಕಟಿಯಲ್ಲಿ ಕತ್ತಿ! ಆಕೃತಿ, ಆ ವದನಮಂಡಲ ಉಜ್ವಲವಾಗಿದ್ದಾ ಕಣ್ಣುಗಳು ಸರಳೆಗೆ ಅಪರಿಚಿತವಾದವಾಗಿರಲಿಲ್ಲ! ಮುಹೂರ್ತದೊಳಗೆ ಸರಳೆಯ ಪತನೋನ್ಮುಖ

ವಾಗಿದ್ದ ಕಂಪಿತ ದೇಹವನ್ನು ಸೇನಾಪತಿ ಇಂದ್ರನಾಥನು ಹೃದಯದಲ್ಲಿ ಧಾರಣೆ ಮಾಡಿದನು !!!

ಮಾರನೆಯ ದಿನ ಬೆಳಿಗ್ಗೆ ಇಂದ್ರನಾಥನು ತನ್ನ ಹಡಗಿನಿಂದ ಕೆಲವುಮಂದಿ ಸೈನಿಕರನ್ನು ಕರೆಯಿಸಿ, ರಾಜಾ ಟೋಡರಮಲ್ಲನ ಅಪ್ಪಣೆಯಂತೆ ಶಕುನಿಯನ್ನು ಬಂದಿಯಾಗಿ ಹಿಡಿದು ಕರೆದುಕೊಂಡು ಇಚ್ಛಾಪುರಾಭಿಮುಖವಾಗಿ ಹೊರಟನು. ಸ್ವಯಂ ರಾಜಾ ಟೋಡರಮಲ್ಲನು ಕೂಡಲೇ ಇಚ್ಛಾಪುರದಲ್ಲಿ ಸುರೇಂದ್ರನಾಥನ ಭದ್ರಾಸನಕ್ಕೆ ಬರುವನೆಂದು ಸುದ್ದಿಯು ಬಂದಿದ್ದಿತು. ಮಹಾಶ್ವೇತೆ, ಸರಳೆ, ವಿಮಲೆ ಇವರು ಒಂದು ಹಡಗಿನಲ್ಲಿ ಹೊರಟರು. ಅಂದು ಸಂಧ್ಯೆಯ ಸಮಯದಲ್ಲಿ ಇಚ್ಛಾಪುರವನ್ನು ತಲಪಿ ಇಂದ್ರನಾಥನು ತಂದೆಯ ಚರಣಗಳಿಗೆರಗಿ ತಂದೆಯ ಚಿಂತೆಯನ್ನು ದೂರಮಾಡಿದನು.

---

## ಮೂವತ್ತೆರಡನೆಯ ಪರಿಚ್ಛೇದ

### ಇಚ್ಛಾಪುರಕ್ಕೆ ಪ್ರತ್ಯಾಗಮನ

When wild war's deadly blast was blown,
And gentle peace returning,
With many a sweet babe fatherless,
And many a widow mourning,
I left the lines and tented field,
When long I'd been a lodger.

*Burns.*

ಬಹಳ ಕಾಲದ ಬಳಿಕ ಆತ್ಮೀಯ ಸ್ವಜನರು ಪರಸ್ಪರ ಸೇರಿ ಹೊಂದುವ ಅಪರ್ಯಾಪ್ತವಾದ ಆನಂದವನ್ನು ಕುರಿತು ವರ್ಣಿಸಿ ಮುಗಿಸಲಾಗದು. ನಗೇಂದ್ರನಾಥನು ಬಹುಕಾಲವಾದ ಬಳಿಕ ಮಗನನ್ನು ಪುನಃ ಹೊಂದಿ ಅಪಾರವಾದ ಆನಂದಸಾಗರದಲ್ಲಿ ಮುಳುಗಿದನು. ಮಗನನ್ನು ಪುನಃಪುನಃ ಆಲಿಂಗನೆ ಮಾಡಿಕೊಂಡು ಸಹಸ್ರ ಸಹಸ್ರ ಆಶೀರ್ವಾದಗಳಂ ಮಾಡಿದನು.

ವನಗ್ರಾಮದಿಂದ ಚಂದ್ರಶೇಖರನು ವಿಮಲೆಯಂ ಸಂಗಡ ಕರೆದುಕೊಂಡು ಇಚ್ಛಾಪುರಕ್ಕೆ ಬಂದನು. ರುದ್ರಪುರದಿಂದ ಅಮಲೆಯು ಗಂಡನನ್ನು ಸಂಗಡ ಕರೆತಂದಳು. ರಾಜಾ ಟೋಡರಮಲ್ಲನು ಬರುವನೆಂದು ಸುದ್ದಿಯನ್ನು ಕೇಳಿ ಎಲ್ಲಾ ಕಡೆಗಳಿಂದಲೂ ಎಲ್ಲರೂ ಇಚ್ಛಾಪುರಕ್ಕೆ ಬರುವುದಕ್ಕೆ ತೊಡಗಿದರು.

ಇಂದ್ರನಾಥನು ಜಮಾನುದಾರ ನಗೇಂದ್ರನಾಥನ ಮಗನೆಂದು ಎಲ್ಲರಿಗೂ ಗೊತ್ತಾಯಿತು. ಸರಳೆಯು ಒಂದುದಿನ ಇಂದ್ರನಾಥನನ್ನು ಕುರಿತು ಏಕಾಂತವಾಗಿ, "ನಾನು ನಿನ್ನನ್ನು ದರಿದ್ರನಾದೊಬ್ಬ ಸಾಧಾರಣ ಮನುಷ್ಯನ ಮಗನೆಂದು ತಿಳಿದು ನಿನ್ನೊಡನೆ ಸಾಮಾನ್ಯವಾಗಿ ಮಾತನಾಡುತಿದ್ದೆನು. ನೀನು ಜಮಾನುದಾರನ ಮಗನೆಂದು ತಿಳಿದ ಬಳಿಕ ನಿನ್ನ ಸಂಗಡ ಮಾತನಾಡುತಿರಲಿಲ್ಲ"ವೆಂದಳು.

ಇಂದ್ರನಾಥ—(ನಗುಮುಖವಾಗಿ) ಅದಕ್ಕೆ ಸಲುವಾಗಿ ಮೊದಲಿನ ಪ್ರೀತಿ ವಿಶ್ವಾಸಗಳನ್ನು ಮರೆಯಬೇಡ.

ಸರಳೆಯು ಮನಸ್ಸಿನಲ್ಲಿ, "ಹೇಗೆ ಮರೆಯಲಿ?" ಎಂದಂದುಕೊಂಡು ತನ್ನೊಳುತಾನೇ ತೊನೆಯುತ್ತ ಲಜ್ಜೆಯಿಂದ ತಲೆತಗ್ಗಿದವಳಾಗಿ ಬೇಗನೆ ಅಲ್ಲಿಂದ ಪಲಾಯನವಾಗಿ ಹೊರಟುಹೋದಳು.

ಅಮಲೆಯು ರುದ್ರಪುರದಲ್ಲಿ ಇಂದ್ರನಾಥನನ್ನು ಸಾಮಾನ್ಯ ಕಾಯಸ್ಥನ ಮಗನೆಂದು ಅವನೊಡನೆ ಹುಡುಗಾಟವನ್ನು ಮಾಡುತಿದ್ದಳು. ಈಗವನು ಜಮೀನುದಾರನ ಮಗನೆಂದು ತಿಳಿದು ಲಜ್ಜೆಯಿಂದ ಮಾತನಾಡಳು, ಆದರೆ ಇಂದ್ರನಾಥನು ಸ್ವಲ್ಪಕ್ಕೆ ಬಿಡತಕ್ಕವನಲ್ಲ. ಒಂದುದಿನ ಅವನಾರಿಗೂ ಹೇಳದೆ ಸಮೀನದಾಸನ ಮನೆಯೊಳಗೆ ಹೋದನು. ಅವನನ್ನು ಕಂಡು ಅಮಲೆಯು ಎರಡು ಮೊಳದುದ್ದ ಮುಖಾವರಣದ ಬಟ್ಟೆಯನ್ನು ಮುಖದ ಮೇಲೆ ಎಳೆದು ಕೊಂಡಳು!

ಇಂದ್ರನಾಥ—(ನಗುತನಗುತ) ನಿಜ, ಅದೇ ಮೊದಲ ವಿಶ್ವಾಸವಲ್ಲವೆ?

ಅಮಲೆಯು ಲಜ್ಜಿತೆಯಾದಳು, ಆದರೆ ಹುಡುಗಾಟವನ್ನು ಬಿಡಲಿಲ್ಲ, ಮುಖದಮೇಲಿನ ಬಟ್ಟೆಯೊಳಗಿಂದಲೇ, "ತಾವು ನೆರೆಯವರ ಮನೆಯನ್ನು ಹೊಕ್ಕು ಕಂಡಕಂಡ ಹೆಂಗಸರ ಸಂಗಡ ಮಾತನಾಡೋಣಾಗುತ್ತದೆ, ನಾನು ಹೋಗಿ ಸರಳೆಗೆ ಹೇಳುವೆನು" ಎಂದಳು.

ಇಂದ್ರನಾಥ—ಅಮಲೆ! ನೀನೆನ್ನನ್ನು ಪರನೆಂದು ತಿಳಿದೆ, ನಿನ್ನನ್ನು ನಾನು ಹಾಗೆ ತಿಳಿಯೆನು.

ಅಮಲೆಯು ಅಪ್ರತಿಭೆಯಾದಳು. ಅವಕುಂಠನವನ್ನು ತೆಗೆದುಬಿಟ್ಟಳು—ಬಳಿಕ, "ಕ್ಷಮಿಸು, ಇನ್ನು ಮುಂದೆ ನಿನ್ನೆದುರಿಗೆ ನಾನು ನಾಚಿಕೊಳ್ಳುವುದಿಲ್ಲ" ವೆಂದಳು. ಅಂದು ಮೊದಲ್ಗೊಂಡು ಅಮಲೆಯ ಲಜ್ಜೆಯು ಭಂಗವಾಯಿತು.

ಮಹಾಶ್ವೇತೆಯು ರಾಜಾ ಸಮರಸಿಂಹನ ಮಡದಿಯೆಂದು ತಿಳಿದು ಜನರವ ಳನ್ನು ನೋಡಿ ವಿಸ್ಮಿತರಾದರು; ಈಗಾ ಮಹಾಶ್ವೇತೆಯು ದರಿದ್ರೆಯಲ್ಲ. ರಾಜಾ ಟೋಡರಮಲ್ಲನ ಅಪ್ಪಣೆಯ ಪ್ರಕಾರ ರಾಜಾ ಸಮರಸಿಂಹನ ಸಕಲ ಅಧಿಕಾರ ವನ್ನೂ ಅವನ ಮಡದಿಯು ಹೊಂದಿದ್ದಳು.

ಎಲ್ಲರ ಸುಖವನ್ನೂ ನೋಡಿ ವಿಮಲೆಯೂ ತನ್ನ ದುಃಖವನ್ನು ಸ್ವಲ್ಪಮಟ್ಟಿಗೆ ಮರೆತಳು. ಸರಳೆಯೊಂದಿಗೆ ಅವಳ ಸ್ನೇಹವು ಪ್ರಗಾಢವಾಗಿದ್ದಿತು; ಸರಳೆಯು ಅಂದು ತಂದೆಯ ಅತುಳೈಶ್ವರ್ಯಗಳಿಗೂ ಜಮೀನುದಾರಿಗೂ ಉತ್ತರಾಧಿಕಾರಿಣಿ! ಪಾಪಾತ್ಮನಾದಾ ಶಕುನಿಯು ಅಂದು ಬಂದಿ; ಇವುಗಳನ್ನೆಲ್ಲಾ ತಿಳಿದು ವಿಮಲೆಯು ತನ್ನ ಕ್ಲೇಶವನ್ನು ಸ್ವಲ್ಪ ಮರೆತಿದ್ದಳು.

ಚಿಂತಾಶೀಲೆಯಾದ ಕಮಲೆಯೂ ಅವರೊಂದಿಗೆ ಇರುವಳು. ಅವಳು

ನಗೇಂದ್ರನಾಥನ ಮನೆಯಲ್ಲಿರುತಿದ್ದಳು, ಸ್ವಂತವಾಗಿ ಅಡಿಗೆಯಂ ಮಾಡಿ ನಗೇಂದ್ರನಾಥನಿಗೆ ಊಟವನ್ನು ಮಾಡಿಸುವಳು. ನಗೇಂದ್ರನಾಥನು ಅವಳನ್ನು ತನ್ನ ಮಗಳಂತೆ ಪ್ರೀತಿಸುತಿದ್ದನು.

ಇಚ್ಛಾಪುರದಲ್ಲಿ ಆನಂದದ ಪ್ರವಾಹವು ಪ್ರವಹಿಸುತಿದ್ದಿತು; ರಾಜಾ ಟೋಡರಮಲ್ಲನು ಬರುವನೆಂದು ಬಹಳ ಸಂಭ್ರಮಗಳು ನಡೆಯುತಿದ್ದುವು.

---

## ಮೂವತ್ತುಮೂರನೆಯ ಪರಿಚ್ಛೇದ

### ಜಮೀನುದಾರನ ಪುತ್ರ ಮತ್ತು ಪುತ್ರವಧೂ

She gazed she reddened like a rose,
Sine pale like only lily,
She sank within my arms and cried,
"Ait thou my ain deai willie?"
"By him who made yon sun and sky,
By whom true love's regarded,
I am the man, and thus may still
True lovers be rewarded.'

*Burns.*

ಸಂಧ್ಯಾಕಾಲವಾಗುವುದಕ್ಕೆ ಬರುತಿದ್ದಿತು. ಕಮಲೆಯು ಒಬ್ಬಳೇ ಭ್ರಮಣ ಮಾಡುತ್ತ ಇಚ್ಛಾಪುರಕ್ಕೆ ಹತ್ತಿರದಲ್ಲಿದ್ದ ಯಮುನಾನದಿಯ ತೀರಕ್ಕೆ ಬಂದಳು. ಒಬ್ಬಳೇ ಯಮುನೆಯ ತೀರದಲ್ಲಿ ಕುಳಿತು ಪ್ರಕೃತಿಯ ನಿಸ್ತಬ್ಧಭಾವ ವನ್ನು ನೋಡುತಿದ್ದಳು, ಘನವೃಕ್ಷಾವಳಿಯ ಮಧ್ಯೆ ಮಿನುಕುಹುಳುಗಳ ಮಾಲೆ ಗಳು ಪುಂಜಪುಂಜವಾಗಿ ಮಿನುಕುವುದನ್ನು ನೋಡುತಿದ್ದಳು—ನೀಲಾಕಾಶದಲ್ಲಿ ಒಂದೆರಡು ಶುಭ್ರವಾದ ಮೇಘಗಳು ತೇಲಿಹೋಗುತಿದ್ದುವು, ತಾಂತವಾಗಿದ್ದಾ ನದಿಯಮೇಲೆ ಅನೇಕ ಹಡಗುಗಳು ತೇಲುತಿದ್ದುವು. ರಾಜಾ ಟೋಡರಮಲ್ಲನ ಆಗಮನೋಪಲಕ್ಷ್ಯವಾಗಿ ಅನೇಕ ದೇಶಗಳ ಜನರು ಅಲ್ಲಿಗೆ ಬರುತಿದ್ದರು.

ಕಮಲೆಯು ಸರ್ವದಾ ಚಿಂತಾಶೀಲೆ, ಆದರೆ ಇಂದು ವಿಶೇಷ ಚಿಂತೆಯಿಂದ ಅಭಿಭೂತೆಯಾಗಿದ್ದಂತಿದ್ದಳು—ಆ ನದಿಯ ತೀರದಲ್ಲಿ ಕುಳಿತು ಶಾಂತವಾದವಳ ಕಣ್ಣೆತ್ತಿ ಆಕಾಶವನ್ನು ಒಂದೇ ದೃಷ್ಟಿಯಿಂದ ನೋಡುತಿದ್ದಳು. ತಾರಾವಳಿಯ ಶಾಂತವಾದ ಕಾಂತಿಯು ಶಾಂತವಾದಾ ಕಣ್ಣುಗಳ ಮೇಲೂ ಮುಖಮಂಡಲದ ಮೇಲೂ ಬೀಳುತಿದ್ದಿತು. ಹೆರಳು ಹಾಕದವಳ ಕೇಶವು ಬೆನ್ನಿನಮೇಲೆ ಲಂಬಿತ ವಾಗಿದ್ದಿತು. ಒಂದೊಂದು ತಡವೆ ಮುಖಮಂಡಲವನ್ನು ಸ್ವಲ್ಪ ಮರೆಮಾಡಿ ಕೊಂಡು ವಕ್ಷ್ಯದಮೇಲೆ ಬೀಳುವುದು, ವದನಮಂಡಲವು ಬಾಹುವಿನ ಮೇಲೆ ಸ್ಥಾಪಿತವಾಗಿದ್ದಿತು.

ಕಮಲೆಯು ಆವದನ್ನು ಕುರಿತು ಚಿಂತಿಸುತಿದ್ದಳು?

ಕಮಲೆಯು ತನ್ನ ಪೂರ್ವಕಾಲದ ವೃತ್ತಾಂತವನ್ನು ಸ್ಮರಿಸಿಕೊಳ್ಳುತಿದ್ದಳು, ತನ್ನ ಗಂಡನ ಮರಣದ ವಿಚಾರವು ನೆನವಿಗೆ ಬಂದಿತು; ದೇವಮೂರ್ತಿಯಂತಿದ್ದಾ ಗಂಡನ ಮುಖವು ಹೃದಯದಲ್ಲಿ ಜಾಗರಿತವಾಯಿತು; ಗಂಡನ ಪ್ರಣಯದಿಂದ ಹೃದಯವು ಉದ್ವೇಲಿತವಾಯಿತು! ಸಂಧ್ಯೆಯ ಸವಿಸ್ತಾರಣದೊಂದಿಗೆ ತನ್ನ ಸ್ವಾಮಿಯ ಕಂಠದಿಂದ ಹೊರಟ ಸಂಗೀತದ ಶಬ್ದವು ಬಂದಂತೆ ಬೋಧೆಯಾಯಿತು, ಸಂಗೀತದ ಶಬ್ದದಿಂದ ಚಮಕಿತೆಯಾಗಿ ಅತ್ತಕಡೆ ತಿರುಗಿ ನೋಡಿದಳು, ನದಿಯ ಮೇಲೆ ದೇವಾಕೃತಿಯುಳ್ಳೊಬ್ಬ ಮನುಷ್ಯನು ಒಬ್ಬನೇ ಒಂದು ತರಿಯನ್ನು ಹುಟ್ಟುಹೊಡೆಯುತ್ತ ನಡೆಯಿಸುತಿದ್ದನು. ಹಾಗೂ ಆಕಾಶವನ್ನು ನೋಡಿ ಕೊಂಡು ಎತ್ತಿದ ಕಂಠದಿಂದ ಸಂಗೀತವನ್ನು ಹಾಡುತಿದ್ದನು.

ಕಮಲೆಯು ಪುನಃಪುನಃ ಅತ್ತಕಡೆ ನೋಡತೊಡಗಿದಳು, ಅವಳ ಹೃದಯದಲ್ಲಿ ಸಹಸ್ರಾರು ಬಗೆಯ ಚಿಂತೆಯು ತಲೆದೋರಿತು. ನೌಕಾರೋಹಿಯು ಪುನಃ ಸಂಗೀತವನ್ನು ಪ್ರಾರಂಭಿಸಿದನು, ಆ ಸಂಗೀತದಿಂದ ಕಮಲೆಯ ಹೃದಯವು ಪುನಃ ಉದ್ವೇಲಿತವಾಯಿತು, ಕಮಲೆಯು ಒಂದು ಘಂಟೆಯಿಂದಾ ಸಂಗೀತವನ್ನು ಕೇಳುತಿದ್ದಳು. ಯೌವನದಲ್ಲಿ ಕಮಲೆಯು ಆ ಗಾನವನ್ನು ಕೇಳಿದ್ದಳು, ಆ ಗಾನದ ಪದ ಪದದಲ್ಲಿಯೂ ಮಾಧುರ್ಯವು ಜಿನಿಜಿನಿಯುತಿದ್ದಿತು; ಪದದ ಪ್ರತಿ ಅಕ್ಷರ ದಲ್ಲಿಯೂ ಅವಳ ಪೂರ್ವ ಸ್ಮರಣೆಯು ಗ್ರಥಿತವಾಗಿದ್ದಿತು? ಅದೇನು ಸ್ವಪ್ನವೇ, ಅಥವಾ ಸತ್ಯವೇ, ಅಥವಾ ಪೂರ್ವಸ್ಮೃತಿ ಮಾತ್ರವೋ?

ಆಕಾಶದಲ್ಲಿ ಚಂದ್ರನು ಹುಟ್ಟಿದನು. ಆ ನೀಲಾಕಾಶವನ್ನೂ ಆ ಅನಂತ ವೃಕ್ಷಾವಳಿಯನ್ನೂ ಆ ನದಿಯನ್ನೂ ತನಿಬೆಳಕಿನಿಂದ ಬೆಳಗುತ ಚಂದ್ರನುದಯ ನಾದನು. ತರಿಯು ತೇಲುತ್ತ ನದಿಯ ತಟಕ್ಕೆ ಹತ್ತಿರ ಬಂದಿತು, ಕಮಲೆಯು ಆ ಚಂದ್ರಾಲೋಕದಲ್ಲಿ ಆ ನೌಕಾರೋಹಿಯ ಮುಖಮಂಡಲವನ್ನು ನೋಡ ತೊಡಗಿದಳು. ಪತಿವ್ರತೆಯಾದ ನಾರಿಯು ಪತಿಯ ಕಂಠಸ್ವರವನ್ನು ಮರೆಯು ವುದಿಲ್ಲ, ಪತಿಯ ದೇವಮೂರ್ತಿಯನ್ನು ಮರೆಯುವುದಿಲ್ಲ. ಗಾಳಿಯಿಂದ ಹೊಡೆ ಯಲ್ಪಟ್ಟ ಮರದೆಲೆಯಂತೆ ಕಮಲೆಯ ದೇಹಲತೆಯು ಕಂಪಿತವಾಯಿತು, ಸ್ವಲ್ಪದ ರಲ್ಲಿಯೇ ಅವಳು ಮೂರ್ಛಿತೆಯಾಗಿ ನೆಲದಮೇಲೆ ಬಿದ್ದಳು.

ಸ್ವಲ್ಪ ಹೊತ್ತಾದ ಬಳಿಕ ಮೂರ್ಛೆತಿಳಿದು ನೋಡಿದಳು, ಅವಳ ಯೌವ ನದಾ ಹೃದಯೇಶ್ವರನು ಅವಳನ್ನು ತನ್ನ ಹೃದಯದಲ್ಲಿ ಧಾರಣೆಮಾಡಿಕೊಂಡಿ ದ್ದನು. ಜಾಗರೂಕತೆಯಿಂದ ಲಲಾಟಕ್ಕೆ ನೀರನ್ನು ತಳಿಯುತಿದ್ದನು, ಸ್ನೇಹ ದಿಂದವಳ ಓಷ್ಠವನ್ನು ಮುದ್ದಿಟ್ಟುಕೊಳ್ಳುತಿದ್ದನು, ಚಿರಕಾಲ ಹತಭಾಗಿನಿಯಾ ಗಿದ್ದಾ ಕಮಲೆಯು ಆ ಸೌಭಾಗ್ಯದ ಸ್ಪರ್ಶದಿಂದ ನಡುಗಿದಳು, ಪುನಃ ಕಣ್ಣು ಗಳನ್ನು ಮುಚ್ಚಿಕೊಂಡಳು, ಮನಸ್ಸಿನಲ್ಲಿ, ''ಭಗವಂತ! ಇದು ಸ್ವಪ್ನವಾಗಿದ್ದರೆ ಈ ಸುಖನಿದ್ರೆಯು ಜಾಗರಿತವಾಗದಿರಲಿ'' ಎಂದು ಪ್ರಾರ್ಥಿಸಿದಳು.

ಆ ತನಿಬೆಳದಿಂಗಳಲ್ಲಿ ಜನಶೂನ್ಯವಾದಾ ನದಿಯ ತೀರದಲ್ಲಿ ನಿಬಿಡವಾದಾ ವೃಕ್ಷಗಳ ಪಾರ್ಶ್ವದಲ್ಲಿ ಉಪೇಂದ್ರನಾಥನು ಎವೆಯಿಕ್ಕದ ಕಣ್ಣುಗಳಿಂದ ಬಹು ಕಾಲಕ್ಕೆ ಹಿಂದೆ ನೋಡಿದ್ದಾ ವದನ ಮಂಡಲವನ್ನು ಪುನಃಪುನಃ ನೋಡತೊಡ ಗಿದನು; ಅದೇ ಸುಂದರವಾದ ಲಲಾಟ, ಅದೇ ನಿಬಿಡ ಕೃಷ್ಣವರ್ಣದ ಭ್ರೂಯು ಗಳ, ಅದೇ ಸ್ನೇಹಪೂರ್ಣವಾದ ಚಿಂತಾಪ್ರಕಾಶಕ ನಯನಗಳು, ಅದೇ ಮಧುರ ವಾದ ಓಷ್ಠ, ಅದೇ ನಿಬಿಡಕೃಷ್ಣ ಕೇಶರಾಶಿ, ಅದೇ ಉನ್ನತ ಹೃದಯ, ಅದೇ ಸುಸೌಷ್ಠವ ಬಾಹುಗಳು—ಉಪೇಂದ್ರನಾಥನು ಬಾರಿಬಾರಿಗೂ ನೋಡುತ ಹುಚ್ಚನವನಂತಾಗಿ ತನ್ನ ಹೃದಯದ ಪ್ರತಿಮೆಯನ್ನು ಬಾರಿಬಾರಿಗೂ ಮುದ್ದಿಟ್ಟು ಕೊಂಡನು. ಜಗತ್ತಿನಲ್ಲಿ ಭಾಗ್ಯವತಿಯಾದ ಕಮಲೆಯು ದೇವಸದೃಶನಾದ ತನ್ನ ಪತಿಯನ್ನು ಹೊಂದಿದಳು! ಅವಳ ಪುಲಕಿತ ಶರೀರವು ಪತಿಯ ಆಲಿಂಗನ ದಲ್ಲಿ ಬದ್ಧವಾಗಿದೆ, ಪತಿಯ ತುಟಿಯಲ್ಲಿ ಅವಳ ತುಟಿಗಳು, ಪತಿಯ ಹೃದಯದಲ್ಲಿ ಅವಳ ಹೃದಯ!!!

ಬಹಳ ಹೊತ್ತಾದ ಬಳಿಕ ಉಪೇಂದ್ರನಾಥನು ಹೆಂಡತಿಯನ್ನೆಬ್ಬಿಸಿ, "ನಿಕುಂಜವಾಸಿನಿ ಕಮಲೆ! ನಿನ್ನ ನೌಕವು ಮುಣುಗಿಹೋದ ಬಳಿಕ ನಾನು ಬದುಕಿಕೊಂಡೆನು, ಆದರೆ ನಿನ್ನನ್ನು ಹೊಂದುವ ಆಸೆಯೆನಗಿರಲಿಲ್ಲ, ಗ್ರಾಮಕ್ಕೆ ಬಂದು ವಿಚಾರಿಸಿದೆನು, ಗ್ರಾಮದವರು ನೀನು ರೋಗದಿಂದ ಕಾಲವಾದೆಯೆಂದು ಹೇಳಿದರು" ಎಂದು ಹೇಳಿದನು.

ವಿಮಲೆ—ಹೃದಯೇಶ್ವರ! ನಿನ್ನ ಮರಣದ ವಾರ್ತೆಯನ್ನು ಕೇಳಿ ನನಗೆ ಅತಿ ಸಂಕಟಕರವಾದ ರೋಗವುಂಟಾಯಿತು, ಆದರೆ ಬಹಳ ಕಾಲಾನಂತರ ನಿಸ್ತಾರವಂ ಹೊಂದಿದೆನು. ನಿಸ್ತಾರವಂ ಹೊಂದಿದಾಗ ನಾನು ವನಗ್ರಾಮದ ಆಶ್ರಮದಲ್ಲಿದ್ದೆನು.

ಉಪೇಂದ್ರ—ಜಗದೀಶ್ವರನು ನಮ್ಮನ್ನು ರಕ್ಷಿಸಿದನು—ನೀನವನ ಪವಿತ್ರ ವಾದ ನಾಮವನ್ನು ಸ್ಮರಿಸು; ಈಗ ಬಾ ನಿನ್ನನ್ನು ನಿನ್ನ ಮಾವಂದಿರ ಮನೆಗೆ ಕೊಂಡೊಯ್ವೆನು.

ಕಮಲೆ—ನನಗೆ ಮಾವಂದಿರ ಮನೆಯೆಲ್ಲಿದೆ?

ಉಪೇಂದ್ರನಾಥನು ಕಮಲೆಯನ್ನು ಕರಕೊಂಡು ಜಮಿಾನುದಾರ ನಗೇಂದ್ರ ನಾಥನ ಮನೆಗೆ ಹೋದನು—ವಿಚಾರವೆಲ್ಲಾ ವಿವರವಾಗಿ ಪ್ರಕಾಶವಾದ ಬಳಿಕ, ಮನೆಯಲ್ಲಿ ಉಂಟಾದ ತುಮುಲ ಅಲ್ಲಕಲ್ಲೋಲವನ್ನು ಕುರಿತು ಹೇಳತೀರದು. ನಾವದನ್ನು ವರ್ಣಿಸಲಸಮರ್ಥರಾಗಿದ್ದೇವೆ. ಜಮಿಾನುದಾರನ ಜ್ಯೇಷ್ಠಪುತ್ರನು ಬಹುಕಾಲಕ್ಕೆ ಹಿಂದೆ ಕಾಲವಾಗಿದ್ದನೆಂದು ಎಲ್ಲರೂ ಸ್ಥಿರಪಡಿಕೊಂಡಿದ್ದರು; ಆ ಜ್ಯೇಷ್ಠಪುತ್ರನು ಇಂದು ಮನೆಗೆ ಹಿಂದಿರುಗಿ ಬಂದನು, ಲಕ್ಷ್ಮಿಯಂತಿದ್ದ ಸೊಸೆಯು ಬಂದು ಮನೆಯನ್ನು ಬೆಳಗಿದಳು. ಆ ಸುದ್ದಿಯು ಜಮಿಾನುದಾರನ

ಮನೆಯಿಂದ ಸಮಸ್ತ ಗ್ರಾಮದಲ್ಲಿಯೂ ಗ್ರಾಮದಿಂದ ಸಮಸ್ತ ದೇಶಕ್ಕೂ ಹರಡಿಕೊಂಡಿತು. ಇಚ್ಛಾಪುರನಗರವು ಜಯಭೇರಿಯ ನಾದದಿಂದ ಪರಿಪೂರ್ಣವಾಯಿತು. ಪ್ರಾಸಾದಗಳಿಂದ ಪರ್ಣಕುಟೀರಗಳವರೆಗೂ ಎಲ್ಲವೂ ಪತಾಕಗಳಿಂದ ಪರಿಶೋಭಿತವಾದುವು, ರಾತ್ರಿ ಹಗಲು ಜನರ ಆನಂದದ ಶಬ್ದದಿಂದ ಶಬ್ದಿತವಾಗುತಿದ್ದುವು.

ವೃದ್ಧ ನಗೇಂದ್ರನಾಥನು ಜ್ಯೇಷ್ಠಪುತ್ರನನ್ನು ಬಾರಿಬಾರಿಗೂ ಆಲಿಂಗನ ಮಾಡಿಕೊಂಡು ಅಶ್ರುವಿಸರ್ಜನೆಯಂ ಮಾಡಿದನು. ಮಗಳಂತಿದ್ದ ಕಮಲೆಯು ಸೊಸೆಯೆಂದು ತಿಳಿದು ಅತ್ಯಂತ ಸಂತೋಷಭರಿತನಾಗಿ ಅವಳನ್ನು ಆಶೀರ್ವದಿಸಿದನು.

ಮಾರ್ಗದಲ್ಲಿ, ಘಾಟಿಗಳಲ್ಲಿ, ಮನೆಗಳಲ್ಲಿ, ಕುಟೀರಗಳಲ್ಲಿ, ಆನಂದ ಘೋಷವೂ ಶಂಕಧ್ವನಿಯೂ ಆಗತೊಡಗಿದುವು. ಪುರವಾಸಿಗಳು ಉಪೇಂದ್ರನಾಥನಮೇಲೆ ಪುಷ್ಪವೃಷ್ಟಿಯನ್ನು ಮಾಡಿದರು, ಪ್ರಭಾತದಿಂದ ಸಂಧ್ಯೆಯವರಿಗೂ ಸಂಧ್ಯೆಯಿಂದ ಪ್ರಭಾತದವರೆಗೂ ಪುರಜನರ ಹಾಗೂ ಪುರನಾರಿಯರ ಆನಂದ ಲಹರಿಯು ಪ್ರವಹಿಸುತಿದ್ದಿತು.

ಮಾರನೆಯ ದಿನ ಬೆಳಿಗ್ಗೆ ಸುರೇಂದ್ರನಾಥನು ಹೋಗಿ ಅಣ್ಣನ ಕಾಲಿಗೆರಗಿ ಅಶ್ರುಲೋಚನನಾಗಿ, ''ಅಣ್ಣ! ನಿನ್ನ ಅಜ್ಞಾತವಾಸದಲ್ಲಿ ಮಾಂಗೀರಿನಲ್ಲಿ ನಿನ್ನನ್ನು ಕುರಿತು ಕೆಲವು ಅಶ್ರದ್ಧೆಯನ್ನು ತೋರಿರುವೆನು, ನೀನು ಕ್ಷಮಿಸು, ನನಗೆ ತಿಳಿಯದು, ಭ್ರಮೆಯಿಂದದು ನಡೆದಿದೆ'' ಎಂದು ಹೇಳಿದನು.

ಉಪೇಂದ್ರನಾಥ—ಸುರೇಂದ್ರನಾಥ! ಕ್ಷಮೆಯನ್ನು ಬೇಡ ಆವಶ್ಯಕವಿಲ್ಲ; ಪ್ರಪಂಚದಲ್ಲಿ ನಿನ್ನಂತಹ ಸೋದರನು ದುರ್ಲಭ, ನಿನ್ನ ಸಾಹಸ, ವೀರತ್ವ, ಯುದ್ಧ ಕೌಶಲಗಳ ಯಶಸ್ಸಿನಿಂದ ವಂಗದೇಶವೇ ಪರಿಪೂರ್ಣವಾಗಿರುವಂತೆ ನಿನ್ನ ದಯೆ ಪ್ರಜಾವಾತ್ಸಲ್ಯತೆ ಮುಂತಾದ ಸದ್ಗುಣಗಳಿಂದ ನಮ್ಮ ದೇಶವು ತುಂಬ ಆನಂದಿತವಾಗಿದೆ. ಧನವನ್ನೂ ಅಧಿಕಾರವನ್ನೂ ಉಳ್ಳವರು ನಿನ್ನಂತೆ ನಿಷ್ಕಪಟರಾಗಿದ್ದರೆ ಇದೇ ಭೂಮಿಯು ಸ್ವರ್ಗವಾಗಿ ಪರಿಣಮಿಸುವುದು.

# ಮೂವತ್ತುನಾಲ್ಕನೆಯ ಪರಿಚ್ಛೇದ

## ವಿಚಾರ

Behold where stands
The usurper's cursed head. *Shakespeare.*

ರಾಜಾ ಟೋಡರಮಲ್ಲನು ಇಂದು ಇಚ್ಛಾಪುರಕ್ಕೆ ಬಂದಿದ್ದಾನೆ, ಇಚ್ಛಾಪುರದ ನಿವಾಸಿಗಳೆಲ್ಲರೂ ಇಂದು ಆನಂದದಿಂದ ಮತ್ತರಾಗಿದ್ದಾರೆ.

ವಿಸ್ತೀರ್ಣವಾದೊಂದು ಕ್ಷೇತ್ರದಲ್ಲಿ ರಾಜನ ಸಭೆ. ಮೇಲೆ ದೊಡ್ಡ ಚಂದ್ರಾತಪ, ಪಟ್ಟವಸ್ತ್ರದಿಂದ ನಿರ್ಮಿತವಾಗಿದ್ದಾ ಚಂದ್ರಾತಪವು ಜರಿಗಳಿಂದ ಮಂಡಿತವಾಗಿ ಕಣ್ಣುಗಳನ್ನು ಜಳಪಿಸುತಿದೆ, ಆ ಚಂದ್ರಾತಪದಿಂದ ನೆಲವನ್ನು ಮುಟ್ಟುವಹಾಗೆ ಸುಂದರವಾದ ಸುಗಂಧವುಳ್ಳ ಹೂವಿನ ದಂಡೆಗಳು ಇಳಿಬಿದ್ದು ತೂಗಾಡುತ್ತಿವೆ, ಬಿಳ್ಪು, ಹಳದಿ, ನೀಲಿ, ಕೆಂಪು ಮುಂತಾದ ಬಣ್ಣಗಳ ಹೂವುಗಳಿಂದಾ ಚಂದ್ರಾತಪವು ಮತ್ತೂ ಹೆಚ್ಚಾಗಿ ಶೋಭಿಸುತ್ತಿದೆ, ನೆಲಕ್ಕೆ ದೊಡ್ಡ ಹಾಸುಸಜ್ಜೆಯನ್ನು ಹಾಸಿದೆ, ಅದರಮೇಲೆ ಪಾರಸೀದೇಶದ ರತ್ನಗಂಬಳಿ, ಅದರಲ್ಲಿ ಸುಂದರವಾದ ಹೂವುಗಳೂ ಸುಂದರವಾದ ಲತೆಗಳೂ ಅಪೂರ್ವವಾದ ಎಲೆಗಳೂ ಚಿತ್ರಿತವಾಗಿವೆ. ಅವು ಅತಿಸುಂದರವಾಗಿ ಕಾಣುತ್ತ ಆ ಪುಷ್ಪಲತೆಗಳ ಮೇಲೆ ಒಮ್ಮೊಂದೊಮ್ಮೆ ಕಾಲಿಡುವುದಕ್ಕೆ ಸಂಕೋಚವಾಗುವುದು. ಸಭೆಯ ಮಧ್ಯಪ್ರದೇಶದಲ್ಲಿ ದಂತದಿಂದಲೂ ಬೆಳ್ಳಿಯಿಂದಲೂ ನಿರ್ಮಿತವಾಗಿ ಸುವರ್ಣದಿಂದಲಂಕೃತವಾಗಿದ್ದೊಂದು ಸಿಂಹಾಸನ, ಅದರ ಸುತ್ತು ಯೋಧ್ಧರೂ ಜಮೀನುದಾರರೂ ಸೇರಿದ್ದಾರೆ—ಮಧ್ಯೆ ಮಧ್ಯೆ ಸ್ತೂಪಾಕಾರವಾಗಿ ಸುಂದರ ಪುಷ್ಪಗಳು ಸಜ್ಜಿತವಾಗಿವೆ, ನಾಲ್ಕೂಕಡೆ ಭೃತ್ಯರು ಬಹುಮೂಲ್ಯವುಳ್ಳ ವಸ್ತ್ರಗಳಿಂದ ಶೋಭಿತರಾಗಿ ಚಾಮರ ವ್ಯಜನಗಳನ್ನು ಬೀಸುತಿದ್ದಾರೆ, ಯೋಧ್ಧರೂ ಜಮೀನುದಾರರೂ ಸುವರ್ಣಖಚಿತವಾದ ಬಹುಮೂಲ್ಯವುಳ್ಳ ವಸ್ತ್ರಗಳಿಂದಲೂ ರತ್ನಖಚಿತವಾದ ಆಭರಣಗಳಿಂದಲೂ ಅಲಂಕೃತರಾಗಿ ಕಣ್ಣೊಳಿಸುತಿದ್ದರು.

ಸಭೆಯ ಮೂರುಕಡೆಗಳಲ್ಲಿಯೂ ಪದಾತಿಗಳು ರಣಸಜ್ಜದಿಂದ ಸಜ್ಜಾಗಿ ನಿಂತಿದ್ದಾರೆ, ಅವರಿಗೆ ಹಿಂದುಗಡೆ ಕುದುರೆ ರಾಹುತರು ಬರೆಕಿತ್ತ ಕತ್ತಿಯುಳ್ಳ ಹಸ್ತರಾಗಿ ಪ್ರಸ್ತರಪುತ್ತಳಿಗಳಂತೆ ನಿಸ್ಪಂದರಾಗಿ ನಿಂತಿದ್ದಾರೆ—ಪುನಃ ಅವರಿಗೆ ಹಿಂದುಗಡೆ ಅನೇಕ ವಿಧವಾಗಿ ಅಲಂಕೃತವಾದ ಆನೆಗಳು ಸಾಲಿಟ್ಟು ನಿಂತಿವೆ—ಹೀಗೆ ಸಭೆಯು ಮೂರುಕಡೆಗಳಲ್ಲಿಯೂ ಸೈನ್ಯ ಸಾಮಂತರಿಂದ ಸುತ್ತುವರಿಯಲ್ಪಟ್ಟಿದೆ. ಎದುರಿಗೆ ರಾಜನು ಬರುವುದಕ್ಕೆ ಸಲುವಾಗಿ ಪ್ರಶಸ್ತವಾಗಿದ್ದೊಂದು ಮಾರ್ಗ; ಮಾರ್ಗವು ಕೆಂಬಣ್ಣದ ಮಕಮಲಿಂದ ಮಂಡಿತವಾಗಿದೆ, ಆ ಮಾರ್ಗದ ಉಭಯ ಪಾರ್ಶ್ವಗಳಲ್ಲಿಯೂ ಪುನಃ ಸೈನ್ಯವು ಅದೇ ರೀತಿಯಾಗಿ ಸನ್ನಿವೇಶಿತವಾಗಿದೆ, ಸಮೀಪದಲ್ಲಿ ಧ್ವಜವಹ ಪದಾತಿಕರು ಪತಾಕಹಸ್ತರಾಗಿ ನಿಂತಿದ್ದಾರೆ.

ಅವರಿಗೆ ಹಿಂದುಗಡೆ ಅಶ್ವಾರೋಹಿಗಳು ಕೃಪಾಣಪಾಣಿಗಳಾಗಿ ನಿಂತಿದ್ದಾರೆ— ತರುಣ ಅರುಣ ಕಿರಣದಲ್ಲಿ ನಿಷ್ಕೋಷಿತವಾಗಿದ್ದವರ ಖಡ್ಗಗಳು ಝಳಝಳ ಜಳಪಿಸುತ್ತಲಿವೆ, ಬೆಳಗಿನ ತಂಗಾಳಿಯಲ್ಲಿ ಉಚ್ಚವಾಗಿದ್ದಾ ಪತಾಕಗಳೆಲ್ಲವೂ ಪಟಪಟ ಶಬ್ದಮಾಡುತ್ತ ಹಾರುತ್ತಿವೆ—ನೂರಾರು ಯುದ್ಧಕ್ಷೇತ್ರಗಳಲ್ಲಿ ಹಾರು ತಿದ್ದ ಜಯಪತಾಕಗಳು ಇಂದಾ ಇಚ್ಛಾಪುರದಲ್ಲಿ ಹಾರುತಿದ್ದುದನ್ನು ನೋಡಿ ನಿವಾಸಿಗಳೆಲ್ಲರೂ ಆನಂದದಲ್ಲಿ ನಿಮಗ್ನರಾಗಿದ್ದರು, ಯೋದ್ಧರ ಹೃದಯವು ಸಾಹಸ ಉತ್ಸಾಹಗಳಿಂದ ತುಂಬಿದ್ದಿತು.

ಚೆನ್ನಾಗಿ ಸೂರ್ಯೋದಯವಾದ ಬಳಿಕ ರಾಜಾ ಟೋಡರಮಲ್ಲನು ಸಭೆಗೆ ಬಿಜಯಂಗೈದುದನ್ನು ಕಂಡು ಸಭಾಸದರೆಲ್ಲರೂ ಏಕಕಂಠವಾಗಿ, "ಮಹಾರಾಜ ರಿಗೆ ಜಯವಾಗಲಿ!" ಎಂದು ಜಯಘೋಷಣೆಯಂ ಮಾಡಿದರು. ಅವರು ಘೋಷಣಮಾಡಿ ನಿಸ್ತಬ್ಧರಾದ ಬಳಿಕ ಸೈನ್ಯದವರು ಕ್ರಮಾನ್ವಯವಾಗಿ ಉಚ್ಚ ಸ್ವರದಿಂದಾ ಜಯಸ್ತುತಿಯನ್ನು ಉಚ್ಚರಿಸಿದರು. ಆ ಜಯನಾದವು ನಾಲ್ಕೂ ದಿಕ್ಕುಗಳಲ್ಲಿದ್ದ ಗ್ರಾಮಾಂತರದವರೆಗೂ ಕೇಳಿತು. ದಿಗಂತ ವ್ಯಾಪಿಯಾದಾ ಮೇಘಗರ್ಜನೆಯು ಗಿರಿ ಗುಹೆಗಳಲ್ಲಿ ಬಾರಿಬಾರಿಗೂ ಪ್ರತಿಧ್ವನಿತವಾದಂತೆ ಕೇಳಿತು.

ರಾಜನು ಮೆಲ್ಲಮೆಲ್ಲನೆ ಸಭೆಗೆ ಬರುತಿದ್ದನು. ಅವನಿಗೆ ಬಲಗಡೆ ನಗೇಂದ್ರ ನಾಥ ಮತ್ತು ಉಪೇಂದ್ರನಾಥ ಇವರಿಬ್ಬರಿದ್ದರು, ಮತ್ತೊಂದು ಕಡೆ ಸುರೇಂದ್ರ ನಾಥ—ಅವರಿಗೆ ಬೆಂಬಳಿ ಸ್ವಲ್ಪ ಸರಿದು ಇತರ ಖ್ಯಾತಿಸಂಪನ್ನರಾದ ಜಮೀನು ದಾರರೂ ಸೈನಿಕಪುರುಷರೂ ಮನ್ನಣೆಯಿಂದ ಮೆಲ್ಲಮೆಲ್ಲನೆ ಬೆಂಬಳಿಸಿ ಬರು ತಿದ್ದರು—ರಾಜನು ಬಿಜಯಂಗೈದು ಬಂದು ಸಿಂಹಾಸನದ ಮೇಲೆ ಕುಳಿತನು.

ಕೂಡಲೆ ಒಮ್ಮೆಗೆ ನೂರಾರು ಜಯಭೇರಿಯಿಂದ ರಣವಾದ್ಯಕ್ಕೆ ತೊಡ ಗಿತು. ದಿಗಂತವ್ಯಾಪಿಯಾಗಿ ಸುಶ್ರಾವ್ಯವಾದಾ ಗಂಭೀರ ರಣವಾದ್ಯವು ಗ್ರಾಮ ಗ್ರಾಮದಲ್ಲಿಯೂ ಕೇಳಿಬಂದು ನಿರ್ಮಲವಾದ ಪ್ರಾತಃಕಾಲದ ನೀಲಗಗನ ಮಂಡಲಕ್ಕೇರಿಹೋಯಿತು. ಆ ಶಬ್ದವನ್ನು ಕೇಳಿ ಸೈನಿಕರಿಗೆ ರಣಕ್ಷೇತ್ರದ ನೆನವು ಬಂದಿತು, ಒಮ್ಮೆಗೆ ಸಹಸ್ರಾರು ಕತ್ತಿಗಳು ಝಂಝನ ಶಬ್ದದಿಂದ ಒರೆ ಯಿಂದ ಹೊರಗಾಗಿ ರವಿಕಿರಣದಲ್ಲಿ ಝಳಕಿದುವು.

ವಾದ್ಯಘೋಷವು ನಿಂತ ಬಳಿಕ ಅನೇಕ ವಿಧವಾದ ದರ್ಶನಗಳ ತೋರಿಕೆ ಗಳು ಕ್ರಮಕ್ರಮವಾಗಿ ಪ್ರದರ್ಶನವಾದುವು. ಇಂದು ದಿಲ್ಲೀಶ್ವರನ ಸೇನಾ ಪತಿಯಾದ ಅವನ ಪ್ರತಿನಿಧಿಯು ವಂಗದೇಶವನ್ನು ಜಯಿಸಿ ಇಚ್ಛಾಪುರಕ್ಕೆ ಬಂದಿ ದ್ದಾನೆ! ಇಂದು ಹಿಂದೂ ಸೇನಾಪತಿಯು ವಂಗದೇಶವನ್ನಾಳುವುದಕ್ಕೆ ಬಂದಿ ದ್ದಾನೆ!! ಆದುದರಿಂದ ವಂಗದೇಶದಲ್ಲಿ ಎಲ್ಲೆಲ್ಲಿ ಆಶ್ಚರ್ಯವಾದುದುಂಟೋ ಅದನ್ನೆಲ್ಲಾ ರಾಜನ ಸಮುಖದಲ್ಲಿ ತೋರುವುದಕ್ಕೆ ಸಲುವಾಗಿ ಅನೇಕರು

ಬಂದಿದ್ದಾರೆ, ದೂರದೇಶದಿಂದ ಖ್ಯಾತಿಸಂಪನ್ನರಾದ ವಾದ್ಯದವರೂ ಗಾಯಕರೂ ಬಂದು ತಮ್ಮತಮ್ಮ ವಿದ್ಯೆಗಳಲ್ಲಿ ನೈಪುಣ್ಯವನ್ನು ತೋರಿ ರಾಜನನ್ನೂ ಸಭಾಸದರನ್ನೂ ಸಂತೋಷಗೊಳಿಸಿದರು, ವಾಣಿಸಿಯರು ಬಂದು ತಮ್ಮ ರೂಪರಾಶಿಯನ್ನು ವಿಸ್ತರಿಸುತ್ತ ತಮ್ಮ ತಮ್ಮ ನಾಟ್ಯನೈಪುಣ್ಯವನ್ನು ತೋರಿ ಎಲ್ಲರನ್ನೂ ಮೋಹಗೊಳಿಸಿ ಎಲ್ಲರ ಹೃದಯವನ್ನೂ ಅಪಹರಣ ಮಾಡಿದರು. ಐಂದ್ರಜಾಲಕರು ಬಂದು ವಿಚಿತ್ರವಾದ ತಮ್ಮ ಇಂದ್ರಜಾಲ ವಿದ್ಯೆಯನ್ನು ತೋರಿದರು, ಯೋದ್ಧರು ಬಂದು ತಮ್ಮ ಮಲ್ಲಯುದ್ಧದ ನೈಪುಣ್ಯವನ್ನು ತೋರಿದರು. ಧಾನುಷ್ಕರು ಬಂದು ವಿಸ್ಮಯಕರವಾಗಿ ಅಂಬುಗಳೆಸಿದು ತಮ್ಮ ಕಣ್ಣು ಕೈಗಳ ಚೂಟಿಯನ್ನು ತೋರಿದರು, ಎಲ್ಲದರಿಂದಲೂ ರಾಜನೂ ಸಭಾಸದರೂ ಸಂತೋಷರಾದರು.

ಬಳಿಕ ಕವಿಕಥಿಕರ ಕಥನಸತ್ಕಾರಂಭವಾಯಿತು. ಆ ಕಾಲದಲ್ಲಿ ಪಾರದರ್ಶಿಗಳಾದ ಕವಿಗಳೂ ಕಥಿಕರೂ ಬಂದು ರಾಜರ ಸಮ್ಮುಖದಲ್ಲಿ ತಮ್ಮ ತಮ್ಮ ಪಾಂಡಿತ್ಯವನ್ನು ತೋರುವ ಪದ್ಧತಿಯಿದ್ದಿತು. ಬಂದವರಲ್ಲೊಬ್ಬೊಬ್ಬರೂ ತಮ್ಮತಮ್ಮ ಪಾಂಡಿತ್ಯವನ್ನು ಪ್ರದರ್ಶನಮಾಡಿದರು, ಒಬ್ಬನು ಯುದ್ಧವರ್ಣನೆಯನ್ನು ಮಾಡಿ ಎಲ್ಲರನ್ನೂ ಉತ್ತೇಜಿತರನ್ನಾಗಿ ಮಾಡಿದನು, ಒಬ್ಬನು ದೇವದೇವಿಯರ ಸ್ತುತಿಯನ್ನು ಮಾಡಿ ಎಲ್ಲರ ಮನಸ್ಸನ್ನೂ ಭಕ್ತಿಪೂರ್ಣಮಾಡಿದನು—ಒಬ್ಬನು ಪ್ರೇಮದ ವಿಚಾರವನ್ನು ವರ್ಣಿಸಿ ಶ್ರೋತೃಗಳ ಹೃದಯವನ್ನು ದ್ರವೀಭೂತಮಾಡಿದನು, ಒಬ್ಬನು ದುಃಖದ ವಿಚಾರವಾಗಿ ಹೇಳಿ ಸಭಿಕರನ್ನು ಅಳುವಂತೆ ಮಾಡಿದನು, ಕವಿತೆಯ ಮೋಹಿನೀಶಕ್ತಿಯಿಂದ ಯೋದ್ಧರ ಹೃದಯವು ಕರಗಿ ಕಣ್ಣುಗಳಲ್ಲಿ ನೀರುತುಂಬಿತು.

ಬಳಿಕ ರಾಜನು ಅಂದು ನಡೆಯಬೇಕಾದ ಮುಖ್ಯಕಾರ್ಯವುಳಿದಿರುವುದರಿಂದ ಆಮೋದಪ್ರಮೋದಗಳು ಸಾಕೆಂದು ಹೇಳಿ, ಬಳಿಕ ಬಂದಿಯನ್ನು ಕರೆತರುವಂತೆ ಅಪ್ಪಣೆಮಾಡಿದನು.

ನಾಲ್ಕು ಮಂದಿ ಸೈನಿಕರು ಶಕುನಿಯನ್ನು ಕರೆತಂದು ನಿಲ್ಲಿಸಿದರು—ಆಗ ಸುರೇಂದ್ರನಾಥನು ಮುಂದುವರಿದು ಬಂದು ನಿಂತು ವಜ್ರನಾದದಿಂದ ಅರಿಕೆ ಮಾಡಿದನು—"ಮಹಾರಾಜ! ನಾನು ಮಹಾತ್ಮನಾದ ಸಮರಸಿಂಹನ ನಿರಾಶ್ರಯೆಯಾದ ಮಡದಿಯ ಪಕ್ಷವಾಗಿಯೂ ಆ ಮಹಾತ್ಮನ ಅನಾಥೆಯಾದ ಮಗಳ ಪಕ್ಷವಾಗಿಯೂ ನಿಂತು ಅಭಿಯೋಗವನ್ನು ಮಾಡುತ್ತೇನೆ, ಈ ನರಾಧಮನು ರಾಜಾ ಸಮರಸಿಂಹನ ಹೆಸರಿನಮೇಲೆ ಮಿಥ್ಯಾಪವಾದವನ್ನು ಹೊರಿಸಿ ಅವನಿಗೆ ಪ್ರಾಣದಂಡನೆಯನ್ನು ಮಾಡಿಸಿದನು. ನಾನು ದಿವಾನಸಾಹೇಬ ಸತೀಶಚಂದ್ರನ ಅನಾಥೆಯಾದ ಮಗಳ ಪಕ್ಷವಾಗಿಯೂ ನಿಂತು ಮತ್ತೂ ಅಭಿಯೋಗವನ್ನು ಮಾಡುವೆನು, ಈ ನರಾಧಮನು ಸತೀಶಚಂದ್ರನನ್ನು ವಧೆಮಾಡಿಸಿದನು."

ಶಕುನಿಯ ಅಪರಾಧಗಳನ್ನು ಖರೆಮಾಡಿಕೊಡುವುದಕ್ಕೆ ಸಾಕ್ಷ್ಯಗಳಿಗೆ ಅಭಾವವಿರಲಿಲ್ಲ. ಶಕುನಿಯು ಸೃಷ್ಟನೆ ಮಾಡಿದ ಕಾಗದಗಳು ಆಗ ರಾಜನ ಕೈಯಲ್ಲಿದ್ದುವು, ಅದನ್ನು ರಾಜನು ಬಾರಿಬಾರಿಗೂ ಓದುತಿದ್ದನು, ಆ ಕಾಗದಗಳು ಸಮರಸಿಂಹನು ಪಠಾನರ ಸೇನಾಪತಿಗಳ ಹೆಸರಿಗೆ ಬರೆದಂತೆ ಇದ್ದುದರಿಂದ ಆ ತಪ್ಪಿಗೆ ಸಲುವಾಗಿ ಸಮರಸಿಂಹನಿಗೆ ಪ್ರಾಣದಂಡನೆಯು ವಿಧಿಸಲ್ಪಟ್ಟಿತು. ಆದರೆ ಆ ಕಾಗದಗಳೆಲ್ಲಾ ಶಕುನಿಯ ಕೈಬರಹದಿಂದ ಬರೆಯಲ್ಪಟ್ಟವು, ಸಮರ ಸಿಂಹನ ಮೊಹರು ಹಾಕಿದ್ದಿತು, ಆ ಮೊಹರಿಗೆ ಬದಲಾಗಿ ಅದರಂತೆ ಸೃಷ್ಟನೆ ಯಾಗಿದ್ದ ಮತ್ತೊಂದು ಮೊಹರು ಶಕುನಿಯ ಮನೆಯಲ್ಲಿ ಸಿಕ್ಕಿದ್ದಿತು.

ಮಹಾಶ್ವೇತೆಯೂ ಆರುವರ್ಷಗಳ ಕಾಲ ಗ್ರಾಮದಿಂದ ಗ್ರಾಮಾಂತರಕ್ಕೆ ಶಕುನಿಯ ಗೂಢಚಾರರಿಂದ ಓಡಿಸಲ್ಪಟ್ಟುದು, ಕಡೆಗೆ ಅವಳು ಮಗಳ ಸಹಿತ ವಾಗಿ ಹಿಡಿಯಲ್ಪಟ್ಟು ಚತುರ್ವೇಷ್ಟಿತ ದುರ್ಗದಲ್ಲಿ ಬಂದಿಯಾಗಿಡಲ್ಪಟ್ಟುದು ಇವೇ ಮುಂತಾದ ವಿಷಯಗಳಲ್ಲಿ ಪ್ರಮಾಣಗಳಿಗೆ ಅಭಾವವಿರಲಿಲ್ಲ. ಮತ್ತು ಸತೀಶಚಂದ್ರನ ವಧೆಯ ವೃತ್ತಾಂತವನ್ನು ರಾಜನೇ ಸ್ವಂತವಾಗಿ ತಿಳಿದಿದ್ದನು.

ರಾಜಾ ಟೋಡರಮಲ್ಲನು ಸಿಂಹದಂತೆ ಗರ್ಜನೆಮಾಡಿ ಹೇಳಿದನು,— "ಪಾಮರ! ನಿನ್ನ ಜೀವನವು ಪಾಪರಾಶಿಯಿಂದ ಪರಿಪೂರ್ಣವಾಗಿ ತುಂಬಿದೆ, ಈಗಲೂ ಜಗದೀಶ್ವರನಲ್ಲಿ ಬೇಡಿಕೊ, ಪರಲೋಕದಲ್ಲಾದರೂ ಒಳ್ಳೆಗಲಿ, ಇಹ ಕಾಲದಲ್ಲಿ ನಿನ್ನ ಪಾಪಕ್ಕೆ ಕ್ಷಮೆಯಿಲ್ಲ."

ಶಕುನಿಯು ಮೆಲ್ಲಮೆಲ್ಲನೆ ಹೇಳಿದನು—ಮಹಾರಾಜ! ತಾವು ನನ್ನ ಶತ್ರು ಗಳ ಮಾತುಗಳನ್ನು ಕೇಳಿರೋಣಾಗಿದೆ, ನನ್ನದೊಂದು ಅರಿಕೆಯಿದೆ."

ರಾಜಾ—ಬೇಗನೆ ಅರಿಕೆಮಾಡು—ನಿನಗೆ ಹೆಚ್ಚು ಆಯುಸ್ಸು ಇಲ್ಲ.

ಶಕುನಿ—(ಗಂಭೀರವಾಗಿ) ನನ್ನ ಅಪರಾಧಗಳು ನಿಜವಾದುವೆಂದು ಪ್ರಮಾ ಣಿತವಾದರೂ, ನಾನು ಬ್ರಾಹ್ಮಣನು, ಬ್ರಾಹ್ಮಣನು ಅವಧ್ಯನು! ತಾವು ಹಿಂದೂ ಧರ್ಮದಲ್ಲಿ ಪರಮಭಕ್ತರು, ಹಿಂದೂ ಶಾಸ್ತ್ರದಲ್ಲಿ ವಿಶಾರದರು; ಹಿಂದೂ ಶಾಸ್ತ್ರಾನುಸಾರವಾಗಿ ಬ್ರಾಹ್ಮಣನು ಅವಧ್ಯನು! ಶತಸಹಸ್ರ ಅಪರಾಧಗಳನ್ನು ಮಾಡಿದರೂ ಬ್ರಾಹ್ಮಣನು ಅವಧ್ಯನು! ನಾನು ನಿರಾಶ್ರಯನಾಗಿರುವ ಬಂದಿ, ನಾನೆತ್ತ ನೋಡಿದರೂ ನನಗತ್ತ ಶತ್ರುಗಳು ಮುತ್ತಿಕೊಂಡಿರುವರು. ಆದುದ ರಿಂದ ನನ್ನ ಪಕ್ಷವಾಗಿ ಮಾತನಾಡಿ ನನ್ನನ್ನುದ್ಧಾರಮಾಡುವವರಾರೂ ಇಲ್ಲ, ತಾವೇ ನನ್ನನ್ನು ಈಗ ವಧೆಮಾಡಲೆಳಸಿದರೆ ವಧೆಮಾಡಬಲ್ಲಿರಿ, ಹಾಗೆ ವಧೆಮಾಡಿ ಸಿದರೆ ಶಾಸ್ತ್ರಕ್ಕೆ ವಿರುದ್ಧವಾದ ಕಾರ್ಯವನ್ನು ಮಾಡಿದವರಾಗುವಿರಿ! ಈಗ್ಗೆ ನಾಲ್ಕುನೂರು ವರ್ಷಗಳಿಂದ ಮುಸಲ್ಮಾನರು ಬ್ರಾಹ್ಮಣ ಧರ್ಮಕ್ಕೆ ವಿರೋಧಿ ಗಳಾಗಿ ಅಪಕೃಷ್ಟಧರ್ಮಾವಲಂಬಿಗಳಾಗಿದ್ದರೂ ಅವರಲ್ಲಿ ಬ್ರಾಹ್ಮಣ ವಧೆಯಂ ಮಾಡಿದವರಾರೂ ಇಲ್ಲವೆಂದು ತೋರುತ್ತದೆ, ತಾವೀಗ ಈಶ್ವರನ ಅನುಗ್ರಹದಿಂದ

ಹಿಂದೂ ಧರ್ಮಾವಲಂಬಿಯಾದ ಪರಮ ಧಾರ್ಮಿಕ ರಾಜರು, ವಂಗದೇಶಕ್ಕೆ ಶಾಸನಕರ್ತರಾಗಿ ಬಂದಿರುವಿರಿ; ಶಾಸ್ತ್ರವಿರುದ್ಧವಾಗಿ ಬ್ರಾಹ್ಮಣ ವಧೆಯಂ ಮಾಡುವುದು ತಮ್ಮ ಶಾಸನದ ಮೊದಲ ಕೆಲಸವಾಗಲೆ? ಮಹಾರಾಜ! ಇಂದು ಮಾಡಹೋಗುವ ಪುಣ್ಯಕಾರ್ಯದಿಂದ ಚಿರಕಾಲ ತಮ್ಮ ಯಶಸ್ಸು ಸ್ಥಾಯಿಯಾಗಿರುವುದು, ನಾನು ನಿರಾಶ್ರಯನಾದ ಬಂದಿ, ನನ್ನ ವಧೆಮಾಡುವುದೊಂದು ನಿಮಿಷದ ಕೆಲಸವಾಗಿರುವುದು, ಆದರೆ ರಾಜಾ ಟೋಡರಮಲ್ಲನ ಶುಭ್ರವಾದ ನಿಷ್ಕಳಂಕ ಯಶೋರಾಶಿಯ ಮಧ್ಯದಲ್ಲಿ ಆ ಕೆಲಸವು ಕಳಂಕಸ್ವರೂಪವಾಗಿ ನಿಲ್ಲುವುದು. ರಾಜಾ ಟೋಡರಮಲ್ಲನ ಶುಭ್ರವಾದ ಜೀವನಚರಿತದಿಂದ ದುರಪನೇಯವಾದಾ ಕಳಂಕವು ಶತಶಕಾಬ್ದಗಳಲ್ಲಿಯೂ ವಿಲೀನವಾಗದು, ಸಮಸ್ತ ಭಾರತವರ್ಷದಲ್ಲಿಯೂ ಆ ಕಳಂಕವು ರಚ್ಚೆಗಿಟ್ಟು ರಟನೆಯಾಗುವುದು, ಈಗಿನಿಂದ ನಮ್ಮ ಮಕ್ಕಳು, ಬಳಿಕ ಅವರ ಮಕ್ಕಳು, ಮೊಮ್ಮಕ್ಕಳು ಆ ಕಳಂಕವನ್ನು ಸ್ಮರಿಸಿಕೊಂಡಿರುವರು, ಸಹಸ್ರ ವರ್ಷಗಳಾದರೂ ಶಾಲೆಗಳ ಹುಡುಗರು ಹಿಂದುಸ್ಥಾನದ ಪೂರ್ವಚರಿತ್ರೆಯಲ್ಲಿ, ರಾಜಾ ಟೋಡರಮಲ್ಲನು ವಂಗದೇಶಕ್ಕೆ ಬಂದ ಬಳಿಕ ಮೊದಲು ಬ್ರಹ್ಮಹತ್ಯೆಯನ್ನು ಮಾಡಿದನೆಂದು ಓದುವರು, ಸಹಸ್ರವರ್ಷಗಳಾದರೂ ರಾಜಾ ಟೋಡರಮಲ್ಲನ ಶಾಸನದ ಕಾಲದಲ್ಲಿ, ಅದಕ್ಕೆ ಪೂರ್ವ ಮುಸಲ್ಮಾನರೂ ಮಾಡದ ಬ್ರಹ್ಮಹತ್ಯೆಯನ್ನು ರಾಜಾ ಟೋಡರಮಲ್ಲನು ವಂಗದೇಶಕ್ಕೆ ಬಂದ ಬಳಿಕ ಮೊದಲ ಕೆಲಸವಾಗಿ ಅನುಷ್ಠಿಸಿದನೆಂದು ಮುಂದುಕರು ಮಾತನಾಡಿಕೊಳ್ಳುವರು, ಮಹಾರಾಜಾ! ನನಗೆ ಪ್ರಾಣದಂಡನೆಯನ್ನು ವಿಧಿಸಲು ತಮಗೆ ಅಧಿಕಾರವುಂಟು, ಆದರೆ ದೇಶದೇಶಾಂತರಗಳಲ್ಲಿ, ಯುಗಯುಗಾಂತರಗಳಲ್ಲಿ, ತಮ್ಮಾ ಕಳಂಕವು ಅಪನೀತವಾಗದೆ ಸ್ಥಾಯಿಯಾಗಿ ನಿಲ್ಲುವುದು, ಬ್ರಹ್ಮಹತ್ಯೆಯ ರೂಪವಾದ ಮಹಾಪಾಪದಲ್ಲಿ ತಮ್ಮ ದಿಗಂತವ್ಯಾಪಿಯಾದ ಯಶೋರಾಶಿಯು ಮಲಿನವಾಗಿ ಹೋಗುವುದು.

ಅಷ್ಟೊಂದು ಹೇಳಿ ಶಕುನಿಯು ಸುಮ್ಮನಾದನು. ಅದನ್ನು ಕೇಳಿ ರಾಜನು ಚಿಂತಾಶೀಲನಾಗಿ ತಲೆಯನ್ನು ತಗ್ಗಿಸಿಕೊಂಡಿದ್ದನು. ಸಭೆಯವರೆಲ್ಲರೂ ಮಾತಿಲ್ಲದೆ ನಿಸ್ತಬ್ಧರಾಗಿದ್ದರು!

ಸಾದೀಕಖಾನನು ಎದ್ದುನಿಂತು—ಮಹಾರಾಜ! ತಾವು ಸೇನಾಪತಿಗಳು, ಸೇನಾಪತಿಯ ಧರ್ಮವನ್ನು ಮರೆಯಲಾಗದು. ತಾವು ಶಾಸನಕರ್ತನ ಧರ್ಮವನ್ನು ಮರೆಯಲಾಗದು. ದೋಷಿಯಾದವನಿಗೆ ದಂಡವಿಧಾನವನ್ನು ಮಾಡೋಣಾಗಲಿ.

ರಾಜನು ಉತ್ತರವನ್ನು ಹೇಳಲಿಲ್ಲ.

ಸುರೇಂದ್ರನಾಥ—ಗಂಡನಿಲ್ಲದ ತಾಯಿಗೂ ಅನಾಥೆಯಾದವಳ ಮಗಳಿಗೂ ತಮ್ಮನ್ನು ಬಿಟ್ಟರೆ ಬೇರೆ ಗತಿಯಿಲ್ಲ, ಅವರ ವಿಚಾರಣೆಯನ್ನು ಮಾಡೋಣಾಗಲಿ,

ದ್ರೋಹಿಯಾದವನನ್ನು ದಂಡಿಸೋಣಾಗಲಿ. ದಿವಾನ ಸತೀಶಚಂದ್ರನು ತನ್ನ ಮರಣಕಾಲದಲ್ಲಿ ತನ್ನ ಮರಣವನ್ನು ಕುರಿತು ವಿಚಾರಣೆ ಮಾಡಬೇಕೆಂದು ತಮ್ಮನ್ನು ಬೇಡಿಕೊಂಡಿದ್ದನು.

ರಾಜನು ಉತ್ತರವನ್ನು ಕೊಡಲಿಲ್ಲ.

ಸಭಾಸದರು—ಮಹಾರಾಜ! ತಾವು ಶಿಷ್ಟರನ್ನು ಪರಿಪಾಲಿಸಬೇಕು, ತಾವು ದಂಡಿಸದಿದ್ದರೆ ಆ ಮಹಾಪಾಪಿಯನ್ನು ದಂಡಿಸುವವರಾರು?

ರಾಜನು ಮಾತಾಡಲಿಲ್ಲ.

ಅಷ್ಟರೊಳಗೆ ಸಭೆಗೆ ಸ್ವಲ್ಪ ದೂರದಲ್ಲಿ ಬಹಳ ಗದ್ದಲವಾಗುತ್ತಿದ್ದುದು ಕೇಳಿ ಬಂದಿತು. ನೋಡುತ್ತಿದ್ದಹಾಗೆ ದೀರ್ಘಕಾಯೆಯಾಗಿ ಶೀರ್ಣಕಳೇಬರವುಳ್ಳ ಮಲಿನ ವಸ್ತ್ರವನ್ನುಟ್ಟು ಕೃಷ್ಣವರ್ಣದೊಬ್ಬ ಹೆಂಗಸು ಸಭೆಯ ಬಳಿ ಓಡಿಬಂದಳು. ಚೀತ್ಕಾರವನ್ನು ಮಾಡುತ್ತ ನೆಲದಮೇಲೆ ಬಿದ್ದಳು—ಅವಳಾ ಹುಚ್ಚಿ ವಿಶ್ವೇಶ್ವರಿ!

ಶಕುನಿಯು ಅದುವರೆಗೆ ಸ್ಥಿರಭಾವದಿಂದಿದ್ದನು. ಆದರೆ ಆ ಹುಚ್ಚಿಯನ್ನು ನೋಡುತ್ತಲೇ ಒತ್ತಡವೆಗೇವೇ ನಡುಗುತೊಡಗಿದನು. ಹುಚ್ಚಿಯೆದ್ದು ನಿಂತು ಹೇಳತೊಡಗಿದಳು,—ಮಹಾರಾಜ! ನನ್ನನ್ನು ರಕ್ಷಿಸಬೇಕು! ಆ ಪಾಮರನು ನನ್ನ ತಾಯಿಯನ್ನು ವಧೆಮಾಡಿದನು, ನಾನದನ್ನು ನನ್ನ ಕಣ್ಣುಗಳಿಂದ ನೋಡಿದ್ದೇನೆ, ನನ್ನ ತಾಯಿಯ ವಿಕಟವಾದಾ ಮುಖವು ಈಗಲೂ ನನ್ನ ಕಣ್ಣೆದುರಿಗೆ ನಿಂತಂತಿದೆ, ಅದನ್ನು ಕುರಿತು ವಿಚಾರಣೆ ಮಾಡಬೇಕೆಂದು ಬೇಡುತ್ತೇನೆ.

ಅದನ್ನು ಕೇಳಿ ಸಭೆಯಲ್ಲಿದ್ದವರೆಲ್ಲರೂ ನಿಬ್ಬೆರಗಾದರು. ಪ್ರಶ್ನೆಮಾಡಿದುದರಮೇಲೆ ಹುಚ್ಚಿ ಎದ್ದುನಿಂತು ತನ್ನ ವಿವರಣೆಯನ್ನು ಹೇಳತೊಡಗಿದಳು.

ಹುಚ್ಚಿಯು ಗೊಲ್ಲರ ಜಾತಿಯ ಹೆಂಗಸು. ಅವಳ ತಾಯಿಯು ಗ್ರಾಮದಲ್ಲೆಲ್ಲಾ ಸುಂದರಿಯಾದವಳಾಗಿದ್ದಳು, ಸುಂದರಿಯಾಗಿದ್ದಾ ಗೊಲ್ಲರ ವಿಧವೆಯನ್ನು ಕಂಡು ಬ್ರಾಹ್ಮಣನೊಬ್ಬನು ಮೋಹಿತನಾದನು. ಅವನಿಗೆ ಆ ಆಭೀರಿಯ (ಗೋಪಸ್ತ್ರೀಯ) ಹೊಟ್ಟೆಯಲ್ಲಿ ಶಕುನಿಯು ಹುಟ್ಟಿದನು.

ಶಕುನಿಯ ತಂದೆಯು ಜೀವಿತನಾಗಿದ್ದ ತನಕ ಅವನಾ ಗೋಪವನಿತೆಯನ್ನೂ ಅವಳ ಮೊದಲ ಗಂಡನಿಗೆ ಹುಟ್ಟಿದ್ದ ಹುಚ್ಚಿ ವಿಶ್ವೇಶ್ವರಿಯನ್ನೂ ಅನ್ನ ಬಟ್ಟೆಗಳನ್ನು ಕೊಟ್ಟು ಸಾಕುತಿದ್ದನು. ಆ ಮನುಷ್ಯನು ಸತ್ತ ಬಳಿಕ ಸತ್ತವನು ಬಿಟ್ಟಿದ್ದ ಸ್ವಲ್ಪ ಆಸ್ತಿಯನ್ನು ಶಕುನಿಯು ತೆಗೆದುಕೊಂಡನು, ಶಕುನಿಯನ್ನೆಲ್ಲರೂ ಜಾರಜನೆಂದು ಹೇಳುವರು; ಆದರಿಂದ ಶಕುನಿಯು ಚಿಕ್ಕಂದಿನಲ್ಲಿಯೇ ಮನನೊಂದು ಕ್ಷುಣ್ಣನಾದನು. ಇಮ್ಮಡಿ ವಿಧವೆಯಾಗಿದ್ದಾ ಬಡತಾಯಿಯನ್ನು ನಿಷ್ಠುರ ಮಾಡಿ ಹೊಡಿಯುವನು. ಆ ತಾಯಿಯು ಸ್ವಲ್ಪ ಕಾಲದಲ್ಲಿ ಆ ಶಾರೀರಕ ಕ್ಲೇಶದಿಂದಲೂ ಮನೋವ್ಯಥೆಯಿಂದಲೂ ರೋಗಗ್ರಸ್ಥೆಯಾದಳು, ಆ ರೋಗದಿಂದಲೇ ಪ್ರಾಣವನ್ನು ಕಳೆದುಕೊಂಡಳು. ಬಳಿಕ ವಿಶ್ವೇಶ್ವರಿಯು ಪಲಾಯನವಾಗಿ

ತಾಯಿಯ ಮರಣದಿಂದ ಹುಚ್ಚಿಯಾದಳು, ಶಕುನಿಯು ಆ ಮಹಾಪಾತಕವನ್ನು ಮಾಡಿ ಸತೀಶಚಂದ್ರನ ಮನೆಯಲ್ಲಿ ಹೋಗಿ ತಾನು ಬ್ರಾಹ್ಮಣನೆಂದು ಹೇಳಿಕೊಂಡನು.

ವಿಶ್ವೇಶ್ವರಿಯು ಪ್ರಾಣಭಯದಿಂದ ಆರಿಗೂ ಕಾಣಿಸಿಕೊಳ್ಳದೆ ಊರೂರು ಅಲೆಯುತಿದ್ದಳು. ಬಳಿಕ ಮಹಾಶ್ವೇತೆಯೂ ಸರಳೆಯೂ ವನಗ್ರಾಮದಿಂದ ಕೊಂಡೊಯ್ಯಲ್ಪಟ್ಟು ಚತುರ್ವೇಷ್ಟಿತ ದುರ್ಗದಲ್ಲಿ ಬಂದಿಯಾಗಿಡಲ್ಪಟ್ಟ ದಿನವೇ ವಿಶ್ವೇಶ್ವರಿಯೂ ಅದೇ ದುರ್ಗದಲ್ಲಿ ಸೆರೆಯಲ್ಲಿ ಸೇರಿಸಲ್ಪಟ್ಟಳು. ಶಕುನಿಯು ತನ್ನ ಜನ್ಮದ ಕಳಂಕದ ಸಮಾಚಾರವು ಹೊರಪಡುವುದೆಂಬುದರ ಮೇಲೆ ವಿಶ್ವೇಶ್ವರಿಯನ್ನು ದುರ್ಗದಲ್ಲಿ ಬಂದಿಯಾಗಿಟ್ಟಿದ್ದನು.

ಈಗ ಶಕುನಿಯು ಬಂದಿಯಾದ ಬಳಿಕ ವಿಶ್ವೇಶ್ವರಿಯು ಸೆರೆಯಿಂದ ಬಿಡುಗಡೆಯಾಗಿ ಬಂದಳು, ಆದರೆ ಸೆರೆಯಲ್ಲಿದ್ದಾಗ ಅವಳಿಗೆ ಅತಿ ಕಷ್ಟವನ್ನು ಕೊಟ್ಟಿದ್ದುದರಿಂದ ಅವಳ ಮೈಗರೆದು ಅಸ್ಥಿಚರ್ಮಗಳು ಅವಶಿಷ್ಟವಾಗಿದ್ದುವು. ಅವಳನ್ನು ನೋಡಿ, ಅವಳು ಹೇಳಿದುದನ್ನೆಲ್ಲಾ ಕೇಳಿ ಸಭೆಯಲ್ಲಿದ್ದವರೆಲ್ಲರೂ ಕ್ರೋಧದಿಂದ ಗರ್ಜನೆ ಮಾಡಹತ್ತಿದರು.

ಶಕುನಿಯು ತನಗೆ ಪರಿತ್ರಾಣವಿಲ್ಲವೆಂದು ತಿಳಿದನು. ಸ್ಥಿರಪ್ರತಿಜ್ಞನಾದ ಪ್ರಸ್ತುತಮತಿಯುಳ್ಳ ಶಕುನಿಯು ನಿರ್ಭಯನಾಗಿ ಕಡೆಯ ಉಪಾಯವನ್ನವಲಂಬಿಸಿದನು. ತನ್ನ ಬಟ್ಟೆಯಲ್ಲಿ ಬಚ್ಚಿಟ್ಟುಕೊಂಡಿದ್ದ ಸಣ್ಣದಾದ ಕೈಕೂರಿತವನ್ನು ಮೆಲ್ಲನೆ ತೆಗೆದು ಸಮಸ್ತ ಸಭೆಯ ಸಮಕ್ಷಮದಲ್ಲಿ ತನ್ನ ವಕ್ಷದಲ್ಲದನ್ನು ಕೂರಿಸಿದನು! ಛಿನ್ನವಾದ ತರುವಿನಂತೆ ಅವನ ಮೃತದೇಹವು ನೆಲದಮೇಲೆ ಬಿದ್ದಿತು!!

---

## ಮೂವತ್ತ್ಮೂರನೆಯ ಪರಿಚ್ಛೇದ

### ಅಂಗುರೀಯ ಪ್ರತಿದಾನ

Why let the sticken deer go weep,
The hart ungalled play,
While some must watch, while some must sleep,
Thus runs the world away. *Shakespeare.*

ಕೆಲವು ದಿನಗಳಾದ ಬಳಿಕ ರಾಜಾ ಟೋಡರಮಲ್ಲನು ಇಚ್ಛಾಪುರದಿಂದ ಹಿಂದಿರುಗಿ ಹೊರಟುಹೋದನು. ನಗೇಂದ್ರನಾಥನು ಜಮಾಸುದಾರಿಯ ಭಾರವನ್ನು ಮಕ್ಕಳಿಗೆ ವಹಿಸಬೇಕೆಂದು ಇಷ್ಟವುಳ್ಳವನಾದನು. ತಂದೆಯ ಅಪ್ಪಣೆಯಂತೆ ಉಪೇಂದ್ರನಾಥನು ಇಚ್ಛಾಪುರದ ಜಮಾಸುದಾರಿಯ ಭಾರವನ್ನು

ವಹಿಸಿದನು. ಸುರೇಂದ್ರನಾಥನು ಚತುರ್ವೇಷ್ಟಿತ ದುರ್ಗದ ಜಮೀನುದಾರಿಯ ಭಾರವನ್ನು ವಹಿಸಿದನು.

ಸುರೇಂದ್ರನಾಥನು ಸರಳೆಯನ್ನು ಮದುವೆಮಾಡಿಕೊಂಡನು. ಅವನು ಮೊದಲಿನಂತೆ ಪ್ರಜಾವಾತ್ಸಲ್ಯವುಳ್ಳವನಾಗಿ ಮೊದಲಿನಂತೆ ದಯಾಪರವಶನಾಗಿದ್ದನು. ಆಗಲೂ ಛದ್ಮವೇಷದಿಂದ ಗ್ರಾಮ ಗ್ರಾಮಕ್ಕೂ ಹೋಗಿ ಪ್ರಜೆಗಳ ಸ್ಥಿತಿಯನ್ನು ತಿಳಿದುಕೊಳ್ಳುವನು, ಸಾಧ್ಯವಾದಷ್ಟು ಅವರ ಸ್ಥಿತಿಯು ಏಳ್ಗೆಯಾಗುವ ಪ್ರಯತ್ನಗಳನ್ನು ಮಾಡುವನು.

ಸುರೇಂದ್ರನಾಥನು ತನ್ನ ಮೊದಲ ಸ್ನೇಹಿತನಾಗಿದ್ದ ನವೀನದಾಸನನ್ನು ತನ್ನ ದಿವಾನನನ್ನಾಗಿ ನೇಮಿಸಿದನು; ರುದ್ರಪುರದಲ್ಲಿ ಹುಚ್ಚಿ ಏಶ್ವೇಶ್ವರಿಯು ಅಮಲೆಯ ಕೈಯನ್ನು ನೋಡಿ ಹೇಳಿದ್ದ ಮಾತು ನಿಜವಾಯಿತು, ಅಮಲೆಯು ದಿವಾನನ ಗೃಹಿಣಿಯಾದಳು. ಅಮಲೆಯು ಸರಳೆಯನ್ನು ಮೊದಲಿನಂತೆ ತನ್ನ ತಂಗಿಯಂತೆ ಪ್ರೀತಿಸುವಳು, ಅವಳ ಹಳೇ ಸ್ನೇಹಿತ "ಇಂದ್ರನಾಥ"ನ ಸಂಗಡ ಮೊದಲಿನಂತೆ ಆಮೋದಾದಿ ಹುಡುಗಾಟವನ್ನು ಮಾಡುತ್ತಿರುವಳು.

ಈ ಕಥೆಯನ್ನು ಇಲ್ಲಿಗೆ ಮುಗಿಸಬೇಕೆಂದು ನಮ್ಮ ಇಷ್ಟ. ಆದರೆ ಪ್ರಪಂಚದಲ್ಲಿ ಎಲ್ಲರ ಅದೃಷ್ಟದಲ್ಲಿಯೂ ಸುಖವೇ ಉಂಟಾಗದು, ಕೆಲವರ ಅದೃಷ್ಟದಲ್ಲಿ ಸುಖವಿರುವುದು, ಕೆಲವರು ದುಃಖಿಗಳಾಗಿರುವರು, ಒಂದೆರಡು ದುಃಖದ ಮಾತುಗಳನ್ನು ಹೇಳದೆ ಕಥೆಯನ್ನು ಮುಗಿಸಲಾರೆವು.

ಶತ್ರುಜಿಘಾಂಸೆಯೇ ಮಹಾಶ್ವೇತೆಯ ಜೀವನದ ಗ್ರಂಥಿಸ್ವರೂಪವಾಗಿದ್ದಿತೆಂದು ಪಾಠಕಮಹಾಶಯರು ಬಲ್ಲರು. ಅವಳು ವೃದ್ಧಾವಸ್ಥೆಯಲ್ಲಿ ಆರುವರ್ಷಗಳ ಕಾಲ ಚಿಂತೆಯಲ್ಲಿಯೇ ಮುಣುಗಿದ್ದಳು, ಆ ಚಿಂತೆಯು ಅವಳ ಜೀವನದ ಪ್ರಕೃತಿಸ್ವರೂಪವಾಗಿ ಜೀವನಕ್ಕೆ ಅವಲಂಬನಸ್ವರೂಪವಾಗಿದ್ದಿತು. ಈಗಾ ಚಿಂತೆಯು ಮುಗಿಯಿತು. ಜೀವನದ ಗ್ರಂಥಿಯು ಶಿಥಿಲವಾಯಿತು, ಸರಳೆಗೆ ಮದುವೆಯಾದ ಬಳಿಕ ಕೆಲವು ದಿನಗಳಲ್ಲಿ ಆವ ರುಜೆಯಿಲ್ಲದೆ ಆವ ವ್ಯಥೆಯನ್ನೂ ಅನುಭವಿಸದೆ ಮಹಾಶ್ವೇತೆಯು ಮೃತ್ಯುವಿನ ಬಾಯಿಗೆ ತುತ್ತಾದಳು.

ಮತ್ತೆ ಆ ವಿಮಲೆ! ಉನ್ನತ ಚರಿತ್ರೆ, ಧರ್ಮಪರಾಯಣೆ, ರೂಪಲಾವಣ್ಯಾಸಂಪನ್ನೆ ವಿಮಲೆಗೇನಾಯಿತು? ವಿಮಲೆಯ ತಂದೆಯು ಮರಣವಾದ ದಿನವೇ ಅವಳ ಹೃದಯವು ಶೂನ್ಯವಾಯಿತು, ಅಂದಿನ ಮೊದಲ್ಗೊಂಡು ವಿಮಲೆಯ ಪಕ್ಷದಲ್ಲಿ ಜಗತ್ಸಂಸಾರವು ಅಂಧಕಾರಮಯವಾಗಿದ್ದಿತು, ಅಂದಿನ ಮೊದಲ್ಗೊಂಡು ವಿಮಲೆಗಾವ ಆಸೆಯೂ ಇಲ್ಲ, ಆವ ಭರವಸೆಯೂ ಇಲ್ಲ, ಆವ ಸುಖದ ಅಭಿಲಾಷೆಯೂ ಇಲ್ಲ, ಆವ ದುಃಖದ ಭಯವೂ ಇಲ್ಲ. ಮಾನವ ಜಾತಿಯು ಆವ ಮಾಯಾಜಾಲದಲ್ಲಿ ಜಡಿತವಾಗಿ ಜಗತ್ತಿನಲ್ಲಿ ಸುಖದುಃಖಗಳನ್ನನುಭವಿಸುವರೋ ವಿಮಲೆಗಾ ಮಾಯಾಜಾಲವು ಛಿನ್ನಭಿನ್ನವಾಗಿ ಹರಿದುಹೋಗಿದ್ದಿತು!

ವಿಮಲೆಯು ತನ್ನ ಪ್ರಿಯಸಖಿಯಾದ ಸರಳೆಗೆ ಮದುವೆಯಾದ ಬಳಿಕ ವನಗ್ರಾಮದ ಮಂದಿರಕ್ಕೆ ಹೊರಟುಹೋದಳು. ಸುರೇಂದ್ರನಾಥನು ಅವಳನ್ನು ಚತುರ್ವೇಷ್ಟಿತ ದುರ್ಗಕ್ಕೆ ಅಧಿಷ್ಠಾತ್ರಿಯಾಗಿರಬೇಕೆಂದು ಬಹಳವಾಗಿ ಬೇಡಿಕೊಂಡನು; ಸರಳೆಯು ತನ್ನ ಪ್ರಿಯಸಖಿಯ ಕೈಗಳನ್ನು ಹಿಡಿದುಕೊಂಡು ಅನೇಕ ವಿಧವಾಗಿ ಸಾಧ್ಯಸಾಧನೆಗಳನ್ನು ಮಾಡಿದಳು, ಆದರೆ ವಿಮಲೆಯು ಮೆಲ್ನಗು ಪೂಸಿದ ಮುಖದವಳಾಗಿ, "ಜಗತ್ಸಂಸಾರದಲ್ಲಿನ್ನ ಲೀಲೆಗಳು ಸಾಂಗವಾದುವು, ನೀವೆನ್ನ ಗೊಡವೆಗೆ ಬಾರದೆ ದಯೆಗೈದು ಬಿಟ್ಟುಬಿಡಿ" ಎಂದಳು. ಯತ್ನವಿಲ್ಲದೆ ಸುರೇಂದ್ರನಾಥನೂ ಸರಳೆಯೂ ವಿಮಲೆಗೆ ಬೀಳ್ಕೊಟ್ಟು ಕಳುಹಿದರು.

ವಿಮಲೆಯು ವನಗ್ರಾಮದ ಮಹೇಶ್ವರನ ಮಂದಿರಕ್ಕೆ ಹೊರಟುಹೋದಳು. ಮೈಯಲ್ಲಿ ಅರಸಿನಬಣ್ಣದ ಸೀರೆಯನ್ನುಟ್ಟಳು, ಕಂಠದಲ್ಲಿ ರುದ್ರಾಕ್ಷಮಾಲೆಯನ್ನು ಧರಿಸಿದಳು, ರಾತ್ರಿ ಹಗಲು ಮಹೇಶ್ವರನ ಸ್ತವವನ್ನು ಮಾಡುವಳು, ಮತ್ತೆ ಗ್ರಾಮದಲ್ಲಿದ್ದ ದರಿದ್ರದುಃಖಿನಿಯರಾದವರಿಗೆ ಸಾಧ್ಯಾತೀತವಾಗಿ ಸಹಾಯ್ಯವಂ ಮಾಡುತ ಪುಣ್ಯಮಯವಾದ ಜೀವನದಲ್ಲಿ ಕಾಲವನ್ನು ಕಳೆಯುತಿದ್ದಳು.

ಚಂದ್ರಶೇಖರನು ಪುಣ್ಯವತಿಯಾದಾ ತಾಪಸಿಯನ್ನು "ತಾಯಿ!" ಎಂದು ಕರೆಯುವನು, ಆಶ್ರಮದವರೆಲ್ಲರೂ ಅವಳ ದಯೆ, ವಾತ್ಸಲ್ಯ, ಪರೋಪಕಾರಿತೆ ಮುಂತಾದ ಮಹಾ ಸದ್ಗುಣಗಳನ್ನು ನೋಡಿ ಅವಳನ್ನು ಭಕ್ತಿಯಿಂದ ಪೂಜಿಸತೊಡಗಿದರು. ಆಶ್ರಮವಾಸಿನಿಯಾದಾ ವಿಮಲೆಯ ಪುಣ್ಯಜೀವನವು ಪವಿತ್ರವಾದಾ ಸುಖದಲ್ಲಿ ಅತಿವಾಹಿತವಾಗುತಿದ್ದಿತು.

ಹೀಗೆ ಕೆಲವು ತಿಂಗಳುಗಳು ಕಳೆದುವು. ಬಳಿಕ ಸರಳೆಯು ಒಂದು ದಿನ ವಿಮಲೆಯನ್ನು ನೋಡುವುದಕ್ಕೆ ಸಲುವಾಗಿ ಮಹೇಶ್ವರನ ಮಂದಿರಕ್ಕೆ ಬಂದಳು, ಪಿತನಾದ ಚಂದ್ರಶೇಖರನ ಚರಣಗಳಿಗೆರಗಿದಳು.

ಸರಳೆಯು ಯೋಗಿನಿಯ ವೇಷಧಾರಿಣಿಯಾಗಿದ್ದ ವಿಮಲೆಯ ಕೈಗಳನ್ನು ಹಿಡಿದುಕೊಂಡು ಅಶ್ರುಜಲವನ್ನು ಧಾರೆಯಾಗಿ ಸುರಿಸಿದಳು. ಬಳಿಕ ಕಣ್ಣುಗಳ ನೊರಸಿಕೊಂಡು, "ಅಕ್ಕ! ನೀನೆನ್ನ ವಿಪತ್ಕಾಲದಲ್ಲಿ, ನನ್ನ ಕಷ್ಟಕಾಲದಲ್ಲಿ, ನನ್ನನ್ನು ಅತ್ಯಾದರದಿಂದ ಪ್ರೀತಿಸುತಿದ್ದೆ, ನಾನಿಂದು ನಿನಗೆ ಸಲುವಾಗಿ ಸ್ವಲ್ಪ ಸೇವೆಯಂ ಮಾಡಲಾರೆನೆ?" ಎಂದಳು.

ಶಾಂತನಯನೆಯಾದ ಶಾಂತವದನೆಯಾದ ವಿಮಲೆಯು ಸಹಾಸ್ಯಮುಖಿಯಾಗಿ ಉತ್ತರವನ್ನು ಹೇಳಿದಳು,—"ಸರಳೆ! ನೀನು ಸ್ನೇಹಮಯಿ, ನೀನು ದಯಾಶೀಲೆ, ಆದರೆ, ನನಗೀಗಾವದರ ಆವಶ್ಯಕತೆಯುಂಟು? ನೀನು ಹೇಳು; ಶಾಂತವಾದೀ ಆಶ್ರಮಕ್ಕಿಂತ ಪ್ರಪಂಚದಲ್ಲಿ ಮತ್ತೆಲ್ಲಿ ಹೆಚ್ಚು ಸುಖಕರವಾದ ಸ್ಥಾನವಿರುವುದು? ಪಿತನಾದ ಚಂದ್ರಶೇಖರನಿಗಿಂತ ಹೆಚ್ಚು ಸ್ನೇಹಪರಾಯಣ

ರಾದ ಸ್ವಜನರನ್ನು ಮತ್ತೆಲ್ಲಿ ಹೊಂದುವೆ? ದುಃಖದ ಸಮಯದಲ್ಲಿ, ಚಿಂತೆಯ ಸಮಯದಲ್ಲಿ, ಸ್ವಯಂ ಮಹೇಶ್ವರನೇ ನನ್ನನ್ನು ಸಮಾಧಾನಗೊಳಿಸುವನು. ಅವನ ನಿಯಮಕ್ಕೆ ಸರಿಯಾಗಿ ನಡೆಯುತಿದ್ದರೆ ನಾನೀ ಜಗತ್ತಿನಲ್ಲಿ ಕ್ಲೇಶವನ್ನು ಹೊಂದೆನು; ಪರಂತು, ಶಾಂತಿಯನ್ನು ಹೊಂದುವೆನು.''

ಗೆಳತಿಯರಿಬ್ಬರಿಗೂ ನಡೆದ ಮಾತು ಕಥೆ ಪ್ರಸ್ತಾವಗಳಿಂದ ಹಗಲೆಲ್ಲ ಕಳೆಯಿತು, ಆಶ್ರಮದಲ್ಲಿ ಸರಳೆಯು ಮೊದಲು ಎಲ್ಲೆಲ್ಲಿ ಹೋಗಿ ತಿರುಗಾಡು ವುದಕ್ಕೆ ಇಷ್ಟವಾಗಿದ್ದಳೋ ಪ್ರಿಯಸಖಿ ವಿಮಲೆಯೊಂದಿಗೆ ಅಲ್ಲಲ್ಲಿಗೆ ಹೋಗಿ ಬಂದಳು.

ಸಂಧ್ಯೆಯ ಸಮಯದಲ್ಲಿ ಸರಳೆಯು ವಿಮಲೆಯಿಂದ ಬೀಳ್ಕೊಂಡು ಪಲ್ಲಕ್ಕಿಯನ್ನೇರಿದಳು. ವಿಮಲೆಯು ಸಖಿಯೊಂದಿಗೆ ಪಲ್ಲಕ್ಕಿಯವರೆಗೆ ಬಂದು ನಗುತ, "ಸರಳೆ! ನೀನೀಗ ರಾಜರಾಣಿ, ದರಿದ್ರ ಆಶ್ರಮವಾಸಿನಿಯ ಜ್ಞಾಪ ಕವು ನಿನಗಿರುವುದೆ?'' ಎಂದಳು.

ಸರಳೆ—ಅಕ್ಕ! ನಿನ್ನನ್ನೆಂದಿಗಾದರೂ ಮರೆಯಬಲ್ಲೆನೆ?

ವಿಮಲೆ—ನಿನ್ನ ಶರೀರವೇ ಸ್ನೇಹಮಯವಾದುದು, ನೀನೆನ್ನನ್ನೆಂದಿಗೂ ಮರೆಯಲಾರೆಯೆಂದು ಬಲ್ಲೆನು. ಆದರೂ ನನ್ನದೊಂದು ಸ್ಮರಣಾಚಿಹ್ನೆಯು ನಿನ್ನಲ್ಲಿರಲಿ, ಅದಕ್ಕೊಪ್ಪದಿರಬೇಡ.

ಹೀಗೆಂದು ಹೇಳಿ ವಿಮಲೆಯು ತನ್ನ ಕಂಠದ ಮಾಲೆಯಿಂದೊಂದು ಬಂಗಾರದ ಉಂಗುರವನ್ನು ಬಿಚ್ಚಿ ತೆಗೆದು ಸರಳೆಯ ಬೆರಳಿಗದನ್ನು ತೊಡಿಸಿದಳು. ಸರಳೆಯು ಅಚ್ಚರಿಗೊಂಡು, "ಇದೇನು, ಅಕ್ಕ! ಇದು ಬಂಗಾರದುಂಗುರ! ನಾನದನ್ನು ತೆಗೆದುಕೊಳ್ಳೆನು, ನಿನ್ನ ತಂದೆಯ ಆಸ್ತಿಯಲ್ಲಿ ನಿನಗೆ ಉಳಿದಿರುವ ಒಂದೆರಡು ಒಡವೆಗಳನ್ನು ನಾನು ತೆಗೆದುಕೊಳ್ಳಲೆ? ಅವೆಲ್ಲಾ ನಿನ್ನಲ್ಲಿರುವುದಕ್ಕೆ ತಕ್ಕುವು'' ಎಂದಳು.

ವಿಮಲೆ—(ನಕ್ಕು) ಸರಳೆ! ಆ ಉಂಗುರವು ನನ್ನ ಪೈತ್ರಿಕ ಸಂಪತ್ತಿಯಲ್ಲ, ಅದನ್ನಿಟ್ಟುಕೊಳ್ಳುವುದಕ್ಕೆನಗೆ ಅಧಿಕಾರವಿಲ್ಲ, ನೀನದಕ್ಕೆ ಅಧಿಕಾರಿಣಿ, ಆಜೀವನವೂ ನೀನದನ್ನು ಧಾರಣೆಮಾಡಿರು, ಜಗದೀಶ್ವರನು ನಿನ್ನನ್ನು ಸುಖ ವಾಗಿಟ್ಟಿರುವನು.

ಸಂಧ್ಯೆಯ ಛಾಯೆಯಲ್ಲಿ ವಿಮಲೆಯು ಮೆಲ್ಲಮೆಲ್ಲನೆ ತನ್ನ ಕುಟೀರಾಭಿ ಮುಖವಾಗಿ ಹೊರಟುಹೋದಳು.

659—30. ಬೆಂಗಳೂರು ಪ್ರೆಸ್, ಮೈಸೂರು ರೋಡ್, ಬೆಂಗಳೂರು ಸಿಟಿ.